ಮಂಗಳೂರು
ಬುಧವಾರ, 17 ಜೂನ್ 2026
ಸಂಪುಟ 48, ಸಂಚಿಕೆ 90, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಭಾರತದ ಶಾಶ್ವತ ಸದಸ್ಯತ್ವಕ್ಕೆ ಬೆಂಬಲ • ಪುಟ ೨

ಹೆಚ್ಚುವರಿ ಆದಾಯ: 13 ರಾಜ್ಯಗಳ ಸಾಧನೆ | ೦೨

ವೈದ್ಯರ ಚೀಟಿ ಇಲ್ಲದೆ ಸಿಗಲ್ಲ ಕೆಮ್ಮಿನ ಸಿರಪ್ | ೦೨

ನೆರವು ನೀಡುವ–ಪಡೆಯುವ ಪದ್ಧತಿ ಅಂತ್ಯಕ್ಕೆ ಜಿ7 ನಾಯಕರಿಗೆ ಮೋದಿ ಸಲಹೆ

ಸಮಾನತೆ ಪಾಲುದಾರಿಕೆ

• ಎವಿಯನ್-ಲೆಸ್-ಬೈನ್ಸ್ (ಫ್ರಾನ್ಸ್): ಜಾಗತಿಕ ಸಮುದಾಯವು ಇನ್ನು ಮುಂದೆ ನೆರವು ನೀಡುವ ಮತ್ತು ಪಡೆಯುವ (ದಾನಿ-ಸ್ವೀಕೃತದಾರ) ಸಾಂಪ್ರದಾಯಿಕ ಮನಸ್ಥಿತಿಯಿಂದ ಹೊರಬರಬೇಕು. ಅದರ ಬದಲಾಗಿ ಒಗ್ಗಟ್ಟು ಮತ್ತು ಸಮಾನತೆಯ ಆಧಾರದ ಮೇಲೆ ಹೊಸ ಪಾಲುದಾರಿಕೆಯನ್ನು ಸ್ಥಾಪಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಜಿ-7 ನಾಯಕರಿಗೆ ಕರೆ ನೀಡಿದ್ದಾರೆ.

ಫ್ರಾನ್ಸ್‌ನ ಎವಿಯನ್-ಲೆಸ್-ಬೈನ್ಸ್‌ನಲ್ಲಿ ನಡೆಯುತ್ತಿರುವ ಜಿ-7 ಶೃಂಗಸಭೆಯ ಔಟ್ರೀಚ್ ಅಧಿವೇಶನದಲ್ಲಿ ಅವರು ಮಾತನಾಡಿದರು.

ಪರಸ್ಪರ ವಿಶ್ವಾಸವೇ ಮುಖ್ಯ: ಹೊಸ ಪಾಲುದಾರಿಕೆಗಳ ರಚನೆ ಮತ್ತು ಅಂತಾರಾಷ್ಟ್ರೀಯ ಒಗ್ಗಟ್ಟಿನ ಮರುನಿರ್ಮಾಣ ಎಂಬ ವಿಷಯದ ಕುರಿತಾದ ಅಧಿವೇಶನದಲ್ಲಿ ಮಾತನಾಡಿದ ಮೋದಿ, ಇಂದಿನ ಪರಸ್ಪರ ಸಂಪರ್ಕಿತ ಜಗತ್ತಿನಲ್ಲಿ ಅಂತಾರಾಷ್ಟ್ರೀಯ ಪಾಲುದಾರಿಕೆ ವೃದ್ಧಿಸಲು ವಿಶ್ವಾಸ ಅತ್ಯಂತ ಪ್ರಮುಖ ಕಾರ್ಯತಂತ್ರದ ಆಸ್ತಿಯಾಗಿದೆ ಎಂದರು. ➡ಪುಟ ೪



16 ತಿಂಗಳ ಬಳಿಕ ಮೋದಿ-ಟ್ರಂಪ್ ಭೇಟಿ

ಇದೇ ವೇಳೆ ಜಿ7 ನಾಯಕರ ಸಭೆಯ ಸಂದರ್ಭದಲ್ಲಿ ಪ್ರಧಾನಿ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ಸಂಕ್ಷಿಪ್ತ ಮಾತುಕತೆ ನಡೆಸಿದರು. ಕಳೆದ 16 ತಿಂಗಳಲ್ಲಿ ಇಬ್ಬರು ನಾಯಕರು ಮುಖಾಮುಖಿಯಾಗಿ ಭೇಟಿಯಾಗಿರುವುದು ಇದೇ ಮೊದಲು. ಉಭಯ ನಾಯಕರು ಆತ್ಮೀಯವಾಗಿ ಹಸ್ತಲಾಘವ ನಡೆಸಿದ ದೃಶ್ಯ ಗಮನ ಸೆಳೆಯಿತು. ➡ಪುಟ ೪

ಮೋದಿ ಇದ್ದಲ್ಲಿಗೇ ಬಂದು ಅಪ್ಪಿಕೊಂಡ ಬ್ರಿಟನ್ ಪಿಎಂ

ಜಿ7 ಜಾಗತಿಕ ನಾಯಕರು ಫೋಟೋಗೆ ಪೋಸ್ ನೀಡುವ ಮುನ್ನ ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಮೋದಿ ಇದ್ದಲ್ಲಿಗೇ ಬಂದು ಅಪ್ಪುಗೆ ನೀಡಿದ್ದು ವಿಶೇಷವಾಗಿತ್ತು. ತಕ್ಷಣ ಜಿ7 ಸಮ್ಮೇಳನದ ಸಂಚಾಲಕಿ ಬ್ರಿಟನ್ ಪ್ರಧಾನಿಗೆ ತಮ್ಮ ಜಾಗದಲ್ಲಿ ನಿಲ್ಲುವಂತೆ ಮನವಿ ಮಾಡಿದರು. ➡ಪುಟ ೪

ಐಎಎಫ್ ಅಧಿಕಾರಿ ಪತ್ನಿಗೆ ಮತ್ತು ಬರಿಸುವ ಔಷಧ ನೀಡಿ ಅತ್ಯಾಚಾರ, ಬೆದರಿಕೆ


ಬಲವಂತದ ಮತಾಂತರ: ಇಬ್ಬರ ಬಂಧನ

• ನಾಗಪುರ: ಭಾರತೀಯ ವಾಯು ಪಡೆಯ(ಐಎಎಫ್) ಅಧಿಕಾರಿಯೊಬ್ಬರ 24 ವರ್ಷದ ಪತ್ನಿಗೆ ಮತ್ತು ಬರಿಸುವ ಔಷಧ ನೀಡಿ ಅತ್ಯಾಚಾರ ಎಸಗಿ, ಬೆದರಿಕೆ ಹಾಕಿ



ಬಲವಂತದಿಂದ ಮತಾಂತರಗೊಳಿಸಿರುವ ಘಟನೆ ಮಹಾರಾಷ್ಟ್ರದ ನಾಗಪುರದಲ್ಲಿ ಬೆಳಕಿಗೆ ಬಂದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಆಯಾಜ್ ತಾಜ್ ಮದಾರೆ ಮತ್ತು ಅಮೀನ್ ಶೇಖ್ ಎಂಬ ಇಬ್ಬರು ಆರೋಪಿಗಳನ್ನು ಬಂಧಿಸಿದ್ದು, ಮೂರನೇ ಆರೋಪಿಗಾಗಿ ತೀವ್ರ ಹುಡುಕಾಟ ನಡೆಸಿದ್ದಾರೆ.

ವಿಡಿಯೋ ವೈರಲ್: ಈ ದಾರುಣ ಘಟನೆಗೆ ಸಂಬಂಧಿಸಿದ ವಿಡಿಯೋವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದ್ದು, ತನಿಖೆಗೆ ಪ್ರಮುಖ ಆಧಾರವಾಗಿದೆ. ವೈರಲ್ ವಿಡಿಯೋದಲ್ಲಿ ಸಂತ್ರಸ್ತ ಮಹಿಳೆ ಅತ್ಯಂತ ಸಂಕಷ್ಟದ ಸ್ಥಿತಿಯಲ್ಲಿದ್ದಾರೆ. ➡ಪುಟ ೪



ಮತ್ತೊಬ್ಬ ಆರೋಪಿಗಾಗಿ ಪೊಲೀಸರಿಂದ ಶೋಧ

• ಪುಟ ೪

ಬಲವಂತದ ನಿಖಾ, ಮತಾಂತರ

ಮೇ 31ರಂದು ಆರೋಪಿಗಳಾದ ಅಯಾಜ್ ಮತ್ತು ಅಮೀನ್ ಶೇಖ್ ಸೇರಿ ಮಹಿಳೆಯನ್ನು ಕಲ್ಮೇಶ್ವರಕ್ಕೆ ಕರೆದೊಯ್ದಿದ್ದಾರೆ. ಅಲ್ಲಿ ಮಧ್ಯಪ್ರದೇಶದ ಹಜರತ್ ಮೌಲಾನಾ ಎಂಬಾತನ ಪರಿಚಯ ಮಾಡಿಸಿ, ಆಕೆಯ ಇಚ್ಛೆಗೆ ವಿರುದ್ಧ ವಾಗಿ ಮತೀಯ ಆಚರಣೆಗಳನ್ನು ಮಾಡಿಸಲಾಗಿದೆ. ಅಲ್ಲಿ ಮಹಿಳೆ ಯಿಂದ ಬಲವಂತವಾಗಿ ಖುಬೂಲ್ ಹೈ ಎಂದು ಹೇಳಿಸಿ, ಆಕೆಯನ್ನು ಇಸ್ಲಾಂ ಮತಕ್ಕೆ ಮತಾಂತರ ಮಾಡಿ ಅಯಾಜ್ ಜತೆ ಮದುವೆ ಮಾಡಿಸಲಾಗಿದೆ ಎಂದು ಘೋಷಿಸಲಾಗಿದೆ. ಅಲ್ಲದೆ ಬಲವಂತವಾಗಿ ಮಾಂಸವನ್ನು ತಿನ್ನಿಸಲಾಗಿದೆ ಎಂದು ಮಹಿಳೆ ದೂರಿದ್ದಾರೆ.

ಜೂ.22ರವರೆಗೆ ಆ್ಯಪ್‌ಗೆ ಕೇಂದ್ರ ತಡೆ

ನೀಟ್ ಅಕ್ರಮ ತಡೆಗೆ ಟೆಲಿಗ್ರಾಂಗೆ ನಿರ್ಬಂಧ

• ಹೊಸದಿಲ್ಲಿ: ನೀಟ್-ಯುಜಿ 2026 ಪ್ರಶ್ನೆಪತ್ರಿಕೆ ಸೋರಿಕೆ ತಡೆಗಟ್ಟಲು ಕೇಂದ್ರ ಸರ್ಕಾರ ಹೊಸ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ಇದೀಗ ಮರುಪರೀಕ್ಷೆ ವೇಳೆ ದೇಶದಲ್ಲಿ ಟೆಲಿಗ್ರಾಂ ಆ್ಯಪ್‌ನ್ನು ತಾತ್ಕಾಲಿಕವಾಗಿ



ನಿರ್ಬಂಧಿಸಿದೆ. ಟೆಲಿಗ್ರಾಂನಿಂದಲೇ ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಇದರ ಅನ್ವಯ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ 2 ಪ್ರತ್ಯೇಕ ನಿರ್ದೇಶನಗಳನ್ನು ನೀಡಿದ್ದು, ಜೂ.22 ರವರೆಗೆ ಟೆಲಿಗ್ರಾಂ ನಿರ್ಬಂಧಿಸಲಾಗಿದೆ. ಅದೇ ರೀತಿ ಜೂ.30ರವರೆಗೆ ಈಗಾಗಲೇ ಪೋಸ್ಟ್ ಮಾಡಲಾದ ಸಂದೇಶಗಳನ್ನು ಎಡಿಟ್ ಮಾಡಲಾಗದಂತೆ ಟೆಲಿಗ್ರಾಂ ನಿಷ್ಕ್ರಿಯಗೊಳಿಸಬೇಕೆಂದು ಸೂಚಿಸಿದೆ. ಅಂದರೆ ಜೂ.30ರವರೆಗೆ ಈಗಾಗಲೇ ಕಳುಹಿಸಲಾದ ಯಾವುದೇ ಸಂದೇಶಗಳನ್ನು ಎಡಿಟ್ ಮಾಡಲು ಅವಕಾಶವಿರಲ್ಲ. ಪ್ರಶ್ನೆಪತ್ರಿಕೆ ಸೋರಿಕೆ ಮಾಡುವ ಜಾಲಗಳು ಟೆಲಿಗ್ರಾಂನಂತಹ ಆ್ಯಪ್ ಬಳಸಿ ಪರೀಕ್ಷಾ ಅಭ್ಯರ್ಥಿಗಳೊಂದಿಗೆ ಸಂಹವನ ನಡೆಸಿದೆ ಎಂದು ತಿಳಿದುಬಂದಿದೆ. ➡ಪುಟ ೪

ದಿಲ್ಲಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಉಗ್ರ ಜಾಲ

ಪಾಕಿಸ್ತಾನ ಬೆಂಬಲಿತ ಏಳು ಉಗ್ರರ ಬಂಧನ

ಹೊಸದಿಲ್ಲಿ: ಪಾಕಿಸ್ತಾನ ಬೆಂಬಲಿತ ಉಗ್ರ-ಅಪರಾಧ ಜಾಲವನ್ನು ದಿಲ್ಲಿ ಪೊಲೀಸರು ಭೇದಿಸಿದ್ದು, ಶಸ್ತ್ರಾಸ್ತ್ರ ಹಾಗೂ ಮಾದಕ ವಸ್ತುಗಳ ಕಳ್ಳಸಾಗಣೆ, ಸಂವೇದನಾಶೀಲ ಸ್ಥಳಗಳ ಮಾಹಿತಿ ಸಂಗ್ರಹಣೆ ಸೇರಿದಂತೆ ಹಲವು ಚಟುವಟಿಕೆಗಳಲ್ಲಿ ತೊಡಗಿದ್ದ ಏಳು ಉಗ್ರರನ್ನು ಬಂಧಿಸಿದ್ದಾರೆ. ಬಂಧಿತರು ಪಾಕಿಸ್ತಾನ ಮೂಲದ ಗ್ಯಾಂಗ್‌ಸ್ಟರ್‌ನಿಂದ ಉಗ್ರನಾಗಿರುವ ಶಹಜಾದ್ ಭಟ್ಟಿ ಹಾಗೂ ಆತನ ಸಹಚರ ಅಜ್ಜಲ್ ಗುಜ್ಜರ್‌ಗಾಗಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಇವರಿಬ್ಬರೂ ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಆಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬ ಶಂಕೆ ವ್ಯಕ್ತವಾಗಿದೆ. ಪೊಲೀಸರ ಮಾಹಿತಿ ಪ್ರಕಾರ, ಪಂಜಾಬ್ ಗಡಿಭಾಗದಲ್ಲಿ ಡ್ರೋನ್‌ಗಳ ಮೂಲಕ ಪಾಕಿಸ್ತಾನದಿಂದ ಶಸ್ತ್ರಾಸ್ತ್ರ ಹಾಗೂ ಮಾದಕ ವಸ್ತುಗಳನ್ನು ಕಳ್ಳಸಾಗಣೆ ಮಾಡಿ, ನಂತರ ದಿಲ್ಲಿ -ಎನ್‌ಸಿಆರ್ ಪ್ರದೇಶದಲ್ಲಿ ಅವುಗಳನ್ನು ಪೂರೈಸುವ ಕಾರ್ಯವನ್ನು ಈ ಜಾಲ ನಡೆಸುತ್ತಿತ್ತು.

ಬಂಧಿತರನ್ನು ಅನಾಸ್ ಅಲಿಯಾಸ್ ಅನಾಸ್ ತ್ಯಾಗಿ (26), ಮೋಹಿತ್ ಅಲಿಯಾಸ್ ಯೋಗಿ (26), ದೀಪಕ್ ಅಲಿಯಾಸ್ ದೀಪಕ್ ಅಗ್ರೋಲಾ (38), ಆರಿಫ್ ಅಲಿಯಾಸ್ ಪ್ರಧಾನ (30), ಕರಣವೀರ್ ಸಿಂಗ್ (26), ಜತನ್ (29) ಹಾಗೂ ಸಬೀರ್ (30) ಎಂದು ಗುರುತಿಸಲಾಗಿದೆ. ದಾಳಿಯ ವೇಳೆ ಐದು ಅತ್ಯಾಧುನಿಕ ಅರೆ-ಸ್ವಯಂಚಾಲಿತ ಪಿಸ್ತೂಲುಗಳು, 41 ಜೀವಂತ ಗುಂಡುಗಳು, ಉಗ್ರ ಚಟುವಟಿಕೆಗಳಿಗೆ ಸಂಬಂಧಿಸಿದ ಚಾಟ್ ಹಾಗೂ ಧ್ವನಿ ಸಂದೇಶಗಳಿರುವ ಏಳು ಮೊಬೈಲ್ ಫೋನ್‌ಗಳು ಮತ್ತು ಒಂದು ಎಸ್‌ಯುವಿ ವಾಹನವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಜೊತೆಗೆ ಮಾದಕ ವಸ್ತು ಹಾಗೂ ಅಕ್ರಮ ಶಸ್ತ್ರಾಸ್ತ್ರ ಮಾರಾಟದಿಂದ ಬಂದ ಹಣ ವರ್ಗಾವಣೆಗಾಗಿ ಬಳಸಲಾಗಿದ್ದ ಬ್ಯಾಂಕ್ ಖಾತೆಗಳ ಮಾಹಿತಿಯೂ ಪತ್ತೆಯಾಗಿದೆ.



ವಶಕ್ಕೆ ಸಿಕ್ಕ ವಸ್ತುಗಳು

- 5 ಅತ್ಯಾಧುನಿಕ ಅರೆ-ಸ್ವಯಂಚಾಲಿತ ಪಿಸ್ತೂಲುಗಳು
- 41 ಜೀವಂತ ಗುಂಡುಗಳು
- 7 ಮೊಬೈಲ್ ಫೋನ್‌ಗಳು
- ಒಂದು ಎಸ್‌ಯುವಿ ವಾಹನ
- ಬ್ಯಾಂಕ್ ಖಾತೆಗಳ ವಿವರಗಳು
- ಪಾಕ್ ಹ್ಯಾಂಡ್ಲರ್‌ಗಳೊಂದಿಗೆ ನಡೆಸಿದ ಚಾಟ್ ಮತ್ತು ಧ್ವನಿ ಸಂದೇಶಗಳು

ಸಾಮಾಜಿಕ ಜಾಲತಾಣಗಳ ಬಳಕೆ: ಮೇ ತಿಂಗಳಲ್ಲಿ ದೊರೆತ ಗುಪ್ತಚರ ಮಾಹಿತಿಯ ಆಧಾರದಲ್ಲಿ ಪೊಲೀಸರು ತನಿಖೆ ಆರಂಭಿಸಿದ್ದರು. ಸಾಮಾಜಿಕ ಜಾಲತಾಣಗಳ ಮೂಲಕ ಯುವಕರನ್ನು ಸೆಳೆದು ದಿಲ್ಲಿ -ಎನ್‌ಸಿಆರ್‌ನಲ್ಲಿ ದಾಳಿ ನಡೆಸುವ ಸಂಚು ರೂಪಿಸಲಾಗುತ್ತಿದೆ ಎಂಬ ಮಾಹಿತಿ ಲಭ್ಯವಾಗಿತ್ತು. ಇದನ್ನಾಧರಿಸಿ ಯಮುನಾ ವಿಹಾರದ ಭಗೀರಥ್ ಜಲಶುದ್ಧೀಕರಣ ಘಟಕದ ಸಮೀಪ ಮೋಹಿತ್‌ನನ್ನು ಬಂಧಿಸಲಾಗಿತ್ತು. ಆತನಿಂದ ಅಕ್ರಮ ಪಿಸ್ತೂಲು, ನಾಲ್ಕು ಜೀವಂತ ಗುಂಡುಗಳು ಹಾಗೂ ಅಜ್ಜಲ್ ಗುಜ್ಜರ್ ಜತೆಗಿನ ಸಂಭಾಷಣೆಯಿರುವ ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿತ್ತು.

ಎಲ್ಲಾ ಔಷಧಿಗೂ ವೈದ್ಯರ ಚೀಟಿ ಕಡ್ಡಾಯ

ಚೀಟಿ ಇಲ್ಲದೆ ಸಿಗಲ್ಲ ಸಿರಪ್

ಹೊಸದಿಲ್ಲಿ: ದೇಶದಲ್ಲಿ ಕೆಮ್ಮಿನ ಸಿರಪ್ ಸೇರಿದಂತೆ ಎಲ್ಲ ಔಷಧೀಯ ಸಿರಪ್‌ಗಳ ಮಾರಾಟಕ್ಕೆ ಕೇಂದ್ರ ಸರ್ಕಾರ ಹೊಸ ನಿಯಮ ಜಾರಿಗೊಳಿಸಿದ್ದು, ಇನ್ನು ಮುಂದೆ ವೈದ್ಯರ ಚೀಟಿ ಇಲ್ಲದೆ ಇವುಗಳನ್ನು ಖರೀದಿಸಲು ಅವಕಾಶ ಇರುವುದಿಲ್ಲ.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಔಷಧ ನಿಯಮಾವಳಿಗಳಿಗೆ ತಿದ್ದುಪಡಿ ಮಾಡಿ ಈ ಆದೇಶ ಹೊರಡಿಸಿದೆ. ಹೊಸ ನಿಯಮದ ಪ್ರಕಾರ ವೈದ್ಯರ ಸಲಹೆ ಹಾಗೂ ಲಿಖಿತ ಪ್ರಿಸ್ಕ್ರಿಪ್ಷನ್ ಆಧರಿಸಿ ಮಾತ್ರ ಔಷಧ ಮಳಿಗೆಗಳು ಸಿರಪ್ ಔಷಧಗಳನ್ನು ವಿತರಿಸಬೇಕು. ದೇಶದಲ್ಲಿ ಕೆಲವು ಕೆಮ್ಮಿನ ಸಿರಪ್‌ಗಳ ದುರ್ಬಳಕೆ, ಅನಗತ್ಯ ಬಳಕೆ ಮತ್ತು ಕಳಪೆ ಗುಣಮಟ್ಟದ ಔಷಧಿಗಳಿಂದ ಉಂಟಾದ ಆರೋಗ್ಯ ಸಮಸ್ಯೆಗಳ ಹಿನ್ನೆಲೆಯಲ್ಲಿ ಸರ್ಕಾರ ಈ ಕ್ರಮ ಕೈಗೊಂಡಿದೆ. ಔಷಧಿಗಳ ಸುರಕ್ಷಿತ ಬಳಕೆಯನ್ನು ಖಚಿತಪಡಿಸುವ ಜೊತೆಗೆ ಸ್ವಯಂ ಔಷಧ ಸೇವನೆಗೆ ಕಡಿವಾಣ ಹಾಕುವುದು ಇದರ ಪ್ರಮುಖ ಉದ್ದೇಶವಾಗಿದೆ. ಆರೋಗ್ಯ ತಜ್ಞರ ಪ್ರಕಾರ, ಸಿರಪ್ ರೂಪದ ಔಷಧಿಗಳನ್ನು ವೈದ್ಯರ ಸಲಹೆ ಇಲ್ಲದೆ ಸೇವಿಸುವುದರಿಂದ ಕೆಲವೊಮ್ಮೆ ಗಂಭೀರ ಅಡ್ಡಪರಿಣಾಮಗಳು ಉಂಟಾಗುವ ಸಾಧ್ಯತೆ ಇದೆ. ಹೊಸ ನಿಯಮದಿಂದ ಔಷಧಗಳ ಬಳಕೆ ಮೇಲೆ ಹೆಚ್ಚಿನ ನಿಯಂತ್ರಣ ಸಾಧ್ಯವಾಗಲಿದ್ದು, ರೋಗಿಗಳ ಆರೋಗ್ಯ ಸುರಕ್ಷತೆಗೆ ನೆರವಾಗಲಿದೆ.

- ಕೆಮ್ಮಿನ ಸಿರಪ್ ಸೇರಿದಂತೆ ಎಲ್ಲ ಔಷಧೀಯ ಸಿರಪ್ ಖರೀದಿಗೆ ವೈದ್ಯರ ಚೀಟಿ ಕಡ್ಡಾಯ
- ವೈದ್ಯರ ಪ್ರಿಸ್ಕ್ರಿಪ್ಷನ್ ಇಲ್ಲದೆ ಔಷಧ ಮಳಿಗೆಗಳು ಸಿರಪ್ ಮಾರಾಟ ಮಾಡುವಂತಿಲ್ಲ
- ದೇಶದಾದ್ಯಂತ ಒಂದೇ ರೀತಿಯ ನಿಯಮ ಅನ್ವಯ
- ಔಷಧ ದುರ್ಬಳಕೆ ಹಾಗೂ ಸ್ವಯಂ ಚಿಕಿತ್ಸೆಗೆ ಕಡಿವಾಣ



ನಕಲಿ ಪ್ರಶ್ನೆಪತ್ರಿಕೆ ಜಾಲಕ್ಕೆ ಚೆಕ್‌ಮೇಟ್

ದೇಶದಲ್ಲಿ ನೀಟ್(ಯುಜಿ) 2026 ಮರುಪರೀಕ್ಷೆಯ ಸಮಯದಲ್ಲಿ ನಕಲಿ ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಆನ್‌ಲೈನ್ ವಂಚನೆಯನ್ನು ತಡೆಗಟ್ಟುವ ಉದ್ದೇಶದಿಂದ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಮೆಸೇಜಿಂಗ್ ಆ್ಯಪ್ ಟೆಲಿಗ್ರಾಮ್ ಮೇಲೆ ತಾತ್ಕಾಲಿಕ ನಿರ್ಬಂಧವನ್ನು ಹೇರಿದೆ. ಕೇಂದ್ರ ಸರ್ಕಾರ ತೆಗೆದುಕೊಂಡ ಕಠಿಣ ಕ್ರಮದ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಸಾಮಾನ್ಯ ಜನರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮಾಹಿತಿ ತಂತ್ರಜ್ಞಾನ ಸಚಿವಾಲಯದ ಈ ನಿರ್ಬಂಧ ಕುರಿತಾಗಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ತನ್ನ ಸ್ಪಷ್ಟೀಕರಣವನ್ನೂ ಮಂಗಳವಾರ ನೀಡಿದೆ. ಮರುಪರೀಕ್ಷೆಯ ಪ್ರಶ್ನೆಪತ್ರಿಕೆ ಒದಗಿಸುವುದಾಗಿ ಟೆಲಿಗ್ರಾಮ್ ಮೂಲಕ ವಂಚನೆಮಾಡುವವರಿಗೆ ಕೇಂದ್ರ ಸರ್ಕಾರ ನೀಡಿದ ಚೆಕ್‌ಮೇಟ್ ಕುರಿತಾದ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ನಿರ್ಬಂಧ ಯಾಕೆ?

ನಾಡಿದ್ದು ಜೂ.21ರಂದು ಭಾನುವಾರ ನೀಟ್ (ಯುಜಿ) ಮರುಪರೀಕ್ಷೆ ನಡೆಯುವ ಹಿನ್ನೆಲೆ ಎನ್‌ಟಿಎ ಸುರಕ್ಷಿತ ಕ್ರಮವಾಗಿ ಟೆಲಿಗ್ರಾಮ್ ಮೇಲೆ ತಾತ್ಕಾಲಿಕ ನಿರ್ಬಂಧ ಹೇರಬೇಕೆಂಬ ಶಿಫಾರಸು ಮಾಡಿದ್ದು, ಈ ಶಿಫಾರಸಿನ ಆಧಾರದಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ನೀಟ್ ಮರುಪರೀಕ್ಷೆ ಮುಗಿಯುವ ಮುಂದಿನ ದಿನದವರೆಗೂ ಅಂದರೆ ಜೂ.22ರವರೆಗೆ ಭಾರತದಲ್ಲಿ ಟೆಲಿಗ್ರಾಮ್‌ನ ಮೇಲೆ ನಿರ್ಬಂಧ ಹೇರಿದೆ. ಅಲ್ಲದೆ, ಜೂ.23ರಿಂದ ಟೆಲಿಗ್ರಾಮ್ ಲಭ್ಯವಾದರೂ ಜೂ.30ರವರೆಗೆ ಮೆಸೇಜ್ ಎಡಿಟಿಂಗ್ ಸೇವೆಯನ್ನು ತಾತ್ಕಾಲಿಕ ನಿಷ್ಕ್ರಿಯಗೊಳಿಸಲು ಟೆಲಿಗ್ರಾಮ್ ಆ್ಯಪ್‌ಗೆ ನಿರ್ದೇಶನ ನೀಡಲಾಗಿದೆ. ನೀಟ್ ಮರುಪರೀಕ್ಷೆಯ ಸಂದರ್ಭ ಹಲವು ಟೆಲಿಗ್ರಾಮ್ ಚಾನೆಲ್‌ಗಳು, ಬಾಟ್ ಪ್ರೊಫೈಲ್‌ಗಳ ಮೂಲಕ ಜೂ.21ರಂದು ನಡೆಯಲಿರುವ ಮರುಪರೀಕ್ಷೆಯ ಪ್ರಶ್ನೆಪತ್ರಿಕೆ ನೀಡುವುದಾಗಿ ನೀಟ್ ಅಭ್ಯರ್ಥಿಗಳು, ಪೋಷಕರು ಹಾಗೂ ಕುಟುಂಬ ಸದಸ್ಯರನ್ನು ಸಂಪರ್ಕಿಸಿ ಲಕ್ಷಾಂತರ ರೂ. ವಂಚಿಸುವ ಪ್ರಕರಣಗಳು ಬೆಳಕಿಗೆ ಬಂದ ಹಿನ್ನೆಲೆಯಿಂದ ಈ ಮಹತ್ವದ ಕ್ರಮ ಕೈಗೊಳ್ಳಲಾಗಿದೆ. ಈಗಾಗಲೇ ಸರ್ಕಾರ 200ಕ್ಕೂ ಅಧಿಕ ಚಾನೆಲ್‌ಗಳು, ಬಾಟ್‌ಗಳನ್ನು ತೆರವುಗೊಳಿಸಿದೆ.

- **ಜೂ.22ರವರೆಗೆ ಭಾರತದಲ್ಲಿ ಟೆಲಿಗ್ರಾಮ್ ತಾತ್ಕಾಲಿಕ ನಿಷೇಧ**
- **ಜೂ.30ರವರೆಗೆ ಟೆಲಿಗ್ರಾಮ್ ಮೆಸೇಜ್ ಎಡಿಟ್ ಸೌಲಭ್ಯವಿಲ್ಲ**
- **200ಕ್ಕೂ ಅಧಿಕ ಟೆಲಿಗ್ರಾಮ್ ಚಾನೆಲ್, ಬಾಟ್ ಪ್ರೊಫೈಲ್ ತೆರವು**

ವಾಟ್ಸ್ ಆ್ಯಪ್ ಮೇಲೆ ಯಾಕಿಲ್ಲ ನಿರ್ಬಂಧ?

ಇತರ ದೈತ್ಯ ಟೆಕ್ ಕಂಪನಿಗಳಂತೆ ಸರ್ಕಾರಗಳೊಂದಿಗೆ ಸಹಕರಿಸುವ ಮೆಸೇಜಿಂಗ್ ಪ್ಲ್ಯಾಟ್‌ಫಾರಂಗಳ ಪಟ್ಟಿಗೆ ಟೆಲಿಗ್ರಾಮ್ ಸೇರುವುದಿಲ್ಲ. ಇದೇ ಉದ್ದೇಶದಿಂದಲೇ ಪಾವೆಲ್ ದುರೋವ್ ಟೆಲಿಗ್ರಾಮ್ ಪ್ಲ್ಯಾಟ್‌ಫಾರಂ ಅನ್ನು ಸ್ಥಾಪಿಸಿದರು. ವಾಟ್ಸ್ ಆ್ಯಪ್ ಮತ್ತು ಎಕ್ಸ್ ಭಾರತದಲ್ಲಿ ಕೇಂದ್ರ ಸರ್ಕಾರದ ನಿರ್ದೇಶನ ಅನುಸರಿಸುತ್ತವೆ. ಆದರೆ ಟೆಲಿಗ್ರಾಮ್ ಭಾರತದಲ್ಲಿ ಕಚೇರಿ ಹೊಂದಿಲ್ಲ. ಟೆಲಿಗ್ರಾಮ್ ನಿಯಂತ್ರಿಸುವುದು ಇನ್ನಷ್ಟು ಕಠಿಣವಾಗಿದೆ. ಇದರಿಂದ ಸದ್ಯ ವಾಟ್ಸ್ ಆ್ಯಪ್ ಮೇಲೆ ಸರ್ಕಾರ ನಿರ್ಬಂಧ ಹೇರಿಲ್ಲ. 2025ರಲ್ಲಿ ಟೆಲಿಗ್ರಾಮ್ 43.5 ದಶಲಕ್ಷ ಚಾನೆಲ್ ಮತ್ತು ಗ್ರೂಪ್‌ಗಳನ್ನು ಬ್ಲಾಕ್ ಮಾಡಿತು.

ವಿದ್ಯಾರ್ಥಿಗಳನ್ನು ಗುರಿಯಾಗಿಸಿ ವಂಚಕರು ಟೆಲಿಗ್ರಾಮ್ ಪ್ಲ್ಯಾಟ್‌ಫಾರಂ ಅನ್ನು ದುರ್ಬಳಕೆ ಮಾಡುತ್ತಿರುವ ಕಾರಣದಿಂದ ಈ ಕಠಿಣ ಕ್ರಮ ತೆಗೆದುಕೊಂಡಿದ್ದೇವೆ. ವಿದ್ಯಾರ್ಥಿಗಳಲ್ಲಿರುವ ಪರೀಕ್ಷೆಯ ಆತಂಕವನ್ನೇ ದಾಳವಾಗಿ ಬಳಸಿಕೊಂಡು ವಂಚಿಸುವುದು ತಿಳಿದುಬಂದಿದೆ.
■ ಅಭಿಷೇಕ್ ಸಿಂಗ್, ಎನ್‌ಟಿಎ ಪ್ರಧಾನ ನಿರ್ದೇಶಕ

ನಿರ್ಬಂಧ ಕುರಿತು ಎನ್‌ಟಿಎ ಹೇಳಿದ್ದೇನು?

1 ಟೆಲಿಗ್ರಾಮ್ ಪ್ಲ್ಯಾಟ್‌ಫಾರಂ ಕುರಿತಾಗಿ ನೀಡಲಾದ ನಿರ್ದೇಶನವನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ಸ್ವಾಗತಿಸುತ್ತದೆ. ಎನ್‌ಟಿಎ ಶಿಫಾರಸಿನ ಆಧಾರದಲ್ಲಿ ಈ ನಿರ್ದೇಶನ ಜಾರಿಗೊಳಿಸಲಾಗಿದೆ.
(ಎ) ಮಾಹಿತಿ ತಂತ್ರಜ್ಞಾನ ಕಾಯ್ದೆ, 2000ದ ಸೆಕ್ಷನ್ 69 ಎ ಅನ್ವಯ ಟೆಲಿಗ್ರಾಮ್ ಅನ್ನು ನೀಟ್(ಯುಜಿ) 2026 ಮರುಪರೀಕ್ಷೆ ಮುಕ್ತಾಯದವರೆಗೆ, ಅಂದರೆ 2026ರ ಜೂ.22ರವರೆಗೆ ಸೀಮಿತ ಅವಧಿಯ ನಿರ್ಬಂಧ ಹೇರಲಾಗಿದೆ.
(ಬಿ) 2026ರ ಜೂ.30ರವರೆಗೆ ಭಾರತದಲ್ಲಿ ಟೆಲಿಗ್ರಾಮ್ ತನ್ನ ಮೆಸೇಜ್ ಎಡಿಟಿಂಗ್ ಸೇವೆಯನ್ನು ತಾತ್ಕಾಲಿಕವಾಗಿ ನಿಷ್ಕ್ರಿಯಗೊಳಿಸಬೇಕು. ಪ್ರಶ್ನೆ ಪತ್ರಿಕೆ ಸೋರಿಕೆ ಬಳಿಕ ಅದರ ಸಾಕ್ಷ್ಯಗಳನ್ನು ನಾಶಪಡಿಸಲು ಮೆಸೇಜ್ ಎಡಿಟಿಂಗ್ ಬಳಸಲಾಗಿತ್ತು. ಇದು ವಿದ್ಯಾರ್ಥಿಗಳ ಮತ್ತು ಸಾರ್ವಜನಿಕರ ಹಿತಾಸಕ್ತಿಯಿಂದ ತೆಗೆದುಕೊಂಡ ಪ್ರಮುಖ ಕ್ರಮಗಳಾಗಿವೆ. ಈ ಕ್ರಮ 2026ರ ಜೂ.21ರಂದು ಸುರಕ್ಷತೆಯಿಂದ ಪರೀಕ್ಷೆಯನ್ನು ನಡೆಸಲು ಎನ್‌ಟಿಎಗೆ ನೆರವಾಗಲಿವೆ.

2 ಕಾರ್ಯಾಚರಣೆಯಲ್ಲಿ ಕೇಂದ್ರ ಗೃಹ ಇಲಾಖೆ ಅನ್ವಯ ಭಾರತೀಯ ಸೈಬರ್ ಅಪರಾಧ ಸಹಯೋಗ ಕೇಂದ್ರ (ಐ4ಸಿ), ಬಿಹಾರ, ಗುಜರಾತ್ ಮತ್ತು ರಾಜಸ್ಥಾನ ಪೊಲೀಸರು ನೆರವಾಗಿದ್ದಾರೆ.

3 ನಿರ್ಬಂಧಗಳ ರೂಪುರೇಷೆ ಅತ್ಯಂತ ಮಿತಿಯಲ್ಲಿದೆ. ಪರೀಕ್ಷಾ ಅವಧಿವರೆಗೆ ಮಾತ್ರ ಸೀಮಿತ ಟೆಲಿಗ್ರಾಮ್ ಪ್ಲ್ಯಾಟ್‌ಫಾರಂ ಪ್ರವೇಶ ನಿರ್ಬಂಧ ಹಾಗೂ ಪರೀಕ್ಷೆಯ ನಂತರ ನಿರ್ದಿಷ್ಟ ಅವಧಿಗೆ ಅನ್ವಯಿಸುವ ನಿರ್ಬಂಧಗಳನ್ನು ಇವು ಒಳಗೊಂಡಿವೆ. ಸಾರ್ವಜನಿಕ ಸುವ್ಯವಸ್ಥೆಗೆ ಸಂಬಂಧಿಸಿದ ಆತಂಕವನ್ನು ನಿವಾರಿಸಲು ಅಗತ್ಯವಿರುವ ಕನಿಷ್ಠ ಮಟ್ಟದ ನಿರ್ಬಂಧವನ್ನೇ ವಿಧಿಸುವ ಪ್ರಯತ್ನ ಇದಾಗಿದೆ.

4 **ಪೇಪರ್ ಲೀಕ್ಡ್ ನೀಟ್, ರಿ-ನೀಟ್ 2026, ಪ್ರೈವೇಟ್ ಮಾಫಿಯಾ, ರಿ-ನೀಟ್ ಮಾಫಿಯಾ ಹೆಸರಿನ ಟೆಲಿಗ್ರಾಮ್ ಚಾನೆಲ್‌ಗಳು ನೀಟ್ ಅಭ್ಯರ್ಥಿಗಳ ಕುಟುಂಬ ಸದಸ್ಯರಿಂದ ಮರುಪರೀಕ್ಷೆಯ ಪ್ರಶ್ನೆ ಪತ್ರಿಕೆಗೆ ಬದಲಿಗೆ ಲಕ್ಷಾಂತರ ಹಣ ಬೇಡಿಕೆ ಇಟ್ಟಿದ್ದವು. ಆದರೆ ಮರುಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿಲ್ಲ. ಇದೆಲ್ಲವೂ ನೀಟ್ ವಿದ್ಯಾರ್ಥಿಗಳ ದಾರಿತಪ್ಪಿಸುವ ಮತ್ತು ವಂಚಿಸುವ ಪ್ರಯತ್ನಗಳಾಗಿವೆ.**

5 **ಮೆಸೇಜ್ ಎಡಿಟಿಂಗ್ ಸೇವೆ, ಪ್ರಸ್ತುತ ಚಾನೆಲ್ ನಿರ್ವಾಹಕರಿಗೆ ಪಿಡಿಎಫ್‌ನಂತಹ ಕಡತಗಳ ಎಡಿಟಿಂಗ್ ಅವಕಾಶವನ್ನೂ ನೀಡುತ್ತದೆ. ಆದರೆ ಮೂಲ ಸಂದೇಶ ಕಳುಹಿಸಿದ ಸಮಯ ಹಾಗೆಯೇ ಉಳಿಯುತ್ತದೆ. ಈ ಸೇವೆಯನ್ನು ದುರುಪಯೋಗಪಡಿಸಿ ನಕಲಿ ಪ್ರಶ್ನೆಪತ್ರ ಸೋರಿಕೆ ಸಾಕ್ಷ್ಯಗಳನ್ನು ಸೃಷ್ಟಿಸಲಾಗಿದೆ. ಪರೀಕ್ಷೆ ಮುಗಿದ ನಂತರ, ಚಾನೆಲ್ ನಿರ್ವಾಹಕರು ಹಳೆಯ ನಿರಪರಾಧ ಸಂದೇಶವನ್ನು ಎಡಿಟ್ ಮಾಡಿ ನಿಜವಾದ ಪ್ರಶ್ನೆಪತ್ರಿಕೆಯನ್ನು ಸೇರಿಸುತ್ತಾರೆ. ನಂತರ ಆ ಚಾಟ್‌ನ ಸ್ಕ್ರೀನ್‌ಶಾಟ್‌ಗಳನ್ನು ಪರೀಕ್ಷೆಗೆ ಮುಂಚೆಯೇ ಸೋರಿಕೆಯಾಗಿದೆ ಎಂಬ ಸುಳ್ಳು ಸಾಕ್ಷ್ಯ ಸೃಷ್ಟಿಸಲಾಗುತ್ತದೆ. ಇಂತಹ ಕೃತ್ಯಗಳನ್ನು ತಡೆಯುವ ಉದ್ದೇಶದಿಂದ ಈ ನಿರ್ಬಂಧ ಹೇರಲಾಗಿದೆ.**

6 ಅಹಮದಾಬಾದ್ ಸೈಬರ್ ಕ್ರೈಂ ಬ್ರ್ಯಾಂಚ್ ಅಂತರ್‌ರಾಜ್ಯ ಸೈಬರ್ ವಂಚನಾ ಜಾಲದ ಸದಸ್ಯರನ್ನು ಬಂಧಿಸಿದೆ. ಈ ಜಾಲವು ಇದೇ ರೀತಿಯ ವಂಚನಾ ಚಟುವಟಿಕೆಗಳಿಗಾಗಿ ಎಂಟು ಟೆಲಿಗ್ರಾಂ ಚಾನೆಲ್‌ಗಳನ್ನು ನಡೆಸುತ್ತಿತ್ತು. 1.5 ಕೋಟಿ ರೂ. ವಂಚನೆ ಮತ್ತು ತಿಂಗಳಲ್ಲೇ ಸಾವಿರ ಮೊಬೈಲ್ ಸಂಖ್ಯೆಗಳೊಂದಿಗೆ ಸಂಪರ್ಕ ಸಾಧಿಸಿದ್ದು ತನಿಖೆಯಲ್ಲಿ ತಿಳಿದುಬಂದಿದೆ.

7 ಮಾಹಿತಿ ತಂತ್ರಜ್ಞಾನ ಸಚಿವಾಲಯ ವಿಧಿಸಿದ ನಿರ್ಬಂಧದಿಂದ ಟೆಲಿಗ್ರಾಂ ಅನ್ನು ವೈಯಕ್ತಿಕ, ಶೈಕ್ಷಣಿಕ, ವೃತ್ತಿಪರ ಮತ್ತು ಮಾಹಿತಿ ಉದ್ದೇಶಗಳಿಗೆ ಕಾನೂನುಬದ್ಧವಾಗಿ ಬಳಸುವ ಲಕ್ಷಾಂತರ ನಾಗರಿಕರಿಗೆ ತೊಂದರೆಯಾಗಿರುವುದನ್ನು ಎನ್‌ಟಿಎ ಒಪ್ಪಿಕೊಳ್ಳುತ್ತದೆ ಮತ್ತು ಅದಕ್ಕಾಗಿ ವಿಷಾದ ವ್ಯಕ್ತಪಡಿಸುತ್ತದೆ.

8 ನೀಟ್(ಯುಜಿ) 2026 ಮರುಪರೀಕ್ಷೆಯನ್ನು 2026ರ ಜೂ.21ರಂದು ನಿಗದಿಯಂತೆ ನಡೆಸಲಾಗುತ್ತದೆ. ತೆಗೆದುಕೊಳ್ಳಲಾದ ಕ್ರಮಗಳಿಂದ ಪರೀಕ್ಷಾ ಭದ್ರತೆಗೆ ಯಾವುದೇ ಧಕ್ಕೆಯಾಗಿಲ್ಲ. ನ್ಯಾಯಸಮ್ಮತ, ಸುರಕ್ಷಿತ ಮತ್ತು ವಿಶ್ವಾಸಾರ್ಹ ಪರೀಕ್ಷೆ ನಡೆಸುವ ತನ್ನ ಬದ್ಧತೆಯನ್ನು ಎನ್‌ಟಿಎ ಪುನರುಚ್ಚರಿಸುತ್ತದೆ.

9 ಯಾವುದೇ ವಂಚನಾ ಪ್ರಯತ್ನಗಳು ಕಂಡುಬಂದರೆ ರಾಷ್ಟ್ರೀಯ ಸೈಬರ್ ಅಪರಾಧ ಸಹಾಯವಾಣಿ 1930ಕ್ಕೆ ಕರೆ ಮಾಡಿ ಅಥವಾ ರಾಷ್ಟ್ರೀಯ ಸೈಬರ್ ಅಪರಾಧ ವರದಿ ಪೋರ್ಟಲ್‌ಗೆ ಮಾಹಿತಿ ನೀಡಬೇಕು.

ಎನ್‌ಟಿಎ ಸಹಾಯವಾಣಿ: 011-40759000/ 011-69227700 ಮತ್ತು ಇ-ಮೇಲ್ neetug@nta.ac.in.

10 ಸಮಯೋಚಿತ ಮತ್ತು ಸಮತೋಲಿತ ನಿರ್ದೇಶನಗಳನ್ನು ನೀಡಿದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯಕ್ಕೆ, ಗೃಹ ಸಚಿವಾಲಯ ಮತ್ತು ಐ4ಸಿ, ಸಿಬಿಐ ಹಾಗೂ ಬಿಹಾರ, ಗುಜರಾತ್, ರಾಜಸ್ಥಾನ ಮತ್ತು ಇತರ ರಾಜ್ಯಗಳ ಪೊಲೀಸ್ ಪಡೆಗಳಿಗೆ ಎನ್‌ಟಿಎ ತನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ತಿಳಿಸುತ್ತದೆ.

ಕಿರುಸುದ್ದಿ

ನೆಲಬಾಂಬ್ ಸ್ಫೋಟ: 4 ಯೋಧರಿಗೆ ಗಾಯ

ಶ್ರೀನಗರ: ಜಮ್ಮು ಕಾಶ್ಮೀರದ ರಾಜೌರಿ ಜಿಲ್ಲೆಯಲ್ಲಿ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ)ನಲ್ಲಿ ಸೈನಿಕರು ದೈನಂದಿನ ಗಸ್ತು ನಡೆಸುವ ವೇಳೆ ಆಕಸ್ಮಿಕವಾಗಿ ನೆಲಬಾಂಬ್ (ಗ್ರೆನೇಡ್)ವೊಂದು ಸ್ಫೋಟಗೊಂಡಿದ್ದರಿಂದ ನಾಲ್ವರು ಸೈನಿಕರು ಗಾಯಗೊಂಡ ಘಟನೆ ಮಂಗಳವಾರ ನಡೆದಿದೆ. ವರದಿಗಳ ಪ್ರಕಾರ, ರಾಜೌರಿ ಜಿಲ್ಲೆಯ ನೌಶೇರಾ ಸೆಕ್ಟರ್‌ನಲ್ಲಿ ಘಟನೆ ಸಂಭವಿಸಿದೆ. ಗಾಯಗೊಂಡ ನಾಲ್ವರು ಸೈನಿಕರಲ್ಲಿ ಒಬ್ಬ ಜೂನಿಯರ್ ಕಮಿಷನ್ಡ್ ಆಫೀಸರ್(ಜೆಸಿಒ) ಮತ್ತು ಮೂವರು ಜವಾನರಿದ್ದಾರೆ. ಸೂಕ್ಷ್ಮ ಗಡಿ ಪ್ರದೇಶದಲ್ಲಿ ಎಂದಿನಂತೆ ಗಸ್ತು ಕರ್ತವ್ಯ ನಿರ್ವಹಣೆ ಸಂದರ್ಭ ಆಕಸ್ಮಿಕವಾಗಿ ನೆಲಬಾಂಬ್ ಸ್ಫೋಟಗೊಂಡಿದೆ.

ಆಧಾರ್ ದುರುಪಯೋಗ: ಕೇಂದ್ರ, ರಾಜ್ಯಕ್ಕೆ ನೋಟಿಸ್

ಹೊಸದಿಲ್ಲಿ: ಆಧಾರ್ ಕಾರ್ಡ್‌ಗಳನ್ನು ಪೌರತ್ವ, ವಾಸಸ್ಥಳ ಮತ್ತು ವಸತಿ ವಿಳಾಸದ ಪುರಾವೆಯಾಗಿ ದುರುಪಯೋಗಪಡಿಸಿಕೊಳ್ಳಲಾಗಿದೆ. ಗುರುತಿನ ಪರಿಶೀಲನೆಗಾಗಿ ಅದರ ಬಳಕೆಯನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲು ನಿರ್ದೇಶನಗಳನ್ನು ಕೋರಿ ಸಲ್ಲಿಸಿದ್ದ ಅರ್ಜಿ ಕುರಿತು ಸುಪ್ರೀಂ ಕೋರ್ಟ್, ಕೇಂದ್ರ ಮತ್ತು ರಾಜ್ಯಗಳ ಪ್ರತಿಕ್ರಿಯೆ ಕೇಳಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ವಿ.ಮೋಹನಾ ಅವರನ್ನೊಳಗೊಂಡ ಪೀಠವು ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿದ ಅರ್ಜಿಯ ಮೇರೆಗೆ ಕೇಂದ್ರ ಮತ್ತು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನೋಟಿಸ್ ನೀಡಿದೆ.

3 ಡ್ರಗ್ ಪೆಡ್ಲರ್‌ಗಳ 4 ಕೋಟಿ ಆಸ್ತಿ ಜಪ್ತಿ

ಶ್ರೀನಗರ: ಜಮ್ಮು ಕಾಶ್ಮೀರದ ಪುಲ್ವಾಮ ಮತ್ತು ಶ್ರೀನಗರ ಜಿಲ್ಲೆಯಲ್ಲಿ ಮಂಗಳವಾರ ಮೂವರು ಮಾದಕವಸ್ತು ಮಾರಾಟಗಾರರಿಗೆ ಸೇರಿದ 4 ಕೋಟಿ ರೂ. ಮಾರುಕಟ್ಟೆ ಮೌಲ್ಯದ ಆಸ್ತಿಯನ್ನು ಪೊಲೀಸರು ಮುಟ್ಟುಗೋಲು ಹಾಕಿಕೊಂಡಿದ್ದಾರೆ ಎಂದು ಅಧಿಕೃತ ವಕ್ತಾರರು ತಿಳಿಸಿದ್ದಾರೆ. ಇದರಲ್ಲಿ ಕುಖ್ಯಾತ ಮಾದಕವಸ್ತು ಮಾರಾಟಗಾರ ನಿಸಾರ್ ಅಹ್ಮದ್ ಖಿಂಡೆಗೆ ಸೇರಿದ 2.5 ಕೋಟಿ ರೂ. ಮೌಲ್ಯದ ಎರಡು ಅಂತಸ್ತಿನ ವಸತಿಗೃಹ ಮತ್ತು ಭೂಮಿಯನ್ನು ನಾರ್ಕೊಟಿಕ್ಸ್ ಡ್ರಗ್ಸ್ ಮತ್ತು ಸೈಕೋಟ್ರೋಪಿಕ್ ಸಬ್‌ಸ್ಟಾನ್ಸ್(ಎನ್‌ಡಿಪಿಎಸ್) ಕಾಯ್ದೆಯ ಸೆಕ್ಷನ್ 68-ಎಫ್, 68-ಇ ಅನ್ವಯ ಪೊಲೀಸರು ವಶಪಡಿಸಿದ್ದಾರೆ. ಇನ್ನುಳಿದ 1.5 ಕೋಟಿ ರೂ. ಮೌಲ್ಯದ ಆಸ್ತಿ ಸಿಕಂದರ್ ಫಿರ್ದೋಸ್‌ಗೆ (80 ಲಕ್ಷ ರೂ.) ಸೇರಿದ ಶ್ರೀನಗರದ ವಸತಿಗೃಹ ಮತ್ತು ಘುಲಾಮ್ ಹಸನ್ ಭಟ್‌ಗೆ (70 ಲಕ್ಷ ರೂ.) ಸೇರಿದ ಅನಂತನಾಗ್ ಜಿಲ್ಲೆಯ ವಸತಿಗೃಹವಾಗಿದೆ.

ರಾಗಾ ದೊಡ್ಡ ಜೋಕರ್ ಡಿಎಂಕೆ ತೀಕ್ಷ್ಣ ವಾಗ್ದಾಳಿ

ಚೆನ್ನೈ: ತಮಿಳುನಾಡಿನಲ್ಲಿ ಕಾಂಗ್ರೆಸ್ ಹಾಗೂ ಡಿಎಂಕೆ ನಡುವಿನ ರಾಜಕೀಯ ಬಿಕ್ಕಟ್ಟು ಮತ್ತಷ್ಟು ತೀವ್ರಗೊಂಡಿದ್ದು, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಡಿಎಂಕೆ ತೀಕ್ಷ್ಣ ವಾಗ್ದಾಳಿ ನಡೆಸಿದೆ. ರಾಹುಲ್ ಗಾಂಧಿ ಅವರನ್ನು 'ದೊಡ್ಡ ಜೋಕರ್' ಎಂದು ಟೀಕಿಸಿರುವ ಡಿಎಂಕೆ, ' ರಾಹುಲ್‌ಗೆ ಇನ್ನೂ ರಾಜಕೀಯ ಪ್ರೌಢತೆ ಬೆಳೆಸಿಕೊಳ್ಳಲು ಸಾಧ್ಯವಾಗಿಲ್ಲ' ಎಂದು ಕಟುವಾಗಿ ಟೀಕಿಸಿದೆ. ಡಿಎಂಕೆಯ ಅಧಿಕೃತ ಮುಖವಾಣಿ ಮುರಸೋಲಿಯಲ್ಲಿ ಪ್ರಕಟವಾದ ಲೇಖನದಲ್ಲಿ ಕಾಂಗ್ರೆಸ್ ನಾಯಕತ್ವವನ್ನು ಗುರಿಯಾಗಿಸಿಕೊಂಡು ಟೀಕಿಸಲಾಗಿದ್ದು, ರಾಹುಲ್ ಗಾಂಧಿಯ ರಾಜಕೀಯ ಅಪರಿಪಕ್ವತೆ ಮತ್ತು ನಿರ್ಧಾರಗಳೇ ಕಾಂಗ್ರೆಸ್‌ಗೆ ಮಿತ್ರಪಕ್ಷಗಳಿಂದ ಟೀಕೆ ಎದುರಾಗಲು ಕಾರಣವಾಗಿವೆ ಎಂದು ಆರೋಪಿಸಲಾಗಿದೆ. ಇತ್ತೀಚಿನ ತಮಿಳುನಾಡು ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕಾಂಗ್ರೆಸ್, ಡಿಎಂಕೆ ಮೈತ್ರಿಯಿಂದ ಹೊರಬಂದು ತಮಿಳಗ ವೆಟ್ರಿ ಕಳಗಂ(ಟಿವಿಕೆ) ಸರ್ಕಾರಕ್ಕೆ ಬೆಂಬಲ ನೀಡಿದ ನಂತರ ಉಭಯ ಪಕ್ಷಗಳ ನಡುವಿನ ಸಂಬಂಧ ಹದಗೆಟ್ಟಿದೆ. ಇದೇ ಹಿನ್ನೆಲೆಯಲ್ಲಿ ಡಿಎಂಕೆ ನಿರಂತರವಾಗಿ ಕಾಂಗ್ರೆಸ್ ವಿರುದ್ಧ ಟೀಕಾ ಪ್ರಹಾರ ನಡೆಸುತ್ತಿದೆ. ಮುರಸೋಲಿ ಲೇಖನದಲ್ಲಿ ರಾಹುಲ್ ಗಾಂಧಿ ಅವರು ತನ್ನ ರಾಜಕೀಯ ತಪ್ಪುಗಳಿಂದಲೇ ಇಂಡಿ ಮೈತ್ರಿಕೂಟದೊಳಗೆ ಅಸಮಾಧಾನ ಉಂಟುಮಾಡಿದ್ದಾರೆ ಎಂದು ಹೇಳಲಾಗಿದೆ. ಕಾಂಗ್ರೆಸ್ ನಾಯಕತ್ವವು ಮಿತ್ರಪಕ್ಷಗಳ ಭಾವನೆಗಳಿಗೆ ಗೌರವ ನೀಡದೆ ವರ್ತಿಸಿರುವುದರಿಂದ ಮೈತ್ರಿ ರಾಜಕಾರಣದಲ್ಲಿ ವಿಶ್ವಾಸದ ಕೊರತೆ ಉಂಟಾಗಿದೆ ಎಂದು ಡಿಎಂಕೆ ಆರೋಪಿಸಿದೆ.

ಛತ್ತೀಸ್‌ಗಢ ಶಾಲೆಗಳಲ್ಲಿ ಗಾಯತ್ರಿಮಂತ್ರ ಕಡ್ಡಾಯ

ರಾಯ್ಪುರ: ಛತ್ತೀಸ್‌ಗಢ ಸರ್ಕಾರವು ರಾಜ್ಯದ ಎಲ್ಲಾ ಶಾಲೆಗಳಲ್ಲಿ ಇತರ ಸಾಂಪ್ರದಾಯಿಕ ಹಿಂದು ಪ್ರಾರ್ಥನೆಗಳು, ರಾಷ್ಟ್ರಗೀತೆ ಜನ ಗಣ ಮನ ಮತ್ತು ರಾಷ್ಟ್ರೀಯಗೀತೆ ವಂದೇ ಮಾತರಂ ಜತೆಗೆ ಪ್ರತಿದಿನ ಗಾಯತ್ರಿ ಮಂತ್ರವನ್ನು ಪಠಿಸುವುದನ್ನು ಕಡ್ಡಾಯಗೊಳಿಸುವ ಆದೇಶವನ್ನು ಹೊರಡಿಸಿದೆ. ಶಾಲಾ ಶಿಕ್ಷಣ ಇಲಾಖೆಯು ರಚಿಸಿದ ಮತ್ತು ಎಲ್ಲಾ ಜಿಲ್ಲಾ ಶಿಕ್ಷಣ ಅಧಿಕಾರಿಗಳಿಗೆ(ಡಿಇಒ) ಹೊರಡಿಸಿದ ಈ ನಿರ್ದೇಶನವು ಶಿಕ್ಷಣ ಸಂಸ್ಥೆಗಳ ದೈನಂದಿನ ದಿನಚರಿಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ಸೂಚಿಸುತ್ತದೆ. ಗಾಯತ್ರಿ ಮಂತ್ರವು ಭಗವಂತನ ದೈವಿಕ ತೇಜಸ್ಸನ್ನು ಧ್ಯಾನಿಸುತ್ತೇವೆ. ಆ ಭಗವಂತ ನಮ್ಮ ಬುದ್ಧಿಶಕ್ತಿಯನ್ನು ಸನ್ಮಾರ್ಗದತ್ತ ಮುನ್ನಡೆಸಲಿ ಎಂದು ಪ್ರಾರ್ಥಿಸುವ ಮಂತ್ರವಾಗಿದೆ.

2026-27ರ ಶೈಕ್ಷಣಿಕ ಅಧಿವೇಶನದ ಆರಂಭದೊಂದಿಗೆ ಸಂಪೂರ್ಣ ಜಾರಿಗೆ ಬರುವ ಈ ಹೊಸ ನೀತಿಯು, ಶಾಲಾ ದಿನವಿಡೀ ಸಾಮೂಹಿಕ ಪಠಣ ಮತ್ತು ಗಾಯನಕ್ಕಾಗಿ ಕಟ್ಟುನಿಟ್ಟಾಗಿ ನಿಯಂತ್ರಿಸಲಾದ, ಮೂರು ಹಂತದ ವೇಳಾಪಟ್ಟಿಯನ್ನು ರೂಪಿಸಲಾಗಿದೆ. ಸರ್ಕಾರಿ ಅಧಿಕಾರಿಗಳ ಪ್ರಕಾರ, ಈ ಸಮಗ್ರ ಆದೇಶವು ಸರ್ಕಾರಿ ಮತ್ತು ಖಾಸಗಿ ಶಾಲೆಗಳಿಗೆ ಅನ್ವಯಿಸುತ್ತದೆ. ಹೊಸ ಶಿಷ್ಟಾಚಾರವು ಶಾಲಾ ದಿನವನ್ನು ಸಾಂಸ್ಕೃತಿಕ ಮತ್ತು ಮೌಲ್ಯ ಆಧಾರಿತ ಚಟುವಟಿಕೆಗಳಿಗೆ ಮೀಸಲಾಗಿರುವ ಮೂರು ನಿರ್ದಿಷ್ಟ ಸ್ಥಳಗಳಾಗಿ ವಿಂಗಡಿಸುತ್ತದೆ. ಹೊಸದಾಗಿ ಜಾರಿಗೆ ತರಲಾದ ಮಾರ್ಗಸೂಚಿಗಳಲ್ಲಿ, ಬೆಳಗಿನ ಸಭೆಯು ಈಗ ರಾಷ್ಟ್ರಗೀತೆ ಮತ್ತು ರಾಷ್ಟ್ರೀಯಗೀತೆಯನ್ನು ಸಾಮೂಹಿಕವಾಗಿ ಹಾಡುವ ಮೂಲಕ ಪ್ರಾರಂಭವಾಗುತ್ತದೆ. ನಂತರ ನೇರವಾಗಿ ದೀಪ್ ಮಂತ್ರ, ಸರಸ್ವತಿ ವಂದನಾ ಮತ್ತು ಗುರು ಮಂತ್ರವನ್ನು ಪಠಿಸಲಾಗುತ್ತದೆ. ಬೆಳಗಿನ ದಿನಚರಿಯು ಗಣ್ಯ ವ್ಯಕ್ತಿಗಳ ಜೀವನಚರಿತ್ರೆಗಳನ್ನು ಕಡ್ಡಾಯವಾಗಿ ಓದುವುದರೊಂದಿಗೆ ಮುಕ್ತಾಯಗೊಳ್ಳುತ್ತದೆ.

ತ.ನಾಡಲ್ಲಿ ₹10 ಲಕ್ಷ ಕೋಟಿ ಸಾಲದ ಹೊರೆ

ಚೆನ್ನೈ: ರಾಜ್ಯದ ಹಣಕಾಸಿನ ಸ್ಥಿತಿ ಬಗ್ಗೆ ತಮಿಳುನಾಡಿನ ಹಣಕಾಸು ಸಚಿವ ಮೇರಿ ವಿಲ್ಸನ್ ಮಂಗಳವಾರ ಶ್ವೇತಪತ್ರ ಬಿಡುಗಡೆ ಮಾಡಿದ್ದಾರೆ. ಸಚಿವಾಲಯದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ವಿಲ್ಸನ್, ತಮಿಳುನಾಡಿನಲ್ಲಿ 10 ಲಕ್ಷ ಕೋಟಿ ರೂ.ಗಳ ನೇರ ಸಾಲದ ಹೊರೆ ಮತ್ತು 78,324 ಕೋಟಿ ರೂ.ಗಳ ಆದಾಯ ಕೊರತೆ ಇದೆ. ರಾಜ್ಯದ ಸ್ವಂತ ತೆರಿಗೆ ಆದಾಯ(ಎಸ್‌ಒಟಿಆರ್) ಶೇ.5.45 ಮಾತ್ರ ಇದ್ದು, ಇದು ತುಂಬಾ ಕಡಿಮೆಯಾಗಿದೆ. ರಾಜ್ಯದ ಸಾಲ ಮತ್ತು ಜಿಎಸ್‌ಡಿಪಿ ಅನುಪಾತ ಶೇ.28.3 ರಷ್ಟಿದೆ.



ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಕೂಡಲೇ, ಟಿವಿಕೆ ಸಂಸ್ಥಾಪಕ ಸಿ. ಜೋಸೆಫ್ ವಿಜಯ್ ಅವರು ತಮ್ಮ ಸರ್ಕಾರವು ರಾಜ್ಯದ ಹಣಕಾಸು ಕುರಿತು ಶ್ವೇತಪತ್ರವನ್ನು ಬಿಡುಗಡೆ ಮಾಡುತ್ತದೆ ಎಂದು ಭರವಸೆ ನೀಡಿದ್ದರು. ಈ ಮೂಲಕ ತಮಿಳುನಾಡಿನಲ್ಲಿ ಜನಿಸಿದ ಪ್ರತಿ ಮಗುವಿನ ಮೇಲೆ ಸುಮಾರು 1 ಲಕ್ಷ ರೂ.ಗಳ ಸಾಲದ ಹೊರೆ ಇದೆ ಎಂದು ಅಂದಾಜಿಸಲಾಗಿದೆ. ಈ ದಾಖಲೆಯು ಸಾರ್ವಜನಿಕ ಹಣಕಾಸಿನ ಸುಸ್ಥಿರತೆಯ ಬಗ್ಗೆ ಹೆಚ್ಚುತ್ತಿರುವ ಕಳವಳಗಳನ್ನು ಎತ್ತಿ ತೋರಿಸುತ್ತದೆ. ವಿಶೇಷವಾಗಿ ಸಾಲದ ಸೇವೆಗಳ ವೆಚ್ಚಗಳು ಹೆಚ್ಚಾಗುತ್ತಿವೆ. ರಾಜ್ಯ ಸರ್ಕಾರವು ಗಳಿಸುವ ಪ್ರತಿ ರೂಪಾಯಿಗೆ, ಸುಮಾರು 22.8 ಪೈಸೆಗಳನ್ನು ಕೇವಲ ಬಡ್ಡಿ ಪಾವತಿಸಲಾಗುತ್ತದೆ. ಇದರಿಂದಾಗಿ ಅಭಿವೃದ್ಧಿ ವೆಚ್ಚ ಮತ್ತು ಕಲ್ಯಾಣ ಯೋಜನೆಗಳಿಗೆ ಅವಕಾಶ ಕಡಿಮೆಯಿರುತ್ತದೆ ಎಂದು ವರದಿ ಹೇಳಿದೆ.

23 ರಾಜ್ಯಗಳಲ್ಲಿ ಗಣತಿ ಪೂರ್ಣ

ಹೊಸದಿಲ್ಲಿ: 2027ರ ಜನಗಣತಿಯ ಮೊದಲ ಹಂತದ ಮನೆ ಪಟ್ಟಿ ಮತ್ತು ಜನಗಣತಿ (ಎಚ್‌ಎಲ್‌ಒ) ಇಲ್ಲಿಯವರೆಗೆ 23 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪೂರ್ಣಗೊಂಡಿದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ತಿಳಿಸಿದೆ. ಕೇರಳ ಮತ್ತು ನಾಗಾಲ್ಯಾಂಡ್‌ನಲ್ಲಿ 15 ದಿನಗಳ ಸ್ವಯಂ-ಎಣಿಕೆ ಪ್ರಕ್ರಿಯೆಯು ನಡೆಯುತ್ತಿದೆ. ಕ್ಷೇತ್ರ ಕಾರ್ಯಾಚರಣೆಯು ಜು.1ರಿಂದ ಪ್ರಾರಂಭವಾಗಿ ಜು.30ವರೆಗೆ ಮುಂದುವರಿಯುತ್ತದೆ. ಹಿಮಾಚಲ ಪ್ರದೇಶದಲ್ಲಿ ಮಂಗಳವಾರ ಆರಂಭವಾದ ಈ ಹಂತದ ಕಾರ್ಯಾಚರಣೆಗಳು ಈಗಾಗಲೇ ಗುಜರಾತ್, ಜಮ್ಮು-ಕಾಶ್ಮೀರ, ಲಡಾಖ್, ಪುದುಚೇರಿ ಮತ್ತು ಉತ್ತರ ಪ್ರದೇಶದಲ್ಲಿ ನಡೆಯುತ್ತಿವೆ. ಸ್ವಯಂ-ಗಣನೆಯನ್ನು ಪೂರ್ಣಗೊಳಿಸಿದ ನಿವಾಸಿಗಳು ತಮ್ಮ ಸ್ವಯಂ-ಗಣನೆಯ ಗುರುತಿನ ಚೀಟಿಯನ್ನು ಸಿದ್ಧವಾಗಿಟ್ಟುಕೊಳ್ಳುವಂತೆ ವಿನಂತಿಸಲಾಗಿದೆ ಮತ್ತು ಎಚ್‌ಎಲ್‌ಒ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕ್ಷೇತ್ರ ಭೇಟಿಯ ವೇಳೆ ಅದನ್ನು ಎಣಿಕೆದಾರರೊಂದಿಗೆ ಹಂಚಿಕೊಳ್ಳಬೇಕು. ಸ್ವಯಂ ಗಣನೆಯನ್ನು ಆಯ್ಕೆ ಮಾಡದ ಕುಟುಂಬಗಳನ್ನು ಗಣಕರ ಪ್ರತ್ಯಕ್ಷ ಮನೆ-ಮನೆ ಭೇಟಿಯ ಸಮಯದಲ್ಲಿ ಒಳಗೊಳ್ಳಲಾಗುತ್ತದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸಿಎಜಿ ವರದಿಯಲ್ಲಿ ಬಹಿರಂಗವಾದ ರಾಜ್ಯಗಳ ಹಣಕಾಸು ಸ್ಥಿತಿ

13 ರಾಜ್ಯಗಳಿಗೆ ಹೆಚ್ಚುವರಿ ಆದಾಯ

ಹೊಸದಿಲ್ಲಿ: 2024-25ನೇ ಹಣಕಾಸು ವರ್ಷದಲ್ಲಿ ಉತ್ತರ ಪ್ರದೇಶ, ಗುಜರಾತ್, ಜಾರ್ಖಂಡ್, ಮಣಿಪುರ ಸೇರಿದಂತೆ ಒಟ್ಟು 13 ರಾಜ್ಯಗಳು ಹೆಚ್ಚುವರಿ ಆದಾಯ ದಾಖಲಿಸಿದರೆ, ಉಳಿದ 15 ರಾಜ್ಯಗಳು ಆದಾಯ ಕೊರತೆ ಅನುಭವಿಸಿವೆ ಎಂದು ಭಾರತದ ಮಹಾಲೆಕ್ಕಪರಿಶೋಧಕ (ಸಿಎಜಿ) ಬಿಡುಗಡೆ ಮಾಡಿದ ಸ್ಟೇಟ್ ಫೈನಾನ್ಸಸ್ 2024-25 ವರದಿ ತಿಳಿಸಿದೆ.

ಸಿಎಜಿ ಕೆ. ಸಂಜಯ್ ಮೂರ್ತಿ ಮಂಗಳವಾರ ಬಿಡುಗಡೆ ಮಾಡಿದ ವರದಿಯ ಪ್ರಕಾರ, ಒಟ್ಟು 18 ರಾಜ್ಯಗಳು ಆದಾಯ ಹೆಚ್ಚುವರಿ ಗುರಿ ಹೊಂದಿದ್ದರೂ, ಅವುಗಳಲ್ಲಿ ಕೇವಲ 9 ರಾಜ್ಯಗಳು ಮಾತ್ರ ಗುರಿ ತಲುಪಿವೆ. ಅಸ್ಸಾಂ, ಬಿಹಾರ, ಛತ್ತೀಸ್‌ಗಢ, ಹರ್ಯಾಣ, ಹಿಮಾಚಲ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ಮಿಜೋರಾಂ ಹಾಗೂ ತೆಲಂಗಾಣ ರಾಜ್ಯಗಳು ಗುರಿ ಸಾಧಿಸಲಾಗದೇ ವರ್ಷಾಂತ್ಯದಲ್ಲಿ ಆದಾಯ ಕೊರತೆಯಲ್ಲೇ ಉಳಿದಿವೆ. 15ನೇ ಹಣಕಾಸು ಆಯೋಗ ನಿಗದಿಪಡಿಸಿದ್ದ ಜಿಎಸ್‌ಡಿಪಿಯ ಶೇ.3 ಹಣಕಾಸು ಕೊರತೆ ಗುರಿಯನ್ನು 18 ರಾಜ್ಯಗಳು ಮೀರಿವೆ. 2024-25ರ ವೇಳೆಗೆ ರಾಜ್ಯಗಳ ಒಟ್ಟು ಬಾಧ್ಯತೆಗಳು 90.51 ಲಕ್ಷ ಕೋಟಿ ರೂ. ತಲುಪಿದ್ದು, ಎಲ್ಲಾ 28 ರಾಜ್ಯಗಳೂ ಹಣಕಾಸು ಕೊರತೆ ದಾಖಲಿಸಿವೆ.

ರಾಜ್ಯಗಳ ಆರ್ಥಿಕ ನಿರ್ವಹಣೆಯಲ್ಲಿ ಆದಾಯ ವೃದ್ಧಿ, ವೆಚ್ಚ ನಿಯಂತ್ರಣ ಮತ್ತು ಸಾಲದ ಹೊರೆ ಕಡಿತಗೊಳಿಸುವುದು ಮುಂದಿನ ವರ್ಷಗಳಲ್ಲಿ ಪ್ರಮುಖ ಸವಾಲಾಗಲಿದೆ.
■ ಕೆ. ಸಂಜಯ್ ಮೂರ್ತಿ, ಸಿಎಜಿ

ಎಸ್‌ಜಿಎಸ್‌ಟಿಯೇ ಆದಾಯ ಮೂಲ

ರಾಜ್ಯಗಳ ಒಟ್ಟು ಆದಾಯ ಸ್ವೀಕೃತಿ 40.52 ಲಕ್ಷ ಕೋಟಿ ರೂ. ಆಗಿದ್ದು, ಅದರ ಶೇ.50ರಷ್ಟು ರಾಜ್ಯಗಳ ಸ್ವಂತ ತೆರಿಗೆ ಆದಾಯದಿಂದ ಬಂದಿದೆ. ರಾಜ್ಯ ಜಿಎಸ್‌ಟಿ ಮಾತ್ರವೇ ಈ ತೆರಿಗೆ ಆದಾಯದ ಶೇ.43ಕ್ಕಿಂತ ಹೆಚ್ಚು ಪಾಲು ಹೊಂದಿದೆ. ರಾಜ್ಯಗಳ ಒಟ್ಟು ವೆಚ್ಚ 51.20 ಲಕ್ಷ ಕೋಟಿ ರೂ. ತಲುಪಿದ್ದು, ವೇತನ, ಪಿಂಚಣಿ ಹಾಗೂ ಬಡ್ಡಿ ಪಾವತಿಗಳು ಇನ್ನೂ ಪ್ರಮುಖ ವೆಚ್ಚಗಳಾಗಿ ಮುಂದುವರಿದಿವೆ.

ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಸುಧಾರಣೆ ಅಗತ್ಯ: ಜಂಟಿ ಹೇಳಿಕೆ

ಭಾರತದ ಶಾಶ್ವತ ಸದಸ್ಯತ್ವಕ್ಕೆ ಬೆಂಬಲ

ಬ್ರಾಟಿಸ್ಲಾವ: ವಿಶ್ವಸಂಸ್ಥೆಯ ಸುಧಾರಿತ ಭದ್ರತಾ ಮಂಡಳಿಯಲ್ಲಿ ಶಾಶ್ವತ ಸದಸ್ಯತ್ವ ನೀಡಬೇಕೆಂಬ ಭಾರತದ ಬೇಡಿಕೆಗೆ ಸ್ಲೊವಾಕಿಯಾ ಬೆಂಬಲಿಸಿದೆ. ವಿಶ್ವಸಂಸ್ಥೆ ಬಹುಪಕ್ಷೀಯ ಸಂಸ್ಥೆಯಾಗಿರಬೇಕು ಹಾಗೂ ಭದ್ರತಾ ಮಂಡಳಿಯಲ್ಲಿ ಸುಧಾರಣೆ ಅಗತ್ಯವಿದೆ ಎಂದು ಪ್ರಧಾನಿ ಮೋದಿ ಮತ್ತು ಸ್ಲೊವಾಕ್ ಪ್ರಧಾನಿ ರಾಬರ್ಟ್ ಫಿಕೊ ಸೋಮವಾರ ಜಂಟಿ ಹೇಳಿಕೆಯನ್ನು ಬಿಡುಗಡೆ ಮಾಡಿದ್ದಾರೆ.



ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಇನ್ನಷ್ಟು ಪ್ರತಿನಿಧಿತ್ವ ಅಂತರ್ಗತ ಮತ್ತು ಸಮಕಾಲೀನ ಭೌಗೋಳಿಕ ರಾಜಕೀಯ ಸತ್ಯವನ್ನು ಪ್ರತಿಬಿಂಬಿಸುವ ಅಗತ್ಯವಿದೆ. ವಿಶ್ವಸಂಸ್ಥೆ ಮತ್ತು ಅದರ ಭದ್ರತಾ ಮಂಡಳಿಯಲ್ಲಿ (ಯುಎನ್‌ಎಸ್‌ಸಿ) ಸಮಗ್ರ ಸುಧಾರಣೆಯ ಅಗತ್ಯವಿದೆ ಎಂದು ಪ್ರಧಾನಿ ಮೋದಿ ಹಾಗೂ ಸ್ಲೊವಾಕ್ ಪ್ರಧಾನಿ ರಾಬರ್ಟ್ ಫಿಕೊ ಸೋಮವಾರ ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ವಿಶ್ವಸಂಸ್ಥೆ ಭದ್ರತಾ ಮಂಡಳಿಯನ್ನು ಶಾಶ್ವತ ಸದಸ್ಯರು ಮತ್ತು ಅಶಾಶ್ವತ ಸದಸ್ಯರೆಂಬ ಎರಡು ವಿಭಾಗಗಳಲ್ಲಿ ಇನ್ನಷ್ಟು ವಿಸ್ತರಿಸುವುದು ತುರ್ತು ಅಗತ್ಯವಿದೆ ಎಂದು ಇಬ್ಬರೂ ನಾಯಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಮಧ್ಯ ಯುರೋಪ್ ರಾಷ್ಟ್ರ ಸ್ಲೊವಾಕಿಯಾಗೆ ನೀಡಿದ ಐತಿಹಾಸಿಕ ಭೇಟಿಯ ಸಂದರ್ಭ ಉಭಯ ರಾಷ್ಟ್ರಗಳು ಸಮಗ್ರ ಪಾಲುದಾರಿಕೆಯ ಮಟ್ಟವನ್ನು ಉನ್ನತೀಕರಿಸಿವೆ. ಇದೇ ವಿಚಾರದಲ್ಲಿ, ತನ್ನ ಶಾಶ್ವತ ಸದಸ್ಯತ್ವದ ಬೇಡಿಕೆಗೆ ಬೆಂಬಲಿಸಿದ ಸ್ಲೊವಾಕಿಯಾಗೆ ಭಾರತ ಕೃತಜ್ಞತೆಯನ್ನು ಜಂಟಿ ಹೇಳಿಕೆಯಲ್ಲೇ ಉಲ್ಲೇಖಿಸಿದೆ.

ಮೋದಿಗೆ ಸ್ಲೊವಾಕ್ ಅತ್ಯುನ್ನತ ನಾಗರಿಕ ಪ್ರಶಸ್ತಿ: ಸ್ಲೊವಾಕ್ ಅಧ್ಯಕ್ಷ ಪೀಟರ್ ಪೆಲ್ಲೆಗ್ರಿನಿ ಪ್ರಧಾನಿ ಮೋದಿಯವರಿಗೆ ಆರ್ಡರ್ ಆಫ್ ದಿ ವೈಟ್ ಡಬಲ್ ಕ್ರಾಸ್ (ಫಸ್ಟ್ ಕ್ಲಾಸ್) ಸ್ಲೊವಾಕಿಯಾ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ನೀಡಿ ಗೌರವಿಸಿದರು. ಇದು ಪ್ರಧಾನಿಗೆ ಸಿಕ್ಕ 33ನೇ ಅಂತಾರಾಷ್ಟ್ರೀಯ ಪ್ರಶಸ್ತಿಯಾಗಿದೆ.

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,55,000(2,58,000) ಅಪರಂಜಿ ಚಿನ್ನ 15,100(15,100) ಆಭರಣ ಚಿನ್ನ: 13,875(13,890) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ) | ಷೇರು ಸೂಚ್ಯಂಕ ಬಿಎಸ್‌ಇ 76,808(544↑) ಎನ್‌ಎಸ್‌ಇ 23,989(135↑) | $1 = ₹94.72

ಕಿರುಸುದ್ದಿ

ದೇವಿನಗರ ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ಅಧ್ಯಕ್ಷರಾಗಿ ಸಂದೀಪ್ ಬೊಂದೇಲ್

ಮಂಗಳೂರು: ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ದೇವಿನಗರ ಪದವಿನಂಗಡಿ ಇದರ 29ನೇ ವರ್ಷದ ಗಣೇಶೋತ್ಸವ ಸಮಿತಿಯ ಪದಾಧಿಕಾರಿಗಳ ಆಯ್ಕೆ ನಡೆದು ಅಧ್ಯಕ್ಷರಾಗಿ ಸಂದೀಪ್ ಬೊಂದೇಲ್ ಆಯ್ಕೆಯಾಗಿದ್ದಾರೆ. ಗೌರವಾಧ್ಯಕ್ಷರಾಗಿ ವಾಸುದೇವ ಕಾಮತ್, ಪ್ರಧಾನ ಕಾರ್ಯದರ್ಶಿಯಾಗಿ ನಂದ ಕಿಶೋರ್ ಎಂ, ಉಪಾಧ್ಯಕ್ಷರಾಗಿ ಪ್ರಸನ್ನ ಆಚಾರ್ಯ, ಸತೀಶ್ ಗಟ್ಟಿ, ಓ.ಪಿ ಪ್ರಭಾಕರ್ ಉದಯಕುಮಾರ್ ಪಚ್ಚನಾಡಿ, ಗೌರವ ಸಲಹೆಗಾರರಾಗಿ ರವಿ ಪ್ರಸನ್ನ ಸಿ.ಕೆ, ಪ್ರಶಾಂತ್ ಪೈ ರಾಮ ಮುಗ್ರೋಡಿ, ಪಿ.ರಾಮ ಅಮೀನ್, ಜಯಾನಂದ್ ಅಂಚನ್, ಜೊತೆ ಕಾರ್ಯದರ್ಶಿಯಾಗಿ ಜಯರಾಮ್ ಬೊಲ್ಪುಗುಡ್ಡೆ, ಜಯಲಕ್ಷ್ಮಿ ಚಂದ್ರಹಾಸ್, ಹರಿಪ್ರಸಾದ್ ಕೋಟ್ಯಾನ್, ಪ್ರಜ್ವಲ್ ಶೆಟ್ಟಿ, ಕೋಶಾಧಿಕಾರಿಯಾಗಿ ಸತ್ಯರಾಜ್, ಲೆಕ್ಕಪರಿಶೋಧಕರಾಗಿ ಚಂದ್ರಶೇಖರ್ ರಾವ್, ಸಾಮಾಜಿಕ ಜಾಲತಾಣ ಸಂಪರ್ಕ ಅಧಿಕಾರಿ ಅಂಕಿತ್ ಮಾರ್ಲ ಆಯ್ಕೆಯಾಗಿದ್ದಾರೆ.



ಪ್ರೊ. ಭಗವಾನ್‌ನನ್ನು ಕೂಡಲೇ ಬಂಧಿಸಿ ಮಾನಸಿಕ ಚಿಕಿತ್ಸೆ ನೀಡಲಿ:ಕುಂಪಲ

ಮಂಗಳೂರು: ಶ್ರೀರಾಮಚಂದ್ರ ದೇವರ ಕುರಿತು ನಿಂದನಾತ್ಮಕ ಮಾತುಗಳನ್ನು ಆಡಿರುವ ಪ್ರೊ. ಭಗವಾನ್ ವಿರುದ್ಧ ಸರ್ಕಾರ ಕೂಡಲೇ ಕಾನೂನು ಕ್ರಮ ಕೈಗೊಳ್ಳಬೇಕು. ಮತಿಭ್ರಮಣೆಗೊಂಡಿರುವ ಆತನನ್ನು ಬಂಧಿಸಿ, ಮಾನಸಿಕ ಚಿಕಿತ್ಸೆ ನೀಡಬೇಕು ಎಂದು ಭಾರತೀಯ ಜನತಾ ಪಾರ್ಟಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಆಕ್ರೋಶ ವ್ಯಕ್ತಪಡಿಸಿದ್ದಾರೆ.
ಹಿಂದು ಧರ್ಮ, ದೇವರುಗಳನ್ನು ನಿಂದಿಸುವುದೇ ಈತನ ಕಾಯಕವಾಗಿದೆ. ಹಿಂದುಗಳಲ್ಲಿರುವ ಸಹಿಷ್ಣುತೆಯನ್ನು ದೌರ್ಬಲ್ಯ ಎಂದು ತಿಳಿದಿರುವಂತಿದೆ. ಸಮಾಜದಲ್ಲಿ ಸಾಮರಸ್ಯಕ್ಕೆ ಧಕ್ಕೆ ತರುವ ಇಂತಹ ವ್ಯಕ್ತಿಗಳನ್ನು ಬಹಿಷ್ಕರಿಸಬೇಕು. ದೇವರನ್ನು ನಂಬದ ಪ್ರೊ. ಭಗವಾನ್ ತನ್ನ ಹೆಸರನ್ನು ಪ್ರೊ. ಸೈತಾನ್ ಎಂದು ಬದಲಿಸಲಿ ಎಂದು ಕುಂಪಲ ಪ್ರಕಟಣೆಯಲ್ಲಿ ಹೇಳಿದ್ದಾರೆ.



ಜಯಮಾಲಾ ಸರಳಾಯರಿಗೆ ಡಾಕ್ಟರೇಟ್ ಪದವಿ

ಮುಳ್ಳೇರಿಯ: ಕಾಸರಗೋಡು ತಾಲೂಕಿನ ಆಡೂರು ಗ್ರಾಮದ ಕಾಯರ್ತಿಮಾರು ಕೇಶವ ಸರಳಾಯರ ಪತ್ನಿ ವಿಜಯಮಾಲಾ ಸರಳಾಯ ಅವರು ಕರ್ನಾಟಕ ಶಾಸ್ತ್ರೀಯ ಸಂಗೀತ ವಿಭಾಗದಲ್ಲಿ 20ನೇ ಶತಮಾನದ ಆದಿಯಲ್ಲಿನ ಅಜ್ಞಾತವಾಗಿಯೇ ಉಳಿದ ಮೈಸೂರಿನ ಕರ್ನಾಟಕ ಸಂಗೀತದ ವಾಗ್ಗೇಯಕಾರರು – ಒಂದು ಸಮಗ್ರ ಅಧ್ಯಯನ ಎಂಬ ವಿಷಯದಲ್ಲಿ ಡಾ.ಮೀರಾ ರಾಜಾರಾಮ್ ಪ್ರಾಣೇಶ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆಯನ್ನು ಕೈಗೊಂಡು ರಚಿಸಿ ಸಲ್ಲಿಸಿದ ಮಹಾಪ್ರಬಂಧಕ್ಕೆ ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ. ಅವರು ಮೈಸೂರಿನ ಹಿರಿಯ ಸಂಗೀತ ವಿದುಷಿ ಡಾ.ಸುಕನ್ಯಾ ಪ್ರಭಾಕರ್ ಅವರ ಶಿಷ್ಯೆಯಾಗಿದ್ದು, ಶಾಸ್ತ್ರೀಯ ಸಂಗೀತದ ಜೊತೆಗೆ ಸಾಹಿತ್ಯ, ಯೋಗ ಮತ್ತು ಚಿತ್ರಕಲೆಯಲ್ಲೂ ಪರಿಶ್ರಮವನ್ನು ಹೊಂದಿರುವ ಅವರ ಅನೇಕ ಸಂಶೋಧನಾ ಬರಹಗಳು, ಸಂಗೀತಾತ್ಮಕ ಲೇಖನಗಳು ಸಂಶೋಧನಾ ಜರ್ನಲ್ ಹಾಗೂ ಹಲವು ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ವಿಜಯಮಾಲಾ ಅವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ ಕನ್ನಡ ಎಂಎ, ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯದಿಂದ ಚಿನ್ನದ ಪದಕಗಳ ಸಹಿತ ಕರ್ನಾಟಕ ಸಂಗೀತದಲ್ಲಿ ಎಂ. ಮ್ಯೂಸಿಕ್, ಜೈನ್ ವಿಶ್ವವಿದ್ಯಾಲಯದಿಂದ ಎಂ. ಫಿಲ್ ಹಾಗೂ ಸಂಸ್ಕೃತ ವಿಶ್ವ ವಿದ್ಯಾಲಯದ ಯೋಗ ಪಿ.ಜಿ. ಡಿಪ್ಲೊಮಾ ಪದವಿಗಳನ್ನೂ ಪಡೆದಿದ್ದಾರೆ. ವಿಜಯಮಾಲಾ ಅವರು ಕೊಕ್ಕಡ ಕೆ.ವಿ.ಆನಂದ ಯಡಪಡಿತ್ತಾಯ ಮತ್ತು ವನಜಾಕ್ಷಿ ದಂಪತಿಯ ಪುತ್ರಿ.



ಹಲಸು-ಮಾವು ಮೇಳದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮುಕ್ತ ವೇದಿಕೆ

ಮಂಗಳೂರು: ಕಲ್ಕೂರ ಪ್ರತಿಷ್ಠಾನ ಹಾಗೂ ಸಾವಯವ ಕೃಷಿಕ ಗ್ರಾಹಕ ಬಳಗ ಮಂಗಳೂರು ಸಹಯೋಗದೊಂದಿಗೆ ಜೂನ್ 20 ಮತ್ತು 21ರಂದು ನಗರದ ಕದ್ರಿ ಕಂಬಳ ಮಲ್ಲಿಕಾ ಬಡಾವಣೆಯ ಮಂಜುಪ್ರಾಸಾದ ನಿಲಯದ ಆವರಣದಲ್ಲಿ ಆಯೋಜಿಸಲಾಗಿರುವ 'ಹಲಸು–ಮಾವು' ಮೇಳದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನೀಡಲು ಆಸಕ್ತಿಯಿರುವ ಕಲಾವಿದರಿಗೆ ಮುಕ್ತ ಅವಕಾಶವನ್ನು ಕಲ್ಪಿಸಲಾಗುವುದು. ಉದಯರಾಗ, ಭಗವದ್ಗೀತಾ ವಾಚನ, ಹರಿಕಥೆ, ಗಮಕ ವಾಚನ, ಜನಪದ ಗೀತೆ, ಪಾರ್ದನ, ತಾಳಮದ್ದಳೆ, ಭಜನೆ ಅಲ್ಲದೆ ಪುಸ್ತಕ ಬಿಡುಗಡೆಯಂತಹ ಸಾಹಿತ್ಯಿಕ ಕಾರ್ಯಕ್ರಮಗಳಿಗೂ ಅವಕಾಶವಿದೆ. ಆಸಕ್ತರು ಕಲ್ಕೂರ ಪ್ರತಿಷ್ಠಾನದ ಕಚೇರಿ (ದೂ. 9916279319) ಸಂಪರ್ಕಿಸಬಹುದು ಎಂದು ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಎಸ್. ಪ್ರದೀಪ ಕುಮಾರ ಕಲ್ಕೂರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುತ್ತಿಗೆ ದೇವಸ್ಥಾನದಲ್ಲಿ ಸೂಕ್ತ ಮಂತ್ರ ಪುಷ್ಪ ಪಠಣ

ಬಂಟ್ವಾಳ: ಶ್ರೀ ರುದ್ರ ಪಠಣ ಸಮಿತಿ ಬಂಟ್ವಾಳ ಇದರ ವತಿಯಿಂದ ಪುತ್ತಿಗೆ ಮಹತೋಭಾರ ಶ್ರೀ ಸೋಮನಾಥೇಶ್ವರ ದೇವಸ್ಥಾನದಲ್ಲಿ ಸಾಮೂಹಿಕ ಶ್ರೀ ರುದ್ರ ನಮಕ ಚಮಕ ಗಣಪತಿ ಸೂಕ್ತ ದೇವಿ ಸೂಕ್ತ ಸೌರ ಸೂಕ್ತ ಮನ್ಯು ಸೂಕ್ತ ಅಘಮರ್ಷಣ ಸೂಕ್ತ ಮಂತ್ರ ಪುಷ್ಪ ಪಠಿಸಲಾಯಿತು ಸಜೀಪ ಮಾಗಣೆ ತಂತ್ರಿ ಎಂ.ಸುಬ್ರಹ್ಮಣ್ಯ ಭಟ್, ಪ್ರಧಾನ ಅರ್ಚಕ ಅನಂತ ಕೃಷ್ಣ ಅಡಿಗ, ಕಾರ್ಯಕ್ರಮದ ಸಂಘಟಕ ಎ.ರವಿ ಶಂಕರ ಮಯ್ಯ, ಕೊಟ ಮಹಾ ಜಗತ್ತು ಮೂಡಬಿದ್ರೆ ಅಂಗ ಸಂಸ್ಥೆ ಅಧ್ಯಕ್ಷ ವಿದ್ವಾನ್ ಡಾ.ಸೋಮಶೇಖರ ಮಯ್ಯ, ಲೋಕೋಪಯೋಗಿ ಇಲಾಖೆ ನಿವೃತ್ತ ಇಂಜಿನಿಯರ್ ಎಂ.ಶ್ರೀನಿವಾಸ ಹೊಳ್ಳ, ಆಳ್ವಾಸ್ ಕಾಲೇಜು ಉಪನ್ಯಾಸಕ ಚಂದ್ರಶೇಖರ ಮಯ್ಯ, ಉಜಿರೆ ಎಸ್‌ಡಿಎಂ ಕಾಲೇಜು ಉಪನ್ಯಾಸಕ ಶಿವರಾಮ ಕಾರಂತ, ಕೃಷ್ಣ ಕುಮಾರ ಸೋಮಯಾಜಿ ಅರ್ಬಿ,ಎಂ. ಶಾಂತರಾಮ ರಾವ್, ಎನ್. ರಾಮಚಂದ್ರ ಮಯ್ಯ, ಎಂ. ಜಯರಾಮಮಯ್ಯ, ರವಿಶಂಕರ ಕಾರಂತ, ವಿಶಾಲ್ ಹೆಗ್ಡೆ, ಎ.ಉದನೇಶ್ವರ ರಾವ್, ಮೊದಲಾದವರಿದ್ದರು.

ಕೊಡಗಿನಲ್ಲಿ ವನ್ಯಜೀವಿ–ಮಾನವ ಸಂಘರ್ಷ | ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯ ಭೇಟಿ

ರೈಲ್ವೆ ಬ್ಯಾರಿಕೇಡ್ ಬೇಲಿ ಅಳವಡಿಸಲಿ

ಮಡಿಕೇರಿ: ಕೊಡಗಿನಲ್ಲಿ ಹೆಚ್ಚುತ್ತಿರುವ ಮಾನವ–ವನ್ಯಜೀವಿ ಸಂಘರ್ಷವನ್ನು ನಿಯಂತ್ರಿಸುವ ನಿಟ್ಟಿನಲ್ಲಿ, ಬೆಂಗಳೂರು ಕೊಡವ ಸಮಾಜದ ನಿಯೋಗವೊಂದು ಮಂಗಳವಾರ ಅರಣ್ಯ ಪಡೆಯ ಮುಖ್ಯಸ್ಥರೂ ಆಗಿರುವ ಕರ್ನಾಟಕದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪಿಸಿಸಿಎಫ್) ಡಾ. ಮೀನಾಕ್ಷಿ ನೇಗಿಬ ಅವರನ್ನು ಭೇಟಿ ಮಾಡಿ ಚರ್ಚಿಸಿತು.

ಬೆಂಗಳೂರು ಕೊಡವ ಸಮಾಜದ ಅಧ್ಯಕ್ಷ ಚಿರಿಯಪಂಡ ಸುರೇಶ್ ನಂಜಪ್ಪ ನೇತೃತ್ವದಲ್ಲಿ ಸಮಾಜದ ಪದಾಧಿಕಾರಿಗಳು, ವ್ಯವಸ್ಥಾಪನಾ ಸಮಿತಿ ಮತ್ತು ಕಾನೂನು ಸಮಿತಿಯ ಸದಸ್ಯರು ಅರಣ್ಯ ಭವನಕ್ಕೆ ಭೇಟಿ ನೀಡಿ, ಕೊಡಗಿನಲ್ಲಿ ಹೆಚ್ಚುತ್ತಿರುವ ಮಾನವ–ವನ್ಯಜೀವಿ ಸಂಘರ್ಷದ ವಾಸ್ತವತೆಯ ಬಗ್ಗೆ ಅರಣ್ಯ ಇಲಾಖೆಗೆ ಮನವರಿಕೆ ಮಾಡಿತು.

ಕೊಡಗಿನಲ್ಲಿ ಹೆಚ್ಚುತ್ತಿರುವ ಮಾನವ–ವನ್ಯಜೀವಿ ಸಂಘರ್ಷದ ಘಟನೆಗಳು ಮತ್ತು ಮುಗ್ಧ ಮಾನವ ಜೀವಗಳ ನಷ್ಟದ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ ನಿಯೋಗವು, ಸ್ಥಳೀಯ ಸಮುದಾಯ ಮತ್ತು ಅರಣ್ಯ ಇಲಾಖೆಯ ಸಹಯೋಗದಲ್ಲಿ ಕೈಗೊಳ್ಳಬಹುದಾದ ಸಂಭಾವ್ಯ ಕ್ರಮಗಳ ಕುರಿತು ವಿವರವಾದ ಮತ್ತು ರಚನಾತ್ಮಕ ಚರ್ಚೆ ನಡೆಸಿತು.

ಮಾನವವಾಸಸ್ಥಳಗಳು ಮತ್ತು ಕೃಷಿಭೂಮಿಗಳಿಗೆ ಆನೆಗಳ ನುಸುಳುವಿಕೆಯನ್ನು ತಡೆಗಟ್ಟಲು ಸೂಕ್ಷ್ಮ ಪ್ರದೇಶಗಳಲ್ಲಿ ರೈಲ್ವೆ ಬ್ಯಾರಿಕೇಡ್ ಬೇಲಿಯನ್ನು ಅಳವಡಿಸುವ ಮೂಲಕ ಅರಣ್ಯ ಗಡಿಗಳನ್ನು ಬಲಪಡಿಸುವ ತುರ್ತು ಅಗತ್ಯದ ಬಗ್ಗೆ ತಿಳಿಸಿದ ನಿಯೋಗದ ಪ್ರಮುಖರು, ನಾಗರಹೊಳೆಯಲ್ಲಿ ಸಫಾರಿ ಚಟುವಟಿಕೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ಮತ್ತು ವನ್ಯಜೀವಿಗಳು ಹಳ್ಳಿಗಳು ಮತ್ತು ತೋಟ ಪ್ರದೇಶಗಳಿಗೆ ಬರುತ್ತಿರುವುದಕ್ಕೆ ಮೂಲ ಕಾರಣಗಳನ್ನು ಗುರುತಿಸಲು ವಿವರವಾದ ಅಧ್ಯಯನ ನಡೆಸುವ ಕಾರ್ಯಸಾಧ್ಯತೆಯನ್ನು ಪರಿಶೀಲಿಸುವಂತೆಯೂ ಮನವಿ ಮಾಡಿದರು.



ಸಲಹೆ-ಸೂಚನೆಗಳು

ಸಾಧ್ಯವಾದಲ್ಲೆಲ್ಲಾ ವೈಜ್ಞಾನಿಕವಾಗಿ ಮತ್ತು ಕಾನೂನುಬದ್ಧವಾಗಿ ಸಂತಾನ ನಿಯಂತ್ರಣ ಕ್ರಮಗಳನ್ನು ಅನ್ವೇಷಿಸುವಂತೆ ಮತ್ತು ಅರಣ್ಯ ಪ್ರದೇಶದಲ್ಲಿ ಮೇವಿನ ಪ್ರಭೇದಗಳು, ಬಿದಿರು, ಹಲಸು ಮತ್ತು ಇತರ ಸೂಕ್ತ ಸಸ್ಯವರ್ಗಗಳನ್ನು ನೆಡುವುದು ಮತ್ತು ಪೋಷಿಸುವ ಮೂಲಕ ಕಾಡುಗಳಲ್ಲಿ ನೈಸರ್ಗಿಕ ಆಹಾರ ಮೂಲಗಳ ಲಭ್ಯತೆಯನ್ನು ಹೆಚ್ಚಿಸುವಂತೆಯೂ ಸಲಹೆ ನೀಡಲಾಯಿತು.

ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡುವ ತೀರ್ಮಾನ


ಮಾನವ ಜೀವಗಳು ಮತ್ತು ವನ್ಯಜೀವಿಗಳನ್ನು ರಕ್ಷಿಸುವ ಪ್ರಾಯೋಗಿಕ, ದೀರ್ಘಕಾಲೀನ ಪರಿಹಾರಗಳ ಬಗ್ಗೆ ಸಂವಾದವನ್ನು ಮುಂದುವರಿಸಲು ಮತ್ತು ಕೆಲಸ ಮಾಡಲು ಬೆಂಗಳೂರು ಕೊಡವ ಸಮಾಜ ಒಂದು ತಿಂಗಳ ನಂತರ ಮತ್ತೆ ಕರ್ನಾಟಕ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡುವ ತೀರ್ಮಾನಕ್ಕೆ ಬರಲಾಯಿತು.

ಮಾನವ ವಾಹತುಗಳಿಗೆ ಪದೇ ಪದೇ ಪ್ರವೇಶಿಸುವ ಅಭ್ಯಾಸ ಹೊಂದಿರುವ ಪ್ರಾಣಿಗಳನ್ನು ಗುರುತಿಸುವ, ಸೆರೆಹಿಡಿಯುವ ಮತ್ತು ಸ್ಥಳಾಂತರಿಸುವ ಅಗತ್ಯತೆ ಬಗ್ಗೆಯೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಗಮನಸೆಳೆದ ಅವರುಗಳು, ಕಾಫಿ ತೋಟಗಳ ಶಾಶ್ವತ ನಿವಾಸಿಗಳಾಗಿ ಮಾರ್ಪಟ್ಟಿರುವ ಮತ್ತು ಪುನರಾವರ್ತಿತ ಸಂಘರ್ಷಕ್ಕೆ ಕಾರಣವಾಗಿರುವ ಸಂಪೂರ್ಣ ತೊಂದರೆದಾಯಕ ಆನೆ ಹಿಂಡುಗಳನ್ನು ಸ್ಥಳಾಂತರಿಸುವ ಸಾಧ್ಯತೆಯ ಬಗ್ಗೆಯೂ ಚರ್ಚಿಸಿದರು.

ಅರಣ್ಯ ಪ್ರದೇಶಗಳಲ್ಲಿ ವನ್ಯಜೀವಿ ಆವಾಸಸ್ಥಾನದ ಗುಣಮಟ್ಟ ಮತ್ತು ಲಭ್ಯತೆಯ ಮೇಲೆ ಗಮನಾರ್ಹವಾಗಿ ಪರಿಣಾಮ ಬೀರಿರುವ ಆಕ್ರಮಣಕಾರಿ ಲಂಟಾನ ಹರಡುವಿಕೆಯನ್ನು ನಿಯಂತ್ರಿಸುವ ತುರ್ತು ಅಗತ್ಯದ ಬಗ್ಗೆಯೂ ನಿಯೋಗದ ಸದಸ್ಯರು ಇಲಾಖೆಯ ಗಮನಸೆಳೆದರು.

ಕಾಡಾನೆಗಳನ್ನು ಅರಣ್ಯಕ್ಕಟ್ಟುವ ಕಾರ್ಯಾಚರಣೆ

ಮಡಿಕೇರಿ: ತಿತಿಮತಿ ಅರಣ್ಯ ವಲಯದ ಚೆನ್ನಂಗಿ ಶಾಖೆ ವ್ಯಾಪ್ತಿಯ ಮೇಕೂರು, ಹೊಸ್ಕೇರಿ, ಬಾಡಗ ಬಾಣಂಗಾಲ ಹಾಗೂ ಕೊಡಗು ಶ್ರೀರಂಗಪಟ್ಟಣ ಗ್ರಾಮದ ಟಾಟಾ ಕಾಫಿಯ ಮಾರ್ಗೊಲ್ಲಿ ಎಸ್ಟೇಟ್ ಮತ್ತು ಸುತ್ತಮುತ್ತಲಿನ ಖಾಸಗಿ ಕಾಫಿ ತೋಟಗಳಲ್ಲಿ ಬೀಡುಬಿಟ್ಟಿದ್ದ ಕಾಡಾನೆಗಳನ್ನು ಕಾಡಿಗೆ ಅಟ್ಟುವ ಕಾರ್ಯಾಚರಣೆ ನಡೆಸಲಾಯಿತು.



ಕಳೆದ ಕೆಲವು ದಿನಗಳಿಂದ ಐದು ಮರಿಗಳ ಸಹಿತ 27ಕ್ಕೂ ಹೆಚ್ಚು ಸಂಖ್ಯೆಯಲ್ಲಿದ್ದ ಕಾಡಾನೆಗಳು ಎರಡು ಪ್ರತ್ಯೇಕ ಹಿಂಡುಗಳಾಗಿ ಸಂಚರಿಸುವುದರೊಂದಿಗೆ ತೋಟಗಳಿಗೆ ನುಗ್ಗಿ ಲಕ್ಷಾಂತರ ರೂಪಾಯಿ ಮೌಲ್ಯದ ಅಡಿಕೆ, ತೆಂಗು, ಕಾಫಿ ಹಾಗೂ ಬಾಳೆ ಬೆಳೆಗಳಿಗೆ ಹಾನಿ ಉಂಟು ಮಾಡುತ್ತಿದ್ದವು.

ಈಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಸೋಮವಾರ ವಿಶೇಷ ಕಾರ್ಯಾಚರಣೆ ಕೈಗೊಂಡು ಕಾಡಾನೆಗಳ ಹಿಂಡನ್ನು ದುಬಾರೆ ಮೀಸಲು ಅರಣ್ಯದತ್ತ ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯಾಗಿದೆ.

ಕೊಡಗು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿಯವರ ಸೂಚನೆ ಮೇರೆಗೆ, ವೀರಾಜಪೇಟೆ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಂಜುನಾಥ್ ಅವರ ನಿರ್ದೇಶನದಲ್ಲಿ, ವಲಯ ಅರಣ್ಯಾಧಿಕಾರಿ ಗಂಗಾಧರ್ ಅವರ ಮಾರ್ಗದರ್ಶನದಲ್ಲಿ ಚೆನ್ನಂಗಿ ಶಾಖೆಯ ಉಪ ವಲಯ ಅರಣ್ಯಾಧಿಕಾರಿ ಶಶಿ ಪಿ.ಟಿ. ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿತು.

ಕಾರ್ಯಾಚರಣೆಯಲ್ಲಿ ಆರ್‌ಆರ್‌ಟಿ ತಂಡದ ಶಂಕರ್, ಪ್ರಜ್ವಲ್, ರಂಜಿತ್, ಸುಂದರ, ಪ್ರವೀಣ, ರೋಶನ್, ಆಕಾಶ್, ಪ್ರದೀಪ್, ಧನು, ಅರುಣ, ಇಟಿಪಿಡಬ್ಲ್ಯು ಉಪ ವಲಯ ಅರಣ್ಯಾಧಿಕಾರಿ ದೇವರಾಜ್ ಹಾಗೂ ಸಿಬ್ಬಂದಿ, ವನ್ಯಜೀವಿ ವಲಯದ ಸಿಬ್ಬಂದಿ ಮತ್ತು ಟಾಟಾ ಕಾಫಿ ಸಂಸ್ಥೆಯ ಟ್ರ್ಯಾಕ್ಟರ್ ಚಾಲಕರು ಸಹಕರಿಸಿದರು.

ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಿ

ದುಬಾರೆ ಮೀಸಲು ಅರಣ್ಯಕ್ಕೆ ಅಟ್ಟಲಾದ ಕಾಡಾನೆಗಳ ಹಿಂಡುಗಳು ರಾತ್ರಿ ವೇಳೆಯಲ್ಲಿ ಮತ್ತೆ ಕಾಡು ದಾಟಿ ತೋಟ ಪ್ರದೇಶಗಳಿಗೆ ಲಗ್ಗೆ ಇಡುತ್ತಿರುವುದರಿಂದ ಕೃಷಿ ಬೆಳೆಗಳಿಗೆ ನಿರಂತರ ಹಾನಿ ಉಂಟಾಗುತ್ತಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಿ ರೈತರು ಮತ್ತು ತೋಟದ ಮಾಲೀಕರನ್ನು ಕಾಡಾನೆ ಹಾವಳಿಯಿಂದ ರಕ್ಷಿಸಬೇಕು ಎಂದು ಸಾರ್ವಜನಿಕರು ಹಾಗೂ ತೋಟದ ಮಾಲೀಕರು ಒತ್ತಾಯಿಸಿದ್ದಾರೆ.

ಕಟೀಲಿನ ಶ್ರುತಿಕಾಗೆ ಅಲೈಡ್ ಹೆಲ್ತ್ ಸೈನ್ಸ್‌ನಲ್ಲಿ ಎರಡು ಚಿನ್ನದ ಪದಕ

ಮಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 28ನೇ ವಾರ್ಷಿಕ ಘಟಿಕೋತ್ಸವದಲ್ಲಿ ಕಟೀಲಿನ ಶ್ರುತಿಕಾ ಅವರಿಗೆ ಬಿಎಸ್ಸಿ ಅಲೈಡ್ ಹೆಲ್ತ್ ಸೈನ್ಸ್ ವಿಭಾಗದಲ್ಲಿ ಎರಡು ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಯಿತು.

ಶ್ರುತಿಕಾ ಅವರು ಮಂಗಳೂರಿನ ಎ.ಜೆ. ಅಲೈಡ್ ಹೆಲ್ತ್ ಸೈನ್ಸಸ್ ಸಂಸ್ಥೆಯಲ್ಲಿ ಬಿ. ಎಸ್ಸಿ ನ್ಯೂರೋಸೈನ್ಸ್ ವಿದ್ಯಾರ್ಥಿನಿಯಾಗಿದ್ದು, ಕಟೀಲು ಮಲ್ಲಿಗೆ ಅಂಗಡಿಯ ದಯಾನಂದ ಪೂಜಾರಿ ಮತ್ತು ಸವಿತಾ ದಂಪತಿಯ ಪುತ್ರಿಯಾಗಿದ್ದಾರೆ.

ಶ್ರುತಿಕಾ ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ ಜರುಗಿದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 28ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ, ಶ್ರುತಿಕಾ ಅವರು ಬಿ. ಎಸ್ಸಿ ಅಲೈಡ್ ಹೆಲ್ತ್ ಸೈನ್ಸ್‌ನಲ್ಲಿ ದ್ವಿತೀಯ ಹಾಗೂ ತೃತೀಯ ವರ್ಷದಲ್ಲಿ ಗರಿಷ್ಠ ಅಂಕ ಪಡೆದ ಕಾರಣ, ಅವರಿಗೆ 2 ಚಿನ್ನದ ಪದಕಗಳನ್ನು ಪ್ರದಾನ ಮಾಡಿ ಗೌರವಿಸಲಾಯಿತು.



ಶ್ರುತಿಕಾ ಅವರು, ಮುಂದೆ ಇದೇ ಕ್ಷೇತ್ರದಲ್ಲಿ ತಮ್ಮ ಉನ್ನತ ವ್ಯಾಸಂಗವನ್ನು ಮುಂದುವರಿಸಲಿದ್ದು, ಎಂಎಸ್ಸಿ ನ್ಯೂರೋಸೈನ್ಸ್ ಅಧ್ಯಯನ ಮಾಡಲು ನಿರ್ಧರಿಸಿದ್ದಾರೆ.

ಚಿನ್ನದ ಪದಕ ವಿಜೇತ ಶ್ರುತಿಕಾ ಅವರ ಈ ಸಾಧನೆಗೆ, ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಉಪನ್ಯಾಸಕ ವೃಂದದವರು ಹಾಗೂ ಕುಟುಂಬದ ಬಂಧು ಮಿತ್ರರು ಹರ್ಷ ವ್ಯಕ್ತಪಡಿಸಿ, ಶುಭ ಹಾರೈಸಿದ್ದಾರೆ.

ಕೆ.ಎಸ್.ಹೆಗ್ಡೆ ಆಸ್ಪತ್ರೆಯಲ್ಲಿ ಕ್ಯಾಮರೂನ್ ದೇಶದ ಮಹಿಳೆಗೆ ಯಶಸ್ವೀ ಶಸ್ತ್ರಚಿಕಿತ್ಸೆ

ಉಳ್ಳಾಲ: ಅನೇಕ ವರ್ಷಗಳಿಂದ ಆಯೋರ್ಟಿಕ್ ವಾಲ್ವ್ ಕಾಯಿಲೆಯಿಂದ ಬಳಲುತ್ತಿದ್ದ ಉತ್ತರ ಆಫ್ರಿಕಾದ ಕ್ಯಾಮರೂನ್ ದೇಶದ 38 ವರ್ಷದ ಮಹಿಳಾ ರೋಗಿಯೊಬ್ಬರು ಚಿಕಿತ್ಸೆ ಪಡೆಯಲು ಭಾರತಕ್ಕೆ ಬಂದಿದ್ದು,ಆಕೆಗೆ ಮಂಗಳೂರಿನ ದೇರಳಕಟ್ಟೆಯ ಕೆ.ಎಸ್.ಹೆಗ್ಡೆ ಆಸ್ಪತ್ರೆಯಲ್ಲಿ ವರ್ಗಾಯಿತ ರಕ್ತ ನೀಡದೆ ಯಶಸ್ವಿಯಾಗಿ ಆಯೋರ್ಟಿಕ್ ವಾಲ್ವ್ ಬದಲಾವಣೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

ಮಹಿಳೆಯು ಯೆಹೋವನ ಸಾಕ್ಷಿಗಳು ಧರ್ಮಕ್ಕೆ ಸೇರಿದವರಾಗಿದ್ದು, ಅವರು ತಮ್ಮ ಧಾರ್ಮಿಕ ನಂಬಿಕೆಯ ಪ್ರಕಾರ ಯಾವುದೇ ಸಂದರ್ಭದಲ್ಲೂ ರಕ್ತ ವರ್ಗಾವಣೆಯನ್ನು ಸ್ವೀಕರಿಸುವುವಂತಿರಲಿಲ್ಲ. ಈ ಕಾರಣದಿಂದಾಗಿ ಅನೇಕ ಆಸ್ಪತ್ರೆಗಳು ಅವರಿಗೆ ಶಸ್ತ್ರಚಿಕಿತ್ಸೆ ನಡೆಸಲು ಮುಂದಾಗಿರಲಿಲ್ಲ. ಬಳಿಕ ಅವರು ಭಾರತದಲ್ಲಿನ ಯೆಹೋವನ ಸಾಕ್ಷಿಗಳು ಸಂಸ್ಥೆಯ ಸಂಯೋಜಕರನ್ನು ಸಂಪರ್ಕಿಸಿದ್ದು, ಅವರು ಈ ಮಹಿಳೆಯನ್ನು ರಕ್ತದಾನಿಗಳ ವರ್ಗಾಯಿತ ರಕ್ತವನ್ನು ಬಳಸದೆ ಅನೇಕ ಹೃದಯ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನಡೆಸಿರುವ ಹೃದಯ ಶಸ್ತ್ರಚಿಕಿತ್ಸಕರಾದ ಡಾ.ಎ.ಜಿ.ಜಯಕೃಷ್ಣನ್ ಅವರ ಬಳಿಗೆ ಕಳುಹಿಸಿದ್ದಾರೆ.



ಕೆ.ಎಸ್.ಹೆಗ್ಡೆ ಆಸ್ಪತ್ರೆಯ ಹೃದಯ ಶಸ್ತ್ರಚಿಕಿತ್ಸಕರಾದ ಡಾ.ಎ.ಜಿ.ಜಯಕೃಷ್ಣನ್ ಅವರ ನೇತೃತ್ವದಲ್ಲಿ ಅರಿವಳಿಕೆ ವಿಭಾಗದ ತಜ್ಞರಾದ ಡಾ.ಮಂಜುನಾಥ ಕಾಮತ್ ಹಾಗೂ ಡಾ.ಚೇತನ್ ಕುಮಾರ್ ಅವರೊಂದಿಗೆ ಹೃದ್ರೋಗ ವಿಭಾಗದ ಹೃದಯ ಶಸ್ತ್ರಚಿಕಿತ್ಸಕರಾದ ಡಾ.ನರೇಶ್‌ಚಂದ ಹೆಗ್ಡೆ ಹಾಗೂ ಡಾ.ಅನುಪ್ ಶ್ರೀನಿವಾಸನ್ ಹಾಗೂ ಪರ್ಫ್ಯೂಷನಿಸ್ಟ್‌ಗಳು ಮತ್ತು ನರ್ಸಿಂಗ್ ಸಿಬ್ಬಂದಿಯ ತಂಡವು ಯಶಸ್ವಿಯಾಗಿ ಶಸ್ತ್ರಕ್ರಿಯೆಯನ್ನು ನೆರವೇರಿಸಿದೆ.

ಕೆ.ಎಸ್.ಹೆಗ್ಡೆ ಮೆಡಿಕಲ್ ಅಕಾಡೆಮಿ (ಕ್ಷೇಮ)ಯ ಡೀನ್ ಡಾ.ಸಂದೀಪ್ ರೈ ಹಾಗೂ ಜಸ್ಟಿಸ್ ಕೆ.ಎಸ್.ಹೆಗ್ಡೆ ಚಾರಿಟೇಬಲ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಸುಮಲತಾ ಶೆಟ್ಟಿಯವರು ಶಸ್ತ್ರಕ್ರಿಯೆ ನಡೆಸಿದ ಡಾ.ಎ.ಜಿ.ಜಯಕೃಷ್ಣನ್ ನೇತೃತ್ವದ ತಂಡವನ್ನು ಅಭಿನಂದಿಸಿದ್ದಾರೆ.

ಶಸ್ತ್ರಚಿಕಿತ್ಸೆಯ ಬಳಿಕ ರೋಗಿಯು ಉತ್ತಮ ರೀತಿಯಲ್ಲಿ ಚೇತರಿಸಿಕೊಳ್ಳುತ್ತಿದ್ದು, ಅವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ. ಅವರು ಮುಂದಿನ ಕೆಲ ದಿನಗಳಲ್ಲಿ ತಮ್ಮ ತಾಯ್ನಾಡು ಕ್ಯಾಮರೂನ್‌ಗೆ ಮರಳುವ ನಿರೀಕ್ಷೆಯಿದೆ.

ದ.ಕ. ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆ

ಪರಿಹಾರಧನ ತ್ವರಿತವಾಗಿ ಮಂಜೂರು ಮಾಡಿ

ಮಂಗಳೂರು: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ದೌರ್ಜನ್ಯ ಪ್ರಕರಣಗಳ ಸಂಬಂಧಪಟ್ಟ ದಾಖಲೆಗಳನ್ನು ಪಡೆದು ತ್ವರಿತವಾಗಿ ಪರಿಹಾರಧನವನ್ನು ಮಂಜೂರು ಮಾಡಲು ಅಗತ್ಯ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಸೂಚಿಸಿದ್ದಾರೆ.



ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಜಿಲ್ಲಾ ಮಟ್ಟದ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹಾಸ್ಟೆಲ್‌ಗಳಲ್ಲಿ ಮಕ್ಕಳಿಗೆ ಲೈಂಗಿಕ ಕಿರುಕುಳ ಅಥವಾ ಯಾವುದೇ ಪೋಕ್ಸೊ ಪ್ರಕರಣಗಳು ಕಂಡುಬಂದಲ್ಲಿ ಸಂಬಂಧಿಸಿದ ಇಲಾಖೆಗಳು ಗಂಭೀರವಾಗಿ ಪರಿಗಣಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಅವರು ಹೇಳಿದರು.

ಎಲ್ಲ ಇಲಾಖೆಗಳು ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಕಾರ್ಯಕ್ರಮಗಳ ಗುರಿಯನ್ನು ಕಾಲಮಿತಿಯೊಳಗೆ ತಲುಪಬೇಕು ಮತ್ತು ಫಲಾನುಭವಿಗಳಿಗೆ ಅಗತ್ಯ ನೆರವು ಒದಗಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯಡಿ ನಿಗದಿಪಡಿಸಿದ ಅನುದಾನವನ್ನು ಯಾವುದೇ ಕಾರಣಕ್ಕೂ ಮುಂದೂಡದೆ ಆಯಾ ವರ್ಷದಲ್ಲಿಯೇ ಖರ್ಚು ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆಯಡಿ 2025 ರ ಜನವರಿ 1 ರಿಂದ ಡಿಸೆಂಬರ್ 31 ರವರೆಗೆ 69 ಪ್ರಕರಣಗಳು ದಾಖಲಾಗಿದ್ದು, 5 ಪ್ರಕರಣಗಳಿಗೆ ಮಾತ್ರ ಪರಿಹಾರ ಮಂಜೂರು ಮಾಡಲು ಬಾಕಿ ಇದ್ದು, 3 ಪ್ರಕರಣಗಳ ದಾಖಲೆಗಳು ಸ್ವೀಕೃತಗೊಂಡಿದೆ. ಪರಿಹಾರ ಧನ ಮಂಜೂರು ಮಾಡಲು ಕ್ರಮ ವಹಿಸಲಾಗಿದೆ. ಇನ್ನುಳಿದ 2 ಪ್ರಕರಣಗಳಲ್ಲಿ ದಾಖಲೆಗಳು ಬರಲು ಬಾಕಿ ಇರುತ್ತದೆ. ಜನವರಿ 2026 ರಿಂದ ಜೂನ್ 10 ರವರೆಗೆ 25 ದೌರ್ಜನ್ಯ ಪ್ರಕರಣಗಳು ದಾಖಲಾಗಿದ್ದು, 21 ಪ್ರಕರಣಗಳಿಗೆ ಪರಿಹಾರ ಧನ ನೀಡಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಹೇಮಲತಾ ಸಭೆಗೆ ಮಾಹಿತಿ ಮಾಹಿತಿ ನೀಡಿದರು.

ಸಭೆಯಲ್ಲಿ ಪೊಲೀಸ್ ಅಧೀಕ್ಷಕ ಡಾ.ಅರುಣ್ ಕೆ. ಹಾಗೂ ವಿವಿಧ ಇಲಾಖಾಧಿಕಾರಿಗಳು ಉಪಸ್ಥಿತರಿದ್ದರು.

ಗೃಹಸಚಿವರು ಆರ್‌ಎಸ್‌ಎಸ್ ನೋಂದಣಿಯ ಕುರಿತು ಪ್ರಶ್ನೆ ಮಾಡುತ್ತಿರುವುದು ಹಾಸ್ಯಾಸ್ಪದ

ರಾಜ್ಯದ ನೈಜ ಸಮಸ್ಯೆ ಬಗ್ಗೆ ಗಮನ ಹರಿಸಲಿ: ಕಾಮತ್

ಮಂಗಳೂರು: ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರನಿರ್ಮಾಣ ಎಂಬ ಮಹಾ ಸಂಕಲ್ಪದೊಂದಿಗೆ ಶತಮಾನ ಪೂರೈಸಿರುವ ಆರ್‌ಎಸ್‌ಎಸ್ ಅನ್ನು ರಾಜಕೀಯ ಶಕ್ತಿಯಿಂದ ನಿಯಂತ್ರಿಸುತ್ತೇನೆ ಎಂದುಕೊಳ್ಳುವುದು ಮೂರ್ಖತನದ ಪರಮಾವಧಿ. ನೂತನ ಗೃಹಸಚಿವ ಪ್ರಿಯಾಂಕ್ ಖರ್ಗೆಯವರು ಇನ್ನಾದರೂ ಕ್ಷುಲ್ಲಕ ಹೇಳಿಕೆಗಳ ಬದಲು ರಾಜ್ಯದ ನೈಜ ಸಮಸ್ಯೆ ಬಗ್ಗೆ ಗಮನ ಹರಿಸಲಿ ಎಂದು ಶಾಸಕ ವೇದವ್ಯಾಸ ಕಾಮತ್ ಆಗ್ರಹಿಸಿದ್ದಾರೆ.



ಆಕಸ್ಮಿಕವಾಗಿ ಗೃಹ ಸಚಿವರಾಗಿರುವ ಪ್ರಿಯಾಂಕ್ ಖರ್ಗೆಯವರಿಗೆ, ತಾನು ಕಾಂಗ್ರೆಸ್ಸಿನ ರಾಷ್ಟ್ರೀಯ ಅಧ್ಯಕ್ಷರ ಮಗ ಎಂಬುದನ್ನು ಪದೇ ಪದೇ ನೆನಪಿಸುವ ಅನಿವಾರ್ಯತೆ ಬಂದಿರಬಹುದು. ತಮ್ಮ ಸ್ಥಾನವನ್ನು ಉಳಿಸಿಕೊಳ್ಳಬೇಕಾದ ಪರಿಸ್ಥಿತಿಯೂ ಇರಬಹುದು. ಹಾಗಾಗಿ ಆರ್‌ಎಸ್‌ಎಸ್ ವಿರುದ್ಧ ಏನಾದರೂ ಮಾತಾಡಿ ಹೈಕಮಾಂಡನ್ನು ತೃಪ್ತಿಪಡಿಸಲು ಪ್ರಯತ್ನಿಸುತ್ತಿದ್ದಾರೆ. ಸದಾ ದೇಶವಿರೋಧಿ ಸಂಘಟನೆಗಳಿಗೆ ಪರೋಕ್ಷವಾಗಿ ಬೆಂಬಲ ನೀಡುತ್ತಾ ಬಂದ ಕಾಂಗ್ರೆಸ್, ಇಂದು ರಾಷ್ಟ್ರಭಕ್ತ ಸಂಘಟನೆಯಾದ ಆರ್‌ಎಸ್‌ಎಸ್ ನೋಂದಣಿಯ ಕುರಿತು ಪ್ರಶ್ನೆ ಮಾಡುತ್ತಿರುವುದು ಹಾಸ್ಯಾಸ್ಪದ ಎಂದು ಅವರು ಹೇಳಿದ್ದಾರೆ. ಸಚಿವ ಖರ್ಗೆಯವರು, ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ ಫಲಿತಾಂಶಗಳಲ್ಲಿ ತಮ್ಮ ಜಿಲ್ಲೆ ಕೊನೆಯ ಸ್ಥಾನದಲ್ಲಿರುವುದು, ಶಾಲಾ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲದಿರುವುದು, ಶಿಥಿಲಗೊಂಡ ಮೇಲ್ಛಾವಣೆಗಳು ಕುಸಿದು ವಿದ್ಯಾರ್ಥಿನಿಯರು ಗಾಯಗೊಂಡಿರುವುದು, ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದರ ಬಗ್ಗೆ ಗಮನ ಹರಿಸಬೇಕಿತ್ತು. ಆದರೆ ಅಲ್ಪಸಂಖ್ಯಾತ ಮತಗಳು ಕೈ ಬಿಟ್ಟು ಹೋಗುತ್ತಿರುವುದನ್ನು ತಡೆಯಲು ಆರ್‌ಎಸ್‌ಎಸ್ ಅನ್ನು ಟಾರ್ಗೆಟ್ ಮಾಡಿಕೊಂಡಿರುವುದು ಹತಾಶೆಯ ಸಂಕೇತ ಎಂದು ಶಾಸಕರು ಹೇಳಿದ್ದಾರೆ.

ಬ್ರಹ್ಮಶ್ರೀ ನಾರಾಯಣ ಗುರು ವೃತ್ತ ಮರು ನಿರ್ಮಾಣ | ಹಳೆಯ ವೃತ್ತದ ಜಾಗದಲ್ಲಿ ಹೊಸ ವಿನ್ಯಾಸದೊಂದಿಗೆ ವೃತ್ತ ರಚನೆ

ಬಿ.ಸಿ ರೋಡ್‌ಗೆ ಶೀಘ್ರವೇ ಸಿಗಲಿದೆ ಹೊಸ ಮೆರುಗು!

ಬಂಟ್ವಾಳ: ಬಿ.ಸಿ.ರೋಡು– ಅಡ್ಡಹೊಳೆಯ ಅಭಿವೃದ್ಧಿ ಕಾಮಗಾರಿಯ ಹಿನ್ನಲೆಯಲ್ಲಿ ತೆರವಾದ ಬಿ.ಸಿ ರೋಡಿನ ಬ್ರಹ್ಮಶ್ರೀ ನಾರಾಯಣ ಗುರು ವೃತ್ತ ಮರು ನಿರ್ಮಾಣದ ಕಾಮಗಾರಿ ಪುನರಾರಂಭಗೊಂಡಿದೆ.

ಬಿ.ಸಿ. ರೋಡು–ಅಡ್ಡಹೊಳೆ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದ ವೇಳೆ ಬ್ರಹ್ಮಶ್ರೀ ನಾರಾಯಣಗುರು ವೃತ್ತವನ್ನು ತೆರವುಗೊಳಿಸಲಾಗಿತ್ತು. ಈಗ ಪ್ರಾಕಾರದಿಂದಲೇ ನೂತನ ವೃತ್ತದ ಕಾಮಗಾರಿ ಆರಂಭವಾಗಿದ್ದು, ಹಂತ ಹಂತವಾಗಿ ನಡೆಯಲಿದೆ.

ಬೆಂಗಳೂರು– ಮಂಗಳೂರು ಹಾಗೂ ಧರ್ಮಸ್ಥಳ– ಮಂಗಳೂರು ಹೆದ್ದಾರಿ ಸೇರುವ ಮುಖ್ಯ ವೃತ್ತ ಇದಾಗಿರುವುದರಿಂದ ವಾಹನಗಳ ಕಾಣುವಿಕೆಗೆ ಯಾವುದೇ ಸಮಸ್ಯೆ ಆಗದಂತೆ ಹಾಗೂ ಬಿ.ಸಿ ರೋಡ್ ಗೆ ಹೊಸ ಮೆರುಗು ದೊರೆಯುವ ಸ್ವರೂಪದಲ್ಲಿ ವೃತ್ತ ನಿರ್ಮಾಣವಾಲಿದೆ.

ಮ ಬ್ರಹ್ಮಶ್ರೀ ನಾರಾಯಣ ಗುರುಗಳ ಹೆಸರಿನಲ್ಲಿದ್ದ ಹಳೆಯ ವೃತ್ತದ ಜಾಗದಲ್ಲಿ ಹೊಸ ವಿನ್ಯಾಸದೊಂದಿಗೆ ವೃತ್ತ ಸಾಕಾರಗೊಳ್ಳಲಿದೆ



ಪ್ರಾರಂಭದಲ್ಲಿ ಬಲು ವಿಸ್ತಾರದ ವೃತ್ತ ಮರು ನಿರ್ಮಾಣದ ಉದ್ದೇಶವನ್ನು ಹೊಂದಲಾಗಿತ್ತು ಇದೀಗ ಪ್ರಯಾಣಿಕ ವಾಹನಗಳಿಗೆ ಕೊಂಚ ಸಮಸ್ಯೆ ಆಗಬಹುದು ಎಂಬ ಕಾರಣದಿಂದ ಬಹು ವಿಸ್ತಾರವನ್ನು ಕಿರಿದು ಮಾಡಿ ಈಗ 30 ಮೀ.ಗೆ ಸೀಮಿತಗೊಳಿಸಲಾಗಿದೆ.

ಜ್ಞಾನದ ಬೆಳಕು ಸಂದೇಶ

"ಬ್ರಹ್ಮಶ್ರೀ ನಾರಾಯಣ ಗುರು ವೃತ್ತವನ್ನು ನಾರಾಯಣ ಗುರುಗಳ ಸಂದೇಶದ ಪ್ರಕಾರ ಡಿಸೈನ್ ಮಾಡಲಾಗಿದೆ. ಜಾತಿ ಮತದ ಬಗ್ಗೆ ಜನರಿಗೆ ಜ್ಞಾನೋದಯ ಹಾಗೂ ವಿದ್ಯೆಯಿಂದ ಸ್ವತಂತ್ರ ಎಂಬ ಗುರುಗಳ ಆಶಯದಂತೆ ವೃತ್ತದ ಡಿಸೈನ್ ರೂಪಿಸಲಾಗಿದೆ. ವಿದ್ಯೆ ಅಂದರೆ ಬೆಳಕು ಎಂಬ ಆಧಾರದಲ್ಲಿ ದೀಪದ ಮಾದರಿ ಇದಕ್ಕಾಗಿ ರೂಪಿಸಲಾಗಿದೆ. ಒಂದೇ ಜಾತಿ, ಒಂದೇ ಮತ, ಒಬ್ಬನೇ ದೇವರು ಎಂಬ ತತ್ವವನ್ನು ದ್ಯೋತಕವಾಗಿಟ್ಟು ದೀಪವನ್ನು ಮೂರು ಭಾಗಗಳಾಗಿ ರಚಿಸಲಾಗುತ್ತದೆ. ಇದು 16 ಫೀಟ್ ಎತ್ತರವಿರಲಿದೆ. 30 ಮೀ. ವಿಸ್ತೀರ್ಣದಲ್ಲಿ ವೃತ್ತ ರೂಪುಗೊಳ್ಳಲಿದೆ.

ಬ್ರಹ್ಮಶ್ರೀ ನಾರಾಯಣ ಗುರುಗಳ ಸುಂದರ ವೃತ್ತ ಮರು ನಿರ್ಮಾಣಕ್ಕೆ ಕಾಲ ಕೂಡಿಬಂದಿದೆ. ಶೀಘ್ರ ಇದು ಸಾಕಾರವಾಗಲಿದೆ ಎಂದು ಬಂಟ್ವಾಳ ತಾಲೂಕು ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ಭುವನೇಶ್ ಪಚ್ಚಿನಡ್ಕ ಅವರು ತಿಳಿಸಿದ್ದಾರೆ.

ಹೆದ್ದಾರಿ ಅಭಿವೃದ್ಧಿಗೊಳಿಸುವ ಸಂದರ್ಭ ಬಿ.ಸಿ ರೋಡ್ ನ ವೃತ್ತವೂ ತೆರವುಗೊಳ್ಳುವ ಕಾಲದಲ್ಲಿ ಶಾಸಕ ರಾಜೇಶ್ ನಾಯಕ್ ಅವರು ಬಿಲ್ಲವ ಸಂಘದ ಪ್ರಮುಖರ ಜತೆಗೆ ಚರ್ಚಿಸಿದ್ದರು.

ವೃತ್ತ ಮರು ನಿರ್ಮಾಣದ ಕುರಿತು ಅ ಕಾರಿಗಳಲ್ಲಿ ವಿವರ ಪಡೆಯಲಾಗಿತ್ತು. ಬಳಿಕ ಸಂಸದ ಕ್ಯಾ।ಬ್ರಿಜೇಶ್ ಚೌಟ ಅವರು ಈ ನಿಟ್ಟಿನಲ್ಲಿ ಬಿಲ್ಲವ ಸಂಘದ ಅಭಿಪ್ರಾಯ ಪಡೆದು ವೃತ್ತ ನಿರ್ಮಿಸುವ ಬಗ್ಗೆ ಸಮಾಲೋಚನೆಯನ್ನೂ ನಡೆಸಿದ್ದರು. ಇದರಂತೆ ವೃತ್ತ ನಿರ್ಮಾಣ ಆಗುತ್ತಿದೆ ಎಂದು ಬಿಲ್ಲವ ಮುಖಂಡರಾದ ಹರಿಕೃಷ್ಣ ಬಂಟ್ವಾಳ ಅವರು ತಿಳಿಸಿದ್ದಾರೆ.

ಐದನೇ ಅಭ್ಯರ್ಥಿ ಗೆಲುವಿಗೆ ರಣತಂತ್ರ


ಬೆಂಗಳೂರು: ವಿಧಾನ ಪರಿಷತ್‌ನ 7 ಸ್ಥಾನಗಳಿಗೆ ಗುರುವಾರ (ಜೂ.18) ಮತದಾನ ನಡೆಯಲಿರುವ ಹಿನ್ನೆಲೆಯಲ್ಲಿ ಮಂಗಳವಾರ ಸಂಜೆ ಬಿಡದಿಯ ಖಾಸಗಿ ರೆಸಾರ್ಟ್‌ನಲ್ಲಿ ಕಾಂಗ್ರೆಸ್ ಪಕ್ಷದ ಶಾಸಕಾಂಗ ಸಭೆ ನಡೆಯಿತು.

ಕಾಂಗ್ರೆಸ್ 5ನೇ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿರುವುದರಿಂದ ಚುನಾವಣೆ ತೀವ್ರ ಪೈಪೋಟಿಯಿಂದ ಕೂಡಿದ್ದು, 5ನೇ ಅಭ್ಯರ್ಥಿಯ ಗೆಲುವಿಗೆ ಅಲ್ಪ ಮತಗಳ ಕೊರತೆ ಇರುವುದರಿಂದ ಗೆಲುವಿನ ತಂತ್ರದ ರೂಪರೇಷಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಮತದಾನದ ಸಂದರ್ಭದಲ್ಲಿ ಅನುಸರಿಸಬೇಕಾದ ನಿಯಮಾವಳಿಗಳ ಬಗ್ಗೆ ಶಾಸಕರಿಗೆ ತಿಳಿಸಲಾಯಿತು. ಶಾಸಕಾಂಗ ಸಭೆಗೂ ಮುನ್ನ ಸಿಎಂ ಡಿ.ಕೆ. ಶಿವಕುಮಾರ್ ಅವರು ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ನಂತರದ ಮೊದಲ ಶಾಸಕಾಂಗ ಸಭೆ ಇದಾಗಿದ್ದು, ಎಲ್ಲಾ ಶಾಸಕರು ಮತ್ತು ಸಚಿವರನ್ನು ವಿಶ್ವಾಸಕ್ಕೆ ಪಡೆಯುವ ಮೂಲಕ ಯಾವಾಗಲೂ ನಿಮ್ಮ ಸಹಕಾರ ಬೇಕೆಂದು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ಪಕ್ಷದ ಅನೇಕ ವಿಚಾರಗಳ ಬಗ್ಗೆ ಚರ್ಚೆ ನಡೆಸಲಾಯಿತು. ಸಿಎಂ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೆವಾಲ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

ಸಂಪುಟ ಚರ್ಚೆ

ಶಾಸಕಾಂಗ ಸಭೆಯಲ್ಲಿ ಸಂಪುಟ ವಿಸ್ತರಣೆ ಬಗ್ಗೆಯೂ ಚರ್ಚೆಯಾಗಿದ್ದು, ಮೊದಲ ಸುತ್ತಿನ ಅವಕಾಶ ವಂಚಿತ ಸಚಿವಾಕಾಂಕ್ಷಿಗಳು, 2ನೇ ಸುತ್ತಿನಲ್ಲಾದರೂ ತಮಗೆ ಅವಕಾಶ ಸಿಗಬೇಕೆಂದು ಸುರ್ಜೆವಾಲಾ ಬಳಿ ಪ್ರಸ್ತಾಪಿಸಿದರು. ಹಿರಿಯ ಶಾಸಕರು ಶಾಸಕಾಂಗ ಸಭೆಯ ವೇದಿಕೆಯಲ್ಲೇ ತಮ್ಮ ಬೇಡಿಕೆಗಳನ್ನು ತಿಳಿಸಿದರು ಎನ್ನಲಾಗಿದೆ.

ರಾಮ ಬಾಣ



ಪೌರ ಕಾರ್ಮಿಕರ ಬೇಡಿಕೆಗೆ ಕ್ರಮ: ಸಚಿವ ಯತೀಂದ್ರ

ಬೆಂಗಳೂರು: ಪೌರ ಕಾರ್ಮಿಕರ ನೇರ ನೇಮಕಾತಿ, ಪೌರ ಕಾರ್ಮಿಕರ ಖಾಯಂಗೊಳಿಸುವಿಕೆ, ಕಸ ಗೂಡಿಸುವವರು, ಸಾಗಾಟ ಮಾಡುವವರು, ಕಸದ ವಾಹನಗಳ ಚಾಲಕರನ್ನು ಪೌರ ಕಾರ್ಮಿಕರನ್ನಾಗಿ ಪರಿಗಣಿಸುವುದು ಸೇರಿದಂತೆ ಪೌರ ಕಾರ್ಮಿಕರ ಎಲ್ಲಾ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸರ್ಕಾರ ಪೂರಕವಾದ ಕ್ರಮಗಳನ್ನು ಆದ್ಯತೆಯ ಮೇಲೆ ಕೈಗೊಳ್ಳಲಿದೆ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಮಂಗಳವಾರ ತಮ್ಮ ಗೃಹ ಕಚೇರಿಯಲ್ಲಿ ಕರ್ನಾಟಕ ರಾಜ್ಯ ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾ ಸಂಘದ ಪದಾಧಿಕಾರಿಗಳ ಸಭೆ ನಡೆಸಿದ ಸಚಿವರು, ಪೌರ ಕಾರ್ಮಿಕರ ಬೇಡಿಕೆಗಳ ಸಂಬಂಧ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷರಾದ ನಾರಾಯಣ್ ಅವರು, ಸರ್ಕಾರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 29,000 ಜನ ನೇರ ವೇತನ ಪೌರಕಾರ್ಮಿಕರನ್ನು ಖಾಯಂ ಮಾಡಿರುವ ಸರ್ಕಾರದ ಕ್ರಮವನ್ನು ಸ್ವಾಗತಿಸುತ್ತೇವೆ. ಅದೇ ರೀತಿ ಇನ್ನೂ ಬಾಕಿ ಉಳಿದಿರುವ ಸುಮಾರು 6,800 ಜನ ಪೌರಕಾರ್ಮಿಕರನ್ನು ಸಹ ಶೀಘ್ರವಾಗಿ ಖಾಯಂಗೊಳಿಸಬೇಕು ಎಂದು ಮನವಿ ಮಾಡಿದರು.

ಎಲ್ಲಾ ಮನವಿಗಳನ್ನು ಆಲಿಸಿದ ನಂತರ ಪ್ರತಿಕ್ರಿಸಿದ ಸಚಿವರು, ನಿಮ್ಮ ಎಲ್ಲಾ ಬೇಡಿಕೆಗಳನ್ನು ಸರ್ಕಾರ ಸಹಾನುಭೂತಿಯಿಂದ ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ಸಚಿವರು ಭರವಸೆ ನೀಡಿದರು. ಸಭೆಯಲ್ಲಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಬಿ.ಬಿ. ಕಾವೇರಿ, ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕ ರವೀಂದ್ರ, ಪೌರ ಕಾರ್ಮಿಕರ ಸಂಘದ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಪುನರ್ವಸು

ದಿನದ ಮಾತು

ಸೋಲುವೆನೆಂಬ ಭಯವನ್ನು ಜಯಿಸುವುದೇ ನಿಜವಾದ ಗೆಲುವು.

▲ನಾಣ್ನುಡಿ

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಎಲ್ಲಾ ಮತಗಳಲ್ಲಿ ಒಳ್ಳೆಯವರು ಇದ್ದಾರೆ ಎಂಬುದು ಸತ್ಯ. ಆದರೆ ಒಳ್ಳೆಯವನನ್ನು ಮುಂದೆ ತೋರಿಸಿ ಇರುವವರೆಲ್ಲರೂ ಒಳ್ಳೆಯವರು ಎಂಬ ಭಾವ ಮೂಡಿಸಿ ಹಿಂದಿನಿಂದ ತಮ್ಮ ಕೆಟ್ಟ ಕೆಲಸಗಳನ್ನು ಮಾಡಿಕೊಳ್ಳುವ ಮಂದಿ ಹಲವರಿದ್ದಾರೆ

– ವಿಧುಶೇಖರ ಶ್ರೀಗಳು

– ಬೀದಿ ಬದಿಯಲ್ಲಿ ಟೊಮೇಟೊ ರಾಶಿ ಹಾಕಿ ಮಾರಾಟ ಮಾಡುವವರಲ್ಲಿ ಕೆಲವರು ರಾಶಿಯ ಕೆಳಗಡೆ ಕೊಳೆತ ಹಣ್ಣುಗಳನ್ನು ಹಾಕಿ ಮೇಲ್ಗಡೆ ಸ್ವಲ್ಪ ಉತ್ತಮವಾದುದನ್ನು ಹಾಕಿ ಭರ್ಜರಿ ವ್ಯಾಪಾರ ಮಾಡುತ್ತಾರೆ!

ದಿನ ಭವಿಷ್ಯ

ಮೇಷ ಕೆರಿಯರ್‌ಗೆ ಸಂಬಂಧಿಸಿ ಶುಭ ಬೆಳವಣಿಗೆ. ಇಚ್ಛಿತ ಉದ್ಯೋಗ ಸಿಕ್ಕೀತು. ಮನೆಯಲ್ಲಿ ಸಾಮರಸ್ಯ ಕಾಯಲು ಗಮನ ಕೊಡಿ.

ವೃಷಭ ಕೆರಿಯರ್‌ಗೆ ಆದ್ಯತೆ ನೀಡಿ ಪ್ರೀತಿಪಾತ್ರರನ್ನು ಕಡೆಗಣಿಸಿದ್ದೀರಿ. ಆ ಕಡೆಯೂ ಗಮನ ಕೊಡಿ. ಸಣ್ಣ ಆರೋಗ್ಯ ಸಮಸ್ಯೆ ಕಿರಿಕಿರಿ ಸೃಷ್ಟಿಸಬಹುದು.

ಮಿಥುನ ಕೆಲಸದಲ್ಲಿ ಸದಾ ನಿರತ. ಅಧಿಕ ಒತ್ತಡ. ಇದರಿಂದ ಅಸಹನೆ ಹೆಚ್ಚು. ಹೊಸ ಸಂಬಂಧ ಹರ್ಷ ತುಂಬಬಹುದು. ಆರ್ಥಿಕ ಸ್ಥಿತಿ ಸಾಧಾರಣ.

ಕಟಕ ಶಾಂತಚಿತ್ತತೆ ಕಾಯ್ದುಕೊಳ್ಳಿ. ಏಕೆಂದರೆ ಪ್ರತಿಕೂಲ ಬೆಳವಣಿಗೆ ಕಾಣುವಿರಿ. ಆರ್ಥಿಕ ಪರಿಸ್ಥಿತಿಯತ್ತ ಹೆಚ್ಚು ಗಮನ ಕೊಡಿ. ಧನವ್ಯಯ.

ಸಿಂಹ ಹೊಸತನದ ಹುರುಪು. ವೃತ್ತಿ ಮತ್ತು ಮನೆಯಲ್ಲಿ ಪೂರಕ ಬೆಳವಣಿಗೆ. ಮುಖ್ಯ ವಿಷಯದಲ್ಲಿ ಹಿರಿಯರ ಮಾರ್ಗದರ್ಶನ ಕೋರಿ.

ಕನ್ಯಾ ನಿಮ್ಮ ವರ್ತನೆ ಬದಲಿಸಬೇಕಾದ ಅಗತ್ಯ ಇದೆ. ಸಂಘರ್ಷದ ಧೋರಣೆ ಬಿಡಿ. ವೃತ್ತಿ ಒತ್ತಡ ಹೆಚ್ಚಲಿದೆ. ಅಸಹಕಾರ ಎದುರಿಸುವಿರಿ.

ತುಲಾ ಸಿಟ್ಟಿಗೇಳುವ ಪ್ರಸಂಗ ಉಂಟಾದೀತು. ತಾಳ್ಮೆ ಕಾಯ್ದುಕೊಳ್ಳಿ. ಅಧಿಕ ಖರ್ಚು ಚಿಂತೆಗೆ ಕಾರಣ. ಬಂಧು ಕಲಹ. ಧಾರ್ಮಿಕ ವಿಚಾರದಲ್ಲಿ ಆಸಕ್ತಿ.

ವೃಶ್ಚಿಕ ನಿಮ್ಮ ಕಲ್ಪನೆ ಸಾಕಾರವಾಗುವ ಸಾಧ್ಯತೆ ಕಾಣುತ್ತಿದೆ. ಸಮಸ್ಯೆ ಇತ್ಯರ್ಥ. ಸಣ್ಣ ಆರೋಗ್ಯ ಸಮಸ್ಯೆ. ಚಾಲನೆಯಲ್ಲಿ ಎಚ್ಚರ ವಹಿಸಿರಿ.

ಧನು ಫಲದಾಯಕ ದಿನ. ನಿಮ್ಮ ನಿರ್ವಹಣೆ ಮೆಚ್ಚುಗೆಗೆ ಪಾತ್ರ. ವಿಶೇಷ ವ್ಯಕ್ತಿಯ ಭೇಟಿಯಿಂದ ಉತ್ಸಾಹ. ಕೌಟುಂಬಿಕ ಸಮ್ಮಿಲನ ಸಂಭವ.

ಮಕರ ಆರ್ಥಿಕ ಯೋಜನೆ ಕಾರ್ಯಗತ ಮಾಡಲು ಸಕಾಲ. ಶುಭ ಸುದ್ದಿ ಕೇಳುವಿರಿ. ಆರೋಗ್ಯದ ವಿಚಾರದಲ್ಲಿ ಹೆಚ್ಚು ಕಾಳಜಿ ವಹಿಸಿರಿ. ಧನಾಗಮ.

ಕುಂಭ ನಿಮ್ಮ ಕೆಲಸ ದಿಕ್ಕು ತಪ್ಪದಂತೆ ಎಚ್ಚರ ವಹಿಸಿ. ಕೆಲವರು ಅಡ್ಡಗಾಲು ಹಾಕಿಯಾರು. ಆರೋಗ್ಯಪೂರ್ಣ ಆಹಾರ ಮಾತ್ರ ಸೇವಿಸಿರಿ.

ಮೀನ ವ್ಯರ್ಥವೆಂದು ಭಾವಿಸಿದ ಕೆಲಸ ಒಮ್ಮೆಗೆ ಫಲ ನೀಡಬಹುದು. ಆರ್ಥಿಕವಾಗಿ ಪೂರಕ ಬೆಳವಣಿಗೆ. ಆಪ್ತರ ಜತೆಗೆ ಆತ್ಮೀಯ ಕಾಲಕ್ಷೇಪ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 0,7,2,5

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ 28ನೇ ಘಟಿಕೋತ್ಸವ

ನಿಸ್ವಾರ್ಥ ಸೇವೆ ನೀಡಿ: ಸಿಎಂ

ಬೆಂಗಳೂರು: ವೈದ್ಯರು ಕಣ್ಣಿಗೆ ಕಾಣುವ ದೇವರು. ಜನ ಎಷ್ಟೇ ಕಷ್ಟ ಇದ್ದರೂ ನಂಬಿಕೆ ಹಾಗೂ ವಿಶ್ವಾಸದಿಂದ ವೈದ್ಯರ ಬಳಿ ಹೋಗುತ್ತಾರೆ. ನೀವು ಅವರ ನಂಬಿಕೆ ಉಳಿಸಿಕೊಂಡು ಸೇವೆ ಮಾಡಬೇಕು ಎಂದು ವೈದ್ಯ ಪದವೀಧರರಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಿವಿಮಾತು ಹೇಳಿದರು.

ಜಿಕೆವಿಕೆ ಡಾ.ಬಾಬು ರಾಜೇಂದ್ರಪ್ರಸಾದ್ ಅಂತಾರಾಷ್ಟ್ರೀಯ ಸಮಾವೇಶ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 28ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮಾತನಾಡಿದರು. ಈ ವೃತ್ತಿಯಲ್ಲಿ ನಿಮಗೆ ನಿತ್ಯ ಸವಾಲು ಎದುರಾಗುತ್ತದೆ. ನಿಮ್ಮ ಮುಂದೆ ದೊಡ್ಡ ಸ್ಪರ್ಧೆ ಇದೆ. ನಾನು ಬೇರೆ ದೇಶಗಳಲ್ಲಿ ಪ್ರವಾಸ ಮಾಡಿದ್ದೇನೆ. ಅಲ್ಲಿನ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಭಾರತೀಯರು ಅದರಲ್ಲೂ ಕರ್ನಾಟಕದ ವೈದ್ಯರು ಸೇವೆ ಸಲ್ಲಿಸುತ್ತಿದ್ದಾರೆ. ಇಲ್ಲಿರುವ ಗುಣಮಟ್ಟ ಭಾರತ ಮಾತ್ರವಲ್ಲ, ವಿಶ್ವದಲ್ಲೇ ಎಲ್ಲೂ ಇಲ್ಲ. ಇಲ್ಲಿ ತಯಾರಾದ ವೈದ್ಯರ ಪ್ರತಿಭೆ, ಗುಣಮಟ್ಟ ಸೇವೆ ಹಾಗೂ ಬದ್ಧತೆಗೆ ಸರಿಸಾಟಿ ಯಾರೂ ಇಲ್ಲ ಎಂದರು.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಮಾತನಾಡಿ, ವೈದ್ಯಕೀಯ ವೃತ್ತಿಯು ಕೇವಲ ಉದ್ಯೋಗವಲ್ಲ, ಅದು ಸೇವೆ ಮತ್ತು ಕರುಣೆಯ ಕ್ಷೇತ್ರವಾಗಿದೆ. ಆದರಿಂದ ವೈದ್ಯರು ಸದಾ ನೈತಿಕತೆ, ಪ್ರಾಮಾಣಿಕತೆ ಹಾಗೂ ಮಾನವೀಯ ಮೌಲ್ಯಗಳಿಗೆ ಬದ್ಧರಾಗಿರಬೇಕು ಎಂದು ಹೇಳಿದರು. ಈ ವೇಳೆ ಪ್ರೊ.ಡಾ.ನೈಲಾಡಿ ಶ್ರೀಧರ ಶೆಟ್ಟಿ, ಡಾ.ಹರ್ಷಿಣಿಗಿ ವೀರಭದ್ರಪ್ಪ ಹಾಗೂ ಡಾ.ಎ.ಸಿ.ಷಣ್ಮುಗಂ ಅವರಿಗೆ ಗೌರವ ಡಾಕ್ಟರೇಟ್ ಡಾಕ್ಟರ್ ಆಫ್ ಸೈನ್ಸ್ ಪದವಿ ಪ್ರದಾನ ಮಾಡಲಾಯಿತು. 72,741 ಅಭ್ಯರ್ಥಿಗಳಿಗೆ ವಿವಿಧ ಪದವಿ ಪ್ರದಾನ ಮಾಡಲಾಯಿತು. ಇವುಗಳ ಪೈಕಿ ಒಟ್ಟು 103 ವಿದ್ಯಾರ್ಥಿಗಳಿಗೆ 115 ಚಿನ್ನದ ಪದಕ ನೀಡಲಾಯಿತು. ಈ ವೇಳೆ ವಿಶ್ವವಿದ್ಯಾಲಯದ ಕುಲಪತಿ ಡಾ.ಭಗವಾನ್ ಬಿ.ಸಿ. ಉಪಸ್ಥಿತರಿದ್ದರು.



ಪದವೀಧರರ ಶಿಕ್ಷಣಕ್ಕೆ ಪ್ರೋತ್ಸಾಹ, ಧೈರ್ಯ ಹಾಗೂ ಸ್ಫೂರ್ತಿಯನ್ನು ನೀಡಿದ ಪೋಷಕರು ಹಾಗೂ ಜ್ಞಾನ ನೀಡಿದ ಗುರುಗಳನ್ನು ಎಂದಿಗೂ ಮರೆಯಬಾರದು. ಎಲ್ಲಾ ಜಿಲ್ಲೆಗಳಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಕ್ಯಾನ್ಸರ್ ಆಸ್ಪತ್ರೆಯನ್ನು ನಿರ್ಮಿಸಲಾಗುವುದು. ಆ ಮೂಲಕ ಜನ ಸಾಮಾನ್ಯರು ಕೈಗೆಟುಕುವ ದರದಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ.

■ **ಡಾ.ಶರಣಪ್ರಕಾಶ ಆರ್.ಪಾಟೀಲ್,** ವೈದ್ಯಕೀಯ ಶಿಕ್ಷಣ ಸಚಿವ

ರಾಜ್ಯದಲ್ಲಿ ಪ್ರತಿ ವರ್ಷ 13,940 ವೈದ್ಯರ ತಯಾರಿ

ನಮ್ಮ ರಾಜ್ಯದಲ್ಲೇ 72 ವೈದ್ಯಕೀಯ ಕಾಲೇಜುಗಳಿದ್ದು, ದೇಶದ ಬೇರೆ ಯಾವುದೇ ರಾಜ್ಯಗಳಲ್ಲಿ ಇಷ್ಟೊಂದು ವೈದ್ಯಕೀಯ ಕಾಲೇಜುಗಳಿಲ್ಲ. ಪ್ರತಿ ವರ್ಷ 72 ಸಾವಿರ ಪದವೀಧರರನ್ನು ತಯಾರಿಸುತ್ತಿದೆ. ವರ್ಷಕ್ಕೆ 13,940 ವೈದ್ಯರನ್ನು ಕೊಡುಗೆಯಾಗಿ ನೀಡುತ್ತಿದ್ದು, ಇಲ್ಲಿ ತಯಾರಾದ ವೈದ್ಯರು, ನರ್ಸ್‌ಗಳು ವಿಶ್ವದಾದ್ಯಂತ ಆರೋಗ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಗುಣಮಟ್ಟದ ಶಿಕ್ಷಕರೇ ವಿವಿಯ ಹೆಗ್ಗುರುತು

ಯಾವುದೇ ಒಂದು ವಿವಿಯ ಶಕ್ತಿ ಎಂದರೆ ಅಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯಲ್ಲ, ಪದವಿಗಳ ಸಂಖ್ಯೆಯೂ ಅಲ್ಲ. ಅಲ್ಲಿರುವ ಗುಣಮಟ್ಟದ ಶಿಕ್ಷಕರು. ಶಿಕ್ಷಕರು ವಿದ್ಯಾರ್ಥಿಗಳ ಮಾರ್ಗದರ್ಶಕರಾಗಬೇಕು, ಸಂಶೋಧನೆಗೆ ಪೂರಕವಾಗಿ ವಿದ್ಯಾರ್ಥಿಗಳಿಗೆ ರೋಲ್ ಮಾಡೆಲ್ ಗಳಾಗಿರಬೇಕು. ಎಲ್ಲರೂ ಜತೆಯಾಗಿ ಕೆಲಸ ಮಾಡೋಣ. ಮುಂದೆ ನಾವು ನೀವೆಲ್ಲರೂ ರಾಮನಗರದ ಕ್ಯಾಂಪಸ್ ನಲ್ಲಿ ಸಿಗೋಣ. ಕರ್ನಾಟಕ ಸರ್ಕಾರ ಈ ವಿವಿಗೆ ಅಗತ್ಯವಿರುವ ಎಲ್ಲಾ ಸಹಕಾರವನ್ನು ನೀಡಲು ಬದ್ಧವಾಗಿದೆ ಎಂದು ತಿಳಿಸಿದರು. 1044 ಅಫಿಲಿಯೇಟೆಡ್ ಕಾಲೇಜುಗಳಿವೆ. ಲಕ್ಷಾಂತರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಪವನ ವಿದ್ಯುತ್ ಉತ್ಪಾದನೆ: ಕರ್ನಾಟಕಕ್ಕೆ ರಾಷ್ಟ್ರ ಪ್ರಶಸ್ತಿ

ಪಣಜಿ/ಬೆಂಗಳೂರು: ಅನುಷ್ಠಾನದ ಹಂತದಲ್ಲಿರುವ ಅತ್ಯಧಿಕ ಪವನ ವಿದ್ಯುತ್ ಸಾಮರ್ಥ್ಯಕ್ಕಾಗಿ ರಾಷ್ಟ್ರೀಯ ಮಟ್ಟದ ಪ್ರಶಸ್ತಿಯನ್ನು ಕರ್ನಾಟಕ ತನ್ನದಾಗಿಸಿಕೊಂಡಿದೆ.

ಗೋವಾದಲ್ಲಿ ನಡೆದ 2026ನೇ ಸಾಲಿನ ವಿಶ್ವ ಪವನ ದಿನಾಚರಣೆಯಲ್ಲಿ ಕರ್ನಾಟಕಕ್ಕೆ ಪ್ರತಿಷ್ಠಿತ ಹೈಯೆಸ್ಟ್ ವಿಂಡ್ ಕ್ಯಾಪಾಸಿಟಿ ಪೈಪ್‌ಲೈನ್ ಪ್ರಶಸ್ತಿ ದೊರೆತಿದೆ. ಕೇಂದ್ರ ಸಚಿವ ಜೋಶಿ ಅವರಿಂದ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ ಪ್ರಶಸ್ತಿ ಸ್ವೀಕರಿಸಿದರು. ಕೇಂದ್ರ ಸಚಿವ ಶ್ರೀಪಾದ ಯಸ್ಸೋ ನಾಯಕ್ ಉಪಸ್ಥಿತರಿದ್ದರು.

ಪವನ ವಿದ್ಯುತ್ ವಲಯದಲ್ಲಿ ಕರ್ನಾಟಕದ ಸಾಧನೆಗೆ ಸಂದಿರುವ ಪ್ರಶಸ್ತಿ ಬಗ್ಗೆ ಹರ್ಷ ವ್ಯಕ್ತಪಡಿಸಿರುವ ಇಂಧನ ಸಚಿವ ಕೆ.ಜೆ.ಜಾರ್ಜ್, ಕಳೆದ ಬಾರಿಯೂ ಕರ್ನಾಟಕ ಈ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತ್ತು. ಅನುಷ್ಠಾನ ಹಂತದಲ್ಲಿರುವ ಪವನ ವಿದ್ಯುತ್ ಸಾಮರ್ಥ್ಯದಲ್ಲಿ ಕರ್ನಾಟಕವು ದೇಶದಲ್ಲೇ ಅಗ್ರಮಾನ್ಯ ಸ್ಥಾನದಲ್ಲಿರುವುದನ್ನು ಗುರುತಿಸಿ ಪ್ರಶಸ್ತಿ ನೀಡಿರುವುದು ಹೆಮ್ಮೆಯ ವಿಷಯ. ಈ ಪ್ರಶಸ್ತಿಯು ನವೀಕರಿಸಬಹುದಾದ ಇಂಧನ ಉತ್ಪಾದನೆ, ಸುಸ್ಥಿರ ಅಭಿವೃದ್ಧಿಯ ಬಗ್ಗೆ ನಮ್ಮ ಸರ್ಕಾರಕ್ಕೆ ಇರುವ ಅಚಲ ಬದ್ಧತೆಗೆ ಸಾಕ್ಷಿಯಾಗಿದೆ ಎಂದು ತಿಳಿಸಿದರು.

ಅನುಷ್ಠಾನ ಹಂತದಲ್ಲಿರುವ ಅತ್ಯಧಿಕ ಪವನ ವಿದ್ಯುತ್ ಸಾಮರ್ಥ್ಯಕ್ಕಾಗಿ ಕರ್ನಾಟಕಕ್ಕೆ ದೊರೆತಿರುವ ಈ ಪ್ರಶಸ್ತಿಯು ರಾಜ್ಯದ ಪ್ರಗತಿಪರ ನೀತಿ, ಹೂಡಿಕೆ-ಸ್ನೇಹಿ ವ್ಯವಸ್ಥೆ ಮತ್ತು ನವೀಕರಿಸಬಹುದಾದ ಇಂಧನ ಅಭಿವೃದ್ಧಿಗೆ ಇರುವ ಸಾಂಸ್ಥಿಕ ಬೆಂಬಲಕ್ಕೆ ಸಾಕ್ಷಿಯಾಗಿದೆ.

■ **ಗೌರವ್ ಗುಪ್ತ,** ಇಂಧನ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ



ಕ್ರೆಡಲ್ ಹಾಗೂ ಉದ್ಯಮದ ಪಾಲುದಾರರ ಉತ್ತಮ ಸಹಯೋಗದಿಂದ ಪ್ರಶಸ್ತಿ ಸಂದಿದೆ.ಈ ವಲಯದಲ್ಲಿ ಹೂಡಿಕೆ ಹಾಗೂ ಯೋಜನೆಯ ಅನುಷ್ಠಾನವನ್ನು ಸುಗಮಗೊಳಿಸಲು ಮತ್ತು ರಾಜ್ಯ ಮತ್ತು ರಾಷ್ಟ್ರಕ್ಕೆ ನವೀಕರಿಸಬಹುದಾದ ಇಂಧನದ ಮೂಲಕ ಸುರಕ್ಷಿತ ಇಂಧನ ಭವಿಷ್ಯ ರೂಪಿಸುವ ಪ್ರಯತ್ನಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸಲು ಬದ್ಧರಾಗಿದ್ದೇವೆ.

■ **ಕೆ.ಪಿ. ರುದ್ರಪ್ಪಯ್ಯ,** ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ

ನೀಟ್ ಅಕ್ರಮ ತಡೆಗೆ ಟೆಲಿಗ್ರಾಂಗೆ ನಿರ್ಬಂಧ

ಪುಟ ೧➡ ಅಲ್ಲದೇ ಮೇ ತಿಂಗಳಲ್ಲಿ ಸೋರಿಕೆಯಾದ ನೀಟ್ ಪ್ರಶ್ನೆಪತ್ರಿಕೆಯನ್ನು ಟೆಲಿಗ್ರಾಂ ಮೂಲಕವೇ ಕಳುಹಿಸಲಾಗಿತ್ತು. ಇಂತಹ ದುಷ್ಕೃತ್ಯ ತಡೆಯುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಹೇಳಿದೆ. ಹಲವು ಟೆಲಿಗ್ರಾಂ ಚಾನೆಲ್‌ಗಳು ಪೇಪರ್ ಲೀಕ್ಡ್ ನೀಟ್, ರೀ- ನೀಟ್ 2026, ಖಾಸಗಿ ಮಾಫಿಯಾ ಮತ್ತು ರೀ ನೀಟ್ ಮಾಫಿಯಾ ಮುಂತಾದ ಹೆಸರುಗಳನ್ನು ಬಳಸಿಕೊಂಡು ಪರೀಕ್ಷಾ ಪತ್ರಿಕೆಗಳಿಗೆ ಪ್ರವೇಶವನ್ನು ಬಹಿರಂಗವಾಗಿ ಜಾಹೀರಾತು ಮಾಡಿವೆ ಎಂದು ಎನ್‌ಟಿಎ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ. ಜೂ.21ರಂದು ದೇಶಾದ್ಯಂತ ಬಿಗಿಯಾದ ಭದ್ರತೆಯೊಂದಿಗೆ ನೀಟ್ ಮರು ಪರೀಕ್ಷೆ ನಡೆಯಲಿದ್ದು, ಪರೀಕ್ಷೆಗೆ ಸಂಬಂಧಿಸಿದ ಯಾವುದೇ ಮಾಹಿತಿ ಅಥವಾ ಪ್ರಶ್ನೆಪತ್ರಿಕೆಗಳು ಸಾಮಾಜಿಕ ಮಾಧ್ಯಮಗಳಲ್ಲಿ ಸೋರಿಕೆಯಾಗದಂತೆ ತಡೆಯಲು ಈ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ.

ಪ್ಲೇ ಸ್ಟೋರ್‌ನಲ್ಲಿ ಸಿಕ್ತಿಲ್ಲ ಟೆಲಿಗ್ರಾಂ: ಈ ಬೆನ್ನಲ್ಲೆ ಕೇಂದ್ರ ಸರ್ಕಾರ ಪ್ಲೇ ಸ್ಟೋರ್‌ನಿಂದ ಟೆಲಿಗ್ರಾಂ ಅಪ್ಲಿಕೇಶನ್‌ನ್ನು ತಾತ್ಕಾಲಿಕವಾಗಿ ತೆಗೆದುಹಾಕುವಂತೆ ಸರ್ಕಾರವು ಗೂಗಲ್ ಮತ್ತು ಆ್ಯಪಲ್‌ಗೆ ಆದೇಶಿಸಿದೆ.

ವಿದ್ಯಾರ್ಥಿಗಳಿಗೆ ಲೈಂಗಿಕ ಕಿರುಕುಳ: ಹಲ್ಲೆ

ಚಿಕ್ಕೋಡಿ: 10ನೇ ತರಗತಿ ವಿದ್ಯಾರ್ಥಿಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಹಿನ್ನೆಲೆಯಲ್ಲಿ ಶಿಕ್ಷಕನೊಬ್ಬನಿಗೆ ಪೋಷಕರು ಥಳಿಸಿದ ಘಟನೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮಂಗಳವಾರ ನಡೆದಿದೆ.

ಚಿಕ್ಕೋಡಿಯ ಉರ್ದು ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಶೈಲ್ ಕುಂಬಾರ ವಿರುದ್ಧ ಗಂಭೀರ ಆರೋಪಗಳು ಕೇಳಿ ಬಂದಿವೆ. ಕನ್ನಡ ವಿಷಯದಲ್ಲಿ ಉತ್ತೀರ್ಣಗೊಳಿಸುವುದಾಗಿ ಆಮಿಷವೊಡ್ಡಿ, ಕೆಲ ವಿದ್ಯಾರ್ಥಿಗಳನ್ನು ಶಾಲೆಯ ಕೊಠಡಿ ಹಾಗೂ ಶೌಚಾಲಯಕ್ಕೆ ಕರೆದುಕೊಂಡು ಹೋಗಿ ಲೈಂಗಿಕ ಕಿರುಕುಳ ನೀಡುತ್ತಿದ್ದಾನೆ ಎಂದು ಆರೋಪಿಸಲಾಗಿದೆ.

ಐದಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಇದೇ ರೀತಿಯ ಕಿರುಕುಳ ನೀಡಿರುವ ಮಾಹಿತಿ ಹೊರಬಿದ್ದ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ಪೋಷಕರು ಶಾಲೆಗೆ ಆಗಮಿಸಿ ಶಿಕ್ಷಕನನ್ನು ತರಾಟೆಗೆ ತೆಗೆದುಕೊಂಡು ಥಳಿಸಿದ್ದಾರೆ. ಈ ವೇಳೆ ಶಾಲಾ ಆವರಣದಲ್ಲಿ ಕೆಲಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಘಟನಾ ಸ್ಥಳಕ್ಕೆ ಧಾವಿಸಿದ ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತೆಗೆದುಕೊಂಡು ಶಿಕ್ಷಕ ಶ್ರೀಶೈಲ್ ಕುಂಬಾರನನ್ನು ವಶಕ್ಕೆ ಪಡೆದಿದ್ದಾರೆ. ಬಳಿಕ ಪೋಷಕರು ಹಾಗೂ ಶಾಲಾ ಸಿಬ್ಬಂದಿಯಿಂದ ಮಾಹಿತಿ ಸಂಗ್ರಹಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗುತ್ತಿದ್ದು, ಆರೋಪಗಳ ಕುರಿತು ಸಮಗ್ರ ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಮಾನತೆ ಪಾಲುದಾರಿಕೆ

ಪುಟ ೧➡ ಭಾರತದ ಅಂತಾರಾಷ್ಟ್ರೀಯ ದೃಷ್ಟಿಕೋನವು ವಸುಧೈವ ಕುಟುಂಬಕಂ(ಜಗತ್ತೇ ಒಂದು ಕುಟುಂಬ) ಎಂಬ ಕಾಲಾತೀತ ತತ್ತ್ವದಲ್ಲಿ ಬೇರೂರಿದೆ ಎಂದು ಅವರು ಪುನರುಚ್ಚರಿಸಿದರು. ಅಂತಾರಾಷ್ಟ್ರೀಯ ಸೌರ ಒಕ್ಕೂಟ (ಐಎಸ್‌ಎ), ಜಾಗತಿಕ ಜೈವಿಕ ಇಂಧನ ಒಕ್ಕೂಟ ಮತ್ತು ಏಕ್ ಪೇಡ್ ಮಾ ಕೆ ನಾಮ್‌ನಂತಹ ಭಾರತದ ಉಪಕ್ರಮಗಳು ಮಾನವೀಯತೆಗೆ ಮೊದಲ ಆದ್ಯತೆ ನೀಡುವ ಧೋರಣೆಯನ್ನು ಬಿಂಬಿಸುತ್ತವೆ ಎಂದು ತಿಳಿಸಿದರು. ಜಿ7 ಶೃಂಗಸಭೆಯಲ್ಲಿ ಭಾರತದ ಸಕ್ರಿಯ ಪಾಲ್ಗೊಳ್ಳುವಿಕೆ, ಜಾಗತಿಕ ವೇದಿಕೆಯಲ್ಲಿ ದೇಶದ ಹೆಚ್ಚುತ್ತಿರುವ ಪ್ರಭಾವ ಮತ್ತು ನಾಯಕತ್ವದ ಮತ್ತೊಂದು ಪ್ರತೀಕವಾಗಿ ಕಾಣಲಾಗುತ್ತಿದೆ. ಈ ಅಧಿವೇಶನದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್, ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಸೇರಿದಂತೆ ಹಲವು ಜಾಗತಿಕ ನಾಯಕರು ಉಪಸ್ಥಿತರಿದ್ದರು.

16 ತಿಂಗಳ ಬಳಿಕ ಮೋದಿ-ಟ್ರಂಪ್ ಭೇಟಿ

ಪುಟ ೧➡ ಬುಧವಾರ ನಡೆಯಲಿರುವ ಅಧಿಕೃತ ದ್ವಿಪಕ್ಷೀಯ ಸಭೆಗೆ ಈ ಭೇಟಿ ಮುನ್ನುಡಿಯಾಗಿ ಪರಿಗಣಿಸಲಾಗಿದೆ. ಇತ್ತೀಚಿನ ತಿಂಗಳುಗಳಲ್ಲಿ ಅಮೆರಿಕ ವಿಧಿಸಿದ್ದ ಸುಂಕಗಳು, ಭಾರತ-ಪಾಕಿಸ್ತಾನ ಉದ್ವಿಗ್ನತೆ ಕುರಿತು ಟ್ರಂಪ್ ಮಾಡಿದ್ದ ವಿವಾದಾತ್ಮಕ ಹೇಳಿಕೆಗಳು ಹಾಗೂ ವೀಸಾ ನೀತಿ ಬದಲಾವಣೆಗಳಿಂದ ಉಭಯ ರಾಷ್ಟ್ರಗಳ ಸಂಬಂಧಗಳಲ್ಲಿ ಕೆಲವು ಬಿಕ್ಕಟ್ಟುಗಳು ಕಂಡುಬಂದಿದ್ದವು. ಆದರೆ, ಕಳೆದ ಕೆಲವು ತಿಂಗಳುಗಳಿಂದ ಸಂಬಂಧ ಸುಧಾರಣೆಗೆ ಎರಡೂ ದೇಶಗಳು ಪ್ರಯತ್ನಿಸುತ್ತಿವೆ. ಮೋದಿ-ಟ್ರಂಪ್ ಮಾತುಕತೆಯಲ್ಲಿ ವ್ಯಾಪಾರ ಒಪ್ಪಂದ, ರಕ್ಷಣಾ ಸಹಕಾರ, ಇಂಡೋ-ಪೆಸಿಫಿಕ್ ಪ್ರದೇಶದ ಭದ್ರತೆ, ಪಶ್ಚಿಮ ಏಷ್ಯಾ ಬಿಕ್ಕಟ್ಟು ಹಾಗೂ ರಷ್ಯಾ-ಉಕ್ರೇನ್ ಸಂಘರ್ಷ ಸೇರಿದಂತೆ ಹಲವು ಪ್ರಮುಖ ವಿಷಯಗಳು ಚರ್ಚೆಯಾಗುವ ನಿರೀಕ್ಷೆಯಿದೆ.

ಮೋದಿ ಇದ್ದಲ್ಲಿಗೇ ಬಂದು ಅಪ್ಪಿಕೊಂಡ ಬ್ರಿಟನ್ ಪಿಎಂ

ಪುಟ ೧➡ **ಮೆಲೋಡಿ ಕ್ಷಣ!:** ಇದಲ್ಲದೆ, ಪ್ರಧಾನಿ ಮೋದಿ ಮತ್ತು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ನಡುವಿನ ಮೆಲೋಡಿ ಕ್ಷಣ ಗಮನಸೆಳೆಯಿತು. ಇಬ್ಬರು ಹಸ್ತಲಾಘವದೊಂದಿಗೆ ಕುಶಲೋಪರಿ ನಡೆಸಿದರು.

ಶಿವಸೇನೆಯಲ್ಲಿ ಮತ್ತೆ ಬಂಡಾಯ? ವಿಭಜನೆಯ ಚರ್ಚೆ

ಮುಂಬೈ: ಮಹಾರಾಷ್ಟ್ರ ರಾಜಕೀಯದಲ್ಲಿ ಮತ್ತೊಮ್ಮೆ ಶಿವಸೇನೆ ವಿಭಜನೆಯ ಚರ್ಚೆ ಜೋರಾಗಿದೆ. ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ(ಯುಬಿ) ಪಕ್ಷದ 14ರಿಂದ 16 ಶಾಸಕರು ಹಾಗೂ 6 ಸಂಸದರು ಮುಂದಿನ ವಾರದಲ್ಲೇ ಏಕನಾಥ ಶಿಂಧೆ ಬಣದತ್ತ ಮುಖ ಮಾಡುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಶಿಂಧೆ ಬಣದ ನಾಯಕರಿಂದ ನಡೆಯುತ್ತಿದೆ ಎನ್ನಲಾದ ಆಪರೇಷನ್ ಟೈಗರ್ ಅಂತಿಮ ಹಂತ ತಲುಪಿದ್ದು, ಉದ್ಧವ್ ಬಣದ ಹಲವು ಜನಪ್ರತಿನಿಧಿಗಳೊಂದಿಗೆ ಮಾತುಕತೆ ನಡೆದಿದೆ ಎಂದು ಹೇಳಲಾಗಿದೆ. ಈ ಬೆಳವಣಿಗೆ ಯಶಸ್ವಿಯಾದರೆ 2022ರ ಬಂಡಾಯದ ಬಳಿಕ ಶಿವಸೇನೆಯಲ್ಲಿ ಮತ್ತೊಂದು ರಾಜಕೀಯ ಭೂಕಂಪ ಸಂಭವಿಸುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಇದರ ಮಧ್ಯೆ, ಪಕ್ಷದಲ್ಲಿ ಅಸಮಾಧಾನ ಹೆಚ್ಚುತ್ತಿದೆ ಎಂಬ ಸುದ್ದಿಗಳಿಗೆ ತೆರೆ ಎಳೆಯಲು ಉದ್ಧವ್ ಠಾಕ್ರೆ ಮುಂದಾಗಿದ್ದು, ಜೂನ್ 22ರಂದು ಪಕ್ಷದ ಎಲ್ಲ ಶಾಸಕರು ಹಾಗೂ ವಿಧಾನಪರಿಷತ್ ಸದಸ್ಯರ ಸಭೆಯನ್ನು ಕರೆದಿದ್ದಾರೆ. ಮುಂಗಾರು ಅಧಿವೇಶನ ಆರಂಭವಾಗುವ ದಿನವೇ ಈ ಸಭೆ ನಡೆಯಲಿದ್ದು, ಪಕ್ಷದ ಏಕತೆಯನ್ನು ಪ್ರದರ್ಶಿಸುವ ಪ್ರಯತ್ನವೆಂದು ವಿಶ್ಲೇಷಿಸಲಾಗಿದೆ.

ಆನೆ-ಮಾನವ ಸಂಘರ್ಷ ಬಗೆಹರಿಸಿ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಆನೆ-ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಲ್ಪಿಸುವುದು ಹಾಗೂ ಮೈಸೂರಿನ ತಿಪ್ಪಯ್ಯನ ಕೆರೆಯಲ್ಲಿ ನಗರ ವನ (ನಗರ್ ವನ್) ಯೋಜನೆ ಜಾರಿಗೊಳಿಸುವ ಸಂಬಂಧ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದ್ರ ಯಾದವ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಈ ಸಂದರ್ಭ ಮಾತನಾಡಿದ ಯದುವೀರ್ ಒಡೆಯರ್ ಅವರು, ಕೊಡಗು ಜಿಲ್ಲೆಯ ವಿವಿಧ ಭಾಗಗಳಲ್ಲಿ ಆನೆಗಳು ಕೃಷಿ ಭೂಮಿ ಮತ್ತು ಜನ ವಸತಿ ಪ್ರದೇಶಗಳಿಗೆ ನುಗ್ಗುತ್ತಿರುವ ಘಟನೆಗಳು ನಿರಂತರವಾಗಿ ಹೆಚ್ಚುತ್ತಿದ್ದು, ಇದು ಜಿಲ್ಲೆಯ ಜನರ ಪ್ರಮುಖ ಸಮಸ್ಯೆಯಾಗಿ ಪರಿಣಮಿಸಿದೆ ಎಂದು ಸಚಿವರ ಗಮನಕ್ಕೆ ತಂದರು. ವಿಶೇಷವಾಗಿ ಅರಣ್ಯ ದಂಚಿನ ಗ್ರಾಮಗಳಲ್ಲಿ ವಾಸಿಸುವ ರೈತರು, ತೋಟಗಾರರು ಮತ್ತು ಕಾರ್ಮಿಕರು ಈ



ಸಮಸ್ಯೆಯಿಂದ ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಯದುವೀರ್ ಗಮನಸೆಳೆದರು.

ವನ್ಯಜೀವಿ ಸಂರಕ್ಷಣೆ ಅತ್ಯಂತ ಮುಖ್ಯವಾದರೂ, ಅರಣ್ಯದಂಚಿನ ಪ್ರದೇಶಗಳಲ್ಲಿ ವಾಸಿಸುವ ಜನರ ಜೀವ ಮತ್ತು ಜೀವನೋಪಾಯದ ರಕ್ಷಣೆಯೂ ಅಷ್ಟೇ ಮಹತ್ವದ್ದಾಗಿದೆ ಎಂದು ಯದುವೀರ್ ಹೇಳಿದರು. ಮೈಸೂರಿನ ಹೊರವರ್ತುಲ ರಸ್ತೆಯ ಸಮೀಪ, ಸರ್ದಾರ್ ವಲ್ಲಭಭಾಯಿ ಪಟೇಲ್ ನಗರದ ಬಳಿ ಇರುವ ತಿಪ್ಪಯ್ಯನ ಕೆರೆಯನ್ನು ನಗರ ವನ ಯೋಜನೆಯಡಿ ಅಭಿವೃದ್ಧಿಪಡಿಸುವಂತೆ ಪ್ರತ್ಯೇಕ ಮನವಿಯನ್ನೂ ಸಂಸದರು ಸಲ್ಲಿಸಿದರು.

ಬಲವಂತದ ಮತಾಂತರ: ಇಬ್ಬರ ಬಂಧನ

ಪುಟ ೧➡ ನನ್ನನ್ನು ಬಿಟ್ಟುಬಿಡಿ(ಛೋಡೋ ಮುಝೆ) ಎಂದು ಕೈಮುಗಿದು ಬೇಡಿಕೊಳ್ಳುತ್ತಿರುವುದು ಕಂಡುಬಂದಿದೆ. ಆದರೆ, ಮುಖ್ಯ ಆರೋಪಿ ಅಯಾಜ್ ತಾಜ್ ಮದಾರೆ ಎಂಬಾತ ಆಕೆಯ ಕೈಯನ್ನು ಬಲವಂತವಾಗಿ ಹಿಡಿದು, ಧಾರ್ಮಿಕ ಶ್ಲೋಕಗಳನ್ನು ಪಠಿಸುತ್ತಿರುವುದು ವಿಡಿಯೋದಲ್ಲಿದೆ. ಸದ್ಯ ಪೊಲೀಸರು ಈ ಡಿಜಿಟಲ್ ಪುರಾವೆಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ.

ಮಾಟ ಮಂತ್ರದ ಆರೋಪ: ಸಂತ್ರಸ್ತ ಮಹಿಳೆ ನಾಗಪುರದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸು ತ್ತಿದ್ದು, ಮುಖ್ಯ ಆರೋಪಿ ಅಯಾಜ್ ಆಕೆಯ ಶಾಲಾ ದಿನಗಳ ಸ್ನೇಹಿತನಾಗಿದ್ದ. ಜಮೀನು ಖರೀದಿಸುವ ನೆಪದಲ್ಲಿ ಫೆ.8, 2025ರಂದು ಆಕೆಯನ್ನು ವರ್ಧಾ ರಸ್ತೆಯ ಹೋಟೆಲ್‌ಗೆ ಕರೆಸಿದ್ದ. ಅಲ್ಲಿ ಆಕೆಗೆ ನಶೆಯುಕ್ತ ಪಾನೀಯ ನೀಡಲಾಗಿತ್ತು. ಮಹಿಳೆ ಪ್ರಜ್ಞೆ ತಪ್ಪಿದಾಗ ಆಕೆಯ ಆಕ್ಷೇಪಾರ್ಹ ಚಿತ್ರಗಳು ಮತ್ತು ವಿಡಿಯೋಗಳನ್ನು ಚಿತ್ರೀಕರಿಸಲಾಗಿತ್ತು. ವಿಡಿಯೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವುದಾಗಿ ಮತ್ತು ಗಂಡನಿಗೆ ಕಳುಹಿಸುವುದಾಗಿ ಬೆದರಿಸಿ ಆರೋಪಿಗಳು ಸುಮಾರು 4 ಲಕ್ಷ ರೂ. ಹಣವನ್ನು ಸುಲಿಗೆ ಮಾಡಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಅಷ್ಟೇ ಅಲ್ಲ, ಆರೋಪಿಯು ಬಾಟಲಿಯಲ್ಲಿದ್ದ ಯಾವುದೋ ದ್ರವವನ್ನು ಬಲವಂತವಾಗಿ ಕುಡಿಸಿ, ಉರ್ದು ಶ್ಲೋಕಗಳನ್ನು ಪಠಿಸಿ ಮುಖಕ್ಕೆ ಊದುತ್ತಿದ್ದ. ಇದು ಸಮ್ಮೋಹನ ಮತ್ತು ಮಾಟಮಂತ್ರ ಎಂದು ಹೇಳಿ ಆಕೆಯ ಮೇಲೆ ನಿರಂತರವಾಗಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ.

ಮತ್ತೊಬ್ಬ ಆರೋಪಿಗಾಗಿ ಶೋಧ

ಇತ್ತೀಚೆಗೆ ಮಹಿಳೆಯ ಪತಿ ನಾಗಪುರಕ್ಕೆ ಮರಳಿದಾಗ, ಸಂತ್ರಸ್ತೆ ತನಗಾದ ಅನ್ಯಾಯವನ್ನು ವಿವರಿಸಿದ್ದಾರೆ. ತಕ್ಷಣವೇ ದಂಪತಿ ಸೋನೆಗಾಂವ್ ಪೊಲೀಸ್ ಠಾಣೆಗೆ ತೆರಳಿ ದೂರು ದಾಖಲಿಸಿದ್ದಾರೆ. ಪೊಲೀಸರು ಮುಖ್ಯ ಆರೋಪಿ ಅಯಾಜ್ ತಾಜ್ ಮದಾರೆ (26) ಮತ್ತು ಅಮೀನ್ ಶೇಖ್ (30)ನನ್ನು ಬಂಧಿಸಿದ್ದಾರೆ. ತಲೆಮರೆಸಿಕೊಂಡಿರುವ ಹಜರತ್ ಮೌಲಾನಾಗಾಗಿ ಶೋಧ ಮುಂದುವರಿದಿದೆ.

ಆರೋಪಿಗಳಿಗೆ 5 ದಿನ ಕಸ್ಟಡಿ

ಆರೋಪಿಗಳ ವಿರುದ್ಧ ಅತ್ಯಾಚಾರ, ಸುಲಿಗೆ, ಕ್ರಿಮಿನಲ್ ಬೆದರಿಕೆ ಹಾಗೂ ಮಹಾರಾಷ್ಟ್ರದ ಮಾಟಮಂತ್ರ ವಿರೋಧಿ ಕಾಯ್ದೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಬಂಧಿತರನ್ನು 5 ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದ್ದು, ವಿಧಿವಿಜ್ಞಾನ ಮತ್ತು ಆರ್ಥಿಕ ವಹಿವಾಟುಗಳ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುತ್ತಿದೆ ಎಂದು ವಲಯ ಉಪ ಪೊಲೀಸ್ ಆಯುಕ್ತ ರಿಷಿಕೇಶ್ ರೆಡ್ಡಿ ತಿಳಿಸಿದ್ದಾರೆ.

ಎಸ್ಸಿಯಿಂದ ಮತಾಂತರಿಗಳನ್ನು ಕೈಬಿಡಲು ಒತ್ತಾಯ

ಬೆಂಗಳೂರು: ಮತಾಂತರಗೊಂಡ ಬುಡಕಟ್ಟು ಸಮುದಾಯದವರಿಂದ ನಿಜವಾದ ಮೂಲ ಬುಡಕಟ್ಟಿನವರಿಗೆ ಅನ್ಯಾಯವಾಗುತ್ತಿದ್ದು, ಮತಾಂತರ ಹೊಂದಿದವರನ್ನು ಪರಿಶಿಷ್ಟ ಪಂಗಡದ ಪಟ್ಟಿಯಿಂದ ಕೈಬಿಡಬೇಕು ಎಂದು ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ ಒತ್ತಾಯಿಸಿದ್ದಾರೆ. ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದರು.

12 ಕಡೆ ಲೋಕಾಯುಕ್ತ ದಾಳಿ

ದಾವಣಗೆರೆ: ಆದಾಯ ಮೀರಿ ಆಸ್ತಿ ಗಳಿಸಿದ ಆರೋಪದ ಮೇರೆಗೆ ಬೇರೆ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೂವರು ಅಧಿಕಾರಿಗಳ ಕಚೇರಿ ಜತೆಗೆ ದಾವಣಗೆರೆ ನಿವಾಸಗಳು ಸೇರಿದಂತೆ ಒಟ್ಟು 12 ಕಡೆ ಮಂಗಳವಾರ ಬೆಳ್ಳಂಬೆಳಿಗ್ಗೆಯೇ ಲೋಕಾಯುಕ್ತ ಅಧಿಕಾರಿಗಳ ತಂಡ ದಾಳಿ ನಡೆಸಿ, ಅಪಾರ ಸಂಪತ್ತು, ಆಸ್ತಿಪತ್ರಗಳನ್ನು ಪತ್ತೆ ಮಾಡಿದೆ.

ಚಿತ್ರದುರ್ಗದ ಬಯಲು ಸೀಮೆ ಅಭಿವೃದ್ಧಿ ಮಂಡಳಿ ಕಾರ್ಯದರ್ಶಿ ಕೃಷ್ಣಾ ನಾಯ್ಕ, ಹುಬ್ಬಳ್ಳಿಯ ನೈರುತ್ಯ ಕೆಎಸ್‌ಆರ್‌ಟಿಸಿ ಮುಖ್ಯ ಯಾಂತ್ರಿಕ(ಮೆಕ್ಯಾನಿಕಲ್) ವಿಭಾಗದ ಇಂಜಿನಿಯರ್ ಸಿದ್ದೇಶ್ವರ ಹೆಬ್ಬಾಳ್ ಹಾಗೂ ಕೆಆರ್‌ಐಡಿಎಲ್ ಅಧೀಕ್ಷಕ ಅಭಿಯಂತರ ಸಣ್ಣಕೆಂಚಪ್ಪ ನಿವಾಸಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳ ತಂಡ ದಾಳಿ ನಡೆಸಿವೆ.

ನಗರದ ಸಿದ್ದವೀರಪ್ಪ ಬಡಾವಣೆಯಲ್ಲಿರುವ ಕೃಷ್ಣಾನಾಯ್ಕರ 2 ಮನೆ, ಆಂಜನೇಯ ಬಡಾವಣೆಯಲ್ಲಿರುವ ಸಿದ್ದೇಶ್ವರ ಹೆಬ್ಬಾಳ್ ನಿವಾಸ ಹಾಗೂ ಇತರೆಡೆ, ಶಿವಕುಮಾರಸ್ವಾಮಿ ಬಡಾವಣೆಯಲ್ಲಿರುವ ಸಣ್ಣಕೆಂಚಪ್ಪ ನಿವಾಸ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿ, ದಾಖಲೆ ಆಸ್ತಿಪತ್ರ, ನಗದು, ಚಿನ್ನ, ಬೆಳ್ಳಿ ಪರಿಶೀಲನೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ತೊಡಗಿದ್ದಾರೆ. ಸಣ್ಣಕೆಂಚಪ್ಪನವರ ಹರಪನಹಳ್ಳಿಯಲ್ಲಿರುವ ಮನೆ ಸೇರಿದಂತೆ ವಿವಿಧ ಸ್ಥಳಗಳ ಮೇಲೂ ದಾಳಿ ಮಾಡಿ ಪರಿಶೀಲನೆ ನಡೆಸಲಾಗಿದೆ. ಮೂವರೂ ಅಧಿಕಾರಿಗಳ ಕಚೇರಿ, ಮನೆ, ಇತರೆ ಸ್ಥಳಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ಪ್ರತ್ಯೇಕ ತಂಡಗಳಲ್ಲಿ ಏಕಕಾಲಕ್ಕೆ ದಾಳಿ ಮಾಡಿದ್ದು, ಅಕ್ರಮ ಆಸ್ತಿ ಸಂಪಾದನೆಗೆ ಸಂಬಂಧಿಸಿದ ದಾಖಲೆ ಕಲೆ ಹಾಕುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ದಾಳಿ ವೇಳೆ ಅಧಿಕಾರಿಗಳ ಮನೆಗಳಲ್ಲಿ ಅಪಾರ ಪ್ರಮಾಣದ ನಗದು, ಚಿನ್ನಾಭರಣ, ಚರ ಮತ್ತು ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳೂ ಪತ್ತೆಯಾಗಿವೆ. ಸಿದ್ದೇಶ್ವರ ಹೆಬ್ಬಾಳ್ ನಿವಾಸದಲ್ಲಿ ಸುಮಾರು 40 ಲಕ್ಷ ರೂ. ನಗದು ಪತ್ತೆಯಾಗಿದೆ. ಮೂವರೂ ಅಧಿಕಾರಿಗಳ ಮನೆ, ಕಚೇರಿ ಇತರೆಡೆ ಮಂಗಳವಾರ ಸಂಜೆಯೂ ಪರಿಶೀಲನೆ ಕಾರ್ಯ ಮುಂದುವರೆದಿತ್ತು. ದಾಳಿಯಲ್ಲಿ ಪತ್ತೆಯಾದ ದಾಖಲೆ, ನಗದು, ಸ್ಥಿರ ಮತ್ತು ಚರಾಸ್ತಿಗಳ ದಾಖಲೆಗಳ ಮೌಲ್ಯ ಮಾನಪ ಪ್ರಕ್ರಿಯೆ ನಡೆಯುತ್ತಿದ್ದು, ದಾವಣಗೆರೆ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್.ಕೌಲಾಪುರೆ ಪ್ರತಿಕ್ರಿಯಿಸಿದ್ದಾರೆ.

ಸಿಎಂ ಭೇಟಿ



ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ ಸೇರಿದಂತೆ ಇನ್ನಿತರೆ ಉದ್ಯಮಿಗಳು ಮತ್ತು ವಿವಿಧ ದೇಶಗಳ ಗೌರವಾನ್ವಿತ ರಾಯಭಾರಿಗಳ ನಿಯೋಗವು ವಿಧಾನಸೌಧದಲ್ಲಿ ಮಂಗಳವಾರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿತು.

59 ಜೀವಂತ ಗುಂಡು ಪತ್ತೆ: ತನಿಖೆ

ಬೆಳಗಾವಿ: ನಗರದ ಪ್ರಮುಖ ಕೈಗಾರಿಕಾ ಪ್ರದೇಶವಾದ ಉದ್ಯಮಬಾಗ್‌ನಲ್ಲಿ ಕಸದ ರಾಶಿಯಿಂದ ಬರೋಬ್ಬರಿ 59 ಸಜೀವ ಗುಂಡುಗಳು ಪತ್ತೆಯಾಗಿರುವ ಘಟನೆ ಸಾರ್ವಜನಿಕರಲ್ಲಿ ಆತಂಕಕ್ಕೆ ಕಾರಣವಾಗಿದೆ. ಕೈಗಾರಿಕಾ ವಲಯದಲ್ಲಿ ನಡೆದ ಈ ಅಚ್ಚರಿ ಬೆಳವಣಿಗೆ ಹಲವು ಪ್ರಶ್ನೆಗಳನ್ನು ಹುಟ್ಟು ಹಾಕಿದ್ದು, ಪೊಲೀಸರು ತನಿಖೆ ತೀವ್ರಗೊಳಿಸಿದ್ದಾರೆ.

ಬೆಳಗ್ಗೆ ಪಾಲಿಕೆ ಪೌರಕಾರ್ಮಿಕರು ಎಂದಿನಂತೆ ಉದ್ಯಮ ಬಾಗ್‌ನ ರಸ್ತೆಯ ಬದಿಯಲ್ಲಿ ಸಂಗ್ರಹವಾಗಿದ್ದ ಕಸವನ್ನು ವಿಂಗಡಿಸುವ ಕಾರ್ಯದಲ್ಲಿ ತೊಡಗಿದ್ದರು. ಈ ವೇಳೆ ಕಸದ ರಾಶಿಯೊಳಗೆ ಅನುಮಾನಾಸ್ಪದ ವಸ್ತುಗಳು ಕಂಡುಬಂದಿದ್ದು, ಪರಿಶೀಲಿಸಿದಾಗ ಅವು ಸಜೀವ ಗುಂಡುಗಳಾಗಿರುವುದು ಬೆಳಕಿಗೆ ಬಂದಿದೆ. ತಕ್ಷಣವೇ ಎಚ್ಚೆತ್ತ ಕಾರ್ಮಿಕರು ಯಾವುದೇ ಅಪಾಯ ಸಂಭವಿಸದಂತೆ ಸ್ಥಳವನ್ನು ಸುರಕ್ಷಿತಗೊಳಿಸಿ ಉದ್ಯಮಬಾಗ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಮಾಹಿತಿ ತಿಳಿಯುತ್ತಿದ್ದಂತೆ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿ, ಕಸದ ರಾಶಿಯಿಂದ ಒಟ್ಟು 59 ಜೀವಂತ ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಆರೆಸ್ಸೆಸ್ ದೇಣಿಗೆ ಪಡೆದಿಲ್ಲ: ಭಾಂಡಗೆ

ಬಾಗಲಕೋಟೆ: ಆರ್‌ಎಸ್‌ಎಸ್‌ಗೆ ಸರ್ಕಾರದಿಂದ ದುಡ್ಡು ಬಂದಿಲ್ಲ. ಅನುದಾನ ಕೂಡ ಕೊಟ್ಟಿಲ್ಲ. ಸಾರ್ವಜನಿಕರಿಂದ ಹಣವನ್ನು ದೇಣಿಗೆ ಪಡೆದಿಲ್ಲ. ಯಾವ ಲೆಕ್ಕ ಕೊಡಬೇಕು ಎಂದು ಖರ್ಗೆ ಹೇಳಿಕೆಗೆ ರಾಜ್ಯಸಭೆ ಸದಸ್ಯ ನಾರಾಯಣಸಾ ಭಾಂಡಗೆ ತಿರುಗೇಟು ನೀಡಿದರು.

ನವನಗರದ ಪತ್ರಿಕಾಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಗೃಹ ಸಚಿವರಿಗೆ ಆರ್‌ಎಸ್‌ಎಸ್ ಬಗ್ಗೆ ಮಾತನಾಡಿದರೆ ದೊಡ್ಡವನಾಗಿ ಬಿಡುತ್ತೇನೆ ಎಂದು ಆರ್‌ಎಸ್‌ಎಸ್. ಬಗ್ಗೆ ಅನವಶ್ಯಕ ಹೇಳಿಕೆಯನ್ನು ನೀಡುತ್ತಿದ್ದಾರೆ. ಸಮರ್ಥ ಭಾರತ, ಶಕ್ತಿಶಾಲಿ, ವಿಕಸಿತ ಭಾರತವನ್ನು ಜಗತ್ತಿನಲ್ಲಿ ಗುರುವಿನ ಸ್ಥಾನಕ್ಕೆ ಮೋದಿಯವರು ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳಿದರು. ಸಂಸದ ಪಿ.ಸಿ.ಗದ್ದಿಗೌಡರ, ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಯ್ಯ ಮೂಗನೂರಮಠ, ಬೆಳಗಾವಿ ಸಹ ಪ್ರಭಾರಿ ಬಸವರಾಜ ಯಂಕಂಚಿ, ಹೂವಪ್ಪ ರಾಠೋಡ ಪತ್ರಿಕಾಗೋಷ್ಠಿಯಲ್ಲಿದ್ದರು.

ಕಿರುಸುದ್ದಿ

ಡಾ.ಡಿ.ವೀರೇಂದ್ರ ಹೆಗ್ಗಡೆ ಅವರಿಗೆ ಸಿದ್ದಶ್ರೀ ಪ್ರಶಸ್ತಿ

ಕೊರಟಗೆರೆ: ಸಸ್ಯಸಂಜೀವಿನಿ ಕ್ಷೇತ್ರ ಸಿದ್ದರಬೆಟ್ಟ ಶ್ರೀಮಠದಲ್ಲಿ ಜೂ.21ರ ಭಾನುವಾರ ನಡೆಯುವ 20ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರಿಗೆ ಶ್ರೀಮಠದ ಸಿದ್ದಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಬಾಳೆಹೊನ್ನೂರು ಖಾಸಾ ಶಾಖಾ ಶ್ರೀಮಠದ ಶ್ರೀವೀರಭದ್ರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.



ಕೊರಟಗೆರೆ ಪಟ್ಟಣದ ಬಸವೇಶ್ವರ ದೇವಾಲಯದಲ್ಲಿ ಸಿದ್ದರಬೆಟ್ಟ ಶ್ರೀಮಠ ಮತ್ತು ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ಮಂಗಳವಾರ ಏರ್ಪಡಿಸಲಾಗಿದ್ದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು. ಸಿದ್ದರಬೆಟ್ಟ ಶ್ರೀಮಠದಿಂದ ನಡೆಯಲಿರುವ 20ನೇ ವಾರ್ಷಿಕೋತ್ಸವ ಮತ್ತು ಧರ್ಮಜಾಗೃತಿ ಕಾರ್ಯಕ್ರಮಕ್ಕೆ ಈಗಾಗಲೇ 15ಜೋಡಿಗಳು ನೋಂದಣಿ ಆಗಿದೆ. ಜೂ.20ರ ತನಕ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಶ್ರೀಗಳು ಮಾಹಿತಿ ನೀಡಿದರು.

ಎಸ್‌ಐಟಿ ತಂಡದ ಕಾರು ಪಲ್ಟಿ

ಬೆಳ್ತಂಗಡಿ: ಧರ್ಮಸ್ಥಳ ಗ್ರಾಮದ ಬುರುಡೆ ಪ್ರಕರಣದ ಎಸ್‌ಐಟಿ ತಂಡದ ಎಸ್ಪಿ ಮತ್ತು ಇತರ ಅಧಿಕಾರಿಗಳು ಪ್ರಯಾಣಿಸುತ್ತಿದ್ದ ಇನೋವಾ ಕಾರು ಚಾರ್ಮಾಡಿ ಘಾಟಿ ಬಳಿ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ಬೆಳ್ತಂಗಡಿ ಎಸ್‌ಐಟಿ ಕಚೇರಿಯಿಂದ ಎಸ್ಪಿ ಸಿ.ಎ. ಸೈಮನ್, ಇನ್ಸ್‌ಪೆಕ್ಟರ್ ಕುಸುಮಾಧರ್, ಸಿಬ್ಬಂದಿ ಮಂಜುನಾಥ್ ಸೇರಿ ಚಿಕ್ಕಮಗಳೂರು ಜಿಲ್ಲಾ ಎಸ್ಪಿ ಹಾಗೂ ಎಸ್‌ಐಟಿ ತನಿಖಾಧಿಕಾರಿಯಾಗಿರುವ ಜಿತೇಂದ್ರಕುಮಾರ್ ದಯಾಮ ಅವರನ್ನು ಭೇಟಿ ಮಾಡಿ ಬುರುಡೆ ಪ್ರಕರಣದ ಚಿನ್ನಯ್ಯ ಹೈಕೋರ್ಟ್ ರಿಟ್ ಪಿಟಿಷನ್ ಹಾಕಿರುವ ಬಗ್ಗೆ ಮಾತುಕತೆ ನಡೆಸಲು ತೆರಳುತ್ತಿದ್ದಾಗ ಜೂ.16 ರಂದು ಮಧ್ಯಾಹ್ನ ಚಾರ್ಮಾಡಿಯಲ್ಲಿ ನಿಯಂತ್ರಣ ತಪ್ಪಿ ಪೊಲೀಸ್ ಇಲಾಖೆ ಇನೋವಾ ಕಾರು ಪಲ್ಟಿಯಾಗಿದೆ. ಇನೋವಾ ಕಾರಿನಲ್ಲಿ ಚಾಲಕ ಸೇರಿ ಒಟ್ಟು ನಾಲ್ಕು ಜನ ಪ್ರಯಾಣಿಸುತ್ತಿದ್ದರು. ಘಟನೆಯಲ್ಲಿ ಯಾರಿಗೂ ಯಾವುದೇ ಗಾಯವಾಗಿಲ್ಲ, ಇನೋವಾ ಕಾರು ಪಲ್ಟಿ ರಭಸಕ್ಕೆ ಹಾನಿಗೀಡಾಗಿದ್ದು. ಈ ಬಗ್ಗೆ ಬೆಳ್ತಂಗಡಿ ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ನೀಡಲು ಕಾರಿನಲ್ಲಿದ್ದ 4 ಜನ ಆಗಮಿಸಿದ್ದಾರೆ.

ಬಸ್-ಕ್ಯಾಂಟರ್ ಅಪಘಾತ: ಮೂವರ ಸಾವು

ಚಡಚಣ: ಚಡಚಣ ತಾಲೂಕಿನಲ್ಲಿ ಒಂದೇ ದಿನದ ಅಂತರದಲ್ಲಿ ಮತ್ತೊಂದು ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, ಕೆಎಸ್‌ಆರ್‌ಟಿಸಿ ಬಸ್ ಹಾಗೂ ಸಿಮೆಂಟ್ ಸಾಗಿಸುತ್ತಿದ್ದ ಕ್ಯಾಂಟರ್ ನಡುವೆ ನಡೆದ ಮುಖಾಮುಖಿ ಡಿಕ್ಕಿಯಲ್ಲಿ ಮೂವರು ಮೃತಪಟ್ಟಿದ್ದು, 27ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದಾರೆ. ರಾಜ್ಯ ಹೆದ್ದಾರಿ 41ರ ಬರಡೋಲ ಗ್ರಾಮ ಹಾಗೂ ಲೋಣಿ ಕ್ರಾಸ್ ನಡುವೆ ಚಡಚಣ ಪೊಲೀಸ್ ಸರಹದ್ದಿನಲ್ಲಿ ಮಂಗಳವಾರ ಬೆಳಗ್ಗೆ ಈ ದುರ್ಘಟನೆ ನಡೆದಿದೆ. ಅಪಘಾತದ ತೀವ್ರತೆಗೆ ಬಸ್ ಚಾಲಕ ಹಣಮಂತ ಚಲವಾದಿ(38) ನಿಡಗುಂದಿ, ಕ್ಯಾಂಟರ್ ಚಾಲಕ ಅಶೋಕ ಮಹಾದೇವ ಉಟಗಿ (32) ಹಾಗೂ ಅವರ ಪತ್ನಿ ರಾಧಾಬಾಯಿ ಅಶೋಕ ಉಟಗಿ (28), ಹಾವಿನಾಳ ಗ್ರಾಮದ ನಿವಾಸಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದ ಮಾಹಿತಿ ತಿಳಿಯುತ್ತಿದ್ದಂತೆ ಚಡಚಣ ಪೊಲೀಸ್ ಠಾಣೆಯ ಪಿಎಸ್‌ಐ ಸೋಮೇಶ ಗೆಜ್ಜಿ, ವೃತ್ತ ನಿರೀಕ್ಷಕ ಪರಶುರಾಮ ಮನಗೂಳಿ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸರಸಂಘಚಾಲಕರಿಗೆ ಪತ್ರ | ಪ್ರಿಯಾಂಕ್ ಖರ್ಗೆಗೆ ವಿಜಯೇಂದ್ರ ತಿರುಗೇಟು

ಪಾರದರ್ಶಕ ಚಟುವಟಿಕೆ

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಪಾರದರ್ಶಕ ಬದ್ಧತೆಯನ್ನು ಪಸರಿಸುವಲ್ಲಿ ತೋರಿದ ಸಮರ್ಪಣೆ ಹಾಗೂ ತ್ಯಾಗದ ಪ್ರತೀಕವಾಗಿ ಇಂದು ವಿಶ್ವದ ಅತ್ಯಂತ ದೊಡ್ಡ ಸಂಸ್ಥೆಯಾಗಿ ಬೆಳೆದು ನಿಂತಿದೆ. ಆರ್‌ಎಸ್‌ಎಸ್ ಚಟುವಟಿಕೆಗಳೆಲ್ಲವೂ ನೇರ-ದಿಟ್ಟ- ಪಾರದರ್ಶಕ. ಪ್ರತೀ ಚಟುವಟಿಕೆಗಳೂ ಬಹಿರಂಗದಲ್ಲಿ ಅನಾವರಣ. ಅದು ಮದರಸಾಗಳಂತೆ ಗುಪ್ತವಾಗಿ ಕಾರ್ಯ ನಿರ್ವಹಿಸುವುದಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಗೃಹ ಸಚಿವ ಪ್ರಿಯಾಂಕ್ ಖರ್ಗೆ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಸರಸಂಘ ಚಾಲಕರಿಗೆ ಪತ್ರ ಬರೆದಿರುವುದಕ್ಕೆ ಸಾಮಾಜಿಕ ಜಾಲತಾಣದಲ್ಲಿ ವಿಜಯೇಂದ್ರ ಪ್ರತಿಕ್ರಿಯಿಸಿದ್ದಾರೆ.

ಸ್ವಾತಂತ್ರ್ಯ ಯೋಧರು ಉದಾತ್ತ ಉದ್ದೇಶಕ್ಕಾಗಿ ತಮ್ಮ ಬೆವರ ಹನಿಯ ಹಣವನ್ನು ತೊಡಗಿಸಿ ಕಟ್ಟಿದ ಸುಮಾರು 5000 ಕೋಟಿ ರೂ. ಆಸ್ತಿ ಹೊಂದಿದ್ದ ಹೆರಾಲ್ಡ್ ಸಂಸ್ಥೆಯನ್ನು ಯಂಗ್ ಇಂಡಿಯನ್ ಹೆಸರಲ್ಲಿ ನುಂಗಿ ನೀರು ಕುಡಿದ ನೆಹರು ಕುಟುಂಬದ ಮಹಾನ್ ಫಲಾನುಭವಿಗಳಾಗಿರುವ ಖರ್ಗೆ ಕುಟುಂಬದ ಪ್ರಿಯಾಂಕ್ ಖರ್ಗೆ ಅವರೇ, ರಾಷ್ಟ್ರ ವಿಧ್ವಂಸಕ ಚಟುವಟಿಕೆಯ ಅನೇಕ ಅಲ್ಪಸಂಖ್ಯಾತ ಹೆಸರಿನ ಮತೀಯವಾದಿ ಸಂಘಟನೆಗಳು ಈ ದೇಶದಲ್ಲಿ ತಲೆಯೆತ್ತಿರುವುದು, ಅಕ್ರಮ ವಿದೇಶಿ ದೇಣಿಗೆ ಪಡೆದು ರಾಷ್ಟ್ರದ್ರೋಹಿ ಚಟುವಟಿಕೆಗಳಲ್ಲಿ ತೊಡಗಿಸುತ್ತಿರುವ ಮಾಹಿತಿ ಗೃಹ ಇಲಾಖೆ ನಡೆಸುತ್ತಿರುವ ನಿಮ್ಮ ಬಳಿಯೇ ಇದೆ. ಈ ಬಗ್ಗೆ ಪತ್ರ ಬರೆದು ಆ ಸಂಸ್ಥೆಗಳಿಂದ ವಿವರ ಏಕೆ ನೀವು ಕೇಳುವುದಿಲ್ಲ? ಎಂದು ಪ್ರಶ್ನಿಸಿದ್ದಾರೆ.



> ಆರ್‌ಎಸ್‌ಎಸ್ ಅನ್ನು ಚಾಲಿಶವಾಗಿ ಟೀಕಿಸುವುದು, ಆ ಮೂಲಕ ನೆಹರು ಕುಟುಂಬದ ಕುಡಿಗಳನ್ನು ಸಂತೃಪ್ತಿಪಡಿಸುವುದು. ಇದರಲ್ಲಿ ನಿಮಗೆ ವಿಕೃತ ಖುಷಿ ಸಿಗುವುದಾದರೆ ಬೈದುಕೊಳ್ಳಿ, ನಿಮ್ಮ ಬಗ್ಗೆ ಮರುಕ ಉಂಟಾಗುತ್ತದೆ. ಏಕೆಂದರೆ, ನೀವು ಆಕಾಶಕ್ಕೆ ಉಗುಳುತ್ತಿದ್ದೀರಿ ಎಂಬ ಸತ್ಯ ನಿಮಗರಿವಿದೆಯೋ ಇಲ್ಲವೋ ಆದರೆ ಈ ಕಾಯಕದಲ್ಲಿ ನಿಮಗೆ ಸಂತೃಪ್ತಿ ಸಿಗುವುದಾದರೆ ಇದನ್ನು ಮುಂದುವರಿಸಿ.
>
> ■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಕಾಂಗ್ರೆಸ್ ಹೆಸರು ಬದಲಿಸಲು ಸಲಹೆ ನೀಡಿ: ಛಲವಾದಿ

ಮಹಾತ್ಮ ಗಾಂಧಿಯವರು 1948ರಲ್ಲಿ ಕಾಂಗ್ರೆಸ್ ವಿಸರ್ಜನೆ ಮಾಡಲು ಹೇಳಿದ್ದರು. ಕಾಂಗ್ರೆಸ್ ಹೆಸರು ಬದಲಿಸಿ ಲೋಕ ಸೇವಕ ಸಂಘ ಎಂಬ ಹೆಸರಿಡಲು, ಮಹಿಳೆಯರು, ಹರಿಜನರು, ಗೋವುಗಳ ರಕ್ಷಣೆಗೆ ನಿಲ್ಲಲು ಹೇಳಿದ್ದರಲ್ಲವೇ? ಈಗ ನಿಮ್ಮ ತಂದೆಯವರೇ ಎಐಸಿಸಿ ಅಧ್ಯಕ್ಷರಿದ್ದಾರೆ. ಮಹಾತ್ಮ ಗಾಂಧಿಯವರ ಆಶಯಕ್ಕೆ ಅನುಗುಣವಾಗಿ ಕಾಂಗ್ರೆಸ್ಸನ್ನು ವಿಸರ್ಜಿಸುವುದು ಯಾವಾಗ ಎಂದು ಯಾಕೆ ಇನ್ನೂ ನೀವು ಪತ್ರ ಬರೆದಿಲ್ಲ ಎಂದು ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದ್ದಾರೆ.

ಹೈಕಮಾಂಡ್ ಓಲೈಕೆಗಾಗಿ ಕಾಂಗ್ರೆಸ್ ಹಪಾಹಪಿ

ನೂರು ವರ್ಷಗಳಿಂದ ಯಾವುದೇ ಅಪೇಕ್ಷೆಯಿಲ್ಲದೆ, ನಿಸ್ವಾರ್ಥವಾಗಿ ಭಾರತಾಂಬೆಯ ಸೇವೆಯಲ್ಲಿ ತೊಡಗಿಸಿಕೊಂಡಿರುವ ರಾಷ್ಟ್ರಭಕ್ತ ಸಂಘಟನೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾನೂನು ಬದ್ಧತೆ ಹಾಗೂ ದೇಶನಿಷ್ಠೆಯನ್ನು ಪ್ರಶ್ನೆ ಮಾಡುತ್ತಿರುವುದು ಹಾಸ್ಯಾಸ್ಪದ ಮಾತ್ರವಲ್ಲ, ನಾಚಿಕೆಗೇಡಿತನದ ಪರಮಾವಧಿ. ಪಾಕಿಸ್ತಾನ್ ಜಿಂದಾಬಾದ್ ಎಂದು ಅಟ್ಟಹಾಸದಿಂದ ಘೋಷಣೆ ಕೂಗಿದರು. ಕಣ್ಣು ಕಿವಿ ಮುಚ್ಚಿ ಕುಳಿತಿದ್ದು ಯಾಕೆ? ಹೈಕಮಾಂಡ್ ಓಲೈಕೆಯ ಹಪಾಹಪಿಗಾಗಿ ಅಲ್ಲವೇ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಪ್ರಶ್ನಿಸಿದ್ದಾರೆ.

ಮದರಸಾಗಳಂತೆ ಆರ್‌ಎಸ್‌ಎಸ್ ಗುಪ್ತವಾಗಿ ಕಾರ್ಯ ನಿರ್ವಹಿಸುವುದಿಲ್ಲ. ಕೇವಲ ಮತಾಂಧತೆಯನ್ನು ಬಿತ್ತಿ ರಾಷ್ಟ್ರೀಯತೆ ವಿರೋಧಿಸಲು ಪ್ರಚೋದನೆ ನೀಡುವ ಮದರಸದಂಥಾ ಸಂಸ್ಥೆಗಳ ಚಟುವಟಿಕೆಗಳು ನಿಮ್ಮ ಕಣ್ಣಿಗೆ ಬೀಳುವುದಿಲ್ಲ, ಕಿವಿಗೂ ಕೇಳಿಸುವುದಿಲ್ಲ. ಏಕೆಂದರೆ ಅದರ ಮೂಲದಿಂದ ಉತ್ಪತ್ತಿಯಾಗುತಿರುವ ಮತಬ್ಯಾಂಕ್ ಆಧರಿಸಿ ಅಧಿಕಾರ ಅನುಭವಿಸುತ್ತಿರುವ ನಿಮಗೆ ರಾಷ್ಟ್ರ ವಿಧ್ವಂಸಕ ಚಟುವಟಿಕೆ ಬಗ್ಗೆ ತಲೆಕೆಡಿಸಿಕೊಳ್ಳುವ ಬದ್ಧತೆ-ನೈತಿಕತೆ ಇರಲು ಹೇಗೆ ಸಾಧ್ಯ? ಎಂದು ಕೇಳಿದ್ದಾರೆ.

ಕೆಂಪೇಗೌಡರ ಹೆಸರಿನಲ್ಲಿ ಟೌನ್ ಪ್ಲಾನಿಂಗ್ ಕಾಲೇಜು: ಡಿಕೆಶಿ



ಬೆಂಗಳೂರು: ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ ಟೌನ್ ಪ್ಲಾನಿಂಗ್ ಕಾಲೇಜು ಮಾಡಬೇಕೆಂದು ತೀರ್ಮಾನಿಸಲಾಗಿದ್ದು, ಈ ಸಂಬಂಧ ಈಗಾಗಲೇ ಸಿದ್ಧತೆ ನಡೆಯುತ್ತಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಮಂಗಳವಾರ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣೆಗೆ ಪೂರ್ವಭಾವಿ ಸಭೆಯ ಬಳಿಕ ಮಾತನಾಡಿ, ಪ್ರತಿ ವರ್ಷದಂತೆ ಜೂನ್ 27 ರಂದು ಕೆಂಪೇಗೌಡ ಜಯಂತಿ ಆಚರಣೆ ಮಾಡುತ್ತೇವೆ. ಅದರಂತೆ ಪೂರ್ವಭಾವಿ ಸಭೆ ಕರೆಯೋದು ವಾಡಿಕೆ. ಯಾವ ರೀತಿ ಕಾರ್ಯಕ್ರಮ ಮಾಡಬೇಕು ಎಂಬುದರ ಬಗ್ಗೆ ಸಲಹೆ ತೆಗೆದುಕೊಳ್ಳಲು ಎಲ್ಲ ಸಂಘಟನೆಗಳನ್ನ ಕರೆಸಿ ಚರ್ಚೆ ಮಾಡಿದ್ದೇವೆ. ಅನೇಕರು ಕಾರ್ಯಕ್ರಮದ ಬಗ್ಗೆ ಅನೇಕ ಸಲಹೆ ಕೊಟ್ಟಿದ್ದಾರೆ ಎಂದರು.

ಈ ವರ್ಷ ಜೂ.27ರಂದು ನಾಡಪ್ರಭು ಕೆಂಪೇಗೌಡ ನೂತನ ಬಡಾವಣೆಯಲ್ಲಿ ಮಾಡಬೇಕು ಎಂದು ತೀರ್ಮಾನಿಸಲಾಗಿದೆ. ಅಲ್ಲದೇ, ಬಿಡಿಎ ವತಿಯಿಂದ ಶಾಸಕ ಎನ್.ಎ.ಹ್ಯಾರಿಸ್ ಮತ್ತು ಎಸ್.ಟಿ.ಸೋಮಶೇಖರ್ ನೇತೃತ್ವದಲ್ಲಿ ಅಂದೇ 15 ಲಕ್ಷ ಸಸಿಗಳನ್ನು ಬಡಾವಣೆಯಲ್ಲಿಯೇ ನೆಡಲು ತೀರ್ಮಾನಿಸಲಾಗಿದೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಒಂದು ಲಕ್ಷ ಅನುದಾನ: ಪ್ರತಿ ವಾರ್ಡ್ ಹಾಗೂ ವಿಧಾನಸಭಾ ಕ್ಷೇತ್ರಗಳಿಗೆ ಕೆಂಪೇಗೌಡ ಜಯಂತಿಯನ್ನು ಅದ್ದೂರಿಯಾಗಿ ಆಚರಣೆ ಮಾಡಲು ತಲಾ ಒಂದು ಲಕ್ಷ ರೂ. ನೀಡಲಾಗುತ್ತದೆ ಎಂದರು.

ಥೀಮ್ ಪಾರ್ಕ್ ಉದ್ಘಾಟನೆ

ದೇವನಹಳ್ಳಿ ವಿಮಾನ ನಿಲ್ದಾಣದಲ್ಲಿ ಥೀಮ್ ಪಾರ್ಕ್ ಉದ್ಘಾಟನೆಗೆ ಸಿದ್ದವಾಗಿದೆ. ಸಚಿವ ಕೃಷ್ಣ ಬೈರೇಗೌಡ ಅವರು ಅದರ ಜವಾಬ್ದಾರಿ ತೆಗೆದುಕೊಂಡು ಕಾರ್ಯಕ್ರಮ ರೂಪಿಸಿದ್ದಾರೆ. ಯಾವ ಸ್ವಾಮಿಗಳು ಹಾಗೂ ಯಾವ ನಾಯಕರನ್ನ ಆಹ್ವಾನಿಸಬೇಕು ಎಂಬ ಜವಾಬ್ದಾರಿ ಕೃಷ್ಣ ಬೈರೇಗೌಡರು ತೆಗೆದುಕೊಂಡಿದ್ದಾರೆ. ಸಂಘಟನೆಗಳ ಜೊತೆ ಅವರೇ ಸಂಪರ್ಕ ಮಾಡುತ್ತಾರೆ. ಒಕ್ಕಲಿಗರ ಸಂಘದವರ ತಂಡದ ಜವಾಬ್ದಾರಿಯನ್ನು ಸಚಿವರೇ ತೆಗೆದುಕೊಂಡಿದ್ದಾರೆ.

ಜಲಮೂಲ ಗುರುತಿಸಿ, ನೀರು ಪರೀಕ್ಷಿಸಿ: ಸಚಿವ ಈಶ್ವರ ಖಂಡ್ರೆ

ಬೆಂಗಳೂರು: ರಾಜ್ಯದಲ್ಲಿ ಮಳೆ ಕೊರತೆ ಮುನ್ಸೂಚನೆ ಹಿನ್ನೆಲೆಯಲ್ಲಿ ಪರ್ಯಾಯ ಜಲಮೂಲಗಳನ್ನು ಗುರುತಿಸಿ, ನೀರಿನ ಪರೀಕ್ಷೆ ಮಾಡಿ ಸನ್ನದ್ಧ ಸ್ಥಿತಿಯಲ್ಲಿರುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ ಸೂಚನೆ ನೀಡಿದ್ದಾರೆ.



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕಾರ್ಯದರ್ಶಿಗಳಿಗೆ ಸಚಿವರು ಈ ಸಂಬಂಧ ಲಿಖಿತ ಸೂಚನೆ ನೀಡಿದ್ದಾರೆ. ಜೂನ್ ಮಧ್ಯಭಾಗದ ಹೊತ್ತಿಗೆ ರಾಜ್ಯದಲ್ಲಿ ವಾಡಿಕೆಯಂತೆ ಆಗಬೇಕಿದ್ದ ಮಳೆ ಆಗಿಲ್ಲ, ಎಲ್ ನಿನೋ ಪ್ರಭಾವದಿಂದಾಗಿ ಮುಂಗಾರು ಮಳೆ ಕೊರತೆ ಉಂಟಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಮುಂಜಾಗರೂಕತಾ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದಾರೆ. ಈ ಸಂಬಂಧ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಖಾಸಗಿ ತೆರೆದ ಬಾವಿ, ಕೊಳವೆ ಬಾವಿಗಳನ್ನು ಗುರುತಿಸಬೇಕು. ತರುವಾಯ ಆ ಬಾವಿಗಳ ನೀರಿನ ಪ್ರಮಾಣ, ಲಭ್ಯತೆ ಖಚಿತಪಡಿಸಿಕೊಂಡು ನೀರು ಕುಡಿಯಲು ಯೋಗ್ಯವಾಗಿದೆಯೇ ಇಲ್ಲವೇ ಎಂಬ ಬಗ್ಗೆ ಪರೀಕ್ಷೆ ನಡೆಸಬೇಕು. ಅಂತಹ ಖಾಸಗಿ ಜಲಮೂಲಗಳ ಮಾಲೀಕರೊಂದಿಗೆ ಮಾತನಾಡಿ, ಅಗತ್ಯ ಬಿದ್ದಲ್ಲಿ ನೀರು ಬಳಕೆ ಮಾಡುವ ಬಗ್ಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಂಡು ಸನ್ನದ್ಧ ಸ್ಥಿತಿಯಲ್ಲಿರುವಂತೆ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

ಟೌನ್‌ಶಿಪ್ ವಿಚಾರದಲ್ಲಿ ಜೆಡಿಎಸ್ ರಾಜಕಾರಣ: ಟೀಕೆ

ಮೈಸೂರು: ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಜೆಡಿಎಸ್ ರಾಜಕಾರಣ ಮಾಡುತ್ತಿದೆ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಆರೋಪಿಸಿದರು. ಮಂಗಳವಾರ ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಬಿಡದಿ ಟೌನ್‌ಶಿಪ್ ಮಾಡುವ ಅವಶ್ಯಕವಿದೆ. ಶೇ.80ರಷ್ಟು ರೈತರು ಜಮೀನು ಕೊಡಲು ಒಪ್ಪಿದ್ದಾರೆ. ಕೆಲವರು ಹೆಚ್ಚಿನ ಪರಿಹಾರಕ್ಕೆ ಒಪ್ಪಿದ್ದಾರೆ. ಆದರೆ ಕೆಲವರು ಮಾತ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಅಂತವರ ಮಾತನ್ನು ಕೇಳಿ ಯೋಜನೆ ಕೈ ಬಿಡಲು ಆಗುವುದಿಲ್ಲ ಎಂದರು. ಬೆಂಗಳೂರಿನಲ್ಲಿ ಜನಸಂದಣಿ ಹೆಚ್ಚಾಗಿದೆ. ಎಷ್ಟೋ ಜನರಿಗೆ ನಿವೇಶನದ ಅಗತ್ಯ ಇದೆ. ಬೆಂಗಳೂರು ಜನಸಂಖ್ಯೆ ಚದುರಿಸುವ ಅಗತ್ಯವಿದೆ. ಬೆಂಗಳೂರು ವಿಸ್ತರಿಸುವ ಆವಶ್ಯಕತೆ ಇದೆ ಎಂದರು.

ಆರೆಸ್ಸೆಸ್ ಆರ್ಥಿಕ ಪಾರದರ್ಶಕತೆ ಬಹಿರಂಗಪಡಿಸಲಿ: ಖರ್ಗೆ

ಹೊಸದಿಲ್ಲಿ/ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘದ ಬಗ್ಗೆ ತಮ್ಮ ಆಕ್ಷೇಪವನ್ನು ಮುಂದುವರಿಸಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರು, ಆರ್‌ಎಸ್‌ಎಸ್ ಸಂಸ್ಥೆಯು ತನ್ನ ನೋಂದಣಿ ಹಾಗೂ ಆರ್ಥಿಕ ಪಾರದರ್ಶಕತೆಯನ್ನು ಬಹಿರಂಗಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

ದಿಲ್ಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ಅವರು, ದೇಶದ ಪ್ರಮುಖ ಸಂಘಟನೆಯಾದ ರಾಷ್ಟ್ರೀಯ ಸ್ವಯಂಸೇವಕ ಸಂಘ ತನ್ನ ಅಸ್ತಿತ್ವದ ಶತಮಾನೋತ್ಸವದ (100 ವರ್ಷ) ಸಂದರ್ಭದಲ್ಲಾದರೂ ತನ್ನ ಕಾನೂನುಬದ್ಧ ಸ್ಥಾನಮಾನವನ್ನು ಸ್ಪಷ್ಟಪಡಿಸಬೇಕು ಎಂದಿದ್ದಾರೆ.



ಕರ್ನಾಟಕವೊಂದರಲ್ಲೇ 4,127 ದೈನಂದಿನ ಶಾಖೆಗಳು, 1,389 ವಾರಾಂತರ ಸಭೆಗಳು, 60 ಮಾಸಿಕ ಮಂಡಳಿಗಳು ನಡೆಯುತ್ತಿವೆ. ಜೊತೆಗೆ 500ಕ್ಕೂ ಹೆಚ್ಚು ಪಥಸಂಚಲನ ಹಾಗೂ ಲಕ್ಷಾಂತರ ಜನರು ಭಾಗವಹಿಸುವ ಸಮಾಜೋತ್ಸವಗಳು ನಿರಂತರವಾಗಿ ಜರುಗುತ್ತಿವೆ. ಇಷ್ಟು ದೊಡ್ಡ ಮಟ್ಟದ ಸಾರ್ವಜನಿಕ ಸಜ್ಜುಗೊಳಿಸುವಿಕೆ ಹಾಗೂ ಗಣವೇಶಧಾರಿ ಪಥ ಸಂಚಲನಗಳನ್ನು ಖಾಸಗಿ ಅಥವಾ ಅನೌಪಚಾರಿಕ ವ್ಯವಸ್ಥೆ ಎಂದು ಪರಿಗಣಿಸಲು ಸಾಧ್ಯವಿಲ್ಲ. ಇದಕ್ಕೆ ಸಂಬಂಧಿಸಿದ ಆಡಳಿತಾತ್ಮಕ ಅನುಮತಿಗಳ ವಿವರಗಳನ್ನು ಒದಗಿಸಬೇಕು ಎಂದು ಹೇಳಿದರು.

ಆರ್‌ಎಸ್‌ಎಸ್ ಕೇವಲ ಸಂಭ್ರಮಾಚರಣೆಗೆ ಸೀಮಿತವಾಗದೆ, ಭಾರತೀಯ ಸಂವಿಧಾನಕ್ಕೆ ಗೌರವ ಸಲ್ಲಿಸುವ ನಿಟ್ಟಿನಲ್ಲಿ ಆತ್ಮಾವಲೋಕನ ಮಾಡಿಕೊಳ್ಳಬೇಕು. 100ನೇ ವರ್ಷದಲ್ಲಿ ಸಂಘಟನೆಯು ಕಾನೂನು ಬದ್ಧವಾಗಿ ನೋಂದಾಯಿಸಿಕೊಂಡು, ಪಾರದರ್ಶಕತೆಯಿಂದ ಕಾರ್ಯ ನಿರ್ವಹಿಸುವುದೇ ದೇಶಕ್ಕೆ ನೀಡುವ ಅತ್ಯುತ್ತಮ ಕೊಡುಗೆಯಾಗಿದೆ ಎಂದು ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರೂ ಕಾನೂನಿಗಿಂತ ಮಿಗಿಲಲ್ಲ ಎಂದು ಸಚಿವರು ಹೇಳಿಕೊಂಡಿದ್ದಾರೆ.

ಸರ್ಕಾರ ರಚನೆ ವಿರುದ್ಧ ಕೋರ್ಟ್ ಮೆಟ್ಟಿಲೇರಿದ ವ್ಯಕ್ತಿಗೆ ದಂಡ

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರ ನೇತೃತ್ವದ 14 ಮಂದಿ ಸಚಿವರ ಪ್ರಮಾಣ ವಚನ ಸ್ವೀಕಾರ ಹಾಗೂ ಮಂತ್ರಿಮಂಡಲದ ರಚನೆ ಸಂವಿಧಾನ ಬಾಹಿರ ಎಂದು ಘೋಷಿಸುವಂತೆ ಕೋರಿ ನ್ಯಾಯಾಲಯದ ಮೆಟ್ಟಿಲೇರಿದ್ದ ವ್ಯಕ್ತಿಗೆ ಕರ್ನಾಟಕ ಹೈಕೋರ್ಟ್ ಬರೋಬ್ಬರಿ 50 ಸಾವಿರ ರೂ.ದಂಡ ವಿಧಿಸಿದೆ.



ಈ ವಿಚಾರವಾಗಿ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹಾಗೂ 13 ಮಂದಿ ನೂತನ ಸಚಿವರನ್ನು ಪ್ರತಿವಾದಿಗಳನ್ನಾಗಿ ಮಾಡಿ ಹುಬ್ಬಳ್ಳಿಯ ನಿವಾಸಿ ಮಂಗಳಪ್ಪ ಹುಲಿಕೇರಿ ಎಂಬುವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರ ವಿಭಾಗೀಯ ಪೀಠ ವಜಾ ಗೊಳಿಸಿದೆ. ಕೆಲ ಕಾಲ ವಾದ ಆಲಿಸಿದ ಪೀಠವು ಇದೊಂದು ಊಹೆ ಮತ್ತು ಗ್ರಹಿಕೆಗಳ ಆಧಾರದಲ್ಲಿ ಪ್ರಚಾರ ಗಿಟ್ಟಿಸಿಕೊಳ್ಳಲು ಸಲ್ಲಿಸಲಾಗಿರುವ ಕ್ಷುಲ್ಲಕ ಅರ್ಜಿಯಾಗಿದೆ.

ಇಂತಹ ಅರ್ಜಿ ಸಲ್ಲಿಸುವ ಮೂಲಕ ನ್ಯಾಯಾಲಯದ ಸಮಯ ಹಾಳು ಮಾಡಲಾಗಿದೆ ಎಂದು ಹೇಳಿ ಅರ್ಜಿದಾರರಿಗೆ 50 ಸಾವಿರ ರೂಪಾಯಿ ದಂಡ ವಿಧಿಸಿ ಅರ್ಜಿ ವಜಾಗೊಳಿಸಿ ಆದೇಶಿಸಿತು.

ವೀರಶೈವ ಪ್ರಧಾನ ಕಾರ್ಯದರ್ಶಿ ನೇಮಕ

ಬೆಂಗಳೂರು: ಅಖಿಲ ಭಾರತ ವೀರಶೈವ ಮಹಾಸಭೆಯ ಮಹಾಪ್ರಧಾನ ಕಾರ್ಯದರ್ಶಿಯಾಗಿ ದಿ.ಶಾಮನೂರು ಶಿವಶಂಕರಪ್ಪ ಪುತ್ರ ಎಸ್.ಎಸ್ ಗಣೇಶ್ ಅವರು ನೇಮಕಗೊಂಡಿದ್ದಾರೆ. ಎಸ್.ಎಸ್ ಗಣೇಶ್ ಅವರನ್ನು ಮಹಾಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಿ ಆದೇಶ ಹೊರಡಿಸಿರುವ ಮಹಾಸಭಾದ ಅಧ್ಯಕ್ಷ ಈಶ್ವರ ಖಂಡ್ರೆ ಅವರು, ಮಹಾಸಭಾ ಸಂವಿಧಾನ ನಿಯಮ 26ರಂತೆ ಕರ್ತವ್ಯ ನಿರ್ವಹಿಸುವುದರ ಜತೆಗೆ ಮಹಾಸಭೆಯ ಗುರಿ ಮತ್ತು ಧ್ಯೇಯೋದ್ದೇಶಗಳನ್ನು ಅನುಷ್ಠಾನಗೊಳಿಸಲು ತತ್‌ಕ್ಷಣದಿಂದ ಕಾರ್ಯಪ್ರವೃತ್ತರಾಗಬೇಕೆಂದು ತಿಳಿಸಿದ್ದಾರೆ.

12 ರಾಜ್ಯಗಳ ಮೇಲೆ ಎಲ್ ನಿನೋ ಪ್ರಭಾವ | ರಾಜ್ಯದ ಹಲವು ಜಿಲ್ಲೆಗಳ ಮೇಲೆ ತೀವ್ರ ಪರಿಣಾಮ ಸಾಧ್ಯ

ಕರ್ನಾಟಕದಲ್ಲಿ ಬರಗಾಲದ ಎಚ್ಚರಿಕೆ

ಹೊಸದಿಲ್ಲಿ: ಈ ವರ್ಷದ ಮುಂಗಾರು ಹಂಗಾಮಿನಲ್ಲಿ ಎಲ್ ನಿನೋ ಹವಾಮಾನ ವಿದ್ಯಮಾನವು ಕರ್ನಾಟಕ ಸೇರಿದಂತೆ 12 ರಾಜ್ಯಗಳ ಮೇಲೆ ತೀವ್ರ ಪರಿಣಾಮ ಬೀರಬಹುದೆಂದು ಕೇಂದ್ರ ಕೃಷಿ ಸಚಿವಾಲಯ ಎಚ್ಚರಿಕೆ ನೀಡಿದೆ. ರಾಜ್ಯದಲ್ಲಿ ಮಳೆ ಕೊರತೆ, ಬೆಳೆ ನಷ್ಟ ಹಾಗೂ ನೀರಿನ ಅಭಾವದ ಸಾಧ್ಯತೆಗಳಿರುವ ಹಿನ್ನೆಲೆಯಲ್ಲಿ ಜಿಲ್ಲಾಮಟ್ಟದಲ್ಲೇ ಮುಂಗಡ ತುರ್ತು ಕಾರ್ಯಯೋಜನೆ ರೂಪಿಸಲು ಕೇಂದ್ರ ಸರ್ಕಾರ ಸೂಚಿಸಿದೆ.

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅವರ ಅಧ್ಯಕ್ಷತೆಯಲ್ಲಿ ನಡೆದ ಖಾರೀಫ್-2026 ಸಿದ್ಧತಾ ಪರಿಶೀಲನಾ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಸಲಾಗಿದೆ. ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ಉತ್ತರ ಪ್ರದೇಶ, ರಾಜಸ್ಥಾನ ಸೇರಿದಂತೆ 12 ರಾಜ್ಯಗಳು ಎಲ್ ನಿನೋದಿಂದ ಹೆಚ್ಚು ಬಾಧಿತವಾಗುವ ಸಾಧ್ಯತೆಯಿರುವ ರಾಜ್ಯಗಳೆಂದು ಗುರುತಿಸಲಾಗಿದೆ.

ಕೇಂದ್ರದ ಮಾಹಿತಿ ಪ್ರಕಾರ, ಈ ರಾಜ್ಯಗಳ 326 ಜಿಲ್ಲೆಗಳಿಗೆ ವಿಶೇಷ ಮುನ್ನೆಚ್ಚರಿಕಾ ಯೋಜನೆ ಸಿದ್ಧಪಡಿಸಲಾಗುತ್ತಿದೆ. ಕರ್ನಾಟಕದಲ್ಲಿಯೂ ಮಳೆ ಕೊರತೆಯ ಅಪಾಯ ಎದುರಾಗಬಹುದಾದ ಜಿಲ್ಲೆಗಳನ್ನು ಗುರುತಿಸಿ, ಬೆಳೆವಾರು ಪರ್ಯಾಯ ಯೋಜನೆಗಳನ್ನು ರೂಪಿಸುವಂತೆ ಸೂಚಿಸಲಾಗಿದೆ.

ಕರ್ನಾಟಕಕ್ಕೆ ಏಕೆ ಹೆಚ್ಚು ಆತಂಕ?

- ಎಲ್ ನಿನೋದಿಂದ ಮುಂಗಾರು ಮಳೆ ಕುಂಠಿತವಾಗುವ ಸಾಧ್ಯತೆ
- ಮಳೆ ಆಧಾರಿತ ಕೃಷಿ ಪ್ರದೇಶಗಳಲ್ಲಿ ಬೆಳೆ ನಷ್ಟದ ಅಪಾಯ
- ಜಲಾಶಯಗಳ ನೀರಿನ ಸಂಗ್ರಹದ ಮೇಲೆ ಪರಿಣಾಮ ಸಾಧ್ಯ
- ರಾಗಿ, ತೊಗರಿ, ಜೋಳ ಸೇರಿ ಮಳೆ ಅವಲಂಬಿತ ಬೆಳೆಗಳಿಗೆ ಹೊಡೆತ ಬೀಳುವ ಆತಂಕ
- ಜಿಲ್ಲಾವಾರು ಪರ್ಯಾಯ ಬೆಳೆ ಹಾಗೂ ನೀರು ಸಂರಕ್ಷಣಾ ಯೋಜನೆ ರೂಪಿಸಲು ಸೂಚನೆ

ಚವ್ಹಾಣ್ ಅವರು ಜಿಲ್ಲಾಧಿಕಾರಿಗಳು, ಕೃಷಿ ಇಲಾಖೆ, ಕೃಷಿ ವಿಜ್ಞಾನ ಕೇಂದ್ರಗಳು (ಕೆವಿಕೆ) ಹಾಗೂ ವಿಸ್ತರಣಾ ವ್ಯವಸ್ಥೆಗಳೊಂದಿಗೆ ಸಮನ್ವಯ ಸಭೆಗಳನ್ನು ನಡೆಸಿ ರೈತರಿಗೆ ಮುಂಗಡ ಮಾರ್ಗದರ್ಶನ ನೀಡುವಂತೆ ಸೂಚಿಸಿದ್ದಾರೆ.

ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಪ್ರಕಾರ, ಸಮಭಾಜಕ ಪೆಸಿಫಿಕ್ ಮಹಾಸಾಗರ ಪ್ರದೇಶದಲ್ಲಿ ಈಗಾಗಲೇ ಎಲ್ ನಿನೋ ಪರಿಸ್ಥಿತಿ ನಿರ್ಮಾಣವಾಗಿದ್ದು, ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ನಡೆಯುವ ನೈಋತ್ಯ ಮುಂಗಾರು ಅವಧಿಯಲ್ಲಿ ಅದು ಮತ್ತಷ್ಟು ಬಲಗೊಳ್ಳುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ದೇಶದಲ್ಲಿ ಸಾಮಾನ್ಯ ಪ್ರಮಾಣಕ್ಕಿಂತ ಕಡಿಮೆ ಮಳೆಯಾಗುವ ಸಾಧ್ಯತೆ ವ್ಯಕ್ತವಾಗಿದೆ.

ಕೇಂದ್ರ ಸರ್ಕಾರವು ಮಳೆ ಕೊರತೆಯ ಜಿಲ್ಲೆಗಳಲ್ಲಿ ನೀರು ಸಂರಕ್ಷಣೆ, ತೇವಾಂಶ ನಿರ್ವಹಣೆ, ಮಿಶ್ರ ಬೆಳೆ ಪದ್ಧತಿ ಹಾಗೂ ಪರ್ಯಾಯ ಬೆಳೆ ಮಾದರಿಗಳ ಅನುಷ್ಠಾನಕ್ಕೆ ಹೆಚ್ಚಿನ ಒತ್ತು ನೀಡುವಂತೆ ಸೂಚಿಸಿದೆ. ರೈತರಿಗೆ ವೈಜ್ಞಾನಿಕ ಮಾಹಿತಿ ಆಧಾರಿತ ಸಲಹೆಗಳನ್ನು ನೀಡಬೇಕು, ಆತಂಕ ಸೃಷ್ಟಿಸುವ ಸಂದೇಶಗಳನ್ನು ತಪ್ಪಿಸಬೇಕು ಎಂದು ಸಚಿವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ದೂರಿನ ಹಿನ್ನೆಲೆ ರಾಜ್ಯ ಪೊಲೀಸ್ ಇಲಾಖೆಗೆ ಸರ್ಕಾರ ಸೂಚನೆ

ಖಾಸಗಿತನಕ್ಕೆ ಪ್ರಾಮುಖ್ಯತೆ ನೀಡಿ

ಬೆಂಗಳೂರು: ಅನುಮತಿಯಿಲ್ಲದೇ ಯಾವುದೇ ವ್ಯಕ್ತಿಯ ಖಾಸಗಿ ವಿಡಿಯೋ ಮತ್ತು ಫೋಟೋ ಪ್ರಕಟಿಸುವುದು ಅಥವಾ ಪ್ರಸಾರ ಮಾಡುವ ಪ್ರಕರಣಗಳಲ್ಲಿ ಪೊಲೀಸರು ಅನುಸರಿಸಬೇಕಾದ ಕ್ರಮಗಳ ಕುರಿತು ಸ್ಪಷ್ಟ ಮಾರ್ಗಸೂಚಿಗಳನ್ನು ಪಾಲಿಸುವಂತೆ ರಾಜ್ಯ ಪೊಲೀಸ್ ಇಲಾಖೆಯು ಮಂಗಳವಾರ ಆದೇಶ ಹೊರಡಿಸಿದೆ.

ಇತ್ತೀಚೆಗೆ ಈ ಮೇಲಿನ ಪ್ರಕರಣಗಳಿಗೆ ಸಂಬಂಧಿಸಿದಂತೆ ದೂರುಗಳನ್ನು ದಾಖಲಿಸುವಲ್ಲಿ ವಿಳಂಬ ಅಥವಾ ಕೆಲವೆಡೆ ನಿರಾಕರಣೆ ಮಾಡುತ್ತಿರುವುದು ಗಮನಕ್ಕೆ ಬಂದ ಹಿನ್ನೆಲೆಯಲ್ಲಿ, ಈ ಆದೇಶದಲ್ಲಿ ಚಿತ್ರೀಕರಣಕ್ಕೆ ಒಪ್ಪಿಗೆ ನೀಡಿದರೆ ಪ್ರಸಾರಕ್ಕೂ ಒಪ್ಪಿಗೆ ನೀಡಿದಂತೆ ಅಲ್ಲ ಎಂಬ ಕಾನೂನು ಸ್ಥಿತಿಯನ್ನು ಸ್ಪಷ್ಟಪಡಿಸಲಾಗಿದೆ. ಅಂದರೆ, ಒಬ್ಬ ವ್ಯಕ್ತಿ ಚಿತ್ರ ಸೆರೆಹಿಡಿಯಲು ಒಪ್ಪಿಗೆ ನೀಡಿದ್ದರೂ, ಅದನ್ನು ಹಂಚಲು ಅಥವಾ ಪ್ರಸಾರ ಮಾಡಲು ಒಪ್ಪಿಗೆ ನೀಡದಿದ್ದರೆ, ಅದು ಸಂಜ್ಞೆಯ ಅಪರಾಧವಾಗಲಿದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್) 2023ರ ಸೆಕ್ಷನ್ 77ರಂತೆ ಗೌಪ್ಯತೆ ಉಲ್ಲಂಘನೆಗೆ ಸಂಬಂಧಿಸಿದ ವಿಧಿಗಳು, ಮಾಹಿತಿ ತಂತ್ರಜ್ಞಾನ ಕಾಯ್ದೆ 2000ರ ಸೆಕ್ಷನ್ 66(ಇ), 67 ಮತ್ತು 67(ಎ) ಗಳನ್ನು ಅಳವಡಿಸಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ. ಮಹಿಳಾ ಸಂತ್ರಸ್ತರಿದ್ದಲ್ಲಿ 77ರ ವಿಧಿಯ ಜೊತೆಗೆ ಐಟಿ ಕಾಯ್ದೆಯ ಸೆಕ್ಷನ್ಗಳನ್ನು ಸೇರಿಸಿ ಎಫ್‌ಐಆರ್ ಕಡ್ಡಾಯವಾಗಿ ನೋಂದಣಿ ಮಾಡಬೇಕೆಂದು ನಿರ್ದೇಶಿಸಲಾಗಿದೆ.

ತಕ್ಷಣವೇ ಎಫ್‌ಐಆರ್ ನೋಂದಣಿ: ಅನುಮತಿಯಿಲ್ಲದೆ ಖಾಸಗಿ/ಆಪ್ತ ಚಿತ್ರಗಳು ಅಥವಾ ವೀಡಿಯೊಗಳ ಪ್ರಸಾರ ಮತ್ತು ಬೆದರಿಕೆ ವಿಡಿಯೋಗಳು, ರಿವೆಂಜ್ ಪೋರ್ನೋಗ್ರಫಿ ಮುಂತಾದ ಪ್ರಕರಣಗಳಲ್ಲಿ ಕೂಡ ತಕ್ಷಣ ಎಫ್‌ಐಆರ್ ದಾಖಲಿಸಬೇಕು. ಪೀಡಿತರು ಮೊದಲು ಚಿತ್ರೀಕರಣಕ್ಕೆ ಒಪ್ಪಿಗೆ ನೀಡಿದ್ದರು ಎಂಬ ಕಾರಣಕ್ಕೆ ದೂರು ನಿರಾಕರಿಸಬಾರದು. ಅಪರಾಧ ಸ್ಥಳೀಯ ವ್ಯಾಪ್ತಿಯ ಹೊರಗೆ ನಡೆದಿದ್ದರೆ ಝೀರೋ ಎಫ್‌ಐಆರ್ ದಾಖಲಿಸಿ ಸಂಬಧಿತ ಠಾಣೆಗೆ ವರ್ಗಾಯಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.ಅಪರಾಧಕರ ವಿಷಯವನ್ನು ತಕ್ಷಣ ತೆಗೆದುಹಾಕಲು ಐಟಿ ನಿಯಮಗಳ ಪ್ರಕಾರ ಸಂಬಂಧಿತ ಸಂಸ್ಥೆಗಳಿಗೆ ನೋಟಿಸ್ ನೀಡಬೇಕು ಮತ್ತು ಎಲ್ಲ ಡಿಜಿಟಲ್ ಸಾಕ್ಷಿಗಳನ್ನು ಕಾನೂನುಬದ್ಧವಾಗಿ ಸಂರಕ್ಷಿಸಬೇಕು. ಪೀಡಿತರ ಗುರುತು ಗೌಪ್ಯವಾಗಿರಬೇಕು, ಮಹಿಳಾ ಸಂತ್ರಸ್ತೆಯ ದೂರುಗಳನ್ನು ಮಹಿಳಾ ಅಧಿಕಾರಿಗಳು ದಾಖಲಿಸು ವಂತೆ ಸೂಚಿಸಲಾಗಿದೆ.

ಸೈಬರ್ ಕ್ರೈಮ್ ಘಟಕಗಳೊಂದಿಗೆ ಸಮನ್ವಯತೆ: ತನಿಖಾಧಿಕಾರಿಗಳು ಸೈಬರ್ ಕ್ರೈಮ್ ಘಟಕಗಳೊಂದಿಗೆ ಸಮನ್ವಯತೆ ಸಾಧಿಸಿ ತಾಂತ್ರಿಕ ತನಿಖೆ ಹಾಗೂ ಫೋರೆನ್ಸಿಕ್ ವಿಶ್ಲೇಷಣೆ ನಡೆಸಬೇಕು. ವಿಳಂಬ ಮಾಡಿದರೆ ಸಂಬಂಧಿತ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಡಿಜಿ-ಐಜಿಪಿ ಎಚ್ಚರಿಕೆ ನೀಡಿದ್ದಾರೆ.

ಸಂಪಾದಕೀಯ

ಆಹಾರ ಸುರಕ್ಷೆಗೆ ಆದ್ಯತೆಯಿರಲಿ

ತಮ್ಮ ಆಹಾರ ಉತ್ಪನ್ನಗಳ ಕುರಿತಂತೆ ಗ್ರಾಹಕರ ದಿಕ್ಕು ತಪ್ಪಿಸುತ್ತಿರುವ ಹತ್ತಕ್ಕೂ ಅಧಿಕ ಕಂಪೆನಿಗಳಿಗೆ 'ಭಾರತೀಯ ಆಹಾರ ಸುರಕ್ಷೆ ಮತ್ತು ಗುಣಮಟ್ಟ ಪ್ರಾಧಿಕಾರ'(ಎಫ್‌ಎಸ್‌ಎಸ್‌ಎಐ)ವು ನೋಟೀಸು ಜಾರಿ ಮಾಡಿರುವುದು ಸ್ವಾಗತಾರ್ಹ ಕ್ರಮವಾಗಿದೆ. ಹೀಗೆ ನೋಟೀಸು ಪಡೆದ ಕಂಪೆನಿಗಳಲ್ಲಿ ಕೆಲವು ಪ್ರಖ್ಯಾತ ಕಂಪೆನಿಗಳೂ ಸೇರಿವೆ. ತಮ್ಮದು ಅತ್ಯಂತ ಶುದ್ಧ ಆಹಾರ, ಆರೋಗ್ಯಪೂರ್ಣ ಆಹಾರ, ಶಕ್ತಿವರ್ಧಕ ಉತ್ಪನ್ನ ಮುಂತಾಗಿ ಈ ಕಂಪೆನಿಗಳು ಬಣ್ಣಿಸಿಕೊಂಡಿದ್ದರೂ ಈ ಬಣ್ಣನೆಗಳನ್ನು ಸಮರ್ಥಿಸುವಂತಹ ಪುರಾವೆಗಳು ಉತ್ಪನ್ನಗಳಲ್ಲಿ ಇಲ್ಲದ ಕಾರಣದಿಂದಾಗಿ ಕಂಪೆನಿಗಳಿಗೆ ನೋಟೀಸು ಜಾರಿ ಮಾಡಲಾಗಿದೆ. ಒಂದೆಡೆಯಿಂದ ಜಂಕ್ ಫುಡ್‌ಗಳು ಮತ್ತು ಕಲಬೆರಕೆ ವಸ್ತುಗಳ ದೆಸೆಯಿಂದಾಗಿ, ಜನರ ಆರೋಗ್ಯ ಕೆಡುತ್ತಿರುವುದರ ಕುರಿತಂತೆ ಆತಂಕಗಳು ಹೆಚ್ಚಿ ಜನರಲ್ಲಿ ಆರೋಗ್ಯ ಕಾಳಜಿ ಹೆಚ್ಚುತ್ತಿರುವ ಮಧ್ಯೆಯೇ, ಈ ಕಾಳಜಿಯನ್ನೆ ಲಾಭ ಮಾಡಿಕೊಳ್ಳುವ



ಹಲವಾರು ಕಂಪೆನಿಗಳು ತಮ್ಮದು ನೈಸರ್ಗಿಕವಾಗಿ ಪರಿಶುದ್ಧ ಉತ್ಪನ್ನ, ಸಂಪೂರ್ಣ ಸಾವಯವ ಉತ್ಪನ್ನ ಮುಂತಾಗಿ ಪ್ರಚಾರ ಮಾಡುವ ಮೂಲಕ ಗ್ರಾಹಕರನ್ನು ತಮ್ಮೆಡೆಗೆ ಸೆಳೆಯುತ್ತವೆ. ಆರೋಗ್ಯದ ಕುರಿತಂತೆ ಕಾಳಜಿ ಹೊಂದಿರುವ ಜನರು ಇಂತಹ ಉತ್ಪನ್ನಗಳನ್ನು ಖರೀದಿಸಲು ಆದ್ಯತೆ ನೀಡುವುದೂ ಸಹಜವೇ ಆಗಿದೆ. ಆದರೆ ವಾಸ್ತವದಲ್ಲಿ ಇಂತಹ ಉತ್ಪನ್ನಗಳು ತಾವು ಹೇಳಿಕೊಂಡಂತೆ ಇರುವುದಿಲ್ಲ. ರಾಸಾಯನಿಕಗಳನ್ನು ಬಳಸಿಯೇ ತಯಾರಿಸಲಾದ ವಸ್ತುಗಳನ್ನು ಸಾವಯವಗಳೆಂದು ಮಾರಾಟ ಮಾಡುವ ನಿದರ್ಶನಗಳು ಈ ಹಿಂದೆಯೂ ಕಂಡುಬಂದಿದ್ದವು. 'ಆರೋಗ್ಯಪೂರ್ಣ' ಎಂದು ಹೇಳುವ ಉತ್ಪನ್ನಗಳಲ್ಲಿ ಅನಾರೋಗ್ಯಕರ ಅಂಶಗಳು ಪತ್ತೆಯಾಗಿದ್ದವು. ಈ ಹಿನ್ನೆಲೆಯಲ್ಲಿ ಎಫ್‌ಎಸ್‌ಎಸ್‌ಎಐ ಈ ಕಂಪೆನಿಗಳಿಗೆ ನೋಟೀಸು ನೀಡಿರುವುದು ಹಾಗೂ ಜನರನ್ನು ತಪ್ಪು ದಾರಿಗೆಳೆಯುವ ಜಾಹೀರಾತುಗಳನ್ನು ನೀಡದಂತೆ ಎಚ್ಚರಿಸಿರುವುದು ಸಕಾಲಿಕವಾಗಿದೆ. ಇದು ಜನರಲ್ಲಿ ಕೂಡಾ ಈ ಉತ್ಪನ್ನಗಳ ಕುರಿತಂತೆ ಜಾಗೃತಿ ಮೂಡಿಸಲು ಸಹಕಾರಿಯಾಗಲಿದೆ.

ಆದರೆ ಎಲ್ಲಾ ಕಂಪೆನಿಗಳು ಎಫ್‌ಎಸ್‌ಎಸ್‌ಎಐ ನಿರ್ದೇಶವನ್ನು ಪಾಲಿಸುತ್ತವೆಯೆ? ಹಾಗೆ ಪಾಲಿಸದ ಕಂಪೆನಿಗಳ ಮೇಲೆ ಎಫ್‌ಎಸ್‌ಎಸ್‌ಎಐ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆಯೆ? ಈ ಕುರಿತಂತೆ ಮಾತ್ರ ಸೂಕ್ತ ಮಾಹಿತಿಗಳು ಲಭಿಸುವುದಿಲ್ಲ. ವರದಿಯೊಂದರ ಪ್ರಕಾರ ಎಫ್‌ಎಸ್‌ಎಸ್‌ಎಐ ನೋಟೀಸು ನೀಡಿದ ಬಳಿಕವೂ ಕೆಲವಾರು ಉತ್ಪನ್ನಗಳು ಅದೇ ಆಕ್ಷೇಪಾರ್ಹ ಬಣ್ಣನೆಯೊಂದಿಗೆ ಈಗಲೂ ಮಾರುಕಟ್ಟೆಯಲ್ಲಿ ಉಳಿದಿರುವ ನಿದರ್ಶನಗಳಿವೆ. ಎಫ್‌ಎಸ್‌ಎಸ್‌ಎಐ ಕೇವಲ ನೋಟೀಸು ನೀಡಿ ಸುದ್ದಿಯಾಗುವಷ್ಟಕ್ಕೇ ಸೀಮಿತವಾಗುವುದು ಸರಿಯಲ್ಲ. ಸೂಕ್ತ ಕ್ರಮಗಳೊಂದಿಗೂ ಜನತೆಯ ಮುಂದೆ ಬರಬೇಕು. ಆ ಮೂಲಕ ಗ್ರಾಹಕರ ಹಿತ ರಕ್ಷಿಸುವಂತಾಗಬೇಕು.

ಮರಣಕ್ಕೆ ಸಂಬಂಧಪಟ್ಟ ಇನ್ನಷ್ಟು ವಿಷಯಗಳು

ಲೋಕದಲ್ಲಿರುವಂತೆ ಮರಣವನ್ನು ಶಾಸ್ತ್ರಗಳು ಅಶುಭವೆಂದು ಭಾವಿಸುವುದಿಲ್ಲ.

ಪದಸಂಚಲನ

• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಕಳೆದ ಅನೇಕ ಸಂಚಿಕೆಗಳಲ್ಲಿ ಹುಟ್ಟು ಹಾಗೂ ಮರಣ ಪ್ರಕ್ರಿಯೆಯ ಬಗ್ಗೆ ಭಾರತೀಯ ಜ್ಞಾನಪರಂಪರೆಯಲ್ಲಿ ಹೇಗೆ ತಿಳಿಸಲಾಗಿದೆ ಎಂಬುದನ್ನು ಅತ್ಯಂತ ವಿಸ್ತೃತವಾಗಿ ನೋಡಿದೆವು. ಇನ್ನು ಈ ಸರಣಿಯ ಕೊನೆಯ ಹಂತದಲ್ಲಿ ಈಗ ಮರಣ, ಅದರ ಪ್ರಕ್ರಿಯೆ ಹಾಗೂ ಮರಣದ ಅನಂತರದ ಕೆಲವು ವಿಷಯಗಳ ಬಗ್ಗೆ ಪುನರೀಕ್ಷಣೆಯನ್ನು ಮಾಡೋಣ. ಇಲ್ಲಿಯವರೆಗಿನ ಎಲ್ಲ ಲೇಖನಗಳ ಸಾರರೂಪದಲ್ಲಿ ಕೆಲವು ಅಂಶಗಳನ್ನು ಹೀಗೆ ಸಂಗ್ರಹಿಸಬಹುದು.

1. ಮರಣವು ದೇಹಕ್ಕೆ ಹೊರತೂ ಆತ್ಮಕ್ಕಲ್ಲ. ಅರ್ಥಾತ್ ಭಾರತೀಯ ಸಂಸ್ಕೃತಿಯಲ್ಲಿ ಮರಣವೆಂದರೆ ಕೊನೆಯಲ್ಲ. ಬದಲಿಗೆ ಅದೊಂದು ತುದಿ ಅಷ್ಟೆ. ಅಲ್ಲಿಂದ ಮತ್ತೆ ಮುಂದುವರಿಕೆ ಎಂಬುದು ಇದ್ದೇ ಇದೆ. ಹಾಗಾಗಿ ಮರಣಕ್ಕೆ ಒಳಗಾಗುವುದು ಪಾಂಚಭೌತಿಕ ದೇಹವೇ ಹೊರತೂ ಅದರೊಳಗಿನ ಆತ್ಮವಲ್ಲ.

2. ಮರಣವೊದಗಿದರೂ ಸೂಕ್ಷ್ಮ ಶರೀರ ಮತ್ತು ಕಾರಣಶರೀರಸಹಿತನಾದ ಜೀವನು ತನ್ನ ಮುಂದಿನ ಶರೀರಪ್ರಾಪ್ತಿಗಾಗಿ ಪ್ರಯಾಣವನ್ನು ಬೆಳೆಸುತ್ತಾನೆ. ಹಾಗಾಗಿ ಮರಣವು ಕೇವಲ ಸ್ಥೂಲಶರೀರಕ್ಕೆ ಮಾತ್ರ. ಈ ದೃಷ್ಟಿಯಿಂದ ಸ್ಥೂಲಶರೀರದ ಪರಿವರ್ತನೆಯೇ ಹುಟ್ಟು ಮತ್ತು ಮರಣದ ಉದ್ದೇಶ.

3. ಸ್ಥೂಲಶರೀರವು ಅವರವರ ಕರ್ಮಕ್ಕನುಗುಣವಾಗಿ ದೊರೆಯುತ್ತದೆ. ಜೊತೆಗೆ ಸ್ಥೂಲಶರೀರವಿಲ್ಲದೆಯೇ ಭೋಗವು ಉಂಟಾಗುವುದಿಲ್ಲ. ಹಾಗಿದ್ದರೆ ಈ ಕರ್ಮವು ದೇಹದಲ್ಲಿ ಎಲ್ಲಿರುತ್ತದೆ? ಎಂದರೆ, ಅದು ನಮ್ಮ ಸೂಕ್ಷ್ಮ ಶರೀರದಲ್ಲಿರುತ್ತದೆ. ಹಾಗಾಗಿ ಸ್ಥೂಲಶರೀರವನ್ನು ಬಿಟ್ಟು ಜೀವನು ಪ್ರಯಾಣವನ್ನು ಬೆಳೆಸಿದ ಮೇಲೂ, ತನ್ನ ಸೂಕ್ಷ್ಮ ಶರೀರದಲ್ಲಿ ಕರ್ಮಗಳು ಸೂಕ್ಷ್ಮವಾಗಿ ಇರುವುದರಿಂದ, ಅದನ್ನು ಹೊತ್ತೊಯ್ಯುತ್ತಾನೆ.

4. ಮರಣದ ಅನಂತರ ಮುಂದಿನ ಜನ್ಮವನ್ನು ಪಡೆಯಲು ಬಹಳ ಸಮಯ ಬೇಕಾಗುತ್ತದೆ. ಉಪನಿಷತ್ತಿನ ಪ್ರಕಾರ, ಅನೇಕ ಮಾರ್ಗವನ್ನು ಆ ಜೀವನು ಹಾದು ಬರಬೇಕಾಗುತ್ತದೆ. ಹಾಗಾಗಿ ಮರಣದ ಅನಂತರ ಕೂಡಲೇ ಆತನಿಗೆ ಮತ್ತೊಂದು ಶರೀರಪ್ರಾಪ್ತಿಯಾಗಲಾರದು.

5. ಮನುಷ್ಯನ ಕಾಲಮಾನ, ಪಿತೃ-ದೇವತೆಗಳ ಕಾಲಮಾನ ಬೇರೆ ಬೇರೆ. ಹಾಗಾಗಿ ಮನುಷ್ಯನ ಕಾಲಮಾನದಲ್ಲಿ ಒಂದು ವರ್ಷದವರೆಗೂ ಮರಣವನ್ನು ಹೊಂದಿದದವನು ಒಂದೊಂದು ಸ್ಥಾನವನ್ನು ತಲುಪುತ್ತಾ ಪ್ರಯಾಣವನ್ನು ಬೆಳೆಸುತ್ತಾನೆ. ಇದಕ್ಕೆ ಸಹಕಾರಿಯಾಗಿ ಉತ್ತರಕ್ರಿಯೆ ಮತ್ತು ಶ್ರಾದ್ಧಾದಿಗಳನ್ನು ಶಾಸ್ತ್ರವು ವಿಧಿಸಿದೆ.

6. ಶ್ರಾದ್ಧ ಅಥವಾ ಪಿತೃಕಾರ್ಯವು ಕೇವಲ ಮರಣವನ್ನು ಹೊಂದಿದವನಿಗಾಗಿ ಮಾತ್ರವಲ್ಲ, ಮುಖ್ಯವಾಗಿ ಮಕ್ಕಳಿಗೆ ತಮ್ಮ ಪಿತೃಋಣವನ್ನು ಕಳೆದುಕೊಳ್ಳಲೋಸುಗ ಇರುವ ಒಂದು ಮಾರ್ಗ. ಅಷ್ಟೇ ಅಲ್ಲ, ಇದು ಅವರಿಗೆ ಒಂದು ಕರ್ತವ್ಯ ಕೂಡ. ಆಚರಿಸದಿದ್ದರೆ ಕರ್ತವ್ಯಾಚರಣೆ ಮಾಡದಿರುವುದರಿಂದ ಮಕ್ಕಳು ಶ್ರೇಯಸ್ಸಿನಿಂದ ವಂಚಿತರಾಗುತ್ತಾರೆ. ನಿತ್ಯಕರ್ಮದಂತೆಯೇ ನೈಮಿತ್ತಿಕ ಕರ್ಮಗಳೂ ಕೂಡ ತಪ್ಪದೇ ಅನುಷ್ಠೇಯವೇ ಆಗಿವೆ. ಹಾಗಾಗಿ ಮರಣಾನಂತರದ ಕರ್ಮಗಳು ಕೇವಲ ಮರಣಹೊಂದಿದವನಿಗೆ ಎಂಬ ಭಾವನೆ ಸರಿಯಲ್ಲ.

7. ಜೀವಿಗೆ ಆಯುಸ್ಸು ನಿರ್ಧಾರವಾಗುವುದು ಆತನ ಕರ್ಮದಿಂದ. ಈ ಜನ್ಮದಲ್ಲಿ ಅನುಭವಿಸಲೆಂದು ನಿರ್ದಿಷ್ಟವಾದ ಕರ್ಮಗಳ ಪ್ರಮಾಣಕ್ಕನುಗುಣವಾಗಿ ಆತ ಈ ದೇಹದಲ್ಲಿ ನೆಲೆಸುತ್ತಾನೆ. ಅದನ್ನು ಪ್ರಾರಬ್ಧಕರ್ಮ ಎನ್ನಲಾಗುತ್ತದೆ. ಪ್ರಾರಬ್ಧಕರ್ಮವನ್ನು ಅನುಭವಮಾತ್ರದಿಂದಲೇ ನಾಶಮಾಡಿಕೊಳ್ಳಬೇಕಾಗಿದೆ. ಸಂಚಿತ ಮತ್ತು ಆಗಾಮಿಕರ್ಮಗಳು ಜ್ಞಾನದಿಂದಲೂ ನಾಶವಾಗಬಲ್ಲವು. ಹಾಗಾಗಿ ಅನಂತವಾದ ಈ ಹುಟ್ಟು-ಸಾವಿನ ಚಕ್ರದಿಂದ ಪಾರಾಗಲು ಆತ್ಮಜ್ಞಾನವನ್ನು ಪಡೆಯಬೇಕೆಂದು ಶಾಸ್ತ್ರಗಳು ತಿಳಿಸುತ್ತವೆ.

8. ವೇದಾಂತದ ಪ್ರಕಾರ, ಹುಟ್ಟು-ಸಾವುಗಳು ನಿರಂತರವಾದ ಒಂದು ಪ್ರಕ್ರಿಯೆ. ಲೋಕದಲ್ಲಿರುವಂತೆ ಮರಣವನ್ನು ಶಾಸ್ತ್ರಗಳು ಅಶುಭವೆಂದು ಭಾವಿಸುವುದಿಲ್ಲ. ನಿರಂತರವಾಗಿ ಜೀವಿಸಬೇಕೆಂಬ ಜೀವಿಯ ಇಚ್ಛೆಯೇ ಮರಣವನ್ನು ಅಶುಭವೆಂದು ತಿಳಿಯಲು ಕಾರಣ. ಅಷ್ಟೇ ಅಲ್ಲ, ಮರಣಾನಂತರ ಮತ್ತೆ ಯಾವ ರೀತಿಯ ಜನ್ಮ ದೊರೆಯುವುದೆಂಬ ಊಹೆ ನಮಗಿರುವುದಿಲ್ಲವಾದ ಕಾರಣ ನಮಗಿದು ಅಶುಭವೆಂದು ಅನಿಸುತ್ತದೆ.

9. ಶಾಸ್ತ್ರಗಳಲ್ಲಿ ಮರಣ ಮತ್ತು ಅದರ ಅನಂತರದ ಪ್ರಕ್ರಿಯೆಯನ್ನು ಮನುಷ್ಯನಿಗೆ ಈ ಹುಟ್ಟು-ಸಾವಿನ ಚಕ್ರದಿಂದ ತಪ್ಪಿಸಿಕೊಳ್ಳಲು ದೃಢವಾದ ವೈರಾಗ್ಯ ಉಂಟಾಗಲಿ ಎಂಬ ಉದ್ದೇಶದಿಂದ ವಿವರಿಸುತ್ತದೆ. ಎಲ್ಲಿಯವರೆಗೆ ಈ ಸಂಸಾರದ ಅನಿತ್ಯತ್ವವನ್ನು ಮತ್ತು ಇಲ್ಲಿನ ಅನರ್ಥವನ್ನು ಅರ್ಥಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಮನುಷ್ಯನು ಈ ಸಂಸಾರದ ಮೇಲೆ ತೀವ್ರವಾದ ಮೋಹವನ್ನು ಬೆಳೆಸಿಕೊಂಡು, ದುಃಖದಲ್ಲಿ ಬೀಳುತ್ತಾನೆ. ಎಷ್ಟೆಷ್ಟು ಅನಿತ್ಯತ್ವಬುದ್ಧಿ ಬೆಳೆಯುವುದೋ ಅಷ್ಟಷ್ಟು ನಿರ್ಲಿಪ್ತವಾಗಿ ಹಾಗೂ ಅರ್ಥಪೂರ್ಣವಾಗಿ ಜೀವನವನ್ನು ಮನುಷ್ಯನು ಕಳೆಯಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಉಪನಿಷತ್ತು, ಪುರಾಣಗಳೆಲ್ಲ ವಿಸ್ತೃತವಾಗಿ ಮರಣದ ಪ್ರಕ್ರಿಯೆಯನ್ನು ವಿವರಿಸುತ್ತವೆ. ಹಾಗಂತ ಶಾಸ್ತ್ರಗಳು ಇಹ ಜೀವನವನ್ನು ಉಪೇಕ್ಷಿಸುವುದಿಲ್ಲ. ಆದರೆ ಇದೇ ಪಾರಮಾರ್ಥಿಕವಲ್ಲ ಎಂಬುದು ಅವುಗಳ ದೃಷ್ಟಿ.

10. ಜೀವನಿಗೆ ಗರ್ಭವಾಸ ಇದೇ ಮೊದಲಲ್ಲ. ಹಾಗೆಯೇ ಮರಣವೂ ಕೂಡ. ಹಾಗಾಗಿ ಮರಣದ ಭಯ ಎಲ್ಲರಿಗೂ ಇರುತ್ತದೆ. ಈ ಹಿಂದೆ ಮರಣವನ್ನು ಹೊಂದಿದಾಗ ಅನುಭವಿಸಿದ ನೋವಿನ ಸಂಸ್ಕಾರವು ನಮ್ಮೆಲ್ಲರ ಮನಸ್ಸಿನಲ್ಲಿ ಇರುವುದರಿಂದ ಸಹಜವಾಗಿ ನಮಗೆಲ್ಲ ಮರಣದ ಭಯವಿರುತ್ತದೆ. ಇಂಥ ಮರಣದಿಂದ ತಪ್ಪಿಸಿಕೊಳ್ಳಬೇಕು ಮತ್ತು ಜೀವಂತವಾಗಿರಬೇಕೆಂಬ ಆಗ್ರಹವನ್ನೇ ಅಭಿನಿವೇಶವೆಂಬುದಾಗಿ ಯೋಗಶಾಸ್ತ್ರವು ತಿಳಿಸುತ್ತದೆ. ಆದರೆ ಶರೀರದಲ್ಲಿ ನಿತ್ಯವಾಗಿ ಇರಲು ಸಾಧ್ಯವಿಲ್ಲ. ಯಾಕೆಂದರೆ ಅದಕ್ಕೆ ಹುಟ್ಟು ಇದೆ. ಯಾವುದಕ್ಕೆ ಹುಟ್ಟಿದೆಯೋ ಅದೆಲ್ಲಕ್ಕೆ ಸಾವು ಕೂಡ ಅನಿವಾರ್ಯ. ಹಾಗಾಗಿ ಈ ಶರೀರಧಾರಣೆಯೇ ಮತ್ತೊಮ್ಮೆ ಘಟಿಸದಂತೆ ಮಾಡಿಕೊಳ್ಳಬೇಕು ಎಂಬುದಾಗಿ ಶಾಸ್ತ್ರಗಳು ಉಪದೇಶಿಸುತ್ತವೆ. ಅದನ್ನು ಮೋಕ್ಷವೆನ್ನಲಾಗುತ್ತದೆ.

11. ಮೋಕ್ಷವೇ ಪರಮಪುರುಷಾರ್ಥವಾಗಿದೆ. ಮೋಕ್ಷವನ್ನು ಹೊಂದಿದ ಮೇಲೆ ಸಂಸಾರಕ್ಕೆ ಮತ್ತೆ ಜೀವನು ಬೀಳಲಾರ. ಯಾಕೆಂದರೆ ಜ್ಞಾನದಿಂದ ಆತನ ಕರ್ಮವು ನಾಶವಾಗಿರುತ್ತದೆ. ಕರ್ಮಕ್ಕೆ ಕಾರಣವಾದ ಅಜ್ಞಾನವೂ ನಾಶವಾಗಿರುತ್ತದೆ. ಹೀಗೆ ಮುಕ್ತಿಯ ಸಂದರ್ಭದಲ್ಲಿ ಆ ಜ್ಞಾನಿಯ ಸೂಕ್ಷ್ಮ ಶರೀರಾದಿಯಾಗಿ ಎಲ್ಲವೂ ಇಲ್ಲೇ ವಿಲಯವನ್ನು ಹೊಂದುತ್ತವೆ.

12. ಇದಕ್ಕೆ ವ್ಯತಿರಿಕ್ತವಾಗಿ ಅಜ್ಞಾನಿಯ ಪ್ರಾಣ, ಇಂದ್ರಿಯ, ಮನಸ್ಸು, ಬುದ್ಧಿ ಹಾಗೂ ಅಜ್ಞಾನಗಳೆಲ್ಲ ಮರಣದ ಸಂದರ್ಭದಲ್ಲಿ ಈ ಶರೀರವನ್ನು ಬಿಟ್ಟು ಮುಂದಿನ ಶರೀರವನ್ನು ಪಡೆಯಲೋಸುಗ ಜೀವನ ಜೊತೆ ಹೊರಡುತ್ತವೆ. ಎಲ್ಲಿಯವರೆಗೆ ಆತ್ಮಕ್ಕೆ ಇಂಥ ಅಜ್ಞಾನದ ಸಂಸ್ಪರ್ಶವಿರುವುದೋ ಅಲ್ಲಿಯವರೆಗೆ ಹುಟ್ಟು-ಸಾವುಗಳು ತಪ್ಪಿದ್ದಲ್ಲ.

13.ಶಾಸ್ತ್ರಗಳು ಆತ್ಮನನ್ನು ಅಮೃತನೆಂದು ಕರೆಯುತ್ತವೆ. ಬಹುಶಃ ಭಾರತೀಯ ಸಂಸ್ಕೃತಿಯೊಂದನ್ನು ಬಿಟ್ಟು ಮತ್ತೆ ಬೇರಾವ ಮತಗಳಲ್ಲೂ ಆತ್ಮನನ್ನು ನಿತ್ಯವೆಂದು ನೋಡುವುದಿಲ್ಲ. ಆತ್ಮನನ್ನು ಆನಂದರೂಪಿಯೆಂದು ಉಪನಿಷತ್ತುಗಳು ತಿಳಿಸುತ್ತವೆ. ಹಾಗಾಗಿ ನಾವೆಲ್ಲ ಅಮೃತಸ್ವರೂಪಿಗಳು ಅಷ್ಟೇ ಅಲ್ಲ, ನಿತ್ಯಮುಕ್ತರು. ಇಂಥ ಭಾವನೆ ದೃಢವಾದಾಗ ಈ ಶರೀರದ ತ್ಯಾಗದ ಬಗೆಗಿನ ಭಯ ಸ್ವಲ್ಪ ಕಡಿಮೆಯಾಗುವುದರ ಜೊತೆಗೆ. ಈ ಜನ್ಮವನ್ನು ಕೇವಲ ಭೋಗಸಾಧನೆಯ ಬದಲು ಆಧ್ಯಾತ್ಮಸಾಧನೆಯ ಹಾದಿಗೆ ತಿರುಗಿಸಿಕೊಳ್ಳಬೇಕೆಂಬ ಪ್ರಜ್ಞೆ ಉದಯಿಸುತ್ತದೆ.

14. ಮರಣದ ಕ್ಷಣದಲ್ಲಿ ಜೀವನಿಗೆ ಯಾವ ರೀತಿಯ ಮನೋವೃತ್ತಿಗಳು ಹುಟ್ಟುತ್ತವೋ ಅಂಥ ಜನ್ಮವನ್ನೇ ಆತ ಮುಂದೆ ಪಡೆಯುತ್ತಾನೆ. ಹಾಗಾಗಿ ಮರಣದ ಸಮಯದಲ್ಲಿ ಶುಭವೃತ್ತಿಗಳು ಹುಟ್ಟುವಂತೆ ಇಡೀ ಜೀವನವನ್ನು ಆತ ಕಳೆಯಬೇಕು. ಸಾವಿನ ಸಮಯದಲ್ಲಿ ಮರ್ಮಚ್ಛೇದವಾಗುವ ಹಂತದಲ್ಲಿಯೂ ಭಗವಂತನ ಸ್ಮರಣೆ ಬರಬೇಕೆಂದರೆ ಜೀವನವಿಡೀ ಅನನ್ಯಭಕ್ತಿಯಿಂದ ಆತನನ್ನು ಭಜಿಸಬೇಕೆಂದರ್ಥ. ಒಟ್ಟಿನಲ್ಲಿ ಧರ್ಮಮಾರ್ಗದಲ್ಲಿ ಜೀವನವನ್ನು ಜೀವಿಸುತ್ತಾ, ಸಚ್ಚಿಂತನೆಯನ್ನೇ ಜೀವನವಿಡೀ ನಡೆಸಕೊಂಡು ಹೋಗಬೇಕೆಂಬುದು ತಾತ್ಪರ್ಯ. ಅನ್ಯಥಾ ಯಾವುದೋ ಹೀನಯೋನಿಯಲ್ಲಿ ಜನ್ಮವನ್ನು ಪಡೆದುಕೊಳ್ಳಬೇಕಾಗುತ್ತದೆ.

15. ನಮ್ಮ ಇವತ್ತಿನ ಸ್ಥಿತಿಗೆ ನಮ್ಮ ಕರ್ಮಗಳೇ ಕಾರಣ. ಹಾಗೆಂದಮಾತ್ರಕ್ಕೆ ಎಲ್ಲವೂ ಹಣೆಬರಹ ಎಂದರ್ಥವಲ್ಲ. ಈಗ ನಾವು ಅನುಭವಿಸುತ್ತಿರುವ ಸುಖ-ದುಃಖಗಳಿಗೆ ಕರ್ಮ ಕಾರಣ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಹೊಸದಾದ ಕರ್ಮವನ್ನು ಕೂಡ ಮಾಡುತ್ತಿರುತ್ತೇವೆ. ಅದು ನಮ್ಮ ಕೈಯ್ಯಲ್ಲೇ ಇದೆ. ಪ್ರಯತ್ನಪೂರ್ವಕವಾಗಿ ನಾವು ಒಳ್ಳೆಯ ಕರ್ಮವನ್ನು ಆಚರಿಸುವ ಮೂಲಕ ನಮ್ಮ ಅಂತಃಕರಣದಲ್ಲಿರುವ ವಾಸನೆಗಳನ್ನು ಹಾಗೂ ನಮ್ಮ ಸಂಚಿತಕರ್ಮಗಳನ್ನು ಬದಲಾಯಿಸಿಕೊಳ್ಳಲು ಸಾಧ್ಯವಿದೆ. ಅದನ್ನು ಪುರುಷಪ್ರಯತ್ನ ಎನ್ನಲಾಗುತ್ತದೆ. ನಮ್ಮಲ್ಲಿ ಪುರುಷಪ್ರಯತ್ನಕ್ಕೆ ಹೆಚ್ಚಿನ ಮಹತ್ತ್ವವನ್ನು ಕೊಡಲಾಗಿದೆ. ಆದರೆ ಅದು ದೀರ್ಘವಾದ ಹಾಗೂ ನಿರಂತರವಾದ ಅಭ್ಯಾಸಮಾತ್ರದಿಂದಲೇ ಸಾಧ್ಯ.

ಹೀಗೆ ನಲವತ್ತಕ್ಕೂ ಹೆಚ್ಚು ಅಂಕಣಗಳಲ್ಲಿ ಪ್ರಸಾರವಾದ ಈ ಹುಟ್ಟು-ಸಾವಿನ ಪ್ರಕ್ರಿಯೆಗೆ ಸಂಬಂಧಿಸಿದ ಸರಣಿಯು ಇಲ್ಲಿಗೆ ಪೂರ್ಣಗೊಳ್ಳುತ್ತದೆ.

ಎಂದೆಂದಿಗೂ ಸುಖವೆಂಬುದು ಮರೀಚಿಕೆ

ಅಜ್ಞಾನವಲಿತೋ ಬಾಲ್ಯೇ ಮನಮೂಢಶ್ಚ ಯೌವನೇ ।
ವಾರ್ಧಕೇ ವಿಶ್ವಲಾಂಗಶ್ಚ ಕದಾ ಕುಶಲಭಾಕ್ ಜನಃ ॥ - ಮಹಾಸುಭಾಷಿತ ಸಂಗ್ರಹ

ಶ್ಲೋಕ ಸಾಗರ



• ಡಾ.ಸೋಂದಾ ಭಾಸ್ಕರ ಭಟ್

ಬಾಲ್ಯದಲ್ಲಿ ಅಜ್ಞಾನ ತುಂಬಿರುತ್ತದೆ. ಯೌವನ ಅಹಂಕಾರ ಮೌಢ್ಯಗಳಿಂದ ಕೂಡಿರುತ್ತದೆ. ಮುದಿತನದಲ್ಲಿ ನಿಶ್ಶಕ್ತವಾದ ಶರೀರವುಳ್ಳವನು ಆಗಿರುತ್ತಾನೆ. ಮನುಷ್ಯನು ತನ್ನ ಜೀವಮಾನದಲ್ಲಿ ಎಂದೆಂದೂ ಸುಖಿಯಾಗಿ ಇರುತ್ತಾನೆಂದು ಹೇಳಲಾಗುವುದಿಲ್ಲ - ಎಂಬುದು ಶ್ಲೋಕಾರ್ಥ.

ಯಾರೂ ಪೂರ್ಣ ಸುಖಿಗಳು ಎನ್ನುವಂತಿಲ್ಲ. ಸುಖದುಃಖಗಳು ಯಾರನ್ನೂ ಬಿಟ್ಟಿಲ್ಲ. ಬಿಡುವುದೂ ಇಲ್ಲ. ಏಕೆಂದರೆ 'ಸುಖಮಧ್ಯೇ ಸ್ಥಿತಂ ದುಃಖಂ, ದುಃಖ ಮಧ್ಯೇ ಸ್ಥಿತಂ ಸುಖಮ್' ಸುಖದ ಮಧ್ಯದಲ್ಲಿ ದುಃಖವಿದೆ ದುಃಖದ ಮಧ್ಯೆ ಸುಖವಿದೆ ಎಂಬುದು ಇದರ ಅರ್ಥ. ಸುಖವನ್ನು ಕಳೆದುಕೊಂಡರೆ ದುಃಖ ಬರುತ್ತದೆ. ದುಃಖವನ್ನು ತೊಡೆದು ಹಾಕಿದರೆ ಸುಖ ಸಿಗುತ್ತದೆ. ಒಟ್ಟಿನಲ್ಲಿ ಜೀವಮಾನದಲ್ಲಿ ಎಂದೆಂದಿಗೂ ಸುಖವಿರುತ್ತದೆ ಎನ್ನುವಂತಿಲ್ಲ. ಒಟ್ಟಿನಲ್ಲಿ ಸುಖ ದುಃಖಗಳ ವಿಶೇಷತೆಯೇ ಇದು

'ಸುಖಸ್ಯ ದುಃಖಸ್ಯ ನ ಕೋಽಪಿ ದಾತಾ' ಸುಖ-ದುಃಖಗಳನ್ನು ಕೊಡುವವರು ಯಾರೂ ಇಲ್ಲ. ಇನ್ನೊಬ್ಬರಿಂದ ಸುಖ-ದುಃಖ ಉಂಟಾಗಿವೆ ಎಂಬುದು ಅವಿವೇಕದ ಮಾತು. ನಾವು ಮಾಡಿದ ಪುಣ್ಯ ಪಾಪಕಾರ್ಯಗಳ ಪರಿಣಾಮರೂಪವಾಗಿ ಅನುಭವಿಸಲೇಬೇಕು. ನಿರಂತರ ಸುಖ ಬೇಕೆಂದು ಬಯಸುವುದಾದರೆ ಮಾನಸಿಕವಾಗಿ ಪೂರಕವಾಗಿ ನಡೆದುಕೊಳ್ಳಬೇಕು. ಸುಖದ ಮೂಲವೇ ಧರ್ಮವಾದುದರಿಂದ ಧರ್ಮಮಾರ್ಗವನ್ನು ಅನುಸರಿಸಬೇಕು. ಇದನ್ನೇ 'ಸುಖಸ್ಯ ಮೂಲಂ ಧರ್ಮಃ' ಎಂಬ ಸೂಕ್ತಿ ತಿಳಿಸಿದೆ.

ಪ್ರಸ್ತುತ ಶ್ಲೋಕದಲ್ಲಿ ಕವಿಯು ಮನುಷ್ಯನು ಎಂದೆಂದೂ ಸುಖವಾಗಿರುತ್ತಾನೆ ಎನ್ನುವಂತಿಲ್ಲ ಎಂಬ ಹೇಳಿಕೆಯನ್ನು ನೀಡಿ ಪೂರಕ ಸನ್ನಿವೇಶದೊಂದಿಗೆ ಸಮರ್ಥಿಸುತ್ತಾನೆ. ಬಾಲ್ಯದಲ್ಲಿ ಸುಖ-ದುಃಖಗಳ ಕಲ್ಪನೆಯೇ ಇರುವುದಿಲ್ಲ. ಬಾಲ್ಯದಲ್ಲಿ ಅಜ್ಞಾನವೇ ತುಂಬಿರುವುದರಿಂದ ಇದು ಸಹಜ. ಒಂದು ದೃಷ್ಟಿಯಲ್ಲಿ ನೋಡಿದರೆ ಬಾಲ್ಯವೇ ಸುಖವೆನ್ನಬಹುದು. ಯಾವ ಅರಿವೂ ಇಲ್ಲದಿರುವುದರಿಂದ, ಮುಗ್ಧ ಸ್ವಭಾವ ಅವರದಾದು ದರಿಂದ ದುಃಖದ ಕಲ್ಪನೆಯೇ ಬರದು. ಬಾಲಭಾವ ಅವರದ್ದಾದುದರಿಂದ ಸುಖ ದುಃಖಗಳ ಕಲ್ಪನೆ ಇರುವುದಿಲ್ಲ. ಮತ್ತು ಅವು ಅವರನ್ನು ಬಾಧಿಸುವುದಿಲ್ಲ.

ಯೌವನಾವಸ್ಥೆಯಲ್ಲೂ ಸುಖವಿಲ್ಲ. ಸುಖಮಯ ಜೀವನದ ಕಲ್ಪನೆಯನ್ನು ಕಟ್ಟಿಕೊಳ್ಳಬೇಕಾದ ಕಾಲಘಟ್ಟದಲ್ಲಿ ಮೌಢ್ಯವೇ ತುಂಬಿರುತ್ತದೆ. ಹುಚ್ಚು ಕಲ್ಪನೆಯಲ್ಲಿ ಎಟುಕದ ವಿಷಯದಲ್ಲಿ ಮನಸ್ಸು ಸಾಗುವುದರಿಂದ ಸುಖದ ಕಾಲವೇ ಕಳೆದುಹೋಗುತ್ತವೆ. ಜೀವನಪೂರ್ತಿ ಒದ್ದಾಡಿ ಬದುಕುವ ಸ್ಥಿತಿ ಎದುರಾದರೆ ಸುಖ ಎಲ್ಲಿಂದ ಸಿಗುತ್ತದೆ?

ಇನ್ನು ವಯಸ್ಸಾದ ಮೇಲೆ ಸುಖವೆಂಬುದು ಮರೀಚಿಕೆ. ಅಪಾರ ಅನುಭವವಿರಬಹುದು, ಗಳಿಕೆಯೂ ಸಾಕಷ್ಟಿರಬಹುದು. ಬಯಸಿದ್ದನ್ನು ತಿನ್ನುವ, ಎಣಿಸಿದ್ದನ್ನು ಮಾಡುವ ಶಕ್ತಿಯೇ ಉಡುಗಿ ಹೋಗುತ್ತದೆ. 'ಹಲ್ಲಿರುವಾಗ ಕಡ್ಲೆಯಿಲ್ಲ, ಕಡ್ಲೆಯಿರುವಾಗ ಹಲ್ಲಿಲ್ಲ' ಎನ್ನುವ ಸ್ಥಿತಿ. ಜರ್ಜರಿತವಾದ ದೇಹ, ಆವರಿಸಿದ ರೋಗ, ಜೀರ್ಣಶಕ್ತಿಯ ಅಭಾವ ಸುಖದಿಂದ ವಂಚಿತರನ್ನಾಗಿ ಮಾಡುತ್ತದೆ.

ಒಟ್ಟಿನಲ್ಲಿ ಜೀವನಪೂರ್ತಿ ಸುಖಿಯಾಗಿರುವ ಭರವಸೆಯಿಲ್ಲ. ಸುಖ ನಮ್ಮಲ್ಲೇ ಇದೆ. ಅದನ್ನು ಕಂಡುಕೊಳ್ಳುವ ಪ್ರಯತ್ನ ಮಾಡಬೇಕು. ಇದನ್ನು ಸಾಧಿಸಿದರೆ ಮಾತ್ರ ಮಾನವ ಸುಖಿಯಾಗಿರುತ್ತಾನೆ.

ಸುದೀರ್ಘಾವಧಿಯ ಪ್ರಧಾನಿಗೆ ಸೈನಿಕನೊಬ್ಬನ ಸೆಲ್ಯೂಟ್!

• ಕ್ಯಾಪ್ಟನ್ ಬ್ರಿಜೇಶ್ ಚೌಟ

ಅದು 2013. ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿದ ನಂತರ ನಾನು ಊರಿಗೆ ಮರಳಿದ್ದೆ. ನನ್ನ ಪೀಳಿಗೆಯ ಅನೇಕ ಯುವಕರಂತೆ, ನಾನೂ ಜೀವನದ ಮಹತ್ವದ ತಿರುವಿನಲ್ಲಿದ್ದೆ. ರಾಷ್ಟ್ರ ಸೇವೆ ಮುಂದುವರಿಸಬೇಕೆಂಬ ದೃಢ ಸಂಕಲ್ಪ ನನ್ನಲ್ಲಿದ್ದರೂ, ಕಂಡುಕೊಳ್ಳಬೇಕಾದ ಹಾದಿಯ ಶೋಧನೆಯಲ್ಲಿದ್ದೆ. ಆಗ ದೇಶವೂ ಒಂದು ಮಹತ್ವದ ತಿರುವಿನಲ್ಲಿತ್ತು.

ಭಾರತಕ್ಕೆ ಇನ್ನೂ ಹೆಚ್ಚಿನ ಸಾಧನೆ ಮಾಡುವ ಸಾಮರ್ಥ್ಯವಿದೆ ಎಂಬ ಭಾವನೆ ಜನರಲ್ಲಿ ಗಟ್ಟಿಯಾಗುತ್ತಿತ್ತು ಮತ್ತು ಹಳ್ಳಿ, ಪಟ್ಟಣ, ನಗರಗಳ ಜನರಲ್ಲಿ ಹೊಸ ಚೈತನ್ಯ ರೂಪುಗೊಳ್ಳತೊಡಗಿತ್ತು. ಜನ ತಮ್ಮ ಆಶಯ, ಆತ್ಮವಿಶ್ವಾಸ ಮತ್ತು ಭವಿಷ್ಯದ ನಾಯಕತ್ವದ ಬಗ್ಗೆ ಚರ್ಚಿಸುತ್ತಿದ್ದರು. ಆಗ ಜನ-ಸಂವಾದದ ಕೇಂದ್ರಬಿಂದುವಾಗಿದ್ದವರು ಗುಜರಾತಿನ ಆಗಿನ ಮುಖ್ಯಮಂತ್ರಿ ನರೇಂದ್ರ ಮೋದಿ ಅವರು. ಬಲಿಷ್ಠ ಭಾರತವನ್ನು ಕಾಣಲು ಬಯಸಿದ್ದ ಕೋಟ್ಯಂತರ ಭಾರತೀಯರ ಮನಸ್ಸನ್ನು ಅವರು ಅದಾಗಲೇ ತಲುಪಿದ್ದರು.

2013ರ ಜೂನ್ ತಿಂಗಳಲ್ಲಿ, ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಯುವ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜವಾಬ್ದಾರಿ ನನ್ನ ಹೆಗಲೇರಿತು. ನಾನು ಧರಿಸುವ ಸಮವಸ್ತ್ರ ಬದಲಾಗಿದ್ದರೂ, ರಾಷ್ಟ್ರ ಮೊದಲು ಎಂಬ ಧ್ಯೇಯ ಮಾತ್ರ ಬದಲಾಗಿರಲಿಲ್ಲ. ನಾವಂದು ಕೇವಲ ರಾಜಕೀಯ ಪಕ್ಷದ ಪ್ರಚಾರ ಮಾಡಿರಲಿಲ್ಲ; ಮಹಾನ್ ಕಲ್ಪನೆಯ ಪರ ಪ್ರಚಾರ ಮಾಡಿದ್ದೆವು. ಭಾರತ ಇನ್ನಷ್ಟು ಬಲಿಷ್ಠವಾಗಬಹುದು, ಆತ್ಮವಿಶ್ವಾಸದಿಂದ ಕೂಡಿರಬಹುದು, ಮತ್ತಷ್ಟು ಸ್ವಾವಲಂಬಿಯಾಗಬಹುದು ಮತ್ತು ಜಾಗತಿಕ ಮಟ್ಟದಲ್ಲಿ ತನ್ನ ಗೌರವ-ಘನತೆ ಹೆಚ್ಚಿಸಿಕೊಳ್ಳಬಹುದು ಎಂಬ ಕಲ್ಪನೆಯ ಸಾಕಾರಕ್ಕಾಗಿ ಧ್ವನಿ ಎತ್ತಿದ್ದೆವು.

ಅದಾಗಿ ದಶಕದ ಬಳಿಕ (2024) ಲಕ್ಷಾಂತರ ಯುವ ಭಾರತೀಯರಲ್ಲಿ ದೊಡ್ಡ ಕನಸು ಕಾಣುವಂತೆ ಪ್ರೇರೇಪಿಸಿದ ಅದೇ ನಾಯಕನ ನೇತೃತ್ವದ ತಂಡದಲ್ಲಿ ಸಂಸತ್ ಸದಸ್ಯನಾಗಿ ಪ್ರಮಾಣವಚನ ಸ್ವೀಕರಿಸುವ ಸೌಭಾಗ್ಯ ನನಗೆ ದೊರೆಯಿತು. ನರೇಂದ್ರ ಮೋದಿ ಅವರು ಭಾರತದಲ್ಲಿ ಅತಿ ದೀರ್ಘಾವಧಿಗೆ ಸೇವೆ ಸಲ್ಲಿಸಿದ ಪ್ರಧಾನಮಂತ್ರಿಯಾಗಿರುವ ಈ ಸಂದರ್ಭದಲ್ಲಿ, ಕೇವಲ ರಾಷ್ಟ್ರದ ಪರಿವರ್ತನೆಯನ್ನಷ್ಟೇ ಅಲ್ಲ, ಈ ಅವಧಿಯು ನನ್ನಂತಹ ಸಾಮಾನ್ಯ ಭಾರತೀಯರಿಗೆ ಸೃಷ್ಟಿಸಿರುವ ಅಸಾಧಾರಣ ಅವಕಾಶಗಳನ್ನೂ ನೆನಪಿಸಿಕೊಳ್ಳುತ್ತಿದ್ದೇನೆ.

ಭಾರತದ ಸ್ಥಾನಮಾನದ ಚಿತ್ರಣ

ಕಳೆದೆರಡು ವರ್ಷಗಳು ಜಾಗತಿಕ ಇತಿಹಾಸದಲ್ಲೇ ಅತ್ಯಂತ ಸವಾಲಿನ ವರ್ಷಗಳು. ಭೌಗೋಳಿಕ-ರಾಜಕೀಯ ಸಂಘರ್ಷ, ಇಂಧನ ಭದ್ರತೆಯ ಕುರಿತ ಆತಂಕ, ಆರ್ಥಿಕ ಅನಿಶ್ಚಿತತೆ ಮತ್ತು ಭಯೋತ್ಪಾದನೆಯ ಬೆದರಿಕೆಗಳ ಮುಂದುವರಿಕೆ...ಹೀಗೆ ಇವುಗಳ ವಿರುದ್ಧ ಜಗತ್ತು ಈಗಲೂ ಹೋರಾಡುತ್ತಿದೆ. ಸಂಸತ್ ಸದಸ್ಯನಾಗಿ ನಾನು ಇಂಧನ ಮತ್ತು ರಕ್ಷಣಾ ಕ್ಷೇತ್ರಗಳಿಗೆ ಸಂಬಂಧಿಸಿದ ಚರ್ಚೆಗಳಲ್ಲಿ ಪಾಲ್ಗೊಂಡದ್ದರಿಂದ ಈ ಕ್ಷೇತ್ರದ ಬೆಳವಣಿಗೆಗಳನ್ನು ಸಮೀಪದಿಂದ ಗಮನಿಸಿದ್ದೇನೆ. ಆದರೂ, ಸಂಸದನಾಗಿ ಮೊದಲ ಅವಧಿಯಲ್ಲೇ ನನಗೆ ನೀಡಲಾದ ಎರಡು ಅಂತಾರಾಷ್ಟ್ರೀಯ ಜವಾಬ್ದಾರಿಗಳು ಜಾಗತಿಕವಾಗಿ ಭಾರತದ ಸ್ಥಾನಮಾನದ ಬಗ್ಗೆ ನನ್ನಲ್ಲಿ ಆಳವಾದ ಅರಿವು ಮೂಡಿಸಿದವು ಎಂದು ಖುಷಿಯಿಂದ ಹೇಳುತ್ತೇನೆ. ಪಾಕ್ ವಿರುದ್ಧ ಆಪರೇಷನ್ ಸಿಂದೂರ್ ಕಾರ್ಯಾಚರಣೆ ನಂತರ 2025ರ ಮೇ ತಿಂಗಳಲ್ಲಿ, ಭಯೋತ್ಪಾದನೆ ವಿರುದ್ಧದ ಭಾರತದ ಶೂನ್ಯ ಸಹಿಷ್ಣುತೆಯ ಸಂದೇಶವನ್ನು ವಿಶ್ವಕ್ಕೆ ತಲುಪಿಸುವ ಜವಾಬ್ದಾರಿ ಹೊಂದಿದ್ದ ಸಂಸತ್ತಿನ ಸರ್ವಪಕ್ಷಗಳ ನಿಯೋಗದ ಸದಸ್ಯನಾಗಿ ನನ್ನನ್ನು ಕೂಡ ಆಯ್ಕೆ ಮಾಡಲಾಗಿತ್ತು. ಈ ನಿಯೋಗ ಮಾಸ್ಕೋ, ಮ್ಯಾಡ್ರಿಡ್, ಅಥೆನ್ಸ್, ಲ್ಯೂಬ್ಲಿಯಾನಾ ಮತ್ತು ಲಾಟ್ವಿಯಾ ದೇಶದ ರೀಗಾ ನಗರಗಳಿಗೆ ತೆರಳಿತ್ತು. ಓರ್ವ ಸೈನಿಕನಾಗಿ ನೋಡಿದರೆ, ಈ ಜವಾಬ್ದಾರಿ ನನ್ನ ಹೃದಯಕ್ಕೆ ಹತ್ತಿರವಾಗಿತ್ತು. ದಶಕಗಳಿಂದ ಭಾರತ ಎದುರಿಸುತ್ತಿದ್ದ ಉಗ್ರವಾದದ ವಾಸ್ತವಿಕತೆಯನ್ನು ನಾವು ಜಗತ್ತಿಗೆ ವಿವರಿಸಬೇಕಿತ್ತು. ವಿದೇಶಗಳಲ್ಲಿ ನಡೆದ



ನಮ್ಮ ಸಂವಾದಗಳ ಸಂದರ್ಭದಲ್ಲಿ, ನಾನು ಒಂದು ವಿಭಿನ್ನ ವಾಸ್ತವಿಕತೆಗೆ ಸಾಕ್ಷಿಯಾಗಿದ್ದೆ. ಭಾರತದ ಧ್ವನಿಗೆ ಜಾಗತಿಕ ಮಟ್ಟದಲ್ಲಿ ಮಹತ್ವವಿತ್ತು ಮತ್ತು ಭಯೋತ್ಪಾದನೆ ವಿರುದ್ಧದ ನಮ್ಮ ಶೂನ್ಯ ಸಹಿಷ್ಣುತೆಯ ನಿಲುವಿಗೆ ಬೆಂಬಲ-ಮಾನ್ಯತೆ ದೊರೆಯುತ್ತಿತ್ತು. ಎಲ್ಲಕ್ಕಿಂತ ಮುಖ್ಯವಾಗಿ, ಸರ್ವಪಕ್ಷಗಳ ನಿಯೋಗದ ಮೂಲಕ ಭಾರತ ತನ್ನ ಶಕ್ತಿಯನ್ನು ಮತ್ತೊಮ್ಮೆ ಜಗತ್ತಿನ ಮುಂದೆ ಪ್ರದರ್ಶಿಸಿತ್ತು. ಭಾರತದ ಪ್ರಜಾಪ್ರಭುತ್ವದ ಚೌಕಟ್ಟಿನೊಳಗೆ ಭಿನ್ನಾಭಿಪ್ರಾಯಗಳಿರಬಹುದು. ಆದರೆ ಭಯೋತ್ಪಾದನೆ, ರಾಷ್ಟ್ರೀಯ ಭದ್ರತೆ ಮತ್ತು ನಾಗರಿಕರ ರಕ್ಷಣೆಯ ವಿಚಾರ ಬಂದಾಗ, ಭಾರತ ಒಂದೇ ಧ್ವನಿಯಲ್ಲಿ ಮಾತನಾಡುತ್ತದೆ ಎಂಬ ಸ್ಪಷ್ಟ ಸಂದೇಶ ರವಾನಿಸಿದ್ದೆವು. ವೈಯಕ್ತಿಕವಾಗಿ ಈ ಜವಾಬ್ದಾರಿ ನನಗೆ ಇನ್ನಷ್ಟು ವಿಶೇಷವಾಗಿತ್ತು. ಏಕೆಂದರೆ ಯೋಧನಾಗಿದ್ದಾಗಿನ ನನ್ನ ಆರಂಭಿಕ ದಿನಗಳನ್ನು ಅದು ನೆನಪಿಸಿತ್ತು. ಭಾರತೀಯ ಸೇನೆಯ 8 ಗೋರ್ಖಾ ರೈಫಲ್ಸ್‌ನಲ್ಲಿ ನಾನು ಯುವ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಎರಡನೇ ವರ್ಷದಲ್ಲೇ ಮಣಿಪುರದಲ್ಲಿ ನಡೆದ ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಗಳ ವೇಳೆ ಕಮಾಂಡಿಂಗ್ ಆಫೀಸರ್ ಅವರು ಘಾತಕ್ ಪ್ಲಾಟೂನ್ ಟ್ರೂಪ್ ನಾಯಕತ್ವದ ಜವಾಬ್ದಾರಿಯನ್ನು ನನ್ನ ಹೆಗಲಿಗೇರಿಸಿದ್ದರು. ಅದೇ ರೀತಿ, ಮೊದಲ ಬಾರಿಗೆ ಸಂಸದನಾಗಿದ್ದ ನನ್ನನ್ನು ಪ್ರಧಾನಿ ಮೋದಿ ಅವರು ಈ ಸರ್ವಪಕ್ಷ ನಿಯೋಗದ ಸದಸ್ಯನಾಗಿ ಆಯ್ಕೆ ಮಾಡಿದಾಗ, ಅದೇ ನಂಬಿಕೆ ಮತ್ತು ಜವಾಬ್ದಾರಿಯ ಭಾವನೆ ನನ್ನಲ್ಲಿ ಮತ್ತೆ ಮೂಡಿತ್ತು.

ಬದಲಾಯಿತು ನೋಡುವ ಬಗೆ

ಕೆಲ ತಿಂಗಳುಗಳ ಬಳಿಕ ನನ್ನ ಮುಂದೆ ಎರಡನೇ ಅಂತಾರಾಷ್ಟ್ರೀಯ ಜವಾಬ್ದಾರಿಯಿತ್ತು. 2025ರ ಅಕ್ಟೋಬರ್‌ನಲ್ಲಿ ವಿಶ್ವಸಂಸ್ಥೆಯ 80ನೇ ಸಾಮಾನ್ಯ ಸಭೆಯಲ್ಲಿ ಭಾರತದ ಸಂಸದೀಯ ನಿಯೋಗ ಪಾಲ್ಗೊಂಡಿತ್ತು. ಈ ನಿಯೋಗದ ಸದಸ್ಯನಾಗಿ ನಾನೂ ನ್ಯೂಯಾರ್ಕ್‌ಗೆ ತೆರಳಿ ಸಭೆಯಲ್ಲಿ ಭಾಗವಹಿಸಿದ್ದೆ. ಭಾರತದ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಪ್ರತಿನಿಧಿಸಲು, ವಿವಿಧ ದೇಶಗಳ ಜನಪ್ರತಿನಿಧಿಗಳು ಮತ್ತು ನೀತಿ ನಿರೂಪಕರೊಂದಿಗೆ ಸಂವಾದ ನಡೆಸಲು, ರಾಜತಾಂತ್ರಿಕ ಸಂಬಂಧಗಳನ್ನು ಬಲಪಡಿಸಲು ಹಾಗೂ ದೇಶದ ಧ್ವನಿಯನ್ನು ವಿಶ್ವಸಂಸ್ಥೆಯ ಮುಂದಿಡಲು ಈ ನಿಯೋಗ ರಚಿಸಲಾಗಿತ್ತು. 2014ರ ನಂತರವಷ್ಟೇ ಮೊದಲ ವಿದೇಶ ಪ್ರವಾಸ ಮಾಡಿದ್ದ ನನ್ನಲ್ಲಿ ಈ ಪ್ರವಾಸ ಆಳವಾದ ಪ್ರಭಾವ ಬೀರಿತು. ಅಲ್ಲಿನ ಚರ್ಚೆ-ಭಾಷಣಗಳು ಕಳೆದೊಂದು ದಶಕದಲ್ಲಿ ಲಕ್ಷಾಂತರ ಭಾರತೀಯರಲ್ಲಿ ಮೂಡಿದ್ದ ಸಾಧ್ಯತೆಗಳ ವಿಶ್ವಾಸದ ಪ್ರತಿಬಿಂಬವಾಗಿದ್ದವು. ಜಗತ್ತು ಭಾರತವನ್ನು ನೋಡುವ ಮತ್ತು ಚರ್ಚಿಸುವ ವಿಧಾನ ನನ್ನನ್ನು ಬಹುವಾಗಿ ಆಕರ್ಷಿಸಿತ್ತು. ನಾವು ಅಲ್ಲಿ ಭೇಟಿ ಮಾಡುತ್ತಿದ್ದ ಅನಿವಾಸಿ ಭಾರತೀಯರೆಲ್ಲರೂ ಭಾರತದ ನಾಯಕತ್ವ ಹಾಗೂ ಜಾಗತಿಕ ಸ್ಥಾನಮಾನದ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಉದ್ಯಮಿಗಳು, ವಿದ್ಯಾರ್ಥಿಗಳು, ವೃತ್ತಿಪರರು, ವೈದ್ಯರು, ಇಂಜಿನಿಯರ್‌ಗಳು ಹಾಗೂ ವಿವಿಧ ಸಮುದಾಯದ ನಾಯಕರು ಕೂಡ ವಿಶ್ವದಲ್ಲಿ ಭಾರತದ ಹೆಚ್ಚುತ್ತಿರುವ ಪ್ರಭಾವವನ್ನು ಮರೆಯದೆ ಉಲ್ಲೇಖಿಸುತ್ತಿದ್ದರು.

ನಮ್ಮ ಯೋಜನೆಗೆ ಸ್ಫೂರ್ತಿ

ಭಾರತವನ್ನು ಪರಿವರ್ತಿಸುವ ಮೊದಲು ಪ್ರಧಾನಿ ಮೋದಿ ಅವರು ಗುಜರಾತ್‌ನ್ನು ಪರಿವರ್ತಿಸಿದ್ದರು. ತಾಯ್ನೆಲದೊಂದಿಗೆ ಜೋಡಿಸಿಕೊಂಡ ನಾಯಕತ್ವವು ರಾಜ್ಯದಲ್ಲಿ ಏನನ್ನು ಸಾಧಿಸಬಹುದು ಎಂಬುದನ್ನು ಅವರು ತೋರಿಸಿಕೊಟ್ಟರು. ನಮ್ಮ ಆಲೋಚನೆ, ಬದ್ಧತೆಯನ್ನು ನಮ್ಮದೇ ಜನ ಮತ್ತು ಪ್ರದೇಶದ ಅಭಿವೃದ್ಧಿಗೆ ಸಮರ್ಪಿಸುವುದರಿಂದ ಬದಲಾವಣೆ ಸಾಧ್ಯ ಎನ್ನುವುದನ್ನು ಗುಜರಾತ್ ಸಾಬೀತುಪಡಿಸಿತು. ಅದು ನನ್ನ ಚಿಂತನೆಗಳ ಮೇಲೂ ಆಳವಾದ ಪ್ರಭಾವ ಬೀರಿತು.

ಮಂಗಳೂರಿನಲ್ಲಿ ನಾವು ಆರಂಭಿಸಿರುವ ಬ್ಯಾಕ್ ಟು ಊರು (Back-ToOoru) ಯೋಜನೆ ಹಿಂದಿರುವ ಸ್ಫೂರ್ತಿಯೂ ಇದೇ. ಈ ಯೋಜನೆ ಪ್ರತಿಭಾವಂತ ಯುವಕರು ತಮ್ಮ ಊರಿನಲ್ಲಿಯೇ ಅವಕಾಶಗಳನ್ನು ಮರುಶೋಧಿಸಲು ಪ್ರೋತ್ಸಾಹಿಸುತ್ತಿದೆ. ಅದೇ ರೀತಿ ಬೊಲ್ಪು (Bolpu) ಯೋಜನೆಯು ಸ್ಥಳೀಯ ಉದ್ಯಮಶೀಲತೆ ಮತ್ತು ಸಮುದಾಯ ಆಧಾರಿತ ಅಭಿವೃದ್ಧಿಯನ್ನು ಉತ್ತೇಜಿಸುವ ಉದ್ದೇಶ ಹೊಂದಿದೆ. ಈ ಎರಡೂ ಯೋಜನೆಗಳ ಹಿಂದಿನ ನಂಬಿಕೆ ಏನೆಂದರೆ; ನಮ್ಮನ್ನು ರೂಪಿಸಿದ ನೆಲ ಮತ್ತು ಸಮುದಾಯಗಳಿಗೆ ನಾವು ಮರಳಿ ಕೊಡುಗೆ ನೀಡಿದಾಗ ಮಾತ್ರ ಶಾಶ್ವತ ಬದಲಾವಣೆ ಸಾಧ್ಯ ಎನ್ನುವುದು.

ನಾಯಕತ್ವದಿಂದ ಆತ್ಮವಿಶ್ವಾಸ

12 ವರ್ಷಗಳ ಹಿಂದೆ ಪ್ರಧಾನಮಂತ್ರಿಯಾಗಿ ಜವಾಬ್ದಾರಿ ವಹಿಸಿಕೊಂಡಾಗ, ಮೋದಿ ಅವರು ಲಕ್ಷಾಂತರ ಭಾರತೀಯರಿಗೆ ದೊಡ್ಡ ಕನಸು ಕಾಣಲು ಪ್ರೇರಣೆ ನೀಡಿದರು. ಲಕ್ಷಾಂತರ ಜನರು ಆ ಕನಸು ಕಂಡರು. ನನ್ನ ಕಥೆ ಅವುಗಳಲ್ಲಿ ಕೇವಲ ಒಂದಷ್ಟೇ. ಫರಂಗಿಪೇಟೆಯಿಂದ ಸಂಸತ್ತಿನವರೆಗೆ, ಸೇನೆಯಿಂದ ಸಾರ್ವಜನಿಕ ಜೀವನದವರೆಗೆ, ದಕ್ಷಿಣ ಕನ್ನಡವನ್ನು ಪ್ರತಿನಿಧಿಸುವುದರಿಂದ ವಿದೇಶಗಳಲ್ಲಿ ಭಾರತವನ್ನು ಪ್ರತಿನಿಧಿಸುವವರೆಗೆ ಸಾಗಿದ ನನ್ನ ಪಯಣದತ್ತ ದೃಷ್ಟಿ ಹಾಯಿಸಿದಾಗ, ಸಾಮಾನ್ಯ ನಾಗರಿಕರಲ್ಲಿ ಹಾಗೂ ಒಂದು ದೇಶವಾಗಿ ಭಾರತದ ಆತ್ಮವಿಶ್ವಾಸ ದೊಡ್ಡ ಮಟ್ಟಿಗೆ ವೃದ್ಧಿಯಾಗಿದೆ ಎಂಬ ದೃಢ ನಂಬಿಕೆ ನನ್ನಲ್ಲಿ ಮೂಡಿದೆ. ಪ್ರಧಾನಿಯವರ ನಾಯಕತ್ವ ರೂಪಿಸಿದ ಆತ್ಮವಿಶ್ವಾಸ ಈ ದೇಶವನ್ನು ಕಲ್ಪನೆಗೂ ಮೀರಿದ ಮಟ್ಟಿಗೆ ಮುನ್ನಡೆಸಿದೆ. ಆ ಕಾರಣಕ್ಕಾಗಿ ಹಾಗೂ ಭಾರತವನ್ನು ಜಗತ್ತಿಗೆ ಮತ್ತು ನಮಗೆ ಮರುಪರಿಚಯ ಮಾಡಿಕೊಟ್ಟದ್ದಕ್ಕಾಗಿ ಪ್ರಧಾನ ಸೇವಕ ನರೇಂದ್ರ ಮೋದಿ ಅವರಿಗೆ ಓರ್ವ ಸೈನಿಕನಾಗಿ ನನ್ನ ಹೃದಯಪೂರ್ವಕ ಸೆಲ್ಯೂಟ್.

• ಲೇಖಕರು - ಸಂಸದರು, ದಕ್ಷಿಣ ಕನ್ನಡ ಲೋಕಸಭೆ ಕ್ಷೇತ್ರ

ಪತ್ರ ಮಿತ್ರ

ಅರ್ಗಲಾ ಸ್ತೋತ್ರ ವಿಶೇಷ

ತಮಿಳುನಾಡಿನ ಮುಖ್ಯಮಂತ್ರಿ ಜೋಸೆಫ್ ವಿಜಯ್ ಕೊಲ್ಲೂರು ಮೂಕಾಂಬಿಕೆಯ ದರ್ಶನ ಮಾಡಿ 1.6 ಕೆಜಿ ತೂಕದ ಬೆಳ್ಳಿಯ ಖಡ್ಗವನ್ನು ದೇವಿಗೆ ಸಮರ್ಪಿಸಿದರೆಂದು, ಈ ಸಂದರ್ಭದಲ್ಲಿ ಅರ್ಚಕರು ಅರ್ಗಲಾ ಸ್ತೋತ್ರವನ್ನು ಪಠಿಸಿ ಮುಖ್ಯಮಂತ್ರಿಯ ಕೈಗೆ ರಕ್ಷಾ ದಾರವನ್ನು ಕಟ್ಟಿದರೆಂದು ವರದಿಯಾಗಿದೆ. ಅರ್ಗಲವೆಂದರೆ 'ಕಪಾಟ ಬಂಧ ಕಾಷ್ಠ ವಿಶೇಷಃ' ಎಂದು ಅಮರಕೋಶ ತಿಳಿಸುತ್ತದೆ. ಬಾಗಿಲನ್ನು ಬಂಧಿಸುವ ಮರದ ಸಾಧನವೇ ಅರ್ಗಲ. ಕನ್ನಡದಲ್ಲಿ 'ಅಗಳಿ' ಎಂದರ್ಥ.

ದುರ್ಗೆಯ ಅನುಗ್ರಹಕ್ಕಾಗಿ ಸಪ್ತಶತೀ ಪಾರಾಯಣ, ಚಂಡೀ ಹವನಗಳನ್ನು ಮಾಡುವ ಸಂಪ್ರದಾಯ ನಮ್ಮಲ್ಲಿದೆ. ಏಳುನೂರು ಶ್ಲೋಕಗಳ ಹದಿಮೂರು ಅಧ್ಯಾಯಗಳ ಪಾರಾಯಣದ ಮೊದಲು ಕವಚ-ಅರ್ಗಲ-ಕೀಲಕ ಸ್ತೋತ್ರಗಳನ್ನು ಪಠಿಸಬೇಕು.

ಅರ್ಗಲಂ ದುರಿತಂ ಹಂತಿ ಕೀಲಕಂ ಫಲದಂ ತಥಾ।
ಕವಚಂ ರಕ್ಷತೇ ನಿತ್ಯಂ ಚಂಡಿಕಾ ತ್ರಿತಯಂ ದಿಶೇತ್॥
ಅರ್ಗಲಂ ಹೃದಯೇಯಸ್ಯ, ಸ ಚಾನರ್ಗಲವಾಕ್ ಸದಾ।
ಕೀಲಕಂ ಹೃದಯೇ ಯಸ್ಯ ವಶಕೀಲಿತ ಮಾನಸಃ।
ಕವಚಂ ಹೃದಯೇ ಯಸ್ಯ ಸ ವಜ್ರ ಹೃದಯಃ ಖಲು॥

ಅರ್ಗಲ ಪಾರಾಯಣವು ದುರಿತಗಳನ್ನು ದೂರ ಮಾಡುತ್ತದೆ. ಕೀಲಕವು ಸತ್ಫಲಗಳನ್ನು ನೀಡುತ್ತದೆ. ಕವಚವು ಸದಾ ರಕ್ಷಣೆ ಮಾಡುತ್ತದೆ. ಈ ಮೂರನ್ನೂ ತಾಯಿ ದುರ್ಗೆ ಅನುಗ್ರಹಿಸುತ್ತಾಳೆ. ಅರ್ಗಲವನ್ನು ಹೃದಯದಲ್ಲಿ ಧ್ಯಾನಿಸಿದರೆ ನಿರರ್ಗಳ ಮಾತನಾಡುವ ಶಕ್ತಿಯೂ, ಕೀಲಕ ಧ್ಯಾನದಿಂದ ಮನೋ ನಿಗ್ರಹವೂ, ಕವಚ ಧ್ಯಾನದಿಂದ ವಜ್ರ ಹೃದಯವೂ ಸಿದ್ಧಿಸುತ್ತದೆ.

ಅರ್ಗಲಾ ಸ್ತೋತ್ರದಲ್ಲಿ ಇಪ್ಪತ್ತೈದು ಶ್ಲೋಕಗಳಿವೆ. ಇವುಗಳಲ್ಲಿ ಇಪ್ಪತ್ತೊಂದು ಶ್ಲೋಕಗಳ ಉತ್ತರಾರ್ಧದಲ್ಲಿ 'ರೂಪಂ ದೇಹಿ ಜಯಂ ದೇಹಿ ಯಶೋದೇಹಿ ದ್ವಿಷೋ ಜಹಿ' ಎಂಬ ಸ್ತುತಿಯಿದೆ. 'ರೂಪವನ್ನೂ, ಜಯವನ್ನೂ , ಯಶಸ್ಸನ್ನೂ ನೀಡಿ ಶತ್ರುಗಳನ್ನು ನಾಶ ಮಾಡು' ಎಂಬ ಪ್ರಾರ್ಥನೆ ಇದೆ.

ಜೋಸೆಫ್ ವಿಜಯರ ಕೊಲ್ಲೂರು ದರ್ಶನದ ಪರಿಣಾಮವಾಗಿ ಇನ್ನಷ್ಟು ತಮಿಳರು ಅಲ್ಲಿಗೆ ಲಗ್ಗೆ ಇಡಲಿದ್ದಾರೆ. ಹಿಂದೆಲ್ಲ ಎಂಜಿಆರ್ ಸಮರ್ಪಿಸಿದ 'ತಂಗವಾಳ'ನ್ನು ನೋಡಿ ಕೃತಾರ್ಥರಾದ ತಮಿಳರು ಇನ್ನು ಮುಂದೆ 'ಬೆಳ್ಳಿವಾಳ'ನ್ನು ನೋಡಿ ಧನ್ಯರಾಗಲಿದ್ದಾರೆ

-ಎಂ. ಸುಬ್ರಹ್ಮಣ್ಯ ಮುಡಿಪು

ವಿಪರ್ಯಾಸ

ತಮಿಳುನಾಡಿನ ಮುಖ್ಯಮಂತ್ರಿ ವಿಜಯ್ ತಮ್ಮ 'ಮೆರ್ಸಲ್' ಚಿತ್ರದಲ್ಲಿ 'ದೇವಸ್ಥಾನ ಕಟ್ಟಿಸುವುದಕ್ಕಿಂತ... ಆಸ್ಪತ್ರೆ ಕಟ್ಟಿಸಬೇಕು' ಅಂತ ಡೈಲಾಗ್ ಹೊಡೆದಿದ್ದೆ ಹೊಡೆದಿದ್ದು!

ಇದೀಗ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನಕ್ಕೆ ಭೇಟಿ ನೀಡಿ ಭಕ್ತಿಯ ಪರಾಕಾಷ್ಠೆ ತೋರಿ 1 ಕೆಜಿ 600 ಗ್ರಾಂ ತೂಕದ ಬೆಳ್ಳಿ ಖಡ್ಗ ಕೊಟ್ಟಿದ್ದು ಮಾತ್ರ ವಿಪರ್ಯಾಸ!!

- **ಹರಳಹಳ್ಳಿಪುಟ್ಟರಾಜು**, ಪಾಂಡವಪುರ

ಎಷ್ಟು ಖರ್ಚು !

ತಮಿಳ್ನಾಡು ಮುಖ್ಯಮಂತ್ರಿ ವಿಜಯ್ ಕೊಲ್ಲೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರ ಬೆಂಗಾವಲು ವಾಹನಗಳು ಸಾಕಷ್ಟಿದ್ದವು. ಭದ್ರತಾ ವಾಹನಗಳೂ ಬಹಳಷ್ಟಿದ್ದವು. ಇವೆಲ್ಲವೂ ತಮಿಳ್ನಾಡಿನಿಂದಲೇ ಬಂದಿರುವಂತೆ ತೋರುತ್ತಿತ್ತು. ಪೆಟ್ರೋಲ್ ಕಡಿಮೆ ಬಳಸಬೇಕಾದ ಈ ಹೊತ್ತಿನಲ್ಲಿ ಇಷ್ಟೊಂದು ವೆಚ್ಚವೆ?!

-**ಚಿದಂಬರ ರಾವ್**, ಕುಂದಾಪುರ

ಟ್ರಂಪ್‌ಗೆ 'ಲಕ್ಷ್ಮಣ ರೇಖೆ!'

ಕೊನೆಗೂ ಇರಾನ್ ಜತೆಗಿನ ಸಮರ ಕೊನೆಗೊಂಡಿದೆಯೆಂದು ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ದಿನಕ್ಕೆ ನೂರು ಬಾರಿ ವೈರುಧ್ಯದ ಹೇಳಿಕೆಯನ್ನು ನೀಡುವ ಅವರ ಚಾಳಿಯನ್ನು ಕಳೆದ ಕೆಲವು ತಿಂಗಳುಗಳಿಂದ ನಿರಂತರ ಕಂಡವರಿಗೆ ಅವರ ಈ ಯುದ್ಧಾಂತ್ಯದ ಮಾತು ಕೂಡಾ ನಂಬುವುದು ಕಷ್ಟವಾಗುತ್ತಿದೆ. ಒಪ್ಪಂದ ಪೂರ್ಣಗೊಂಡಿದೆಯೆಂದು ಈ ಹಿಂದೆಯೂ ಅವರು ಎಷ್ಟು ಬಾರಿ ಹೇಳಿದ್ದರೆಂದು ನೆನಪಾಗುತ್ತಿಲ್ಲ. ಮತ್ತೆ ಯಾವಾಗ ಅವರು ಇರಾನ್ ಮೇಲೆ ಬಾಂಬು ಸುರಿಸುವರೆಂದೂ ಹೇಳಲಾಗುವುದಿಲ್ಲ. ತಮ್ಮ ಮನಸ್ಸಿಗೆ ತೋಚಿದಾಗಲೆಲ್ಲ ಅವರು ಯುದ್ಧ ಪುನರಾರಂಭಿಸಿಯಾರು.

ಒಂದೊಂದು ಕಾಲದಲ್ಲಿ ಒಬ್ಬೊಬ್ಬರು ಆಡಳಿತಗಾರರು ವಿಶ್ವ ಶಾಂತಿಯನ್ನು ಕಲಕುತ್ತಾರೆ. ಮುಸೋಲಿನಿ, ಬಿಸ್ಮಾರ್ಕ್, ಹಿಟ್ಲರ್, ಸ್ಟಾಲಿನ್ ಮೊದಲಾದವರು ಈ ರೀತಿ ಜಾಗತಿಕ ಶಾಂತಿ ಕದಡಿದವರೆ. ಪ್ರಸ್ತುತ ಕಾಲಮಾನಕ್ಕೆ ಬರುವಾಗ ಡೊನಾಲ್ಡ್ ಟ್ರಂಪ್ ಇದೇ ಗುಂಪಿಗೆ ಸೇರುವವರಂತೆ ಕಾಣುತ್ತಾರೆ. ಪುಟ್ಟ ಪುಟ್ಟ ರಾಷ್ಟ್ರಗಳನ್ನೆಲ್ಲ ಅಮೆರಿಕದ ವಶಕ್ಕೆ ತೆಗೆದುಕೊಳ್ಳುವ ಮಹತ್ವಾಕಾಂಕ್ಷೆಯನ್ನು ಅವರು ಪ್ರದರ್ಶಿಸುತ್ತಿದ್ದಾರೆ. ಇದು ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದ ಸಂಘರ್ಷವೊಂದನ್ನು ಹುಟ್ಟು ಹಾಕಿ ಮೂರನೇ ಜಾಗತಿಕ ಸಮರಕ್ಕೆ ಹೇತುವಾದರೂ ಆಶ್ಚರ್ಯ ಪಡಬೇಕಾಗಿಲ್ಲ.

ಜಗತ್ತಿನ ಎಲ್ಲಾ ದೇಶಗಳ ಮುಖಂಡರನ್ನೂ ಟ್ರಂಪ್ ಎದುರು ಹಾಕಿಕೊಂಡಿದ್ದಾರೆ. ತಮ್ಮ ಮಿತ್ರರೆನಿಸಿಕೊಂಡವರನ್ನೂ ದೂರ ಮಾಡಿಕೊಂಡಿದ್ದಾರೆ. ಇನ್ನೀಗ ಈ ಮುಖಂಡರೆಲ್ಲರೂ ಜತೆಗೂಡಿ ಡೊನಾಲ್ಡ್ ಟ್ರಂಪ್‌ಗೊಂಡು ಲಕ್ಷ್ಮಣ ರೇಖೆ ಎಳೆಯಬೇಕಾಗಿದೆ.

-**ಎನ್.ಗಂಗಾಧರ ಗೌಡ**, ಸುಳ್ಯ

ಅತಂತ್ರ ಭವಿಷ್ಯ

ಸರ್ಕಾರಿ ಆಂಗ್ಲ ಮಾಧ್ಯಮ ಶಾಲೆಗಳ 40,000 ಬಡ ವಿದ್ಯಾರ್ಥಿಗಳ ಭವಿಷ್ಯವನ್ನು ಸರ್ಕಾರ ಅಧ್ವಾನಗೊಳಿಸಿದೆ. 7ನೇ ತರಗತಿಯವರೆಗೆ ಇಂಗ್ಲಿಷ್ ಕಲಿಸಿ ಈಗ 8ನೇ ತರಗತಿಗೆ ವಿಸ್ತರಿಸದೆ ಕೈಬಿಟ್ಟಿರುವುದು ಕಣ್ಣಿಲ್ಲದ ಆಡಳಿತಕ್ಕೆ ಸಾಕ್ಷಿ. ಜೂನ್ ಮುಗಿಯುತ್ತಿದ್ದರೂ ಯಾವುದೇ ಮಾಹಿತಿ ನೀಡದ ಶಿಕ್ಷಣ ಇಲಾಖೆಯ ನಡೆ ವಂಚನಾತ್ಮಕವಾಗಿದೆ.

ಕೆಪಿಎಸ್ ಶಾಲೆಗಳಿಗೆ 3700 ಕೋಟಿ ರೂ. ಸುರಿಯುವ ಸರ್ಕಾರಕ್ಕೆ ಈ 40,000 ಮಕ್ಕಳ ಕಣ್ಣೀರು ಕಾಣುತ್ತಿಲ್ಲವೇ? ಖಾಸಗಿ ಶಾಲೆಗಳ ದುಬಾರಿ ಶುಲ್ಕ ಕಟ್ಟಲಾಗದ ನಿರ್ಗತಿಕ ಪೋಷಕರ ಆಶಯಗಳಿಗೆ ಬೆಂಕಿ ಇಟ್ಟಂತಾಗಿದೆ. ಇದು ಕೇವಲ ನಿರ್ಲಕ್ಷ್ಯವಲ್ಲ ಬಡ ಮಕ್ಕಳ ಭವಿಷ್ಯದ ಕೊಲೆ. ಅಧಿಕಾರಿಗಳ ಮತ್ತು ರಾಜಕಾರಣಿಗಳ ಈ ಕುಂಭಕರ್ಣ ನಿದ್ರೆಯಿಂದಾಗಿ ಸಾವಿರಾರು ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಸರ್ಕಾರವು ಈ ಮಕ್ಕಳ ಅತಂತ್ರ ಸ್ಥಿತಿಯನ್ನು ತಕ್ಷಣ ನಿವಾರಿಸಬೇಕು.

-**ಡಾ. ವಿಜಯಕುಮಾರ್**, ರಾಯಚೂರು

ಘನತ್ಯಾಜ್ಯ ನಿರ್ವಹಣೆ ಕಾರ್ಯಕ್ರಮದಲ್ಲಿ ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಹೇಳಿಕೆ

ನಗರವಾಸಿಗಳ ಜೀವನ ಗುಣಮಟ್ಟ ಸುಧಾರಣೆಗೆ ಆದ್ಯತೆ

ಬೆಂಗಳೂರು: ನಗರದಲ್ಲಿ ವಾಸಿಸುವ 1.5 ಕೋಟಿ ಜನರ ಜೀವನ ಗುಣಮಟ್ಟವನ್ನು ಸುಧಾರಿಸುವುದು ನಮ್ಮ ಮೊದಲ ಆದ್ಯತೆಯಾಗಿದ್ದು, ಆ ನಿಟ್ಟಿನಲ್ಲಿ ಸಮರ್ಪಕವಾಗಿ ಕಾರ್ಯ ನಿರ್ವಹಿಸುವಂತೆ ಎಲ್ಲಾ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿ ಅಧಿಕಾರ ವಹಿಸಿಕೊಂಡ ಬಳಿಕ ನಗರಾಭಿವೃದ್ಧಿ ಅಪರ ಮುಖ್ಯ ಕಾರ್ಯದರ್ಶಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಮುಖ್ಯ ಆಯುಕ್ತರು, ವಿಶೇಷ ಆಯುಕ್ತರು, ಐದು ಪಾಲಿಕೆಗಳ ಆಯುಕ್ತರು, ಮುಖ್ಯ ಅಭಿಯಂತರರು, ಬಿ-ಸ್ಮೈಲ್, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಅಧಿಕಾರಿಗಳ ಸಭೆಯನ್ನು ಜಿಬಿಎ ಸಭಾಂಗಣದಲ್ಲಿ ನಡೆಸಿದರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಬೆಂಗಳೂರು ಬಹಳಷ್ಟು ಸವಾಲುಗಳನ್ನು ಹೊಂದಿರುವ ನಗರವಾಗಿದೆ. ಸುಮಾರು 1.5 ಕೋಟಿ ಜನರಿಗೆ ಆಶ್ರಯ ತಾಣವಾಗಿರುವ ಈ ನಗರವು ಉದ್ಯೋಗ, ಶಿಕ್ಷಣ ಹಾಗೂ ಉತ್ತಮ ಜೀವನಕ್ಕೆ ಅವಕಾಶ ಕಲ್ಪಿಸುತ್ತಿದೆ. ಬೆಂಗಳೂರು ನಮ್ಮ ರಾಜ್ಯ ಹಾಗೂ ದೇಶದ ಅಮೂಲ್ಯ ಆಸ್ತಿಯಾಗಿದ್ದು, ವಿಶ್ವದ ವಿವಿಧ ಭಾಗಗಳ ಜನರು ಹಾಗೂ ಅನೇಕ ಸಂಸ್ಥೆಗಳು ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಹಿನ್ನೆಲೆಯಲ್ಲಿ



ಜಿಬಿಎ ಆಡಳಿತವನ್ನು ಸುಧಾರಣೆ ಮಾಡುವ ಧ್ಯೇಯದೊಂದಿಗೆ ಕಾರ್ಯನಿರ್ವಹಿಸಲಾಗುವುದು ಎಂದು ತಿಳಿಸಿದರು.

ಜನರ ದಿನನಿತ್ಯದ ಸಮಸ್ಯೆಗಳ ಪರಿಹಾರಕ್ಕೆ ಆದ್ಯತೆ: ನಗರದಲ್ಲಿದ್ದ ಅಸ್ಪಷ್ಟ ಖಾತೆ ಸಮಸ್ಯೆಗೆ ಪರಿಹಾರವಾಗಿ ದೇಶದಲ್ಲಿಯೇ ಮೊದಲ ಬಾರಿಗೆ ಅತ್ಯುತ್ತಮ ಮಾದರಿಯ ಇ-ಖಾತಾ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ನಗರದ ದೀರ್ಘಾವಧಿಯ ಅಭಿವೃದ್ಧಿಗೆ ಅಗತ್ಯವಿರುವ ಯೋಜನೆಗಳನ್ನು ಸಮಗ್ರವಾಗಿ ರೂಪಿಸಲಾಗಿದೆ. ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ನಾವು ಕೆಲಸ ಮಾಡುತ್ತೇವೆ. ಇದರ ಜೊತೆಗೆ ಜನರ ದಿನನಿತ್ಯದ ಸಮಸ್ಯೆಗಳ ಪರಿಹಾರಕ್ಕೂ ಹೆಚ್ಚಿನ ಆದ್ಯತೆ ನೀಡಬೇಕಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಜನಸಾಮಾನ್ಯರ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.

360 ಡಿಗ್ರಿ ದೃಷ್ಟಿಕೋನ

ಸಾಮಾಜಿಕ, ಸಾಂಸ್ಕೃತಿಕ, ಕಲಾತ್ಮಕ ಹಾಗೂ ಕ್ರೀಡಾ ಚಟುವಟಿಕೆಗಳನ್ನು ಒಳಗೊಂಡ ಸಮಗ್ರ ಅಭಿವೃದ್ಧಿಯಿಂದ ಮಾತ್ರ ಜೀವನದ ಗುಣಮಟ್ಟ ಸುಧಾರಿಸಲು ಸಾಧ್ಯ. ಈ ನಿಟ್ಟಿನಲ್ಲಿ 360 ಡಿಗ್ರಿ ದೃಷ್ಟಿಕೋನದೊಂದಿಗೆ ಬೆಂಗಳೂರಿನ ಜನರ ಜೀವನ ಗುಣಮಟ್ಟ ಸುಧಾರಣೆಗೆ ಹೆಚ್ಚಿನ ಪ್ರಯತ್ನ ಮಾಡಲಾಗುವುದು. ಇಂಜಿನಿಯರ್ ಸೇರಿದಂತೆ ಕೆಲವು ಕೊರತೆ ಇರಬಹುದು, ಆದರೆ ಇರುವ ವ್ಯವಸ್ಥೆಯನ್ನು ಸರಿಯಾಗಿ ಬಳಸಿಕೊಂಡು ಆಡಳಿತದಲ್ಲಿ ಚುರುಕು ಮುಟ್ಟಿಸಿದರೆ ಅನೇಕ ಸಮಸ್ಯೆಗಳನ್ನು ಬಗೆಹರಿಸಬಹುದು ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

> ಇರುವ ಆಡಳಿತ ವ್ಯವಸ್ಥೆಯನ್ನು ಸಮರ್ಪಕವಾಗಿ ಬಳಸಿಕೊಂಡು ಕಾರ್ಯನಿರ್ವಹಿಸಿದರೆ ಹಲವು ಸಮಸ್ಯೆಗಳನ್ನು ಬಗೆಹರಿಸಬಹುದು. ಆಡಳಿತದಲ್ಲಿ ಚುರುಕು ಮೂಡಿಸಿ, ಸೇವಾ ವಿತರಣೆಯಲ್ಲಿ ಸುಧಾರಣೆ ತರುವ ಮೂಲಕ ಜನರ ಜೀವನ ಗುಣಮಟ್ಟವನ್ನು ಹೆಚ್ಚಿಸಲಾಗುವುದು.
> ■ ಕೃಷ್ಣಬೈರೇಗೌಡ, ಬೆಂ.ನಗರಾಭಿವೃದ್ಧಿ ಸಚಿವ

ಸಂಭ್ರಮ



ಜಿಕೆವಿಕೆ ಡಾ.ಬಾಬು ರಾಜೇಂದ್ರಪ್ರಸಾದ್ ಅಂತಾರಾಷ್ಟ್ರೀಯ ಸಮಾವೇಶ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 28ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪದವೀಧರರು ಟೋಪಿಯನ್ನು ಎಸೆಯುವ ಮೂಲಕ ಸಂಭ್ರಮಿಸಿದರು.

ಕಿರುಸುದ್ದಿ

ನಾಟಕೋತ್ಸವಕ್ಕೆ ಚಾಲನೆ



ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ಅಮ್ಮನ ಮಡಿಲು ಸಾಮಾಜಿಕ ಸಾಂಸ್ಕೃತಿಕ ಕಲಾ ಟ್ರಸ್ಟ್ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿರುವ ನಾಟಕೋತ್ಸವಕ್ಕೆ ಹಿರಿಯ ರಂಗಕರ್ಮಿ ಕೆ.ವಿ ನಾಗರಾಜ್ ಮೂರ್ತಿ ಚಾಲನೆ ನೀಡಿದರು. ಈ ವೇಳೆ ನಾಟಕೋತ್ಸವದ ಕುರಿತು ಮಾತನಾಡಿದ ಅವರು, ಒತ್ತಡದ ಬದುಕಿನಲ್ಲಿ ಜೀವನದ ಮೌಲ್ಯಗಳನ್ನು ತಿಳಿಸುವ ಇಂತಹ ಐತಿಹಾಸಿಕ ನಾಟಕಗಳು ಈ ಮಾಯನಗರಿ ಬೆಂಗಳೂರಿನಲ್ಲಿ ನಡೆಯುತ್ತಿರುವುದು ಸಂತಸದ ವಿಷಯ, ಜೊತೆಗೆ ಎಐ ಯುಗದಲ್ಲಿ ರಂಗಭೂಮಿ ಎಂದೆಂದಿಗೂ ಪ್ರಸ್ತುತ ಎಂದು ಹೇಳಿದರು. ಎರಡು ದಿನಗಳ ಕಾಲ ನಡೆಯುವ ನಾಟಕೋತ್ಸವದಲ್ಲಿ ಮೊದಲ ದಿನ ರಣದುಂದುಭಿ ನಾಟಕ ನಡೆಯಿತು. ಮಂಗಳವಾರ ವರ ಭ್ರಷ್ಟ ನಾಟಕ ನಡೆಯಲಿದೆ. ಕಾರ್ಯಕ್ರಮದಲ್ಲಿ ಕನ್ನಡ ಸಂಸ್ಕೃತಿ ಇಲಾಖೆ ನಿರ್ದೇಶಕ ಆರ್. ಚಂದ್ರಶೇಖರ್, ಪತ್ರಕರ್ತ ಚಂದ್ರಶೇಖರ್ ಯಲಬುರ್ತಿ, ಅಮ್ಮನ ಮಡಿಲು ಟ್ರಸ್ಟ್ ಅಧ್ಯಕ್ಷೆ ವರಲಕ್ಷ್ಮೀ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸೇತುಬಂಧ ಕಾರ್ಯಕ್ರಮ ಪೂರ್ಣಗೊಳಿಸಲು ಗಡುವು

ಬೆಂಗಳೂರು: ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ನಡೆಯುತ್ತಿರುವ ಸೇತುಬಂಧ ಕಾರ್ಯಕ್ರಮವನ್ನು ಜೂ.25ರೊಳಗೆ ಪೂರ್ಣಗೊಳಿಸಿ, ಅಂಕಗಳನ್ನು ಸ್ಯಾಟ್ಸ್ ತಂತ್ರಾಂಶದಲ್ಲಿ ನಮೂದಿಸಬೇಕು ಎಂದು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ಸೂಚನೆ ನೀಡಿದೆ. ಶಾಲಾ ಮಟ್ಟದಲ್ಲಿ ನಡೆಯುತ್ತಿರುವ ಸೇತುಬಂಧ ಕಾರ್ಯಕ್ರಮದ ಪೂರ್ವಪರೀಕ್ಷೆ ಮತ್ತು ಸಾಫಲ್ಯ ಪರೀಕ್ಷೆಗಳ ಶ್ರೇಣಿಗಳನ್ನು ಸ್ಯಾಟ್ಸ್ ನಲ್ಲಿ ದಾಖಲಿಸುವುದು ಕಡ್ಡಾಯವಾಗಿದೆ. ಪ್ರಾಂಶುಪಾಲರು, ಸೇತುಬಂಧ ನೋಡಲ್ ಅಧಿಕಾರಿಗಳು, ತಾಲೂಕು ಮಟ್ಟದ ಅಧಿಕಾರಿಗಳ ಮತ್ತು ಸಂಬಂಧಿಸಿದ ಅಧಿಕಾರಿಗಳು ಜೂ.25ರೊಳಗೆ ಈ ಮಾಹಿತಿಯನ್ನು ಸ್ಯಾಟ್ಸ್‌ನಲ್ಲಿ ದಾಖಲಿಸಬೇಕು ಎಂದು ಸೂಚಿಸಲಾಗಿದೆ. ಪರೀಕ್ಷೆಯಲ್ಲಿ ಬಿ ಶ್ರೇಣಿ ಪಡೆದ ವಿದ್ಯಾರ್ಥಿಗಳಿಗೆ ಸೂಕ್ತ ಪರಿಹಾರಾತ್ಮಕ ಕ್ರಮ ಮತ್ತು ಅವರ ಕಲಿಕಾ ಸುಧಾರಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಈಗಾಗಲೇ ಇಲಾಖೆಯು ನಿರ್ದೇಶನ ನೀಡಿದೆ. ಈ ಹಿನ್ನೆಲೆಯಲ್ಲಿ ಸೆಪ್ಟೆಂಬರ್ ಮತ್ತು ಡಿಸೆಂಬರ್‌ನಲ್ಲಿ ವಿದ್ಯಾರ್ಥಿಗಳಿಗೆ ಮೌಲ್ಯಾಂಕನ ಪರೀಕ್ಷೆ ನಡೆಸುವಂತೆ ಸೂಚಿಸಿದೆ.

ರಂಗೋಲಿ ಸಮೃದ್ಧಿಯ ಸಂಕೇತ: ಶಿವಮಾದಯ್ಯ

ಕೆಂಗೇರಿ: ರಂಗೋಲಿ ಮನೆಯ ಅಂಗಳದ ಸಮೃದ್ಧಿಯ ಸಂಕೇತವಾಗಿ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಶಿವಮಾದಯ್ಯ ಹೇಳಿದರು. ಕೆಂಗೇರಿ ಕೋಟೆ ವಾರ್ಡಿನ ಬಡಾವಣೆಯಲ್ಲಿ ಶಾಸಕ ಎಸ್.ಟಿ. ಸೋಮಶೇಖರ್ ಅವರ ನೇತೃತ್ವದಲ್ಲಿ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿರುವ ಮನೆಗೊಂದು ರಂಗೋಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮಹಿಳೆರಲ್ಲಿ ಸೃಜನಶೀಲತೆ ಹಾಗೂ ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಮಹಿಳೆಯರ ಪಾತ್ರ ಬಹಳ ಮಹತ್ವದ್ದು ಎಂದು ತಿಳಿಸಿದರು. ಕೆಂಗೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೈಲಸಂದ್ರ ನಾಗರಾಜ್, ವಾರ್ಡ್ ಅಧ್ಯಕ್ಷ ಟಿ. ಪ್ರಭಾಕರ್ ಇದ್ದರು.

ಸಭೆಯಲ್ಲಿ ಸಚಿವ ಕೃಷ್ಣಬೈರೇಗೌಡ ಅಧಿಕಾರಿಗಳಿಗೆ ತರಾಟೆ | ರಸ್ತೆ ಗುಂಡಿ ಮುಚ್ಚಲು ಅಗತ್ಯ ಅನುದಾನ ಲಭ್ಯವಿದೆ

ದೀರ್ಘಬಾಳಿಕೆಯ ಗುಣಮಟ್ಟದ ರಸ್ತೆ ನಿರ್ಮಿಸಿ

ಬೆಂಗಳೂರು: ಗುಂಡಿ ಇಲ್ಲದ ರಸ್ತೆ ನಿರ್ಮಾಣ ಮಾಡುವುದು ರಾಕೆಟ್ ಸೈನ್ಸಾ? ನೆರೆಹೊರೆಯ ರಾಜ್ಯಗಳಲ್ಲಿ ನೋಡಿ. ನಮಗೆ ಮಳೆ ಬರುವುದು ಗೊತ್ತಿಲ್ವಾ? ರಸ್ತೆ ಎಷ್ಟು ವರ್ಷ ಬಾಳಿಕೆ ಬರಬೇಕು ಎಂಬ ಕನಿಷ್ಠ ಜ್ಞಾನ ನಿಮಗಿಲ್ವಾ? ಎಂದು ಬೆಂಗಳೂರಿನ ರಸ್ತೆ ಗುಂಡಿ ವಿಚಾರವಾಗಿ ತಮ್ಮ ಮೊದಲ ಸಭೆಯಲ್ಲೆ ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೆಗೌಡ ಜಿಬಿಎ ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಅಧಿಕಾರಿಗಳ ಸಭೆ ನಡೆಸಿದ ಅವರು, ಬೆಂಗಳೂರಿನಲ್ಲಿ ರಸ್ತೆ ಗುಂಡಿ ಮುಚ್ಚುವುದು, ಗುಂಡಿ ಮುಚ್ಚುತ್ತಿದ್ದಂತೆ ಮತ್ತೊಂದು ಕಡೆ ಗುಂಡಿ ಬಾಯ್ತೆರೆಯುವುದು ವಾಡಿಕೆಯಾಗಿಬಿಟ್ಟಿದೆ. ಇದರ ಬದಲು ಗುಂಡಿ ಬೀಳದಂತೆ ಗುಣಮಟ್ಟದ ರಸ್ತೆ ನಿರ್ಮಿಸಲು ಇರುವ ಸಮಸ್ಯೆ ಯಾದರೂ ಏನು? ಗುಣಮಟ್ಟದ ರಸ್ತೆ ನಿರ್ಮಾಣವೇನು ರಾಕೆಟ್ ಸೈನ್ಸ್ ಗಿಂತ ಕ್ಲಿಷ್ಟವೇ? ಎಂದು ಅಧಿಕಾರಿಗಳಿಗೆ ಕ್ಲಾಸ್ ತೆಗೆದುಕೊಂಡರು.

ದಕ್ಷಿಣ ಭಾರತದ ಮಟ್ಟಿಗೆ ಇತರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಬೆಂಗಳೂರಿನ ರಸ್ತೆಗಳು ತೀರಾ ಕಳಪೆಯಾಗಿವೆ ಎಂದು ಅಭಿಪ್ರಾಯಪಟ್ಟ ಅವರು, ಇನ್ನುಂದೆ ಹಳೆ ಕಲ್ಲು ಹೊಸ ಬಿಲ್ಲು ಎಂಬಂತೆ ರಸ್ತೆ ಗುಂಡಿ ಮುಚ್ಚುವ ತಾತ್ಕಾಲಿಕ ಪರಿಹಾರದ ಬದಲಾಗಿ ಅಧಿಕಾರಿಗಳು ಗುಣಮಟ್ಟದ ರಸ್ತೆ ನಿರ್ಮಾಣಕ್ಕೆ ಮುಂದಾಗಬೇಕು. ಕೆಟ್ಟ ರಸ್ತೆಗಳ ಕಾರಣಕ್ಕೆ ಉಂಟಾಗುತ್ತಿರುವ ಜನರ ಬವಣೆ ನೀಗಬೇಕು. ಒಳ್ಳೆಯ ಕೆಲಸ ಮಾಡುವ ಅಧಿಕಾರಿಗಳ ಹಿಂದೆ ನಾನು ಎಂದಿಗೂ ಬೆಂಬಲವಾಗಿ ನಿಲ್ಲುತ್ತೇನೆ ಎಂದು ಭರವಸೆ ನೀಡಿದರು.

ನಗರದ ರಸ್ತೆ ಗುಂಡಿಗಳನ್ನು ಮುಚ್ಚಲು ಅಗತ್ಯ ಅನುದಾನ ಲಭ್ಯವಿದೆ. ವ್ಯವಸ್ಥಿತವಾಗಿ ಹಾಗೂ ಗುಣಮಟ್ಟದೊಂದಿಗೆ ಗುಂಡಿ ಮುಚ್ಚುವ ಕಾಮಗಾರಿಗಳನ್ನು ಕೈಗೊಳ್ಳಬೇಕು. ಇದರಿಂದ ಭವಿಷ್ಯದಲ್ಲಿ ಉಂಟಾಗುವ ಸಮಸ್ಯೆಗಳನ್ನು ತಡೆಯಲು ಸಾಧ್ಯವಾಗುತ್ತದೆ. ರಸ್ತೆ ಕಾಮಗಾರಿಗಳ



ಗುಣಮಟ್ಟವನ್ನು ಮತ್ತಷ್ಟು ಸುಧಾರಿಸಲು ಕ್ರಮ ಕೈಗೊಳ್ಳಲು ನಿರ್ದೇಶನ ನೀಡಿದರು.

ನಾಗರಿಕರ ಸಹಕಾರ ಅಗತ್ಯ: ನಗರದಲ್ಲಿ ಮನೆ-ಮನೆಗೆ ಕಸ ಸಂಗ್ರಹಿಸುವ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಕೆಲವರು ಮನೆ ಬಾಗಿಲಿಗೆ ಕಸ ಸಂಗ್ರಹ ವಾಹನ ಬಂದರೂ ರಸ್ತೆ ಬದಿಯಲ್ಲಿ ಕಸವನ್ನು ತಂದು ಹಾಕುತ್ತಿರುವುದು ಕಂಡುಬರುತ್ತಿದೆ. ಕಸ ಸಂಗ್ರಹಣಾ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ನಾಗರಿಕರ ಸಹಕಾರವೂ ಅಗತ್ಯವಾಗಿದೆ. ಅಧಿಕಾರಿಗಳು ಮತ್ತು ಸಾರ್ವಜನಿಕರು ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ಈ ಸಮಸ್ಯೆಗೆ ಶಾಶ್ವತ ಪರಿಹಾರ ಸಾಧ್ಯ ಎಂದು ಹೇಳಿದರು.

- ಐದು ಪಾಲಿಕೆಗಳನ್ನು ರಚಿಸುವಾಗ ಪಾಲಿಕೆಗಳ ನಡುವೆ ಆದಾಯ ಅಂತರ ಇರಲಿದೆ ಎಂಬ ಅರಿವಿತ್ತು
- ಸರಿಪಡಿಸಲು ಸರ್ಕಾರದ ಬಳಿ ಮೂರ್ನಾಲ್ಕು ಪರಿಹಾರ ವಿದ್ದು, ಪರಿಶೀಲನೆ ಹಂತದಲ್ಲಿದೆ
- ಇ-ಖಾತಾ, ಬಿ-ಖಾತಾದಿಂದ ಎ-ಖಾತಾ ಪರಿವರ್ತನೆಯಂತಹ ಯೋಜನೆಗಳು ಭವಿಷ್ಯದಲ್ಲಿ ವಂಚನೆ ಮತ್ತು ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ತಡೆಗಟ್ಟಲಿದೆ



> ಬೆಂಗಳೂರು ನಗರದ ಅಭಿವೃದ್ಧಿ ಎಂಬುದು ಕೇವಲ ಒಂದು ರಾಜಕೀಯ ಪಕ್ಷಕ್ಕೆ ಸೀಮಿತವಾದುದಲ್ಲ. ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ವಿರೋಧ ಪಕ್ಷದವರು, ಸಂಸದರು ಮತ್ತು ಶಾಸಕರು ಒಟ್ಟಾಗಿ ಕೆಲಸ ಮಾಡಬೇಕಿದೆ. ಪ್ರತಿಯೊಬ್ಬ ನಾಗರಿಕನಿಗೂ ತನಗಾಗುವ ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಸ್ವಾತಂತ್ರ್ಯವಿದ್ದು, ಅವರ ರಚನಾತ್ಮಕ ಟೀಕೆಗಳನ್ನು ಸರ್ಕಾರವು ಸದಾ ಗೌರವಿಸುತ್ತದೆ.
> ■ ಕೃಷ್ಣಬೈರೇಗೌಡ, ಬೆಂಗಳೂರು ನಗರಾಭಿವೃದ್ಧಿ ಸಚಿವ

ಟೆಂಡರ್ ಪರಿಶೀಲನೆಗೆ ಉನ್ನತ ಸಮಿತಿ

ಕಸದ ಟೆಂಡರ್ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಸರ್ಕಾರವು ಉನ್ನತ ಅಧಿಕಾರಿಗಳ ಪರಿಶೀಲನಾ ಸಮಿತಿಯನ್ನು ನೇಮಿಸಿದೆ. ಅದು ವಿರೋಧ ಪಕ್ಷದವರು ಸಲ್ಲಿಸಿರುವ ದೂರುಗಳು ಮತ್ತು ಆಕ್ಷೇಪಣೆಗಳನ್ನು ಪರಿಶೀಲಿಸಲಿದೆ. ಈ ಸಮಿತಿಯು ಸ್ವತಂತ್ರವಾಗಿ ಕಾರ್ಯನಿರ್ವಹಿಸಲಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿನ ಸರಿ-ತಪ್ಪುಗಳ ಬಗ್ಗೆ ತನಿಖೆ ನಡೆಸಿ ವರದಿ ನೀಡಲಿದೆ. ವಿರೋಧ ಪಕ್ಷದವರ ಬಳಿ ಯಾವುದೇ ಪೂರಕ ದಾಖಲೆಗಳಿದ್ದರೂ ನೇರವಾಗಿ ಸಮಿತಿಗೆ ನೀಡಬಹುದು ಎಂದು ಸಚಿವರು ಮಾಹಿತಿ ನೀಡಿದರು.

ಬಾಸ್ ಚಿತ್ರ ಬಿಡುಗಡೆಗೆ ತಡೆ ಕೋರಿ ಹೈಕೋರ್ಟ್‌ಗೆ ಮೇಲ್ಮನವಿ ಅರ್ಜಿ

ಬೆಂಗಳೂರು: ಜೂ.19ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿರುವ ಬಾಸ್ ಚಲನ ಚಿತ್ರಕ್ಕೆ ಮತ್ತೆ ಕಾನೂನು ಸಂಕಷ್ಟ ಎದುರಾಗಿದೆ. ನಟ ದರ್ಶನ್ ಶ್ರೀನಿವಾಸ್ ಹಾಗೂ ವಿಜಯ ಲಕ್ಷ್ಮಿ ದರ್ಶನ್ ಅವರು ಚಿತ್ರದ ಬಿಡುಗಡೆಗೆ ತಡೆ ನೀಡುವಂತೆ ಕೋರಿ ಕರ್ನಾಟಕ ಹೈಕೋರ್ಟ್ ಮೇಲ್ಮನವಿ ಅರ್ಜಿ ಸಲ್ಲಿಸಿದ್ದಾರೆ.

ನಗರ ಸಿವಿಲ್ ನ್ಯಾಯಾಲಯವು ಈ ಹಿಂದೆ ಚಿತ್ರದ ಬಿಡುಗಡೆಗೆ ವಿಧಿಸಿದ್ದ ಮಧ್ಯಂತರ ತಡೆ ಯಾಜ್ಞೆಯನ್ನು ತೆರವುಗೊಳಿಸಿ ಬಿಡುಗಡೆಗೆ ಅವಕಾಶ ನೀಡಿತ್ತು. ಅದರ ಬೆನ್ನಲ್ಲೇ ಚಿತ್ರತಂಡವು ಜೂ.19ರಂದು ಚಿತ್ರವನ್ನು ರಾಜ್ಯಾದ್ಯಂತ ಬಿಡುಗಡೆ ಮಾಡುವುದಾಗಿ ಘೋಷಿಸಿತ್ತು. ಆದರೆ ಸಿವಿಲ್ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗಿರುವ ಅರ್ಜಿದಾರರು, ಚಿತ್ರದ ಬಿಡುಗಡೆಗೆ ತಕ್ಷಣದ ಮಧ್ಯಂತರ ತಡೆಯಾಜ್ಞೆ ನೀಡುವಂತೆ ಮನವಿ ಮಾಡಿದ್ದಾರೆ. ಚಿತ್ರದ ಕಥಾವಸ್ತು, ಪಾತ್ರಗಳ ನಿರೂಪಣೆ ಹಾಗೂ ಇತರ ವಿವಾದಿತ ಅಂಶಗಳಿಗೆ ಸಂಬಂಧಿಸಿದಂತೆ ಗಂಭೀರ ಆಕ್ಷೇಪಣೆಗಳನ್ನು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ತಿಳಿದುಬಂದಿದೆ. ಚಿತ್ರ ಬಿಡುಗಡೆ ದಿನಾಂಕ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಪ್ರಕರಣ ಮಹತ್ವ ಪಡೆದುಕೊಂಡಿದ್ದು, ಹೈಕೋರ್ಟ್ ತೀರ್ಪಿನತ್ತ ಚಿತ್ರರಂಗ, ಅಭಿಮಾನಿಗಳ ಚಿತ್ತ ನೆಟ್ಟಿದೆ. ಮಧ್ಯಂತರ ತಡೆಯಾಜ್ಞೆ ನೀಡುತ್ತದೆಯೇ ಅಥವಾ ಚಿತ್ರ ಬಿಡುಗಡೆಗೆ ಹಸಿರು ನಿಶಾನೆ ತೋರಿಸುತ್ತದೆಯೇ ಎಂಬುದು ಕುತೂಹಲ ಮೂಡಿದೆ. ಚಿತ್ರದ ಭವಿಷ್ಯ ಇದೀಗ ಕೋರ್ಟ್ ನಿರ್ಧಾರದ ಮೇಲೆ ಅವಲಂಬಿತವಾಗಿದೆ.

ಆರ್‌ಟಿಒ ಅಧಿಕಾರಿಗಳಿಗೆ ತೀವ್ರ ಆತಂಕ | ಗೊಂದಲದ ವಾತಾವರಣ ನಿರ್ಮಾಣ

ಪ್ರಾದೇಶಿಕ ಸಾರಿಗೆ ಕಚೇರಿಗಳಿಗೆ ಹುಸಿ ಬಾಂಬ್ ಬೆದರಿಕೆ

ಬೆಂಗಳೂರು: ನಗರದ ಬಹುತೇಕ ಪ್ರಾದೇಶಿಕ ಸಾರಿಗೆ ಕಚೇರಿಗಳಿಗೆ, ಏಕಕಾಲದಲ್ಲಿ ದುಷ್ಕರ್ಮಿಗಳು ಬಾಂಬ್ ಇಟ್ಟು ಸ್ಫೋಟಿಸುವುದಾಗಿ ಬೆದರಿಕೆ ಇ ಮೇಲ್ ರವಾನಿಸಿದ್ದರು. ಇದರಿಂದ ಆರ್‌ಟಿಒ ಅಧಿಕಾರಿಗಳಿಗೆ ಕೆಲಕಾಲ ತೀವ್ರ ಆತಂಕ ಮತ್ತು ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ಕಸ್ತೂರಿ ನಗರ, ಜ್ಞಾನಭಾರತಿ, ತಲಘಟ್ಟಪುರ ಹಾಗೂ ಎಚ್‌ಎಸ್‌ಆರ್ ಲೇಔಟ್ ಸೇರಿದಂತೆ ಬೆಂಗಳೂರು ನಗರದ ಬಹುತೇಕ ಎಲ್ಲಾ ಪ್ರಮುಖ ಆರ್‌ಟಿಒ ಕಚೇರಿಗಳಿಗೆ ಈ ಬೆದರಿಕೆ ಸಂದೇಶ ರವಾನೆಯಾಗಿದ್ದು, ಇಲಾಖೆಯ ಸಿಬ್ಬಂದಿ ಹಾಗೂ ಕಚೇರಿಗಳಿಗೆ ಭೇಟಿ ನೀಡಿದ್ದ ಸಾರ್ವಜನಿಕರಲ್ಲಿ ಕೆಲಕಾಲ ತೀವ್ರ ಆತಂಕ, ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ಬೆದರಿಕೆ ಇ ಮೇಲ್ ಬಂದ ತಕ್ಷಣವೇ ಎಚ್ಚೆತ್ತುಕೊಂಡ ಆರ್‌ಟಿಒ ಅಧಿಕಾರಿಗಳು ತಕ್ಷಣವೇ ಸ್ಥಳೀಯ ಪೊಲೀಸರಿಗೆ ಈ ಕುರಿತು ಮಾಹಿತಿ ನೀಡಿದರು. ಕಿಡಿಗೇಡಿಗಳು ಕಳುಹಿಸಿದ್ದ ಇಮೇಲ್ ಸಂದೇಶದಲ್ಲಿ ಮಧ್ಯಾಹ್ನ 1.30 ಗಂಟೆಗೆ ಸರಿಯಾಗಿ ಕಚೇರಿಗಳಲ್ಲಿ ಬಾಂಬ್ ಬ್ಲಾಸ್ಟ್ ಮಾಡಲಾಗುವುದು ಎಂದು ಅತ್ಯಂತ ನಿಖರವಾದ ಸಮಯವನ್ನು ಉಲ್ಲೇಖಿಸಿ ಸವಾಲು ಹಾಕಲಾಗಿತ್ತು.

ಸಮಯದ ಗಂಭೀರತೆಯನ್ನು ಅರಿತು ತಕ್ಷಣವೇ ಕಾರ್ಯಪ್ರವೃತ್ತರಾದ ಸ್ಥಳೀಯ ಪೊಲೀಸರು ಹಾಗೂ ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳದ ಸಿಬ್ಬಂದಿ ಎಲ್ಲಾ ಆರ್‌ಟಿಒ ಕಚೇರಿಗಳಿಗೆ ಧಾವಿಸಿ ಬಿಗುವಿನ ತಪಾಸಣೆ ಕೈಗೊಂಡರು. ಮುನ್ನೆಚ್ಚರಿಕೆ ಕ್ರಮವಾಗಿ ಕಚೇರಿಯಲ್ಲಿದ್ದ ಸಿಬ್ಬಂದಿ ಮತ್ತು ಸಾರ್ವಜನಿಕರನ್ನು ಸುರಕ್ಷಿತ ಸ್ಥಳಗಳಿಗೆ ರವಾನಿಸಿ, ಇಡೀ ಆವರಣವನ್ನು ಪೊಲೀಸರು ತಮ್ಮ ಸುಪರ್ದಿಗೆ ಪಡೆದುಕೊಂಡರು.

ನಗರದಾದ್ಯಂತ ಇರುವ ಎಲ್ಲಾ ಆರ್‌ಟಿಒ ಕಚೇರಿಗಳ ಮೂಲೆ ಮೂಲೆಗಳನ್ನು ಹಿರಿಯ ಪೊಲೀಸ್ ಅಧಿಕಾರಿಗಳ ನೇತೃತ್ವದಲ್ಲಿ ಅತ್ಯಂತ ಸೂಕ್ಷ್ಮವಾಗಿ ಪರಿಶೀಲನೆ ನಡೆಸಲಾಯಿತು. ವಿಧ್ವಂಸಕ ಕೃತ್ಯಗಳಿಗೆ ಬಳಸುವ ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗದ ಹಿನ್ನೆಲೆಯಲ್ಲಿ, ಕೊನೆಗೂ ಇದು ಹುಸಿ ಬಾಂಬ್ ಬೆದರಿಕೆ ಎಂಬುದು ತನಿಖೆಯಲ್ಲಿ ದೃಢಪಟ್ಟಿತು. ಯಾವುದೇ ಕಚೇರಿಯಲ್ಲಿ ಯಾವುದೇ ರೀತಿಯ ಬಾಂಬ್ ಅಥವಾ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿಲ್ಲ ಎಂದು ಪೊಲೀಸರು ಅಧಿಕೃತವಾಗಿ ಸ್ಪಷ್ಟಪಡಿಸಿದ ನಂತರ ಆರ್‌ಟಿಒ ಅಧಿಕಾರಿಗಳು ಮತ್ತು ಸಾರ್ವಜನಿಕರು ನಿಟ್ಟುಸಿರು ಬಿಟ್ಟಿದ್ದಾರೆ.

ಸದ್ಯಕ್ಕೆ ಈ ಇ ಮೇಲ್ ಎಲ್ಲಿಂದ ಬಂದಿದೆ ಮತ್ತು ಇದರ ಹಿಂದೆ ಇರುವ ದುಷ್ಕರ್ಮಿಗಳು ಯಾರು ಎಂಬುದನ್ನು ಪತ್ತೆ ಹಚ್ಚಲು ಸೈಬರ್ ಕ್ರೈಂ ಪೊಲೀಸರ ನೆರವಿನೊಂದಿಗೆ ಸ್ಥಳೀಯ ಪೊಲೀಸರು ತೀವ್ರ ಶೋಧ ಕಾರ್ಯವನ್ನು ಆರಂಭಿಸಿದ್ದಾರೆ

ಜೂ. 21ರಂದು ರೀ-ನೀಟ್ ಪರೀಕ್ಷೆ: ಪರೀಕ್ಷಾ ಕೇಂದ್ರದ ಸುತ್ತ ನಿಷೇಧಾಜ್ಞೆ

ಮಡಿಕೇರಿ: ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಜೂ. 21ರಂದು 2026ರ ರೀ-ನೀಟ್ (ಯುಜಿ) ಪರೀಕ್ಷೆ ನಡೆಯಲಿದ್ದು, ಈ ಪರೀಕ್ಷಾ ಕೇಂದ್ರದಲ್ಲಿ ಯಾವುದೇ ಅವ್ಯವಹಾರಗಳಿಲ್ಲದೆ ಸುಗಮವಾಗಿ ಪರೀಕ್ಷೆ ನಡೆಸುವ ಸಲುವಾಗಿ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿನ ಪ್ರದೇಶವನ್ನು ನಿರ್ಬಂಧಿತ ಸ್ಥಳ ಎಂದು ಘೋಷಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಆದೇಶಿಸಿದ್ದಾರೆ.

ಪರೀಕ್ಷಾ ದಿನದಂದು ಈ ವ್ಯಾಪ್ತಿಯಲ್ಲಿರುವ ಎಲ್ಲಾ ಜೆರಾಕ್ಸ್ ಅಂಗಡಿ ಮತ್ತು ಸೈಬರ್ ಸೆಂಟರ್'ಗಳನ್ನು ಮುಚ್ಚಿಸುವಂತೆಯೂ ಸೂಚಿಸಿರುವ ಅವರು, ಈ ಆದೇಶವು ಪರೀಕ್ಷಾ ದಿನದಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ ಎಂದು ತಿಳಿಸಿದ್ದಾರೆ.

₹8 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ನಗರದಲ್ಲಿ 23 ಮಂದಿ ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿರುವ ಸಿಸಿಬಿ ಪೊಲೀಸರು, 8 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

ಡ್ರಗ್ಸ್ ಮಾರಾಟದ ವಿರುದ್ಧ ಸಮರ ಸಾರಿರುವ ಸಿಸಿಬಿ ಪೊಲೀಸರು ಹೆಬ್ಬಾಳ, ಇಂದಿರಾನಗರ, ಜೀವನಭೀಮಾನಗರ, ಸದ್ದಗುಂಟೆಪಾಳ್ಯ, ಹೆಣ್ಣೂರು, ಬಾಣಸವಾಡಿ,ಹಲಸೂರು, ಹಾಗೂ ಕೆಜಿಹಳ್ಳಿಯಲ್ಲಿ ಕಾರ್ಯಾಚರಣೆ ಕೈಗೊಂಡು 23 ಮಂದಿಯನ್ನು ಬಂಧಿಸಿ, 8 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.

ಮಂಗಳವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಬಂಧಿತ 23 ಮಂದಿ ಡ್ರಗ್ಸ್ ಪೆಡ್ಲರ್‌ಗಳಿಂದ 5 ಕೆಜಿ 360 ಗ್ರಾಂ ಹೈಡ್ರೋಗಾಂಜಾ, 143 ಗ್ರಾಂ ಕೊಕೇನ್, 10 ಕೆಜಿ 998 ಗ್ರಾಂ ಗಾಂಜಾ, 237 ಗ್ರಾಂ ಎಂಡಿಎಂಎ, 107 ಗ್ರಾಂ ಮೆಥಪೆಂಟಮೈನ್, 180 ಬಾಕ್ಸ್ ಸಿ-ಸಿಗರೇಟ್ ಆಯಿಲ್ ಇ-ಸಿಗರೇಟ್, 452 ಬಾಕ್ಸ್ ವಿದೇಶಿ ಸಿಗರೇಟ್, 1206 ನಂ ಹುಕ್ಕಾಸಿಗರೇಟ್, 1197 ಇ-ಸಿಗರೇಟ್, 490 ವಿದೇಶಿ ಸಿಗರೇಟ್, 120 ಸೆಟ್ ಹುಕ್ಕಾ ಸಿಗರೇಟ್, 100 ಇ-ಸಿಗರೇಟ್ ರೀಫಿಲ್, 6 ಹುಕ್ಕಾ ಸೆಟ್ ವಶಪಡಿಸಿಕೊಳ್ಳುವಲ್ಲಿ ಸಿಸಿಬಿಯವರು



ಯಶಸ್ವಿಯಾಗಿದ್ದಾರೆ ಎಂದು ಸೀಮಂತ್ ಕುಮಾರ್ ಸಿಂಗ್ ಹೇಳಿದರು. ಬಂಧಿತ ಡ್ರಗಸ್ ಪೆಡ್ಲರ್‌ಗಳಲ್ಲಿ ವಿದೇಶದ ಇಬ್ಬರು, ಹೊರ ರಾಜ್ಯದ ಆರು, ಸ್ಥಳೀಯ 15 ಮಂದಿ ಸೇರಿದ್ದು, ವಿಚಾರಣೆ ನಡೆಸಲಾಗಿದೆ.

ಮನೆ ಬಾಗಿಲು ಮುರಿದು ಚಿನ್ನಾಭರಣ ಕಳವು

ಬೆಂಗಳೂರು: ಮನೆಯ ಬಾಗಿಲ ಬೀಗ ಮುರಿದು ಒಳ ನುಗ್ಗಿದ ಚೋರರು 15 ಸಾವಿರ ನಗದು ಸೇರಿದಂತೆ 14 ಲಕ್ಷ ಮೌಲ್ಯದ ಚಿನ್ನ ಹಾಗೂ ಬೆಳ್ಳಿ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಪರಾರಿಯಾಗಿರುವ ಘಟನೆ ಕೆ.ಜಿ.ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಲಕ್ಷ್ಮಿಪುರ 3ನೇ ಕ್ರಾಸ್‌ನಲ್ಲಿ ಕೋಮಲಾ ಎಂಬವರು ತಮ್ಮ ಸಹೋದರನ ಜೊತೆ ವಾಸವಿದ್ದಾರೆ. ಸೋಮವಾರ ಬೆಳಗ್ಗೆ 9 ಗಂಟೆ ಸುಮಾರಿಗೆ ಕೋಮಲಾ ಅವರು ಚನ್ನಪಟ್ಟಣದ ಗೌಡಗೆರೆ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋಗಿದ್ದರು. ಇವರ ಸಹೋದರ ಟೆರಸ್‌ನಲ್ಲಿ ಮಲಗಿದ್ದರು. ಆ ಸಂದರ್ಭದಲ್ಲಿ ಕಳ್ಳರು ಇವರ ಮನೆಯ ಬೀಗ ಮುರಿದು ಒಳಗೆ ನುಗ್ಗಿ ಬೀರುವಿನಲ್ಲಿದ್ದ ವಸ್ತುಗಳನ್ನೆಲ್ಲ ಚೆಲ್ಲಾಪಿಲ್ಲಿ ಮಾಡಿ ಕಪಾಟಿಗೆ ಸಿಕ್ಕಿದ 15 ಸಾವಿರ ಹಣ, 108 ಗ್ರಾಂ ಚಿನ್ನಾಭರಣ, 150 ಗ್ರಾಂ ಬೆಳ್ಳಿ ವಸ್ತುಗಳನ್ನು ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದಾರೆ. ಆದರೆ ಇದು ಸಹೋದರನ ಗಮನಕ್ಕೆ ಬಂದಿಲ್ಲ. ರಾತ್ರಿ 11 ಗಂಟೆ ಸುಮಾರಿನಲ್ಲಿ ಕೋಮಲಾ ಅವರು ಮನೆಗೆ ಬಂದಾಗ ಬೀರುವಿನ ಬಾಗಿಲು ಮುರಿದಿರುವುದು, ಮನೆಯಲ್ಲಿ ಕಳ್ಳತನವಾಗಿರುವುದು ಕಂಡು ಬಂದಿದೆ. ತಕ್ಷಣ ಅವರು ಪೊಲೀಸರಿಗೆ ವಿಷಯ ತಿಳಿಸಿದ್ದಾರೆ. ಸ್ಥಳಕ್ಕೆ ಹಾಗೂ ಸಿಬ್ಬಂದಿ, ಬೆರಳಚ್ಚು ತಜ್ಞರು ಹಾಗೂ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಘಟನಾ ಸ್ಥಳದ ಸುತ್ತಮುತ್ತಲಿನ ರಸ್ತೆಗಳಲ್ಲಿರುವ ಸಿ.ಸಿ. ಕ್ಯಾಮರಾಗಳನ್ನು ಪರಿಶೀಲಿಸಿ ಕಳ್ಳರ ಪತ್ತೆಗೆ ಬಲೆ ಬೀಸಿದ್ದಾರೆ.

1.5 ಕೋಟಿ ಜನರ ತೆರಿಗೆ ಹಣ ಗುಳುಂ | ಸ್ಥಳೀಯ ನಾಗರಿಕರ ಆಕ್ರೋಶ

ಬಳಕೆಗೆ ಬಾರದ ಘನತ್ಯಾಜ್ಯ ನಿರ್ವಹಣೆ ಘಟಕ

ಕೆಂಗೇರಿ: ಶಿವನಪಾಳ್ಯದ ಘನತ್ಯಾಜ್ಯ ನಿರ್ವಹಣೆಯ ಘಟಕ ಸುಮಾರು 1.5ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿದ್ದರೂ ಯಾವುದೇ ಪ್ರಯೋಜನವಾಗಿಲ್ಲ, 1.5 ಕೋಟಿ ಜನರ ತೆರಿಗೆ ಗುಳುಂ ಆಗಿದೆ ಎಂದು ಸ್ಥಳೀಯ ನಾಗರಿಕರು ಆಕ್ರೋಶ ವ್ಯಕ್ತಪಡಿಸಿದರು.



ಯಶವಂತಪುರ ವಿಧಾನಸಭಾ ಕ್ಷೇತ್ರದ ಶಿವನಪಾಳ್ಯ ವಾರ್ಡಿನ ದುಬಾಸಿಪಾಳ್ಯದ ಘನತ್ಯಾಜ್ಯ ನಿರ್ವಹಣ ಘಟಕದಿಂದ ಬರುತ್ತಿರುವ ದುರ್ವಾಸನೆಯಿಂದ ಅಕ್ಕಪಕ್ಕದ ಬಡಾವಣೆಯ ನಿವಾಸಿಗಳು ನರಕಯಾತನೆ ಅನುಭವಿಸುತ್ತಿರುವ ಹಿನ್ನೆಲೆಯಲ್ಲಿ ಸ್ಥಳೀಯ ನಿವಾಸಿಗಳು ಘನತ್ಯಾಜ್ಯ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿದರು.

ಹಸಿ ಕಸ ಒಣ ಕಸವನ್ನು ಸರಿಯಾಗಿ ವಿಲೇವಾರಿ ಮಾಡದ ಹಿನ್ನಲೆಯಲ್ಲಿ ಹೆಚ್ಚು ಕಸ ಸಂಗ್ರಹವಾಗಿ ಕೊಳೆತು ಮಳೆ ಬಂದಾಗ ದುರ್ವಾಸನೆ ಸಹಿತವಾದ ಕೊಳಚೆ ನೀರು ಮನೆಗಳಿಗೆ ನುಗ್ಗಿ ಗಾಳಿ ಬೀಸಿದಾಗ ದುರ್ವಾಸನೆ ಬೀರುತ್ತಿದೆ , ಅಧಿಕಾರಿಗಳು ಕ್ರಮವಹಿಸಬೇಕು ಎಂದು ಮನವಿ ಮಾಡಿದರು ಕ್ಯಾರೇ ಎನ್ನದ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿದರು.

ಸ್ಥಳೀಯ ನಿವಾಸಿಗಳು ತಿರುಗಾಡಲು ಆಗುತ್ತಿಲ್ಲ, ವಸತಿ ಪ್ರದೇಶದಲ್ಲಿರುವ ವೃದ್ಧರು, ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ, ಮಕ್ಕಳು ಮತ್ತು ಮಹಿಳೆಯರು ಅಸ್ತಮಾ ರೋಗಕ್ಕೆ ತುತ್ತಾಗಿ ಜೀವ ಕಳೆದುಕೊಳ್ಳುವ ಭಯದಲ್ಲಿ ಜೀವಿಸುತ್ತಿದೇವೆ ನಮಗೆ ಸರ್ಕಾರ ಮತ್ತು ಸಂಬಂಧ ಪಟ್ಟ ಅಧಿಕಾರಿಗಳು ಘನ ತ್ಯಾಜ್ಯ ನಿರ್ವಹಣ ಘಟಕವನ್ನು ಸ್ಥಳಾಂತರಿಸಿ ನಮ್ಮ ಜೀವ ಉಳಿಸಿ ಎಂದು ಸ್ಥಳೀಯರು ಮನವಿ ಮಾಡಿದರು.

ಬಿಎಸ್ ಡಬ್ಲ್ಯೂ ಎಂ ಎಲ್ ಕೇಂದ್ರ ಕಚೇರಿ ಎ.ಜಿ.ಎಂ ಸಂತೋಷ್ ಕಡ್ಡಿ ಮಾತನಾಡಿ, ಈ ವ್ಯಾಪ್ತಿಯ ಘನತ್ಯಾಜ್ಯ ನಿರ್ವಹಣೆಯ ಘಟಕದಲ್ಲಿ ಸಮಸ್ಯೆ ಇದೆ ಎಂದು ತಿಳಿದ ತಕ್ಷಣ ಬಂದು ಪರಿಶೀಲನೆ ನಡೆಸಿದಾಗ, ಬಹಳಷ್ಟು ಸಮಸ್ಯೆಗಳಿವೆ ಎಂದು ತಿಳಿಯಿತು. ಮುಂದಿನ ದಿನಗಳಲ್ಲಿ ಇದರ ನಿರ್ವಹಣೆಯ ಗುತ್ತಿಗೆದಾರರಿಗೆ ನೋಟಿಸ್ ಜಾರಿ ಮಾಡುವ ಮೂಲಕ ಅವರ ಮೇಲೆ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ಅಂಬೂರಿ ಗೊಂದೊಲುಕಟ್ಟೆ ಶ್ರೀ ಮಹಮ್ಮಾಯೀ ದೇವಸ್ಥಾನ

ಭಜನಾ ಮಂಡಳಿಯ ಸದಸ್ಯರಿಗೆ ಪುಸ್ತಕ, ಛತ್ರಿ ವಿತರಣೆ

ಮೂಡುಬಿದರೆ: ಅಂಬೂರಿ ಗೊಂದೊಲು ಕಟ್ಟೆ ಶ್ರೀ ಮಹಮ್ಮಾಯಿ ದೇವಸ್ಥಾನದ ವಠಾರದಲ್ಲಿ ಇತ್ತೀಚೆಗೆ ವಾರ್ಷಿಕ ಮಹಾಸಭೆಯನ್ನು ಹಮ್ಮಿಕೊಂಡ ಸಂದರ್ಭದ ಕಾರ್ಯಕ್ರಮದಲ್ಲಿ ಶ್ರೀ ಮಹಮ್ಮಾಯಿ ಕುಣಿತ ಭಜನಾ ಮಂಡಳಿಯ 40 ಮಂದಿ ಸದಸ್ಯರಿಗೆ ದಾನಿಗಳ ಸಹಾಯದಿಂದ ಪುಸ್ತಕ, ಪೆನ್ನು, ಅಡಿಕೋಲು ಸಹಿತ ಛತ್ರಿಗಳನ್ನು ವಿತರಿಸಲಾಯ್ತು.

ಛತ್ರಿಗಳನ್ನು ಕೊಡುಗೆಯಾಗಿ ನೀಡಿದ ಪಡುಮಾರ್ನಾಡು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರೂ, ಬನ್ನಡ್ಕ ಸಾರ್ವಜನಿಕ ಶ್ರೀ ಶಾರದೋತ್ಸವ ಟ್ರಸ್ಟ್‌ನ ಅಧ್ಯಕ್ಷರೂ ಆದ ದಯಾನಂದ ಪೈ ಕೊಡುಗೆಗಳನ್ನು ವಿತರಿಸಿ ಮಾತನಾಡಿ, ಇತ್ತೀಚೆಗೆ ತೀರಾ ಗ್ರಾಮೀಣ ಪ್ರದೇಶವಾದ ಅಂಬೂರಿಯಲ್ಲಿ ಜಿಲ್ಲೆಯಾದ್ಯಂತ 50ಕ್ಕೂ ಹೆಚ್ಚಿನ ಭಜನಾ ತಂಡಗಳಿಂದ



ಯಶಸ್ವಿಯಾಗಿ ನೆರವೇರಿದ ಭಜನಾಮೃತ ಕಮ್ಮಟದ ರೂವಾರಿ ಇಲ್ಲಿನ ಶ್ರೀ ಮಹಮ್ಮಾಯೀ ಕುಣಿತ ಭಜನಾ ಮಂಡಳಿಯ ಸಂಚಾಲಕ ದಿನಕರ ಕುಲಾಲರ ಸೇವೆಯನ್ನು ಸ್ಮರಿಸಿ ಅಭಿನಂದಿಸಿದರು. ಅಲಂಗಾರಿನ ಯುವ ಉದ್ಯಮಿ ಭರತ್ ಶೆಟ್ಟಿ ಸಹಿತ ಊರವರ ಸಹಕಾರವನ್ನು ಕೂಡ ಈ ಸಂದರ್ಭದಲ್ಲಿ ಅವರು ಮುಕ್ತ ಕಂಠದಿಂದ ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಅಂಬೂರಿ ಶ್ರೀ ಮಹಮ್ಮಾಯೀ ದೇವಸ್ಥಾನದ ಆಡಳಿತ ಮೊಕ್ತೇಸರ ನವೀನ್ ಚಂದ್ರ ಅಂಬೂರಿ, ಭಜನಾ ಮಂಡಳಿಯ ಸಂಚಾಲಕ ದಿನಕರ ಕುಲಾಲ್, ಜೊತೆ ಕಾರ್ಯದರ್ಶಿ ಲಕ್ಷ್ಮಣ ನಾಯ್ಕ ಉಪಸ್ಥಿತರಿದ್ದರು.

ಮೂತ್ರಕೋಶದ ಸಮಸ್ಯೆ: ಬೇಸತ್ತ ವ್ಯಕ್ತಿ ನೇಣಿಗೆ ಶರಣು

ಉಡುಪಿ: ಎರಡು ವರ್ಷಗಳಿಂದ ತೀವ್ರ ಮೂತ್ರಕೋಶದ ಸಮಸ್ಯೆಯಿಂದ ಬಳಲುತ್ತಾ ಮಾನಸಿಕವಾಗಿ ನೊಂದಿದ್ದವ್ಯಕ್ತಿಯೊಬ್ಬರುಮನೆಯಲ್ಲಿ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಣಿಪಾಲ ಪೊಲೀಸ್ ಠಾಣಾ ವ್ಯಾಪ್ತಿಯ ಸಗ್ರಿಯಲ್ಲಿ ಸಂಭವಿಸಿದೆ. ಕೊಡವೂರು ಗ್ರಾಮದ ನಿವಾಸಿ ರಾಮ ಪೂಜಾರಿ (57) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿ.

ರಾಮ ಪೂಜಾರಿ ಅವರು ಶಿವಳ್ಳಿ ಗ್ರಾಮದ ಸಗ್ರಿಯಲ್ಲಿರುವ ತಮ್ಮ ಮಗಳು ರೂಪ ಅವರ ಮನೆಯಲ್ಲಿ ವಾಸವಾಗಿದ್ದರು. ಅವರಿಗೆತೀವ್ರವಾದ ಮೂತ್ರಕೋಶದ ಕಾಯಿಲೆ ಇದ್ದು, ಮಾನಸಿಕ ಖಿನ್ನತೆಗೆ ಒಳಗಾಗಿದ್ದರು. ಜೂನ್ 15ರಂದು ಮನೆಯವರೆಲ್ಲರೂ ಹೊರಗಡೆ ಹೋಗಿದ್ದ ಸಂದರ್ಭದಲ್ಲಿ, ಅವರು ರೂಮಿನ ಫ್ಯಾನ್‌ಗೆ ನೈಲಾನ್ ಹಗ್ಗದಿಂದ ನೇಣು ಬಿಗಿದುಕೊಂಡಿದ್ದಾರೆ.

ಪುತ್ತೂರು ಮಾರುಕಟ್ಟೆ ಧಾರಣೆ

16-06-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	: 420 - 470
ಚೋಲ್ ಅಡಿಕೆ	: 525 - 550
ಡಬಲ್ ಚೋಲ್	: 525 - 550
ಹೊಸ ಪಟೋರ	: 335 - 385
ಹಳೆ ಪಟೋರ	: 335 - 385
ಹೊಸ ಉಳ್ಳಿ	: 140 - 285
ಹಳೆ ಉಳ್ಳಿ	: 130 - 285
ಹೊಸ ಕೋಕಾ	: 315 - 335
ಹಳೆ ಕೋಕಾ	: 315 - 335
ಹೊಸ ಕರಿಗೋಟು	: 245 - 275
ಹಳೆ ಕರಿಗೋಟು	: 245 - 275
ಹಸಿ ಕೊಕ್ಕೋ	: 70 - 100
ಒಣ ಕೊಕ್ಕೋ	: 270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	: 450 - 670

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	- 270.00
ಆರ್‌ಎಸ್‌ಎಸ್ 2	- 224.00
ಸ್ಕ್ರಾಪ್ 1	- 155.00
ಸ್ಕ್ರಾಪ್ 2	- 145.00

ಪ್ರಕಟಣೆ

ಸ್ಪಂದನ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ., ಉಡುಪಿ ತಾ। ಇದರ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಯ ಆಡಳಿತ ಮಂಡಲಿಯ ಸದಸ್ಯರ ಆಯ್ಕೆಗಾಗಿ ಸಂಘದ ಆಡಳಿತ ಕಛೇರಿ ಆವರಣದಲ್ಲಿ ದಿನಾಂಕ:05.07.2026ರಂದು ಪೂರ್ವಾಹ್ನ 9.00 ಗಂಟೆಯಿಂದ ಅಪರಾಹ್ನ 4.00 ಗಂಟೆಯವರೆಗೆ ಚುನಾವಣೆ ಜರುಗಲಿದ್ದು, ಸ್ಪರ್ಧಿಸಲಿಚ್ಛಿಸುವ ಸಂಘದ ಅರ್ಹ ಸದಸ್ಯರು ತಮ್ಮ ನಾಮಪತ್ರವನ್ನು ಸಂಘದ ಕಛೇರಿಯಲ್ಲಿ ಪಡೆದು ದಿನಾಂಕ:21.06.2026 ರಿಂದ 27.06.2026ರ ವರೆಗೆ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 2.00 ಗಂಟೆಯೊಳಗಾಗಿ ಸಂಘದ ಆಡಳಿತ ಕಛೇರಿಯಲ್ಲಿ ಚುನಾವಣಾ ನಿರ್ವಚನಾಧಿಕಾರಿಯವರಿಗೆ ಸಲ್ಲಿಸತಕ್ಕದ್ದು. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ವೇಳಾಪಟ್ಟಿಯನ್ನು ಸಂಘದ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

(ಕೆ.ಆರ್.ರೋಹಿತ್)
ಚುನಾವಣಾ ನಿರ್ವಚನಾಧಿಕಾರಿ
ಸ್ಪಂದನ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ., ಉಡುಪಿ ತಾ। ಹಾಗೂ ಪ್ರ.ದ.ಸ., ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ, ಉಡುಪಿ
ಸ್ಥಳ: ಉಡುಪಿ
ದಿನಾಂಕ: 16-06-2026

IN THE COURT OF THE SENIOR CIVIL JUDGE, MADIKERI KODAGU
P & SC.No.: 3/2025

Petitioner:
Miss. Pooja Manoharan,
Aged 26 years,
D/o. Sri. G. Manoharan,
Pooja Deepam, Nirmalagiri,
Kannur District, Kerala State.
Presently at Gowli Street,
Madikeri, Kodagu District.
V/s
Respondents:
1. Smt. Dhanalakshmi C.H.,
D/o. late Balan B.,
Aged 68 years,
2.Smt. Deepa M.,
W/o. Sri. G. Manaoharan,
Aged 47 years, Both residing at Pooja Deepam, Nirmalagiri,
Kannur District, Kerala State.
V/s

NOTICE TO THE GENERAL PUBLIC

That the above named petitioner has filed the above petition for the grant succession certificate pertaining to the service benefits of **late Smt. C.H. Sarasu,** W/o. Late Krishna worked in Karnataka State Electricity Board at Madikeri in the interest of justice and equity.

The above case stands posted to **22/07/2026.** The General Publics at large are hereby informed that any person of persons have any say in the above case can appear before the Hon'ble Court of the Senior Civil Judge, Madikeri, Kodagu at **11 A.M.** on the date mentioned above. Failing which, the case will be heard and disposed of accordingly.

Dated at Madikeri on this 9th day of June 2026.

Given under my hand and the seal of the Court.

(By order of the Court)
Sd/- Chief Ministrial Office
The Court of the Hon`ble Senior Civil Judge, Madikeri
Sd/- C.T. Joseph
Advocate for the Petitioner

ಜಿಲ್ಲಾ ಪಂಚಾಯತ್ ಧಾರವಾಡ
ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ್‌ರಾಜ್ ಇಂಜಿನೀಯರಿಂಗ್ ವಿಭಾಗ, ಧಾರವಾಡ
ದೂರವಾಣಿ: 0836-2442316(ಕ) 0836-2749018 ಫ್ಯಾಕ್ಸ್ ಇ-ಮೇಲ್: zpeddwd@rediffmail.com
ಕ್ರ.ಸಂ.ಪಂ.ರಾ.ಇಂ.ವಿ.ಧಾ/ಸ.ಇಂ.-1/2026-2027/916 ದಿನಾಂಕ : 16-06-2026

ಟೆಂಡರ್ ಪ್ರಕಟಣೆ - 03/2026-27

(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರ ಪರವಾಗಿ **ಕಾರ್ಯಪಾಲಕ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಧಾರವಾಡ** ಇವರಿಂದ ಸರ್ಕಾರಿ ಆದೇಶ ಸಂಖ್ಯೆ: **No.FD 876 Exp-12/2017, Bangalore, dated: 15-09-2017** ರನ್ವಯ ವಿವಿಧ ಲೆಕ್ಕಶೀರ್ಷಿಕೆಗಳ ಕಾಮಗಾರಿಗಳ ಐಟಂವಾರು ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ನಿಗದಿತ ನಮೂನೆಯಲ್ಲಿ ಲೋಕೋಪಯೋಗಿ/ಪಂ.ರಾ.ಇಂ. ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯುಮೆಂಟ್ಸ್ ಕೆಡಬ್ಲ್ಯೂ-1, ಕೆಡಬ್ಲ್ಯೂ-3, ಕೆಡಬ್ಲ್ಯೂ-4 ರಲ್ಲಿಯ ನಿಬಂಧನೆಗೊಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 2000 ರನ್ವಯ ಇ-ಪ್ರೊಕ್ಯೂರ್‌ಮೆಂಟ್‌ನ https://kppp.karnataka.gov.in/ ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಬಹುದು.

Indent Numbers : 26837, 26835, 26827, 26843, 26850, 26828, 27090.
SC : 26862. ST : 26568.
CAT-II (A) : 26839.

ಕ್ಯಾಲೆಂಡರ್ ಆಫ್ ಇವೆಂಟ್ಸ್:

1) ಪ್ರಿ-ಬಿಡ್ ಮಿಟಿಂಗ್ ದಿನಾಂಕ: **18-06-2026** ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ. 2) ಟೆಂಡರ್ ದಾಖಲೆಗಳನ್ನು ದಿನಾಂಕ: **16-06-2026** ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: **30-06-2026** ರ ಸಂಜೆ **4.00** ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. 3) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ **01-07-2026** ರ ಸಾಯಂಕಾಲ **4.30** ಗಂಟೆಗೆ. ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **03-07-2026** ರ ಬೆಳಿಗ್ಗೆ **11.00** ಗಂಟೆಗೆ. ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ.

ಕಾಮಗಾರಿಯ ಹೆಸರು/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಷರತ್ತುಗಳು/ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ/ ಇಎಂಡಿ ಮೊತ್ತ ಇತ್ಯಾದಿ ವಿವರಗಳಿಗೆ https://kppp.karnataka.gov.in/ ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಸಂಬಂಧಿಸಿದ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದು.

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- (ಶ್ರೀಶೈಲ ಹೊನಕೇರಿ)
ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ.ವಿಭಾಗ, ಧಾರವಾಡ.
ಡಿಐಪಿಆರ್/ಧಾರವಾಡ/312/ಮಣಿಪಾಲ್/2026-27

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಹೇಮಾವತಿ ನಾಲಾ ತನಿಖಾ ವಿಭಾಗ, ಹೆಬ್ಬೂರು-572 120 ತುಮಕೂರು ಜಿಲ್ಲೆ.
ಪೋನ್ ನಂ.0816-2957008 ಇ-ಮೇಲ್: eehcidhebbur@gmail.com
ಸಂಖ್ಯೆ: 04/2026-27 ದಿನಾಂಕ: 12.06.2026

ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ 04 ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಅನ್ನು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ Item rate ಆಧಾರದ ಮೇಲೆ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಪ್ರಾರಂಭಿಕ ದಿನಾಂಕ: 16.06.2026 ಮತ್ತು ಅಂತಿಮ ದಿನಾಂಕ: 24.06.2026 ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಹೇಮಾವತಿ ನಾಲಾ ತನಿಖಾ ವಿಭಾಗ, ಕಾ.ನೀ.ನಿ.ನಿ, ಹೆಬ್ಬೂರು
DIPR/TUM/107/KSMCA/2026-27

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸ್ತ್ರೀ ಶಕ್ತಿ (ನಂ.SS-524th) ಡ್ರಾ ಜೂನ್ 16ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
SJ 517126 (KAYAMKULAM)

Cons Prize-Rs: 5000/-
SA 517126 SB 517126 SC 517126 SD 517126
SE 517126 SF 517126 SG 517126 SH 517126
SK 517126 SL 517126 SM 517126

2nd Prize Rs: 30,00,000/- [30 Lakhs]
SG 315541 (CHITTUR)

3d Prize Rs: 5,00,000/- [5 Lakhs]
SG 800412 (KASARAGOD)

FOR THE TICKETS ENDING WITH THE FOLLOWING NUMBERS

4th Prize Rs.5,000/-
1005 1342 2090 2123 2576 2636 2807 3982 4027 4050 5769 5855 7448 7764 7796 7805 8011 8234 9288

5th Prize Rs.2,000/-
1901 4168 4515 7689 7735 8807

6th Prize Rs.1,000/-
0201 0891 1045 1799 1895 1908 2520 3409 3677 3775 3831 5181 5387 5762 5951 6038 6278 6674 6710 7404 7873 8162 8484 8537 9816

7th Prize Rs.500/-
0142 0590 0610 0622 0699 1123 1197 1322 1643 1682 2052 2286 2454 2507 2852 3323 3470 3573 3878 3893 3973 4003 4035 4080 4303 4320 4535 4632 4773 4818 4849 4959 5009 5057 5203 5290 5292 5339 5356 5404 5442 5527 5565 5567 5628 5636 5858 5868 6343 6351 6361 6524 6770 6790 6806 6822 7014 7175 7348 7601 7675 7754 7758 7814 8180 8346 8466 8639 8698 9145 9226 9583 9868 9928 9929 9997

8th Prize Rs.200/-
0112 0267 0330 0343 0850 1169 1826 1835 1865 2091 2160 2222 2318 2376 2648 2996 3035 3070 3074 3149 3254 3293 3701 3783 3824 3899 3910 3950 3986 4052 4105 4183 4222 4486 4695 4723 4758 4788 4921 4976 4987 5256 5313 5342 5347 5500 5526 5576 5825 5971 6047 6089 6096 6189 6234 6320 6366 6597 6634 6892 7148 7162 7397 7518 7598 7970 8016 8049 8189 8375 8376 8437 8489 8522 8645 8674 8703 8716 8857 9158 9334 9504 9626 9659 9810 9880 9886 9924 9931 9990

9th Prize Rs.100/-
0040 0064 0121 0168 0229 0264 0270 0356 0456 0460 0555 0569 0594 0750 0754 0771 0937 0993 1069 1093 1185 1263 1594 1708 1743 1830 1903 1977 1993 2199 2214 2375 2391 2406 2596 2615 2621 2629 2728 2776 2814 3024 3034 3061 3076 3145 3175 3346 3476 3492 3514 3610 3624 3645 3670 3697 3715 3858 3896 3970 4045 4148 4205 4454 4559 4568 4639 4675 4714 4826 4902 4946 4962 4975 5001 5011 5019 5077 5225 5240 5280 5354 5457 5480 5494 5508 5754 5760 5836 5932 6057 6166 6200 6363 6430 6515 6599 6607 6647 6650 6656 6838 6879 6921 6977 7013 7147 7207 7229 7249 7255 7258 7401 7433 7440 7511 7746 7840 7880 7995 8062 8173 8260 8282 8286 8326 8427 8431 8465 8548 8562 8701 8753 8817 8877 9028 9205 9362 9406 9413 9477 9557 9579 9587 9616 9629 9670 9755 9896 9905

ಶ್ರೀ ಕ್ಷೇತ್ರ ಮಾರಣಕಟ್ಟೆ
ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನ, ಮಾರಣಕಟ್ಟೆ
ಚಿತ್ತೂರು ಗ್ರಾಮ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ-576233
ಫೋನ್: 08254-295124, 7760138231
ಪ.ಸಂ.92:ಶ್ರೀ.ಬ್ರದೇ.ಮಾ./ಟೆಂಡರ್ ಪ್ರಕಟಣೆ (03)/2026-2027 ದಿನಾಂಕ: 10.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ)

ದಿನಾಂಕ:01.07.2026 ರಿಂದ 30.06.2027 ವರೆಗೆ ಶ್ರೀ ದೇವಳಕ್ಕೆ ಬರುವ ಭಕ್ತಾದಿಗಳಿಗೆ ಪೂಜಾ ಪ್ರಸಾದ ನೀಡಲು ಮತ್ತು ಅನ್ನದಾಸೋಹಕ್ಕೆ ಹಾಗೂ ದಿನಾಂಕ:01.07.2026 ರಿಂದ 30.06.2027 ವರೆಗೆ ರಂಗಪೂಜೆಯ ನೈವೇದ್ಯಕ್ಕೆ ಅಗತ್ಯವಿರುವ ಉತ್ತಮ ಗುಣಮಟ್ಟದ ತೆಂಗಿನಕಾಯಿ ಸರಬರಾಜು ಮಾಡುವ ಬಗ್ಗೆ ಅಧಿಕೃತ ಸರಬರಾಜುದಾರರಿಂದ ಟೆಂಡರನ್ನು ಕರ್ನಾಟಕ ಸರಕಾರದ ಇ-ಪ್ರೋಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: 23.06.2026 ಅಪರಾಹ್ನ 03.00 ಗಂಟೆಯವರೆಗೆ ಹಾಗೂ ಟೆಂಡರನ್ನು ತೆರೆಯುವ ದಿನಾಂಕ:23.06.2026 ಅಪರಾಹ್ನ 05.00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ಅಥವಾ ಸಹಾಯವಾಣಿ ಸಂಖ್ಯೆ: (080) 2234 0060, 2237 1090 ನ್ನು ಸಂಪರ್ಕಿಸಬಹುದು.

01	ಸೇವಾ ಪ್ರಸಾದ/ ಅನ್ನದಾಸೋಹದ ಅಡುಗೆ ತಯಾರಿಗೆ 400 ರಿಂದ 450 ಗ್ರಾಂ ತೂಕದ ತೆಂಗಿನಕಾಯಿ	ಒಂದರ ದರ ನಮೂದಿಸತಕ್ಕದ್ದು
02	ರಂಗಪೂಜೆ ನೈವೇದ್ಯಕ್ಕೆ ತೆಂಗಿನಕಾಯಿ (ಒಂದು ರಂಗಪೂಜೆಗೆ) 3 ತೆಂಗಿನಕಾಯಿ ಸೆಟ್ (290 ರಿಂದ 350 ಗ್ರಾಂ ಒಳಗಿನ ತೂಕದ)	ಸೆಟ್ ಒಂದರ ದರ ನಮೂದಿ ಸತಕ್ಕದ್ದು

ಸಹಿ/- (ಸಿ. ಸದಾಶಿವ ಶೆಟ್ಟಿ)
ಅನುವಂಶೀಯ ಆಡಳಿತ ಮೊಕ್ತೇಸರರು ,
ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನ, ಮಾರಣಕಟ್ಟೆ
ಚಿತ್ತೂರು ಗ್ರಾಮ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

PUBLIC NOTICE

I am investing the title of **1) Mrs. VARIJA 2) Mrs. ANITHA V. BANGERA 3) Mr. VINAYAKA VASANTHA BANGER, 4)Mr. MANJUNATHA V. BANGERA 5)Mrs. JEEVITHA CHETAN KUMAR,** No.1 is wife and 2 to 5 are the children of Mr. J. Vasantha alias Vasanth Kumar, No. 1 to 4 are residing at #25-23-1458, near M.R Lane, 1st Cross, Nandigudda, Mangaluru, D.K-575002, No. 5 is residing at No. 503, F-Wing, Srinivas West side Country, Near HP Gas Godown, Pimple Gurav, Haveli, Pune, Maharashtra -411061 and they have represented that they are the absolute and joint owners of the schedule property by virtue of registered Gift Deed, document No.MGT-1-02068-2024-25, before SRO, Mangaluru Taluk dated 24-05-2024 and said owners further represented that one of the original of previous document i.e Sale Deed executed by M.Narayana Rao and others in favour of Smt. Seetha Shedthi, which is registered as per document No. 1221/1983-84, pages 92-95, Volume 514 dated 26-11-1983 before SRO, Mangaluru Taluk is lost and not traceable. If any person, Banks, Financial institutions are in possession of the aforesaid document or have got any claim over the same shall lodge before me in writing within 7 days from the date of this publication with documentary proof. If no claim received within time, I would proceed to issue title certificate considering that the said document is genuinely lost.

SCHEDULE PROPERTY

Immovable property situated in Maroli Village of Mangaluru Taluk and within the Mangaluru

Sy.No.	Kissam	EXTENT A.C
70/6 (as per previous document 70)	Converted	0-05.00 (202.34 Sq.mtrs)

Together with house bearing D.No. 3-14/3A and all appertaining easementary rights of way, water, etc.
Boundaries: North: Road, East: Portion of same Sy.No,West: Portion of same Sy.No, South: Portion of same Sy.No.

Mangalore
12-06-2026

Sd/- **[Sri. B. GURUPRASAD SHETTY]**
ADVOCATE
3rd Floor, B Wing,
Rama Bhavana Commercial Complex,
Opp. Passport Office, Kodialbail,
Mangaluru-575003

ಕರ್ನಾಟಕ ಸರಕಾರ (ಕರ್ನಾಟಕ ಸರ್ಕಾರದ ಸ್ವಾಯುತ್ತ ಸಂಸ್ಥೆ)
ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ಹಿಂದಿನ ಹೆಸರು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ ಮುಳಗುಂದ ರಸ್ತೆ, ಮಲ್ಲಸಮುದ್ರ, ಗದಗ-582103 ದೂರವಾಣಿ ಸಂಖ್ಯೆ: 08372-200601
E-mail ID : gimsgadag@gmail.com
web : www.gimsgadag.karnataka.gov.in
File No : KHPIMS/Tender/Cost Per Test/20/2026-27/35
Date : 16.06.2026

ಇ-ಟೆಂಡರ ಪ್ರಕಟಣೆ

ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಜೀವ ರಸಾಯನ ವಿಭಾಗಕ್ಕೆ Biochemistry Analyser Reagents Cost Per Reportable Test Reagent Rental Basis ಮುಖಾಂತರ ವೈದ್ಯಕೀಯ ಪ್ರಯೋಗ ಶಾಲಾ ಪರೀಕ್ಷೆಗಳಿಗಾಗಿ ಬಾಡಿಗೆ ಆದಾರದ ಮೇಲೆ ಸರಬರಾಜುವಿಗಾಗಿ ಕರೆದ ಟೆಂಡರ ಆಸಕ್ತಿಯುಳ್ಳ ಸಂಘ-ಸಂಸ್ಥೆಗಳಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಮರು ಟೆಂಡರ ಕರೆಯಲಾಗಿದ್ದು, ದಿನಾಂಕ : **17.06.2026** ರಿಂದ ದಿನಾಂಕ : **01.07.2026**ರ ಸಾಯಂಕಾಲ 4:00 ಗಂಟೆವರೆಗೆ ಇ-ಪೋರ್ಟಾಲ್ ಸಂಖ್ಯೆ:DME/2026-27/IND2076 (https://kppp.Karnataka .gov.in/)ನಲ್ಲಿ ಟೆಂಡರ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ತವ್ಯದ ದಿನಗಳಲ್ಲಿ ಕೆಳಗಡೆ ಸಹಿ ಮಾಡಿದವರ ಕಛೇರಿಗೆ ಸಂಪರ್ಕಿಸಬಹುದು.

ಸಹಿ/- ನಿರ್ದೇಶಕರು
ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ವಾಸಾಸಂಇ/ಗದಗ/122/ಕೆಎಸ್‌ಎಂಸಿಎ/2026-27

ಕರ್ನಾಟಕ ಸರಕಾರ
ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹೊನ್ನಾವರ ವಿಭಾಗ, ಹೊನ್ನಾವರ - 581 334
OFFICE OF THE DEPUTY CONSERVATOR OF FORESTS, HONAVAR DIVISION, HONAVAR-581334
ದೂರವಾಣಿ ನಂ.: 08387-295236 Email: dcf.honavar@gmail.com
ಸಂ.ಎ2/ಬಜೆಟ್/ಕೆಶೋರ್/ಟೆಂಡರ್/ವಿವ-/2026-27 ದಿನಾಂಕ: 08.06.2026

ಟೆಂಡರ್ ಪ್ರಕಟಣೆ

(1) 2026-27 ನೇ ಸಾಲಿಗೆ ಭಟಕಳ ಉಪ ವಿಭಾಗದಲ್ಲಿ ವಿಶ್ವ ಬ್ಯಾಂಕ ನೆರವಿನ ಕೆ-ಶೋರ್ ಯೋಜನೆಯಡಿ ವಿವಿಧ ಮಾದರಿಗಳಲ್ಲಿ ನೆಡುತೋಪು ರಚನೆ, ನಿರ್ವಹಣೆ ಹಾಗೂ ನರ್ಸರಿ ಕಾಮಗಾರಿ ಕೆಲಸಗಳ ಒಟ್ಟೂ 10 ಯುನಿಟ್ಟುಗಳಿಗೆ ದಿನಾಂಕ: 17.06.2026 ರಂದು ಆರ್ಥಿಕ ಬಿಡ್ ಟೆಂಡರ ಕರೆಯಲಾಗಿದೆ. (2) 2026-27 ನೇ ಸಾಲಿಗೆ ಕುಮಟಾ ಉಪ ವಿಭಾಗದಲ್ಲಿ ವಿಶ್ವ ಬ್ಯಾಂಕ ನೆರವಿನ ಕೆ-ಶೋರ್ ಯೋಜನೆಯಡಿ ವಿವಿಧ ಮಾದರಿಗಳಲ್ಲಿ ನೆಡುತೋಪು ರಚನೆ, ನಿರ್ವಹಣೆ ಹಾಗೂ ನರ್ಸರಿ ಕಾಮಗಾರಿ ಕೆಲಸಗಳ ಒಟ್ಟೂ 25 ಯುನಿಟ್ಟುಗಳಿಗೆ ದಿನಾಂಕ: 19.06.2026 ರಂದು ಆರ್ಥಿಕ ಬಿಡ್ ಟೆಂಡರ ಕರೆಯಲಾಗಿದೆ. (3) 2026-27 ನೇ ಸಾಲಿಗೆ ಕುಮಟಾ ಉಪ ವಿಭಾಗದಲ್ಲಿ ವಿಶ್ವ ಬ್ಯಾಂಕ ನೆರವಿನ ಕೆ-ಶೋರ್ ಯೋಜನೆಯಡಿ ವಿವಿಧ ಮಾದರಿಗಳಲ್ಲಿ ನೆಡುತೋಪು ರಚನೆ, ನಿರ್ವಹಣೆ ಹಾಗೂ ನರ್ಸರಿ ಕಾಮಗಾರಿ ಕೆಲಸಗಳ ಒಟ್ಟೂ 17 ಯುನಿಟ್ಟುಗಳಿಗೆ ದಿನಾಂಕ: 22.06.2026 ರಂದು ಆರ್ಥಿಕ ಬಿಡ್ ಟೆಂಡರ ಕರೆಯಲಾಗಿದೆ. ದಿನಾಂಕ: 06.12.2024 ಮತ್ತು 17.10.2025 ರ Pre qualified tender ವಿಜೇತ ಟೆಂಡರುದಾರರು ಟೆಂಡರಿನಲ್ಲಿ ಭಾಗವಹಿಸಬಹುದಾಗಿದೆ. https://kppp.karnataka.gov.in ಮೂಲಕ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ 08387-295236 ಮೂಲಕ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

DIPR/KWR/KSMCA/211/26-27 dt. 16.06.2026
ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹೊನ್ನಾವರ ವಿಭಾಗ, ಹೊನ್ನಾವರ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಶ್ರೀ ದೇವರಾಜ ಅರಸ್ ಬಡಾವಣೆ, ಟಮಕ, ಕೋಲಾರ-563 103
E-Mail:bnuregevl@karnataka.gov.in
web: www.bnu.karnataka.gov.in
ದಿನಾಂಕ: 15.06.2026

ಇ-ಟೆಂಡರ್ ಅಧಿಸೂಚನೆ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ ಇಲ್ಲಿಗೆ ಈ ಕೆಳಕಂಡಂತೆ ವಿವಿಧ ಪ್ರಕ್ರಿಯೆಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. (1) ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 6ನೇ ಘಟಿಕೋತ್ಸವದ ಅಂಗವಾಗಿ ಪರೀಕ್ಷಾ ವಿಭಾಗಕ್ಕೆ **ಗೋಲ್ಡ್ ಮೆಡಲ್** ಸರಬರಾಜು ಮಾಡುವ ಬಗ್ಗೆ. **ಟೆಂಡರ್‌ನಂ: BNU/2026-27/IND0068.** (2) ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರದ ಪರೀಕ್ಷಾ ವಿಭಾಗಕ್ಕೆ **Kora Cloth Bag** ಗಳನ್ನು ಸರಬರಾಜು ಮಾಡುವ ಬಗ್ಗೆ. **ಟೆಂಡರ್‌ನಂ: BNU/2026-27/IND0069** ಕರ್ನಾಟಕ ಪಾರದರ್ಶಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಕಾಯ್ದೆಯಡಿಯಲ್ಲಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಇಲಾಖೆಯಲ್ಲಿ ನೋಂದಾಯಿತ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು **ಟೆಂಡರ್ ದಾಖಲೆಗಳನ್ನು ದಿನಾಂಕ: 12.06.2026** ರಿಂದ **http://kppp. karna taka.gov.in ವೆಬ್‌ಸೈಟ್** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಸಚಿವರು ಮೌಲ್ಯಮಾಪನ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/- ಕುಲಸಚಿವರು(ಮೌ)
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಟಮಕ, ಕೋಲಾರ-563103
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:121/ಕೆಎಸ್‌ಎಂಸಿಎ/2026-27

IN THE COURT OF THE PRINCIPAL SENIOR CIVIL JUDGE &ACJM PUTTUR D.K.
Crl. M.C No.190/2024

Between:
Ivan Maxim D Silva ...Petitioner
And
CMC ...Respondent

PUBLIC NOTICE

Whereas above Petitioner has filed petition under section 13(3) of the registration of births and deaths act in respect of death of **Emilya D Silva** died on 11-06-2016 at home at Samethadka, Puttur Kasaba Village of Puttur taluk D.K. If anyone has got any claim, right/ title etc, can file their objection before the Hon'ble Prl.Senior Civil Judge and ACJM at Puttur D.K. on **27-07-2026** at **11:00 A.M.,** either in person or through a counsel to answer the same, failing which, the petition will be disposed off.

(By Order of the Court)
Sd/- Chief Ministerial Officer
Court of Senior Civil Judge and Addl. ACJM, Puttur, D.K.
Sd/- Rakesh J Mascarenhas
Advocate for Petitioner

IN THE COURT OF PRINCIPAL CIVIL JUDGE BANTWAL
Os No 378/2025

Between:
State Bank of India ...Plaintiff
AND
Mr. Muhammad Shareef ...Defendant

NOTICE

To,
Mr. Muhammad Shareef
Aged about 46 years
Prop: Modern Traders
S/O Abdul Khadar
R/At D.NO.5-27/A
Zeenath Manzil House,
Neharunagar Narikombu,
Bantwal Taluk.

Please take Notice that the above suit for recovery of money filed by the plaintiff against you stand posted on **29-07-2026 at 11:00 A.M.** before the above court for your appearance.

On the said date if you fail to appear before the court either personally or through your advocate the matter will be heard and decided exparte.

Given under my hand and seal of the court on this 12th day of June 2026.

(By the order of court)
Sd/- Chief Ministerial Officer
Court of Prl. Civil Judge & JMFC Bantwal, D.K.
Sd/- Ashwath N.
Advocate for Plaintiff

ಪಟ್ಟಣ ಪಂಚಾಯತ್ ಕಾರ್ಯಾಲಯ, ಸುಳ್ಯ
ಸುಳ್ಯ ತಾಲೂಕು-574239 ದ.ಕ, ದೂ: 08257-230354/230414
ಫ್ಯಾಕ್ಸ್: 08257-230071 ವೆಬ್‌ಸೈಟ್: www.sulliatown.mrc.gov.in
ಇ-ಮೇಲ್: co.sullia@gmail.com
ನಂ: ಸುಪಪಂ/ಜೆ.ಇ/ಪಂ.ನಿ/ಟೆ.ಪ್ರ/01/2026-27 ದಿನಾಂಕ: 16/06/2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸರಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್ ಕಾರ್ಯಾಲಯ ಸುಳ್ಯ ರವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ತಿದ್ದುಪಡಿ 2000 ರ ಪ್ರಕಾರ ಇ-ಪೋರ್ಟಲ್ ಮುಖಾಂತರ ಸುಳ್ಯ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ರಸ್ತೆ ಬದಿ ಕಾಡು ಹಾಗೂ ಬಾಗಿದ ಮರದ ಗೆಲ್ಲು ಕಡಿಯುವುದು ಮತ್ತು ಮಳೆ ನೀರು ಚರಂಡಿ, ಮೋರಿಗಳ ಹೂಳೆತ್ತಿ ದುರಸ್ಥಿ ಮಾಡುವ ಕಾಮಗಾರಿಗಳಿಗೆ ಇಂಡೆಂಟ್ ಸಂಖ್ಯೆ: (1) DMA/2026-27/OW/WORK_INDENT59654 (2) DMA/2026 27/OW/WORK_INDENT59660 (3)DMA/2026-27/OW/WORK_INDENT 59662 (4)DMA/2026-27/OW/WORK_INDENT59663 (5)DMA/2026-27/OW/WORK_INDENT59670 (6) DMA/2026-27/OW/ WORK_INDENT 59671 (7) DMA/2026-27/OW/WORK_INDENT 59672 ರಂತೆ ಸರಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ.

ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 23/06/2026 ಅಪರಾಹ್ನ 5.00 ಗಂಟೆ. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಯನ್ನು www.kppp.karnataka.gov.in ಪರಿಶೀಲಿಸಿಕೊಂಡು ಟೆಂಡರ್ ಸಲ್ಲಿಸಲು ಕೋರಲಾಗಿದೆ ಹಾಗೂ ಹೆಚ್ಚಿನ ವಿವರಗಳಿಗೆ ವೆಬೆಸೈಟ್ www.sulliatown.mrc.gov.in ನಿಂದ ಪಡೆದುಕೊಳ್ಳಬಹುದು.

ಸಹಿ/-, ಶ್ರೀಮತಿ ಮಂಜುಳಾ ಎಂ., ಆಡಳಿತಾಧಿಕಾರಿ, ಪಟ್ಟಣ ಪಂಚಾಯತ್ ಸುಳ್ಯ
ಸಹಿ/-, ಶ್ರೀ ಹೆಚ್ ಆರ್ ಬಸವರಾಜ್ ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್ ಸುಳ್ಯ
DIPR/DK/KSMCA/381/26-27 dt: 16.06.2026

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ್ ಧಾರವಾಡ
ಕಾರ್ಯನಿರ್ವಾಹಕ ಇಂಜನೀಯರರು,
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಧಾರವಾಡ
ಕ್ರ.ಸಂ.ಪಂ.ರಾ.ಇಂ.ವಿ.ಧಾ/ಸ.ಇಂ.-2/2026-2027/915 ದಿನಾಂಕ : 16-06-2026.

ಅಲ್ಪಾವಧಿ ಟೆಂಡರ್ ಪ್ರಕಟಣೆ -04/2026-27
(ಇ-ಪ್ರೊಕ್ಯೂರಮೆಂಟ್ ಮುಖಾಂತರ)

ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಧಾರವಾಡ ಇವರಿಂದ ಸರ್ಕಾರಿ ಆದೇಶ ಸಂಖ್ಯೆ: No.FD 876 Exp-12/2017, Bangalore, dated: 15-09-2017 ರನ್ವಯ ವಿವಿಧ ಯೋಜನೆಯಡಿ ಕಾಮಗಾರಿಗಳ ಐಟಂವಾರು ಟೆಂಡರ್‌ನ್ನು ಇ-ಪ್ರೊಕ್ಯೂರಮೆಂಟ್ ಮುಖಾಂತರ ನಿಗದಿತ ನಮೂನೆಯಲ್ಲಿ ಲೋಕೋಪಯೋಗಿ/ಪಂ.ರಾ.ಇಂ. ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ಸ್ **KW-1, KW-2, KW-3** ರಲ್ಲಿಯ ನಿಬಂಧನೆಗೊಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 2000 ರನ್ವಯ ಇ-ಪ್ರೊಕ್ಯೂರಮೆಂಟ್‌ನ **https://kppp.karnataka.gov.in/** ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಬಹುದು.

Indent Numbers :
General : 26403, 26769, 26404, 26431, 26411 ,26772, 26438/Call-2 26445/Call-2, 26526/Call-2, 26529/Call-2, 24812/Call-2 24801/Call-2, 26430/Call-2, 24390/Call-2, 24507/Call-2 24473/Call-2, 26963/Call-2.
SC Category : 26774, 26698, 24333/Call-2, 24320/Call-2.
ST Category : 26773, 26402, 24348/Call-2, 24808/Call-2.
CAT-2 (A) : 26425, 26408.
CAT-1 : 23958/Call-2

ಕ್ಯಾಲೆಂಡರ್ ಆಫ್ ಇವೆಂಟ್ಸ್:

1) ಟೆಂಡರ್ ದಾಖಲೆಗಳನ್ನು ದಿನಾಂಕ: **18-06-2026** ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: **29-06-2026** ರ ಸಂಜೆ **4.00** ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. 2) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **30-06-2026** ರ ಸಾಯಂಕಾಲ **4.30** ಗಂಟೆಗೆ. ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ.

ಕಾಮಗಾರಿಯ ಹೆಸರು/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಷರತ್ತುಗಳು/ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ/ EMD ಮೊತ್ತ ಇತ್ಯಾದಿ ವಿವರಗಳಿಗೆ **https://kppp.karnataka.gov.in/** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಸಂಬಂಧಿಸಿದ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದು.

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- (ಶ್ರೀ ಶ್ರೀಶೈಲ ಹೊನಕೇರಿ)
ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ.ವಿಭಾಗ, ಧಾರವಾಡ.
ವಾ.ಸಾ.ಸಂ.ಇ/ಧಾರವಾಡ/313/ದೇಶಪಾಂಡೆಪಬ್ಲಿಸಿಟಿ/2026-27

ಕರ್ನಾಟಕ ಸರ್ಕಾರ
ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ -585401.
Email: eokvafsu@gmail.com, ಕಛೇರಿ ದೂರವಾಣಿ: 08482-245361
ಸಂಖ್ಯೆ:ಆ.ಅ/ಕ.ಪ.ಪ.ಮೀ.ವಿ.ವಿ/ಟೆ.ನಂ.151/ಕಾಮಗಾರಿ/2026-27 ದಿನಾಂಕ:15.06.2026

ಟೆಂಡರ ಪ್ರಕಟಣೆ
(ಇ-ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

1) ಕಾಮಗಾರಿ ವಿವರ Construction of Concrete roadinfront of main building and providing new name board for main gate at IAH&VB, Hebbal, Bangalore, 2) ಕಾಮಗಾರಿ ಅಂದಾಜು ಮೊತ್ತ **Rs.2643842.00** (Excluding GST), 3) ಗುತ್ತಿಗೆದಾರರ ಅರ್ಹತೆ ವಿವರ e-portal ನಲ್ಲಿ ನಮೂದಿಸಿದಂತೆ, 4) ಕಾಮಗಾರಿ ಟೆಂಡರ ಮೊತ್ತದ ವಿವರ **Rs.2643842.00** (Excluding GST), 5) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ e-portal ನಲ್ಲಿ ನಮೂದಿಸಿದಂತೆ, 6) ಟೆಂಡರ ಫಾರಂ ಸಲ್ಲಿಸಲು ಅಂತಿಮ **ದಿನಾಂಕ 23.06.2026 up to 5.00 PM,** 7) ಫೈನಾನ್ಷಿಯಲ ಬಿಡ ಟೆಂಡರ ತೆರೆಯುವ **ದಿನಾಂಕ 25.06.2026 at 11.30 AM,** 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ, ವಿಳಾಸ, ದೂರವಾಣಿ ಸಂಖ್ಯೆ. ಆಸ್ತಿ ಅಧಿಕಾರಿಗಳ ಕಛೇರಿ, ಕಪಪಮೀವಿವಿ, ನಂದಿನಗರ, ಬೀದರ. 08482-245446, 9) ಅಂತರ್ಜಾಲ ತಾಣದ ವಿಳಾಸ e-procurement portal- www.eproc.karnataka.gov.in.

ಸಹಿ/- ಆಸ್ತಿ ಅಧಿಕಾರಿಗಳು
ಕಪಪಮೀವಿವಿ, ಬೀದರ.
ವಾ.ಸಾ.ಸಂ.ಇ/ಬೀದರ/61/ಕೆಎಸ್‌ಎಂಸಿ&ಎ/2026-27

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ

ಕೆ.ಪಿ.ಪಿ ಇ-ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 4/2026-27 ದಿನಾಂಕ: 10.06.2026

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ- IV ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ2000ರ ಪ್ರಕಾರ ಐಟಂವಾರು ಇ-ಪ್ರಕ್ಯೂರ್‌ಮೆಂಟ್ ದ್ವಿ-ಲಕೋಟೆ ಪದ್ಧತಿಯಲ್ಲಿ (Double Cover System) ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ 2025-26 ನೇ ಸಾಲಿನ CMIDP ಲೆಕ್ಕಶೀರ್ಷಿಕೆಯಡಿ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅಧಿಕೃತ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ಕೆ.ಪಿ.ಪಿ ಇ-ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **https://eproc.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) E-procurement ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿ ಗಳನ್ನು ವೆಬ್ ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ: 10.07.2026** ರ **16.30 ರವರೆಗೆ (2)** ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 13.07.2026 ರಂದು 16.35 ನಂತರ (3)** ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 14.07.2026 ರಂದು ಬೆಳಿಗ್ಗೆ 11.30 ನಂತರ** (4) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): e- Procurement ನಿಯಮಾನುಸಾರ

ಕ್ರ. ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಗಳಲ್ಲಿ)	ಕಾಲಮಿತಿ ಮಳೆಗಾಲ ಸೇರಿ
1	Improvements to road from Ucchodanahalli village to Konapura approch road in Gauribidanur Taluk. (INDENT NO:RDPR/2026-27/RD/WORK_INDENT27284)	160.00	240000.00	9 ತಿಂಗಳು
2	Improvements to road from Hosur Allipura main road to Kenkare approch road ,in Gouribidanur taluk, (INDENT NO:RDPR/2026-27/RD/WORK_INDENT27285	130.00	195000.00	9 ತಿಂಗಳು
3	Improvements to road from A.C.C.factory to Basavanahalli approch road in Gouribidanur Taluk (INDENT NO:RDPR/2026-27/RD/WORK_INDENT27286)	200.00	300000.00	9 ತಿಂಗಳು
4	Improvements to road from Bommashettihalli Village to Kurudi approch road in Gouribidanur Taluk, (INDENT NO:RDPR/2026-27/RD/WORK_INDENT27287)	170.00	255000.00	9 ತಿಂಗಳು
	Total	660.00		

ಸಹಿ/- ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:104/ಕೆಎಸ್‌ಎಂಸಿಎ/2026-27

ಶಿವರಾಮ ಕಾಸರಗೋಡುಗೆ ಕರ್ನಾಟಕ ಗಡಿನಾಡು ಸಂಘಟನಾ ಪ್ರಶಸ್ತಿ ಪ್ರದಾನ



ಕಾಸರಗೋಡು: ಕರ್ನಾಟಕ ರಾಜಧಾನಿಯ ಹಿರಿಯ ಸಂಘಟನೆಯಾದ ವಿಕೆಎಂ ಕಲಾವಿದರು ನೇತೃತ್ವದಲ್ಲಿ ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಾಬು ಜಗಜೀವನ್ ರಾವ್ ಸ್ಮಾರಕ ನಾಟಕೋತ್ಸವ ಹಾಗೂ ಸಾಂಸ್ಕೃತಿಕ ಕಲಾಮೇಳ-ರಂಗೋತ್ಸವ ಮತ್ತು ನಿರಂತರ 45ನೇ ವರ್ಷದ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಗಡಿನಾಡು ಕಾಸರಗೋಡಿನ ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ ಕನ್ನಡ ಗ್ರಾಮ ಕಾಸರಗೋಡು ಇದರ 35ನೇ ಸಂಸ್ಥಾಪನಾ ವರ್ಷಾಚರಣೆಯನ್ನು ಯಶಸ್ವಿಯಾಗಿ ಪೂರೈಸಿರುವುದಕ್ಕಾಗಿ ಕಾಸರಗೋಡು ಕನ್ನಡ ಗ್ರಾಮದ ಸಂಸ್ಥಾಪಕ ಶಿವರಾಮ ಕಾಸರಗೋಡು ಅವರಿಗೆ ಪ್ರತಿಷ್ಠಿತ ಕರ್ನಾಟಕ ಗಡಿನಾಡು ಸಂಘಟನಾ ಪ್ರಶಸ್ತಿಯನ್ನು ನೀಡಲಾಯಿತು. ಕರ್ನಾಟಕಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷ ಡಾ.ಸಿ.ಸೋಮಶೇಖರ ಪ್ರಶಸ್ತಿ ಪ್ರದಾನ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಚಂದ್ರಶೇಖರ, ಮಧುರ ಅಶೋಕಕುಮಾರ್ ಬೆಂಗಳೂರು, ವಿಕೆಎಂ ಕಲಾವಿದರು ಬೆಂಗಳೂರು ಸಂಸ್ಥೆಯ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಸಿ.ಎಂ.ತಿಮ್ಮಯ್ಯ ಉಪಸ್ಥಿತರಿದ್ದರು.

ಶಿವರಾಮ ಕಾಸರಗೋಡು ಸ್ಥಾಪಕ ಅಧ್ಯಕ್ಷರಾಗಿ 1990ರಲ್ಲಿ ಸ್ಥಾಪನೆಗೊಂಡ ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ ಕಾಸರಗೋಡು ಇದರ ಆಶ್ರಯದಲ್ಲಿ ಕಾಸರಗೋಡು ಕನ್ನಡ ಗ್ರಾಮದಲ್ಲಿ ಸುಮಾರು 25 ಲಕ್ಷ ರೂಪಾಯಿ ವೆಚ್ಚದಲ್ಲಿ ನವೆಂಬರ್ 7 ಮತ್ತು 8ರಂದು ಕೇರಳ ರಾಜ್ಯ 8ನೇ ಕನ್ನಡ ಸಮ್ಮೇಳನ - 2026 ಮತ್ತು ಕೇರಳ - ಕರ್ನಾಟಕ ಉತ್ಸವ, ಕೇರಳ - ಕರ್ನಾಟಕ ಕನ್ನಡ ರಾಜ್ಯೋತ್ಸವವನ್ನು ಸಂಘಟಿಸಲಾಗಿದೆ.

ಸುಳ್ಯ ಪಿಎಂಶ್ರೀ ಸ.ಮಾ.ಹಿ.ಪ್ರಾ. ಶಾಲೆ: ನೂತನ ಕೊಠಡಿ, ಎಂಆರ್‌ಪಿಎಲ್ ಅನುದಾನದ ಶೌಚಾಲಯ ಉದ್ಘಾಟನೆ



ಸುಳ್ಯ: ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕ್ಷೇತ್ರ ಸಂಪನ್ಮೂಲ ಕೇಂದ್ರ ಸುಳ್ಯ, ಪಿಎಂ ಶ್ರೀ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಇವುಗಳ ಆಶ್ರಯದಲ್ಲಿ ಪಿಎಂ ಶ್ರೀ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನ ಹೆಚ್ಚುವರಿ ಕೊಠಡಿ ಉದ್ಘಾಟನೆ ಹಾಗೂ 2024-25ನೇ ಸಾಲಿನಲ್ಲಿ ಎಂ.ಆರ್.ಪಿ.ಎಲ್. ಸಂಸ್ಥೆಯ ವತಿಯಿಂದ ನಿರ್ಮಾಣಗೊಂಡ ಶೌಚಾಲಯ ಉದ್ಘಾಟನಾ ಕಾರ್ಯಕ್ರಮ ಮಂಗಳವಾರ ನಡೆಯಿತು.

ಶಾಸಕಿ ಭಾಗೀರಥಿ ಮುರುಳ್ಯ ನೂತನ ಕೊಠಡಿಯನ್ನು ಉದ್ಘಾಟಿಸಿ ಶುಭ ಹಾರೈಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ವೈ.ಎಸ್ ಹರಗಿ ಶೌಚಾಲಯ ಉದ್ಘಾಟಿಸಿದರು. ಸೂಡ ಅಧ್ಯಕ್ಷ ಮುಸ್ತಫಾ, ಸುಳ್ಯ ಕ್ಷೇತ್ರ ಸಮನ್ವಯಾಧಿಕಾರಿ ಶೀತಲ್ ಯು.ಕೆ., ಸಿ.ಆರ್.ಪಿ. ಮಮತಾ ಸುಳ್ಯ, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷ ರವಿರಾಜ್, ಹಿರಿಯ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಅಶೋಕ್ ಪ್ರಭು, ಅಮೃತಭವನ ಜೀರ್ಣೋದ್ದಾರ ಸಮಿತಿಯ ಅಧ್ಯಕ್ಷ ಜಯಪ್ರಕಾಶ್ ರೈ, ಸಂಚಾಲಕ ಸಂಶುದ್ದೀನ್, ಹಿರಿಯ ವಿದ್ಯಾರ್ಥಿ ಸಂಘದ ಸದಸ್ಯೆ ಸುಸ್ಮಿತಾ ಜಾಕೆ, ಸುಮತಿ ನಾಯರ್, ಅಭಿಯಂತರ ಕೃಷ್ಣ ರಾವ್, ನಿವೃತ್ತ ಸರಕಾರಿ ನೌಕರರ ಸಂಘದ ಸದಸ್ಯ ರಾಮಚಂದ್ರ ಪಲ್ಲತ್ತಡ್ಕ, ಹಿರಿಯ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಗೋಕುಲ್ ದಾಸ್ ಉಪಸ್ಥಿತರಿದ್ದರು.

ಶಾಲಾ ಮುಖ್ಯಶಿಕ್ಷಕ ಚಂದ್ರಶೇಖರ್ ಪಾರೆಪ್ಪಾಡಿ ಸ್ವಾಗತಿಸಿ, ಸಹಶಿಕ್ಷಕಿ ಹೇಮಲತಾ ವಂದಿಸಿದರು. ದೈಹಿಕ ಶಿಕ್ಷಣ ಶಿಕ್ಷಕಿ ಸುನಂದಾ ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು.

ಕಿರುಸುದ್ದಿ

ವಿದ್ಯಾರ್ಥಿಗಳಿಗೆ ಪ್ರತಿಭಾ ಪ್ರದರ್ಶನ ಕಾರ್ಯಕ್ರಮ

ಕುಂದಾಪುರ : ವಿದ್ಯಾರ್ಥಿಗಳಲ್ಲಿ ಹುದುಗಿರುವ ಸುಪ್ತ ಪ್ರತಿಭೆಯನ್ನು ಹೊರತರುವುದರ ಜೊತೆಗೆ ವೇದಿಕೆಯ ಭಯವನ್ನು ನಿವಾರಿಸಿ, ಆತ್ಮವಿಶ್ವಾಸ ಹಾಗೂ ಸೃಜನಶೀಲತೆಯನ್ನು ಬೆಳೆಸಲು ಸಹಕಾರಿ ಎಂದು ಹಟ್ಟಿಯಂಗಡಿ ಶ್ರೀ ಸಿದ್ಧಿವಿನಾಯಕ ವಸತಿ ಶಾಲೆಯ ಶೈಕ್ಷಣಿಕ ಸಲಹೆಗಾರರಾದ ಸುಜಾತಾ ಸದಾರಾಮ್ ಹೇಳಿದರು.



ಹಟ್ಟಿಯಂಗಡಿ ಶ್ರೀ ಸಿದ್ಧಿವಿನಾಯಕ ವಸತಿ ಶಾಲೆಯ ಪ್ರಾಥಮಿಕ ಶಾಲಾ ವಿಭಾಗದ 2026- 27ನೇ ಶೈಕ್ಷಣಿಕ ವರ್ಷದಲ್ಲಿ ದಾಖಲಾದ ವಿದ್ಯಾರ್ಥಿಗಳಿಗಾಗಿ ಪ್ರತಿಭಾ ಪ್ರದರ್ಶನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು. ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸುವ ಉದ್ದೇಶದಿಂದ ಆಯೋಜಿಸಲಾದ ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸಂಗೀತ, ನೃತ್ಯ, ಶ್ಲೋಕ ಪಠಣ, ಭಾಷಣ, ಏಕಪಾತ್ರಾಭಿನಯ ಸೇರಿದಂತೆ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರದರ್ಶಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಥಮಿಕ ಶಾಲಾ ವಿಭಾಗದ ಮುಖ್ಯೋಪಾಧ್ಯಾಯಿನಿ ಹೇಮಮಾಲಿನಿ, ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ವಿದ್ಯಾರ್ಥಿಗಳಾದ ಅದ್ವೈತ್, ಸಾತ್ವಿಕ್ ಹಾಗೂ ಚಿನ್ಮಯಿ ನಿರ್ವಹಿಸಿದರು.

ಸಂಕಷ್ಟದಲ್ಲಿದ್ದ ದಕ್ಷಿಣ ಕನ್ನಡದ ರೈತರಿಗೆ ತುಸು ಸಮಾಧಾನ

ಮಳೆಮಾಪನ ದುರಸ್ತಿ ಭಾಗ್ಯ

ಮಂಗಳೂರು: ಬೆಳೆ ವಿಮೆಗೆ ಪಾವತಿಸಿದಷ್ಟು ಹಣವೂ ಸಿಗದೇ ರೈತರು ಆಕ್ರೋಶಗೊಳ್ಳಲು ಕಾರಣವಾಗಿದ್ದ ಮಳೆ ಮಾಪನ ಘಟಕಗಳ ದುರಸ್ತಿ ಕಾರ್ಯ ಕೊನೆಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುತ್ತಿದೆ.

ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ತೋಟಗಾರಿಕಾ ಬೆಳೆಗಳ ವಿಮೆಗಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ರೈತರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಮೂಲಕ ವಿಮೆ ಮೊತ್ತ ಪಾವತಿಸಿದ್ದರು. ನಿಗದಿತ ಪ್ರದೇಶಗಳಲ್ಲಿ ಕಳೆದ ವರ್ಷ ಭಾರಿ ಮಳೆ ಸುರಿದ್ದರೂ ವಿಮಾ ಪರಿಹಾರವಾಗಿ ಜುಜುಬಿ ಮೊತ್ತ ದೊರೆತಿತ್ತು. ಗ್ರಾಮ ಮಟ್ಟದಲ್ಲಿರುವ ಮಳೆ ಮಾಪನ ಘಟಕಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇದ್ದ ಕಾರಣ ಮಳೆ ಬಿದ್ದ ಪ್ರಮಾಣದ ದಾಖಲಾತಿ ಸಮರ್ಪಕವಾಗಿ ಆಗದೇ ರೈತರಿಗೆ ವಿಮಾ ಮೊತ್ತ ಅಸಮರ್ಪಕವಾಗಿ ದೊರೆತಿದೆ ಎಂದು ಆರೋಪಿಸಲಾಗಿತ್ತು. ಜಿಲ್ಲೆಯ ಸುಳ್ಯ, ಕಡಬ, ಪುತ್ತೂರು ತಾಲೂಕಿನ ಕೆಲ ಗ್ರಾಮಗಳಲ್ಲಿ ಪಾವತಿಸಿದ ವಿಮಾ ಮೊತ್ತದಷ್ಟು ಹಣವೂ ಬಂದಿಲ್ಲ ಎಂದು ರೈತರು ಭಾರಿ ಆಕ್ರೋಶ ವ್ಯಕ್ತಪಡಿಸಿದ್ದರು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಅಧ್ಯಕ್ಷರು, ನಿರ್ದೇಶಕರ ಬಳಿ ರೈತರು ಸಮಸ್ಯೆ ಹೇಳಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಮಳೆ ಮಾಪನ ಕೇಂದ್ರಗಳ ದುರಸ್ತಿಗೆ ಒತ್ತಾಯ ಕೇಳಿಬಂದಿತ್ತು.



ಇದೀಗ ಶಿಥಿಲಗೊಂಡ ಮಳೆ ಮಾಪನ ಘಟಕಗಳ ದುರಸ್ತಿ ಆರಂಭಗೊಂಡಿದೆ. ಜಿಲ್ಲೆಯ ಮಳೆ ಮಾಪನ ಕೇಂದ್ರಗಳ ವರದಿ ತರಿಸಿಕೊಂಡ ಜಿಲ್ಲಾಡಳಿತ ದುರಸ್ತಿಗೆ ಕ್ರಮ ವಹಿಸಿದೆ. ಜಿಲ್ಲೆಯ 274 ಘಟಕಗಳಲ್ಲಿ ಸುಮಾರು166 ಘಟಕಗಳದುರಸ್ತಿಕಾರ್ಯ ಪ್ರಗತಿಯಲ್ಲಿದೆ. ಉಳಿದ 108 ಘಟಕಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ. ಕಾರ್ಯನಿರ್ವಹಿಸದ 72 ಘಟಕಗಳಲ್ಲಿ 36 ಡಾಟಾ ಸಂಗ್ರಹಿಸುತ್ತಿರಲಿಲ್ಲ, 22ರಲ್ಲಿ ಸೆನ್ಸಾರ್ ಸಮಸ್ಯೆ, 4ರಲ್ಲಿ ಡಾಟಾ ಸಮಸ್ಯೆ, 6 ತಪ್ಪಾಗಿ ಅಳವಡಿಕೆ, 4 ಅಸಮರ್ಪಕ ದಾಖಲೆ ಸಂಗ್ರಹ ಪತ್ತೆಯಾಗಿತ್ತು. ಉಳಿದ 94 ಘಟಕಗಳಲ್ಲಿ 18 ಘಟಕ ಕಳವಾಗಿದ್ದವು, 8 ಹಾನಿಗೊಳಗಾಗಿದ್ದು, 10 ಘಟಕಗಳ ಸ್ಥಳಾಂತರಕ್ಕೆ, 1 ಡಾಟಾ ಸಂಗ್ರಹಕ್ಕೆ ಹಾನಿ, 13 ಸೋಲಾರ್ ಪ್ಯಾನೆಲ್ ಬೇಡಿಕೆ, 31 ಘಟಕಗಳ ಸ್ಥಳಾಂತರ ಬೇಡಿಕೆ, 6 ಜಿಪಿಆರ್ ಎಸ್ ಸಮಸ್ಯೆ, 5 ಡಾಟಾ ಸಂಗ್ರಹದ ಕಳವು, 2 ಕಡೆ ಹೊಸ ಅಳವಡಿಕೆ ಬೇಡಿಕೆ ಮುಂತಾದ ವರದಿ ಪಡೆಯಲಾಗಿತ್ತು. ಜಿಲ್ಲೆಯಲ್ಲಿ 202 ಘಟಕಗಳು ಈಗಾಗಲೇವಾರ್ಷಿಕನಿರ್ವಹಣೆಯಲ್ಲಿದ್ದು, ಉಳಿದ 72 ಘಟಕಗಳ ವಾರ್ಷಿಕ ನಿರ್ವಹಣೆಗೆ ಟೆಂಡರ್ ಪ್ರಕ್ರಿಯೆ ಹಂತದಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಧಿಕಾರಿಗಳಿಂದ ಮಾಹಿತಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಮಾಪನ ಘಟಕಗಳ ದುರಸ್ತಿಗೆ ಟೆಂಡರ್ ಆಗಿದೆ. ದುರಸ್ತಿ, ಸ್ಥಳಾಂತರ, ನಿರ್ವಹಣೆಯ ಕೆಲಸ ನಡೆಯುತ್ತಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ಮಾನಿಟರಿಂಗ್ ಸೆಂಟರ್ ಇದರ ಮೇಲ್ವಿಚಾರಣೆ ನಡೆಸುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮಳೆ ಮಾಪನ ಘಟಕಗಳ ದುರಸ್ತಿ, ಸ್ಥಳಾಂತರ, ಹೊಸ ಘಟಕ ಅಳವಡಿಕೆ ಸೇರಿದಂತೆ ಮಳೆಮಾಪನಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಕ್ರಮ ವಹಿಸಲಾಗಿದೆ. ಮಳೆಮಾಪಕಗಳ ನಿರ್ವಹಣೆ, ಅದು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದೆಯೇ ಎಂಬ ಬಗ್ಗೆ ಪರಿಶೀಲಿಸಲು ಗ್ರಾಮ ಪಂಚಾಯತ್ ಅಥವಾ ಸ್ಥಳೀಯಾಡಳಿತ ಮಟ್ಟದಲ್ಲಿ ಜವಾಬ್ದಾರಿ ನೀಡುವ ಬಗ್ಗೆ ಚರ್ಚೆಗಳು ನಡೆಯುತ್ತಿದ್ದು, ಗ್ರಾಮ ಆಡಳಿತಾಧಿಕಾರಿಗೆ ಅಥವಾ ಗ್ರಾಮ ಪಂಚಾಯತ್‌ಗೆ ಅಥವಾ ಗ್ರಾಮ ಪಂಚಾಯತ್ ವ್ಯಾಪ್ತಿಯ ಖಾಸಗಿ ವ್ಯಕ್ತಿಗೆ ಅದರ ನಿರ್ವಹಣೆ ಜವಬ್ದಾರಿ ವಹಿಸುವ ಬಗ್ಗೆ ಚರ್ಚೆ ನಡೆದಿದೆ.

ಪುತ್ತೂರು: ಎ.ವಿ.ಜಿ. ಶಾಲೆಯಲ್ಲಿ ಕೀಬೋರ್ಡ್ ತರಗತಿ ಉದ್ಘಾಟನೆ



ಪುತ್ತೂರು: ಪುತ್ತೂರಿನ ಎ.ವಿ.ಜಿ ಇಂಗ್ಲಿಷ್ ಮೀಡಿಯಂ ಶಾಲೆಯಲ್ಲಿ ವಿದ್ಯಾರ್ಥಿಗಳಿಗಾಗಿ ಕೀಬೋರ್ಡ್ ಕಲಿಸುವ ತರಗತಿಯನ್ನು ಉದ್ಘಾಟಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷ ವೆಂಕಟರಮಣ ಗೌಡ ಕಳುವಾಜೆ ಅವರು ದೀಪ ಬೆಳಗುವುದರ ಮೂಲಕ ತರಗತಿಯನ್ನು ಉದ್ಘಾಟಿಸಿ, ಕಲೆ, ನಾನಾ ಪ್ರಕಾರಗಳಲ್ಲಿ ಇರುತ್ತದೆ ಮತ್ತು ಅದು ಮಾನವನಿಗೆ ಅತ್ಯಂತ ಸಮಾಧಾನ ಹಾಗು ಸಂತೋಷವನ್ನು ನೀಡುತ್ತದೆ. ಅಂತಹ ಕಲೆಗಳಲ್ಲಿ ಕೀಬೋರ್ಡ್ ವಾದನ ಸಹ ಒಂದು. ಇದನ್ನು ಮಕ್ಕಳು ಎಳವೇಯಿಂದಲೇ ಕಲಿತು ಅಭ್ಯಾಸ ಮಾಡಿದರೆ ಅವರ ಸರ್ವಾಂಗೀಣ ಪ್ರಗತಿಗೆ ಸಹಕಾರಿ ಎಂದು ಹೇಳಿದರು.

ಕೀಬೋರ್ಡ್ ತರಬೇತುದಾರ, ಕಲಾವಿದ ಬಾಬಣ್ಣ ಕಲಿಕೆಯ ವಿಧಾನ ಮತ್ತು ಪ್ರಯೋಜನ ತಿಳಿಸಿದರು. ವೇದಿಕೆಯಲ್ಲಿ ಸಂಸ್ಥೆಯ ಆಡಳಿತ ಮಂಡಳಿಯ ಪ್ರಧಾನ ಕಾರ್ಯದರ್ಶಿ ಹಾಗೂ ಆಡಳಿತಾಧಿಕಾರಿ ಗುಡ್ಡಪ್ಪ ಗೌಡ ಬಲ್ಯ, ಉಪಾಧ್ಯಕ್ಷ ಉಮೇಶ್ ಮಲುಮೇಳು, ಮುಖ್ಯೋಪಾಧ್ಯಾಯ ಅಮರನಾಥ್ ಪಟ್ಟೆ, ಶಿಕ್ಷಕ-ರಕ್ಷಕ ಸಂಘದ ಅಧ್ಯಕ್ಷೆ ಸೌಮ್ಯಶೀ ಹೆಗ್ಡೆ, ಮೈಸೂರಿನ ಸರಕಾರಿ ವಕೀಲ ಜನಾರ್ದನ ಉಪಸ್ಥಿತರಿದ್ದರು.

ಬಾಬಣ್ಣ, ಜನಾರ್ದನ ಹಾಗೂ ಸೋನಿಕಾ ಅವರಿಂದ ಸಂಗೀತದ ಪ್ರಾತ್ಯಕ್ಷಿಕೆ ನಡೆಯಿತು. ವಿದ್ಯಾರ್ಥಿನಿಯರಾದ ಆಧ್ಯಾ, ಯುಕ್ತ ಮತ್ತು ಹರ್ಷಿತಾ ಪ್ರಾರ್ಥಿಸಿದರು. ಶಿಕ್ಷಕಿಯರಾದ ಪ್ರಮೀಳಾ ಅತಿಥಿಗಳ ಪರಿಚಯ ಮಾಡಿದರು. ಸುನಯನ ಸ್ವಾಗತಿಸಿ, ಅಕ್ಷತಾ ವಂದಿಸಿದರು. ಸುಚಿತಾ ಕಾರ್ಯಕ್ರಮ ನಿರ್ವಹಿಸಿದರು.

ವಿಟ್ಲ ಪಟ್ಟಣದ ನೀರಿನ ಸಮಸ್ಯೆ ನೀಗಿಸಲು ಬಹುಮಾನ ಯೋಜನೆಯಡಿ ರೂ.101 ಕೋಟಿಯ ಅಂದಾಜು ಪಟ್ಟಿ

ವಿಟ್ಲ: ವಿಟ್ಲ ಪಟ್ಟಣದ ನೀರಿನ ಸಮಸ್ಯೆಯನ್ನು ನೀಗಿಸಲು ಬಹುಮಾನ ಯೋಜನೆಯಡಿ ರೂ.101 ಕೋಟಿಯಅಂದಾಜುಪಟ್ಟಿಯನ್ನುಸಿದ್ಧಪಡಿಸಲಾಗಿದೆ. ಈ ಯೋಜನೆಯಡಿ 34 ಲಕ್ಷ ಲೀಟರ್ ನೀರು ಮೀಸಲಿಟ್ಟಿದ್ದು, ಮುಂದಿನ 30 ವರ್ಷದ 48.20 ಲಕ್ಷ ಲೀಟರ್ ನೀರಿನ ಅಗತ್ಯವಿದೆ. ಇದನ್ನು ವಿತರಣೆ ಮಾಡಲು ವಿಟ್ಲವನ್ನು ಮೂರು ಝೋನ್ ಆಗಿ ವಿಂಗಡಿಸಿ ಎಲ್ಲಾ ವಾರ್ಡ್‌ಗಳಿಗೆ ಹೊಸ ಪೈಪ್‌ಲೈನ್ ಮಾಡಿ, ಮನೆಯ ಹಿತ್ತಲಿನವರೆಗೆ ಸಂಪರ್ಕ ಕಲ್ಪಿಸುವ ಯೋಜನೆ ಕಾರ್ಯಗತಗೊಳಿಸಲಾಗುವುದು ಎಂದು ಕೆಯುಡಬ್ಲ್ಯುಎಸ್ ಸಹಾಯಕ ಕಾರ್ಯಪಾಲಕ ಅಭಿಯಂತರೆ ಶೋಭಾ ಲಕ್ಷ್ಮೀ ಹೇಳಿದರು.

ಪಟ್ಟಣ ಪಂಚಾಯತ್ ಸಭಾಂಗಣದಲ್ಲಿ ಪಂಚಾಯತ್ ವ್ಯಾಪ್ತಿಯ ಜನವಸತಿಗಳಿಗೆ ಕುಡಿಯುವ ನೀರಿನ ವಿತರಣಾ ಜಾಲ ಅಳವಡಿಸಲು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸಿದ್ಧಪಡಿಸಿದ ಯೋಜನಾ ವರದಿ ಪರಿಶೀಲಿಸಿ ಸಹಮತ ನೀಡುವ ನಿಟ್ಟಿನಲ್ಲಿ ಏರ್ಪಡಿಸಲಾಗಿದ್ದ ಸಾಮಾನ್ಯ ಸಭೆಯಲ್ಲಿ ಅವರು ಮಾಹಿತಿ ನೀಡಿದರು.

ಅತಿಥಿ ಗೃಹದ ಸಮೀಪ 5 ಲಕ್ಷ, ನೆಕ್ಕರೆಕಾಡು 3.1 ಲಕ್ಷ ಟ್ಯಾಂಕ್ ಇದ್ದು, ಅನ್ನಮೂಲೆಯಲ್ಲಿ 15 ಲಕ್ಷ ಲೀಟರ್ ನೀರಿನ ಟ್ಯಾಂಕ್ ನಿರ್ಮಾಣ ಆಗಬೇಕಾಗಿದೆ. 2.3 ಕಿ.ಮೀ. ಫೀಡರ್ ಪೈಪ್‌ಲೈನ್, 154 ಕಿ.ಮೀ. ವಿತರಣಾ ಪೈಪ್‌ಲೈನ್, 6 ಸಾವಿರಕ್ಕೂ ಅಧಿಕ ಮನೆಗಳ ಸಂಪರ್ಕ ವ್ಯವಸ್ಥೆ, ಆನ್‌ಲೈಟ್ ಟ್ರ್ಯಾಕಿಂಗ್ ಸಿಸ್ಟಮ್ ಸೇರಿ 5 ವರ್ಷ ನಿರ್ವಹಣೆಯನ್ನು ಯೋಜನೆ ಒಳಗೊಂಡಿದೆ. 3 ಪಾಳಿಯಲ್ಲಿ 4 ಮಂದಿ ಕೆಲಸ ನಿರ್ವಹಿಸಲಿದ್ದಾರೆ. ಹೊಸ ಸಂಪರ್ಕಕ್ಕೂ ಯಾವುದೇ ಹಣ ನೀಡಬೇಕಾಗಿಲ್ಲ. ಕಚೇರಿಯಿಂದ ಮೈಸೂರು ಕಚೇರಿಗೆ ಕಳುಹಿಸಲಾಗುವುದು ಎಂದು ಅವರು ವಿವರಿಸಿದರು.



ಪ.ಪಂ. ಸದಸ್ಯರ ಬೇಡಿಕೆ

ಹತ್ತಿರ ಹತ್ತಿರ ಟ್ಯಾಂಕ್ ನಿರ್ಮಾಣ ಮಾಡುವುದರ ಬದಲು ನವಗ್ರಾಮದಲ್ಲಿ ಟ್ಯಾಂಕ್ ಆಗಬೇಕು, ಯೋಜನೆ ಕಾರ್ಯರೂಪಕ್ಕೆ ಬರುವುದಕ್ಕೆ ಎಷ್ಟು ಸಮಯಬೇಕು ಎಂಬುದನ್ನು ಸ್ಪಷ್ಟಪಡಿಸಬೇಕು, ಪ್ರತಿಯೊಂದು ಕಡೆ ಹಿಂದಿನಂತೆ ಮಾಡಿಕೊಡದಿದ್ದರೆ ಜನರಿಗೆ ಸದಸ್ಯರು ಉತ್ತರಿಸಬೇಕಾಗುತ್ತದೆ. ಕೆಲಸ ಆಗುವಾಗ ಗುತ್ತಿಗೆದಾರ ಮಾತ್ರ ಇದ್ದು, ಸಮಸ್ಯೆಯಾದರೆ ಯಾರು ಹೊಣೆ ಹೊರುವುದು? ಮೀಟರ್‌ಗಳು ಗಾಳಿ ಬಂದರೂ ರೀಡಿಂಗ್ ತೋರಿಸುತ್ತದೆ. ತಾಂತ್ರಿಕ ಸಮಸ್ಯೆಗಳಿಗೆ ಈಗಲೇ ಅಗತ್ಯ ಕ್ರಮ ಕೈಗೊಳ್ಳಬೇಕು ಎಂಬ ಬೇಡಿಕೆ ವ್ಯಕ್ತವಾಯಿತು.

ಸದ್ಯಕ್ಕೆ ಬೇಡ

ಅರ್ಬನ್ ಚಾಲೆಂಜ್ ಫಂಡ್ ಮೂಲಕ ರೂ.3.31 ಕೋಟಿ ಅನುದಾನ ಮಂಜೂರಾಗಿದ್ದು, ಇದಕ್ಕೆ ಒಟ್ಟು ವೆಚ್ಚದ ಶೇ.25ರಷ್ಟು ಪಂಚಾಯತ್ ಹಾಕಬೇಕಾಗಿದೆ. ಪಂಚಾಯತ್‌ನ ಆದಾಯ ಇಷ್ಟು ದೊಡ್ಡ ಮೊತ್ತದಲ್ಲಿ ಇಲ್ಲದ ಕಾರಣ ಸದ್ಯಕ್ಕೆ ತಡೆ ಹಿಡಿಯುವುದು ಉತ್ತಮ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ.

■ ಕರುಣಾಕರ ನಾಯ್ತೊಟ್ಟು, ಅಧ್ಯಕ್ಷರು, ಪ.ಪಂ.

ಪ.ಪಂ. ಅಧ್ಯಕ್ಷ ಕರುಣಾಕರ ನಾಯ್ತೊಟ್ಟು ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ಸಂಗೀತ ಪಾಣೆಮಜಲು, ಸ್ಥಾಯೀ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ರೈ, ಕೆಯುಡಬ್ಲ್ಯುಎಸ್‌ನ ಸಹಾಯಕ ಕಾರ್ಯಪಾಲಕ ಅಭಿಯಂತರೆ ಸ್ನೇಹ, ಮುಖ್ಯಾಧಿಕಾರಿ ಕರುಣಾಕರ ವಿ., ಇಂಜಿನಿಯರ್ ಮನೋಜ್ ಕುಮಾರ್ ಉಪಸ್ಥಿತರಿದ್ದರು.

ಕೆಪಿಟಿಸಿಎಲ್, ಮೆಸ್ಕಾಂ ಸಹ ಯೋಗದಲ್ಲಿ ರಾಜ್ಯ ಮಟ್ಟದ ಕ್ರೀಡಾಕೂಟ

ಛಲದಿಂದ ಯಶಸ್ಸು ಸಾಧ್ಯ: ಜಯ ಕುಮಾರ್



ಮಂಗಳೂರು: ಅಂತರ್ ವಿದ್ಯುತ್ ಕಂಪನಿಗಳ ರಾಜ್ಯ ಮಟ್ಟದ ಬಾಡಿ ಬಿಲ್ಡಿಂಗ್, ಪವರ್ ಲಿಫ್ಟಿಂಗ್, ಖೋ-ಖೋ ಮತ್ತು ಈಜು ಕ್ರೀಡೆಗಳ ಎರಡು ದಿನಗಳ ಕ್ರೀಡಾಕೂಟವು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ(ಕೆಪಿಟಿಸಿಎಲ್) ಹಾಗೂ ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ (ಮೆಸ್ಕಾಂ) ಸಹ ಯೋಗದಲ್ಲಿ ಸುರತ್ಕಲ್ ಎನ್‌ಐಟಿಕೆ ಕ್ರೀಡಾಂಗಣದಲ್ಲಿ ಮಂಗಳವಾರ ಆರಂಭಗೊಂಡಿತು.

ಮೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾದ ಜಯ ಕುಮಾರ್ ಆರ್. ಅವರು ಕ್ರೀಡಾಕೂಟವನ್ನು ಉದ್ಘಾಟಿಸಿ ಕಠಿಣ ಪರಿಶ್ರಮ ಹಾಗೂ ಸಾಧಿಸುವ ಛಲದಿಂದ ಯಶಸ್ಸು ಸಾಧ್ಯ. ಕ್ರೀಡಾಕೂಟದಲ್ಲಿ ಸೋಲು ಗೆಲುವು ಇದ್ದದ್ದೆ. ಸೋತಾಗ ಕುಗ್ಗದೆ ಪಡೆದ ಅನುಭವವನ್ನು ಗೆಲುವಿಗೆ ಸೋಪಾನವಾಗಿ ಬಳಸಿಕೊಂಡು ಯಶಸ್ಸು ಸಾಽಸಬೇಕು ಎಂದರು.ಈ ಕ್ರೀಡಾಕೂಟವನ್ನು ಆಯೋ ಜಿಸುವ ಅವಕಾಶ ಮೆಸ್ಕಾಂಗೆ ಲಭಿಸಿದ್ದು ಅತೀವ ಸಂತಸ ತಂದಿದೆ, ಎಂದ ಅವರು ಕ್ರೀಡಾಪಟುಗಳಿಗೆ ಶುಭ ಹಾರೈಸಿದರು.

ಮೆಸ್ಕಾಂ ತಾಂತ್ರಿಕ ನಿರ್ದೇಶಕರಾದ ಹರೀಶ್ ಕುಮಾರ್ ವಿ.ಅವರು ಶುಭ ಹಾರೈಸಿದರು. ಮುಖ್ಯ ಇಂಜಿನಿಯರ್(ವಿದ್ಯುತ್), ಮೆಸ್ಕಾಂ, ಮಂಗಳೂರು ವಲಯ ಹಾಗೂ ಮೆಸ್ಕಾಂ ಕ್ರೀಡಾ ಸಮಿತಿ ಅಧ್ಯಕ್ಷರಾದ ರವಿಕಾಂತ್ ಆರ್.ಕಾಮತ್ ಅವರು ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಮೆಸ್ಕಾಂ ಮುಖ್ಯ ಆರ್ಥಿಕ ಅಽಕಾರಿ ಮುರಳೀಧರ ನಾಯಕ್, ಆರ್ಥಿಕ ಸಲಹೆಗಾರ ದೇವರಾಜ್ ಎಂ., ಮೆಸ್ಕಾಂ ಪ್ರಧಾನ ವ್ಯವಸ್ಥಾಪಕ ಗಿರೀಶ್ ಕುಮಾರ್ ,ಕವಿಪ್ರನಿನಿ ನೌಕರರ ಸಂಘದ ಅಧ್ಯಕ್ಷರು ಹಾಗೂ ನಿರ್ದೇಶಕರು ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು ಶ್ರೀ ಕೆ ಬಲರಾಂ, ಮಂಗಳೂರು ವೃತ್ತದ ಅಧೀಕ್ಷಕ ಇಂಜಿನಿಯರ್ ಕೃಷ್ಣರಾಜ್, ನಿಯಂತ್ರಣಾಧಿಕಾರಿ ಉಮೇಶ್, ಅಧೀಕ್ಷಕ ಇಂಜಿನಿಯರ್ ಕವಿಪ್ರನಿನಿ ಚೈತನ್ಯ, ಕವಿಪ್ರನಿನಿ ಲೆಕ್ಕಾಧಿಕಾರಿ ಸಂಘದ ಅಧ್ಯಕ್ಷರಾದ ಎಸ್. ಗಿರೀಶ್, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಲ್ಯಾಣ ಸಂಸ್ಥೆಯ ಉಪಾಧ್ಯಕ್ಷ ಶ್ರೀನಿವಾಸಪ್ಪ, ಡಿಪ್ಲೊಮಾ ಇಂಜಿನಿಯರ್ ಸಂಘದ ನಿತೀಶ್ ಹೆಚ್ ಉಪಸ್ಥಿತರಿದ್ದರು. ಕ್ರೀಡಾಕೂಟದಲ್ಲಿ ರಾಜ್ಯದ ಐದು ಎಸ್ಕಾಂಗಳ ಕ್ರೀಡಾಪಟುಗಳು ಭಾಗವಹಿಸುತ್ತಿದ್ದಾರೆ. ಶ್ರೀ ಶಾಂತಾನಂದ ಶೆಟ್ಟಿ ಸ್ವಾಗತಿಸಿದರು, ಶ್ರೀ ರಾಘವೇಂದ್ರ ರವರು ವಂದನಾರ್ಪಣೆಗೈದರು, ಶ್ರೀಮತಿ ಮಂಜುಳಾ ಶೆಟ್ಟಿ ನಿರೂಪಿಸಿದರು.

ಕುಳಾಯಿ ಕುಲಾಲ ಸಂಘ, ಮಹಿಳಾ ಮಂಡಲ, ಕುಲಾಲ ರಜತ ಸೇವಾ ಟ್ರಸ್ಟ್ ವತಿಯಿಂದ ಕಾರ್ಯಕ್ರಮ

ರೂ. 1.25 ಲಕ್ಷ ಮೌಲ್ಯದ ಶೈಕ್ಷಣಿಕ ಸವಲತ್ತು ವಿತರಣೆ

ಮಂಗಳೂರು: ಸಂಘ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ನೀಡುವ ಸವಲತ್ತುಗಳನ್ನು ಸದುಪಯೋಗ ಮಾಡಿಕೊಳ್ಳಬೇಕು. ಕಷ್ಟ ಕಾಲದಲ್ಲಿ ಸಂಘವು ಸಮುದಾಯಕ್ಕೆ ನೆರವಾಗಲಿದೆ ಎಂಬ ಆತ್ಮಸ್ಥೈರ್ಯ ಮೂಡಿಸುವ ಕಾರ್ಯವನ್ನು ಕುಳಾಯಿ ಕುಲಾಲ ಸಂಘ ಮಾಡುತ್ತಿದೆ ಎಂದು ಶಾಸಕ ಡಾ.ವೈ. ಭರತ್ ಶೆಟ್ಟಿ ಹೇಳಿದರು.

ಕುಳಾಯಿ ಕುಲಾಲ ಸಂಘ, ಮಹಿಳಾ ಮಂಡಲ ಹಾಗೂ ಕುಲಾಲ ರಜತ ಸೇವಾ ಟ್ರಸ್ಟ್ ವತಿಯಿಂದ ಕುಳಾಯಿ ವೆಂಕಟರಮಣ ಶಾಲೆಯ ಸಭಾಭವನದಲ್ಲಿ ನಡೆದ ಶೈಕ್ಷಣಿಕ ಸವಲತ್ತು ವಿತರಣೆ, ವಿದ್ಯಾರ್ಥಿ ವೇತನ ವಿತರಣೆ, ಪ್ರತಿಭಾ ಪುರಸ್ಕಾರ, ಪುಸ್ತಕ ವಿತರಣೆ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ದ.ಕ.ಜಿಲ್ಲಾ ಮೂಲ್ಯರ ಯಾನೆ ಕುಲಾಲರ ಮಾತೃ ಸಂಘದ ಅಧ್ಯಕ್ಷ ಮಯೂರ್ ಉಳ್ಳಾಲ್, ಕುಂಬಾರ ಜನಾಂಗದ ಬಗ್ಗೆ ಪಿಎಚ್‌ಡಿ ಪದವಿ ಪಡೆದ ಮಂಗಳೂರು ವಿಶ್ವವಿದ್ಯಾಲಯ ಕಾಲೇಜು ಉಪನ್ಯಾಸಕಿ ಆಶಾಲತಾ, ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ 3ನೇ ಸ್ಥಾನ ಪಡೆದ ವೃಷಾ ಮತ್ತು ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ 6ನೇ ಸ್ಥಾನ ಪಡೆದ ಶಾರ್ವರಿ ಅವರನ್ನು ಸನ್ಮಾನಿಸಲಾಯಿತು.


ಸವಲತ್ತು ವಿತರಣೆ

ಸುಮಾರು 120 ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಮಾಡಲಾಯಿತು. ದತ್ತು ಪಡೆದ 10 ವಿದ್ಯಾರ್ಥಿಗಳಿಗೆ ನಗದು ಸಹಿತ ಸುಮಾರು 1,25,000 ರೂ. ಮೌಲ್ಯದ ಶೈಕ್ಷಣಿಕ ಸವಲತ್ತು ವಿತರಿಸಲಾಯಿತು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಸಾಧನೆ ಮಾಡಿದ 12 ವಿದ್ಯಾರ್ಥಿಗಳಿಗೆ ನಗದು, ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.

ಮನಪಾ ನಿಕಟಪೂರ್ವ ಸದಸ್ಯ ವರುಣ್ ಚೌಟ, ಎಂಆರ್‌ಪಿಎಲ್-ಒಎನ್‌ಜಿಸಿ ಚೀಫ್ ಮ್ಯಾನೇಜರ್ ದೀಪಕ್ ಅತ್ತಾವರ್, ಮುಂಬೈ ಕುಲಾಲ ಸಂಘದ ಅಧ್ಯಕ್ಷ ರಘು ಮೂಲ್ಯ, ದ ರೇಸ್ ಮಾಂಟೆಸರಿ ಹೌಸ್ ಆಫ್ ಚಿಲ್ಡ್ರನ್ ಡೈರೆಕ್ಟರ್ ರಶ್ಮಿ ಕಿರಣ್ ಮುಖ್ಯ ಅತಿಥಿಗಳಾಗಿದ್ದರು.

ಕುಲಾಲ ಸಂಘದ ಅಧ್ಯಕ್ಷ ಗಂಗಾಧರ್ ಬಂಜನ್ ಅಧ್ಯಕ್ಷತೆ ವಹಿಸಿ, ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ಗಣೇಶ್ ಎಸ್. ಕುಲಾಲ್, ಮಹಿಳಾ ಮಂಡಲ ಅಧ್ಯಕ್ಷೆ ಲೋಲಾ ಹರೀಶ್, ಕುಲಾಲ ರಜತ ಸೇವಾ ಟ್ರಸ್ಟ್ ಅಧ್ಯಕ್ಷ ನಾಗೇಶ್ ಕುಲಾಲ್, ಜನಾರ್ದನ್ ಸಾಲಿಯಾನ್, ಗಂಗಾಧರ್ ಕೆ., ಮೋಹನ್ ಐ. ಮೂಲ್ಯ, ಉಮೇಶ್ ಕೆ.ಎನ್., ಪದ್ಮನಾಭ ಬಂಗೇರ ಮೈಂದಗುರಿ, ಯೋಗೀಶ್ ಡಿ., ಹರ್ಷಿತ್ ಕುಲಾಲ್, ಹರೀಶ್ ಕಾವಿನಕಲ್ಲು, ಮೋಹನ್ ಕಾವಿನಕಲ್ಲು, ರಮೇಶ್ ಆರ್.ಕೆ., ಮಾಧವ್ ಕುಲಾಲ್, ನಾಗೇಶ್ ಟಿ., ದೇವದಾಸ್ ಟೈಲರ್, ಗಣೇಶ್ ಕುಲಾಲ್ ರಜತ, ಸಂಜೀವ ಕುಲಾಲ್, ಗಣೇಶ್ ಅಂಚನ್, ಬೇಬಿ ಟೀಚರ್, ಮೀರಾ ಮೋಹನ್, ಶೋಭಾ ವಿಶ್ವನಾಥ್, ಪ್ರಫುಲ್ಲ ಸುಧಾಕರ್, ಶಶಿಕಲಾ ಮಾಧವ್, ಸುಷ್ಮಾ ಗಣೇಶ್, ಕವಿತಾ ದೇವದಾಸ್ ಉಪಸ್ಥಿತರಿದ್ದರು.

ನಾಗೇಶ್ ಕುಲಾಲ್ ನಿರೂಪಿಸಿದರು. ಗಣೇಶ್ ಕುಲಾಲ್ ವಂದಿಸಿದರು.



ಕೇರಳದಲ್ಲಿ ಜನಗಣತಿ - 2027 ಯೋಜನೆಗೆ ಮುಖ್ಯಮಂತ್ರಿ ವಿ.ಡಿ. ಸತೀಶನ್ ಮಂಗಳವಾರ ತಿರುವನಂತಪುರದಲ್ಲಿ ಸೆಲ್ಫ್ ಎನ್ಯುಮರೇಷನ್ ಮೂಲಕ ಚಾಲನೆ ನೀಡಿದರು.

ಜು.5: ಬಜಪೆ ವಲಯದ ನೂತನ ಬಂಟರ ಭವನಕ್ಕೆ ಶಿಲಾನ್ಯಾಸ, ಪ್ರತಿಭಾ ಪುರಸ್ಕಾರ

ಮಂಗಳೂರು: ಬಂಟರ ಸಂಘ ಬಜಪೆ ವಲಯದ ನೂತನ ಬಂಟರ ಭವನ ಶಿಲಾನ್ಯಾಸ, ಸಾಧಕರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿ ಸಹಾಯಧನ ವಿತರಣೆ ಕಾರ್ಯಕ್ರಮ ಸಂಘದ ನಿವೇಶನ ಬಜಪೆ ತಾರಿಕಂಬ್ಳ ಮುಂಡಾರಿನಲ್ಲಿ ಜುಲೈ 5ರಂದು ಬೆಳಗ್ಗೆ 10ಕ್ಕೆ ನಡೆಯಲಿದೆ.

ಬಂಟರ ಭವನಕ್ಕೆ ಎಂಆರ್‌ಜಿ ಗ್ರೂಪ್ ಸ್ಥಾಪಕಾಧ್ಯಕ್ಷ ಡಾ.ಕೆ. ಪ್ರಕಾಶ್ ಶೆಟ್ಟಿ ಶಿಲಾನ್ಯಾಸ ನೆರವೇರಿಸುವರು. ಶಬರಿ ಇಂಡಸ್ಟ್ರಿಯಲ್ ಕ್ಯಾಟರಿಂಗ್ ಸರ್ವಿಸಸ್ ಎಂಡಿ ಕೆ.ಕೆ. ಶೆಟ್ಟಿ ದೀಪ ಪ್ರಜ್ವಲನೆ ಮಾಡುವರು. ಬಂಟರ ಯಾನೆ ನಾಡವರ ಮಾತೃಸಂಘದ ಅಧ್ಯಕ್ಷ ಅಜಿತ್‌ಕುಮಾರ್ ರೈ ಮಾಲಾಡಿ ಕಾರ್ಯಕ್ರಮ ಉದ್ಘಾಟಿಸುವರು. ವಿಕೆ ಗ್ರೂಪ್ ಆಫ್ ಕಂಪೆನಿಸ್ ಸಿಎಂಡಿ ಕರುಣಾಕರ ಶೆಟ್ಟಿ ಮಧ್ಯಗುತ್ತು ನೀಲನಕ್ಷೆ ಬಿಡುಗಡೆ ಮಾಡುವರು. ಪೂನಾ ಬಂಟರ ಸಂಘ ಅಧ್ಯಕ್ಷ ಅಜಿತ್ ಹೆಗ್ಡೆ ಕೆಂಜಾರುಗುತ್ತು ಪ್ರತಿಭಾ ಪುರಸ್ಕಾರ ವಿತರಣೆ ಮಾಡುವರು. ಬೆಂಗಳೂರಿನ ಯುನಿವರ್ಸಲ್ ಗ್ರೂಪ್ ಆಫ್ ಇನ್ಸ್ಟಿಟ್ಯೂಶನ್ ಸ್ಥಾಪಕ ಮತ್ತು ಚೇರ್ಮನ್ ಆರ್. ಉಪೇಂದ್ರ ಶೆಟ್ಟಿ ವಿದ್ಯಾರ್ಥಿ ಸಹಾಯಧನ ವಿತರಣೆ ಮಾಡುವರು ಎಂದು ಬಂಟರ ಸಂಘ ಬಜಪೆ ವಲಯ ಅಧ್ಯಕ್ಷ ವೇಣುಗೋಪಾಲ್ ಎಲ್. ಶೆಟ್ಟಿ ಕರಂಬಾರು ಪಡುಮನೆ ಮಂಗಳವಾರ ತಿಳಿಸಿದರು.

ಈ ಸಂದರ್ಭ ದಾನಿಗಳಾದ ಮುಂಬೈ ಹೇರಂಭ ಇಂಡಸ್ಟ್ರೀಸ್ ಅಧ್ಯಕ್ಷ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ಡಾ. ಕನ್ಯಾನ ಸದಾಶಿವ ಶೆಟ್ಟಿ, ಮುಂಬೈನ ಭವಾನಿ ಶಿಪ್ಪಿಂಗ್ ಸರ್ವಿಸ್ ಅಧ್ಯಕ್ಷ ಮತ್ತು ಸ್ಥಾಪಕ ಕುಸುಮೋದರ ಡಿ. ಶೆಟ್ಟಿ, ಬರೋಡದ ಶಶಿ ಕೇಟರಿಂಗ್ ಸರ್ವಿಸಸ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಶಶಿಧರ ಶೆಟ್ಟಿ ಬರೋಡ ಅವರನ್ನು ಸನ್ಮಾನಿಸಲಾಗುವುದು. ಸಂಸದ ಬ್ರಿಜೇಶ್ ಚೌಟ, ಶಾಸಕರಾದ ಉಮಾನಾಥ ಕೋಟ್ಯಾನ್, ಡಾ. ವೈ.ಭರತ್ ಶೆಟ್ಟಿ, ರಾಜೇಶ್ ನ್ಯಾಕ್, ಮಂಜುನಾಥ ಭಂಡಾರಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಿಥುನ್ ರೈ, ಗಣ್ಯರು ಭಾಗವಹಿಸುವರು ಎಂದರು.

ಸಂಘದ ಉಪಾಧ್ಯಕ್ಷರಾದ ಡಾ. ಶಿವಪ್ರಸಾದ್ ರೈ, ಕುಸುಮಾಧರ ಶೆಟ್ಟಿ, ಮಹಿಳಾ ವಿಭಾಗ ಅಧ್ಯಕ್ಷೆ ಪ್ರೀತಿ ಹರೀಶ್ ಶೆಟ್ಟಿ, ಯುವ ವಿಭಾಗ ಅಧ್ಯಕ್ಷ ದೇವಿಪ್ರಸಾದ್ ಶೆಟ್ಟಿ, ಸುಕೇಶ್ ಶೆಟ್ಟಿ, ಅಜಿತ್‌ಕುಮಾರ್ ಶೆಟ್ಟಿ ಉಪಸ್ಥಿತರಿದ್ದರು.

ಕಿರು ಸುದ್ದಿ

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಕಾಸರಗೋಡು: ಶೈಕ್ಷಣಿಕ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಹೊಂದಿರುವ ಮತ್ತು ಕೌಟುಂಬಿಕ ಮತ್ತು ಆರ್ಥಿಕ ಹಿಂದುಳಿದಿರುವಿಕೆಯಿಂದ ಉತ್ತಮ ಸಾಧನೆ ಮಾಡಲು ಸಾಧ್ಯವಾಗದ ಪ್ರತಿಭಾವಂತ ಪರಿಶಿಷ್ಟ ಪಂಗಡದವರು ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಕ್ಷಮತೆಯನ್ನು ಸುಧಾರಿಸಲು ನೆರವು ನೀಡುವ ಉದ್ದೇಶದಿಂದ ಅಯ್ಯಂಗಾಳಿ ಸ್ಮಾರಕ ಪ್ರತಿಭಾ ಶೋಧ ಮತ್ತು ಅಭಿವೃದ್ಧಿ ನಿಧಿಯನ್ನು ಸ್ಥಾಪಿಸಿದೆ. ಅದರಂತೆ ವಿದ್ಯಾರ್ಥಿವೇತನಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಪರಪ್ಪ ಬುಡಕಟ್ಟು ಅಭಿವೃದ್ಧಿ ಕಚೇರಿ, ಬುಡಕಟ್ಟು ವಿಸ್ತರಣಾ ಕಚೇರಿ ಪನತ್ತಡಿ ಮತ್ತು ಭೀಮನಡಿಯಲ್ಲಿ ಅರ್ಜಿ ಸಲ್ಲಿಸಬಹುದು.

ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಜುಲೈ 15 ಆಗಿದೆ. ಹೆಚ್ಚಿನ ವಿವರಗಳಿಗೆ 0467 2960111 ಕರೆ ಮಾಡಬಹುದು. ಅರ್ಜಿದಾರರು ಪರಿಶಿಷ್ಟ ಪಂಗಡಕ್ಕೆ ಸೇರಿದ 5 ಮತ್ತು 8ನೇ ತರಗತಿಯ ವಿದ್ಯಾರ್ಥಿಗಳಾಗಿರಬೇಕು. ಕುಟುಂಬದ ವಾರ್ಷಿಕ ಆದಾಯವು 1ಲಕ್ಷ ರೂ. ಮೀರಬಾರದು. ಅರ್ಜಿದಾರರು ಸರಕಾರಿ/ಅನುದಾನಿತ ಶಾಲೆಗಳಲ್ಲಿ 4 ರಿಂದ 7ನೇ ತರಗತಿಗಳಲ್ಲಿ ಎಲ್ಲಾ ವಿಷಯಗಳಲ್ಲಿ ಎ ಗ್ರೇಡ್ ಪಡೆದಿರಬೇಕು ಮತ್ತು ಯುಪಿ ಮತ್ತು ಎಚ್‌ಎಸ್ ವಿಭಾಗಗಳಲ್ಲಿನ ಸರಕಾರಿ/ಅನುದಾನಿತ ಶಾಲೆಗಳಲ್ಲಿ ತಮ್ಮ ಅಧ್ಯಯನವನ್ನು ಮುಂದುವರಿಸಬೇಕು ಎಂದು ತಿಳಿಸಲಾಗಿದೆ.

ವರ್ಷದ ಹಿಂದೆ ಮರದಿಂದ ಬಿದ್ದಿದ್ದ ಕಾರ್ಮಿಕ ಸಾವು

ಉಡುಪಿ: ಕಳೆದ ವರ್ಷ ಕೂಲಿ ಕೆಲಸ ಮಾಡುವಾಗ ಮರದಿಂದ ಬಿದ್ದು ಗಂಭೀರವಾಗಿ ಗಾಯಗೊಂಡು, ನಡೆದಾಡಲಾಗದೆ ಮನೆಯಲ್ಲೇ ಚಿಕಿತ್ಸೆಯಲ್ಲಿದ್ದ ವ್ಯಕ್ತಿಯೊಬ್ಬರು ತಡರಾತ್ರಿ ಮೃತಪಟ್ಟ ಘಟನೆ ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದೆ. ಕಾಂತಾವರ ಗ್ರಾಮದ ನಿವಾಸಿ ಸುನೀಲ್ ಪೂಜಾರಿ (39) ಮೃತಪಟ್ಟ ದುರ್ದೈವಿ. ಸುನೀಲ್ ಪೂಜಾರಿ 2025ರ ಮಾರ್ಚ್ 21ರಂದು ದೂಪದಕಟ್ಟೆ ಎಂಬಲ್ಲಿ ಕೂಲಿ ಕೆಲಸ ಮಾಡುತ್ತಿದ್ದಾಗ ಆಕಸ್ಮಿಕವಾಗಿ ಮರದಿಂದ ಕೆಳಗೆ ಬಿದ್ದಿದ್ದರು. ತಕ್ಷಣ ಅವರನ್ನು ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಗೆ ದಾಖಲಿಸಿ ಒಂದು ತಿಂಗಳು ಚಿಕಿತ್ಸೆ ಕೊಡಿಸಿ ಏ. 21ರಂದು ಬಿಡುಗಡೆ ಮಾಡಲಾಗಿತ್ತು. ಆದರೆ, ಬೆನ್ನುಮೂಳೆಗೆ ತೀವ್ರ ಪೆಟ್ಟಾಗಿದ್ದರಿಂದ ಅವರಿಗೆ ನಡೆದಾಡಲು ಸಾಧ್ಯವಾಗದೆ ಮನೆಯಲ್ಲೇ ಉಳಿದುಕೊಂಡಿದ್ದರು. ಜೂನ್ 16ರ ಮಧ್ಯರಾತ್ರಿ 12.15ರ ಸುಮಾರಿಗೆ ಮನೆಯಲ್ಲೇ ಕೊನೆಯುಸಿರೆಳೆದಿದ್ದಾರೆ. ಈ ಬಗ್ಗೆ ಮೃತರ ಪತ್ನಿ ಸುಷ್ಮಾ ನೀಡಿದ ಮಾಹಿತಿಯ ಮೇರೆಗೆ ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ಸುದ್ದಿ

ಇಂದಿರಾ ರೈ



ಕಾಸರಗೋಡು: ಕಾಸರಗೋಡಿನ ಮಾಜಿ ಸಂಸದರಾಗಿದ್ದ ದಿ.ಎಂ.ರಾಮಣ್ಣ ರೈ ಅವರ ಸಹೋದರಿ, ಕುಂಬ್ಡಾಜೆ ಗ್ರಾಮ ಪಂಚಾಯತ್‌ನ ಮಾಜಿ ಸದಸ್ಯೆ, ಪುತ್ರಕಳ ದಿ.ರಾಘವ ರೈ ಅವರ ಪತ್ನಿ ಇಂದಿರಾ ರೈ (83) ಮಾಯಿಪ್ಪಾಡಿಗುತ್ತು ಅಲ್ಪಕಾಲದ ಅಸೌಖ್ಯದಿಂದ ಮಂಗಳವಾರ ಬೆಳಗ್ಗೆ ನಿಧನ ಹೊಂದಿದರು. ಮೃತರು ಪುತ್ರರಾದ ವಿಶಾಲಾಕ್ಷ ಪುತ್ರಕಳ, ಎಂ.ಅಶೋಕ ರೈ, ಪುತ್ರಿ ಜಯಶ್ರೀ ಆಳ್ವ ಅವರನ್ನು ಅಗಲಿದ್ದಾರೆ.

ಶಿವಪ್ಪ



ಮಂಜೇಶ್ವರ: ಕೋಳ್ಯೂರುಪದವು ನಿವಾಸಿ ದಿ.ಕೃಷ್ಣಪ್ಪ ಮತ್ತು ಲಲಿತಾ ದಂಪತಿಯ ಪುತ್ರನಾದ ಶಿವಪ್ಪ ಯಾನೆ ಶಿವರಾಜ್ (38) ಅಲ್ಪಕಾಲದ ಅಸೌಖ್ಯದಿಂದ ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ತಾಯಿ, ಸಹೋದರ ನಾಗರಾಜ ಅವರನ್ನು ಅಗಲಿದ್ದಾರೆ. ಅವರ ನಿಧನಕ್ಕೆ ಸ್ಪಂದನ ಟ್ರಸ್ಟ್ ಕೋಳ್ಯೂರು, ಓಂಕಾರ್ ಫ್ರೆಂಡ್ಸ್ ಕೋಳ್ಯೂರು, ಸತ್ಯದೇವತೆ ಫ್ರೆಂಡ್ಸ್ ಕಳಿಯೂರು ಸಿಂತಾಜೆ ಹಾಗೂ ಸಂಘಪರಿವಾರ ತೀವ್ರ ಸಂತಾಪ ಸೂಚಿಸಿದೆ.

ನಾಟಿವೈದ್ಯೆ, ಜಾನಕಿ ಪಾರಮಜಲು



ಸುಬ್ರಹ್ಮಣ್ಯ: ಗುತ್ತಿಗಾರಿನ ನಾಲ್ಕೂರು ಗ್ರಾಮದ ಸಾಲ್ತಾಡಿ ಹೊಸಮನೆ ಪಾರೆಮಜಲು ದಿಟ ಕೂಸಪ್ಪ ಗೌಡರ ಪತ್ನಿ ಜಾನಕಿ(80) ಮಂಗಳವಾರ ನಿಧನರಾದರು. ಅವರು ಇಬ್ಬರು ಪುತ್ರಿಯರನ್ನು, ಬಂಧು ಬಳಗವನ್ನು ಅಗಲಿದ್ದಾರೆ.

ವರದರಾಜ ಪೂಜಾರಿ



ಬಂಟ್ವಾಳ: ಪ್ರಗತಿಪರ ಕೃಷಿಕ, ಸರಪಾಡಿ ಗ್ರಾಮದ ಅಲ್ಲಿಪಾದೆ, ಅಣೆಜ ನಿವಾಸಿ ವರದರಾಜ ಪೂಜಾರಿ (56) ಅವರು ಅಸೌಖ್ಯದಿಂದ ಜೂ.16ರಂದು ಮಂಗಳೂರು ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಮೃತರು ಪತ್ನಿ, ಹಾಗೂ ಪುತ್ರಮತ್ತು ಪುತ್ರಿಯನ್ನು ಅಗಲಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರಾಗಿದ್ದ ವರದರಾಜ ಅವರು ಬಂಟ್ವಾಳ ಮೂಡೂರು-ಪಡೂರು ಕಂಬಳ ಸಮಿತಿ ಪದಾಧಿಕಾರಿಯಾಗಿದ್ದು, ಕಂಬಳ ಪೋಷಕರಾಗಿದ್ದರು. ಅವರು ಕ್ರಿಕೆಟ್, ವಾಲಿಬಾಲ್ ಆಟಗಾರರಾಗಿದ್ದರು. ಮುನ್ನಲಾಯಿಪಾದೆ ಶ್ರೀ ಮಹಮ್ಮಾಯಿ ದೇವಿ ಮಂದಿರದ ಆಡಳಿತ ಸಮಿತಿ ಪದಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. ಪೆರಿಯಪಾದೆ ಶ್ರೀ ದುಗಲಾಯ ದೈವಸ್ಥಾನದಲ್ಲಿ ಸಕ್ರಿಯರಾಗಿದ್ದರು. ಅವರ ನಿಧನಕ್ಕೆ ಮಾಜಿ ಸಚಿವ ಬಿ.ರಮಾನಾಥ ರೈ ಸಂತಾಪ ವ್ಯಕ್ತಪಡಿಸಿದ್ದಾರೆ.

ಶೇಷಪ್ಪ ರೈ ನಂದುಗುರಿ



ಕಡಬ: ಕಡಬ ತಾಲೂಕಿನ ಕುಟ್ರುಪ್ಪಾಡಿ ಗ್ರಾಮದ ನಂದುಗುರಿ ನಿವಾಸಿ ಕೃಷಿಕ ಶೇಷಪ್ಪ ರೈ (68) ಅವರು ಹೃದಯಾಘಾತದಿಂದ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಜೂ.16 ರಂದು ನಿಧನ ಹೊಂದಿದರು. ಮೃತರು ಪತ್ನಿ ಹಾಗೂ ವಿಹಿಂಪ ಜಿಲ್ಲಾ ಕಾರ್ಯದರ್ಶಿ ಪ್ರಮೋದ್ ರೈ ನಂದುಗುರಿ ಸೇರಿದಂತೆ ಇಬ್ಬರು ಪುತ್ರರನ್ನು ಅಗಲಿದ್ದಾರೆ. ಮೃತರ ಮನೆಗೆ ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಸೇರಿದಂತೆ ರಾಜಕೀಯ, ಧಾರ್ಮಿಕ, ಸಾಮಾಜಿಕ ಹಾಗೂ ಹಿಂದೂ ಸಂಘಟನೆಗಳ ಮುಖಂಡರು ಭೇಟಿ ನೀಡಿ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

12 ವರ್ಷಗಳ ಸಾಧನೆ ವಿವರಿಸಿದ ಬಿಜೆಪಿ ಕಲ್ಲಿಕೋಟೆ ವಲಯಾಧ್ಯಕ್ಷ ಕೆ.ಶ್ರೀಕಾಂತ್

ಮೋದಿ ಆಡಳಿತದಿಂದ ಅಭಿವೃದ್ಧಿ

ಕಾಸರಗೋಡು: ಕಳೆದ 12 ವರ್ಷಗಳಿಂದ ಕೇಂದ್ರದಲ್ಲಿ ಅಧಿಕಾರದಲ್ಲಿರುವ ನರೇಂದ್ರ ಮೋದಿ ನೇತೃತ್ವದ ಸರಕಾರವು ದೇಶವನ್ನು ಅಭಿವೃದ್ಧಿಯ ಉತ್ತುಂಗಕ್ಕೆ ಕೊಂಡೊಯ್ದಿದೆ ಎಂದು ಬಿಜೆಪಿ ಕಲ್ಲಿಕೋಟೆ ವಲಯಾಧ್ಯಕ್ಷ, ವಕೀಲ ಕೆ.ಶ್ರೀಕಾಂತ್ ಹೇಳಿದ್ದಾರೆ.

ನರೇಂದ್ರ ಮೋದಿ ಸರಕಾರದ 12 ವರ್ಷಗಳ ಸಾಧನೆಗಳನ್ನು ವಿವರಿಸಲು ಬಿಜೆಪಿ ಕಾಸರಗೋಡು ಜಿಲ್ಲಾ ಸಮಿತಿ ಕಚೇರಿಯಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕೇರಳದ ಸಮಗ್ರ ಅಭಿವೃದ್ಧಿಗೆ ಪೂರಕವಾದ ಮಾದರಿ ಯೋಜನೆಗಳನ್ನು ಜಾರಿಗೊಳಿಸಲು ಮೋದಿ ಸರಕಾರ ಯಶಸ್ವಿಯಾಗಿದೆ ಎಂದು ಅವರು ಶ್ಲಾಘಿಸಿದರು.

ರೈಲ್ವೆ ಅಭಿವೃದ್ಧಿಗೆ ದಾಖಲೆಯ ಅನುದಾನ

ಯುಪಿಎ ಸರಕಾರದ ಅವಧಿಯಲ್ಲಿ ಕೇರಳದ ರೈಲ್ವೆ ಅಭಿವೃದ್ಧಿಗೆ ಕೇವಲ 372 ಕೋಟಿ ರೂಪಾಯಿ ಲಭಿಸಿತ್ತು. ಆದರೆ ಎನ್‌ಡಿಎ ಸರಕಾರದ ಅವಧಿಯಲ್ಲಿ 2025-26ರ ಹಣಕಾಸು ವರ್ಷದಲ್ಲಿ ಬರೋಬ್ಬರಿ 3,042 ಕೋಟಿ ರೂಪಾಯಿ ಅನುದಾನ ದೊರೆತಿದೆ. ಇದು ಯುಪಿಎ ಅವಧಿಗಿಂತ ಎಂಟು ಪಟ್ಟು ಹೆಚ್ಚು ಎಂದು ಕೆ.ಶ್ರೀಕಾಂತ್ ವಿವರಣೆ ನೀಡಿದರು. ಇದೇ ವೇಳೆ ರಾಜ್ಯದಲ್ಲಿ ರೈಲ್ವೆ ವಿದ್ಯುದ್ದೀಕರಣವನ್ನು ಶೇಕಡಾ 100ರಷ್ಟು ಪೂರ್ಣಗೊಳಿಸಲಾಗಿದೆ ಎಂದರು.

ಕೇರಳಕ್ಕೆ ಹರಿದು ಬಂದ ಕೇಂದ್ರದ ನೆರವು

ಯುಪಿಎ ಸರಕಾರದ 10 ವರ್ಷಗಳ ಅವಧಿಯಲ್ಲಿ ಕೇರಳಕ್ಕೆ ಕೇಂದ್ರದಿಂದ ಲಭಿಸಿದ ಅನುದಾನ (ಗ್ರಾಂಟ್-ಇನ್-ಏಡ್) ಕೇವಲ 25,629.7 ಕೋಟಿ ರೂಪಾಯಿ ಆಗಿತ್ತು. ಆದರೆ 2014-24ರ ಎನ್‌ಡಿಎ ಅವಧಿಯಲ್ಲಿ ಮೋದಿ ಸರಕಾರವು 1,43,117 ಕೋಟಿ ರೂಪಾಯಿಗಳನ್ನು ಒದಗಿಸಿದೆ. ಒಟ್ಟಾರೆಯಾಗಿ ಕೇರಳದ ವಿಕಾಸಕ್ಕಾಗಿ ಕೇಂದ್ರ ಸರಕಾರವು 3.13 ಲಕ್ಷ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದೆ ಎಂದು ಅವರು ತಿಳಿಸಿದರು.

ಜನ ಕಲ್ಯಾಣ ಯೋಜನೆಗಳ ಹೆಗ್ಗುರುತು

ದೇಶದ ಸಾಮಾನ್ಯ ಜನರಿಗೆ ಅನುಕೂಲವಾಗುವಂತೆ ಕುಡಿಯುವ ನೀರು, ವಸತಿ, ವಿದ್ಯುತ್, ಜನ್ ಧನ್ ಬ್ಯಾಂಕ್ ಖಾತೆಗಳು, ಪ್ರಧಾನಮಂತ್ರಿ ಇನ್ಶೂರೆನ್ಸ್ ಯೋಜನೆಗಳು ಹಾಗೂ ಉಜ್ವಲ ಗ್ಯಾಸ್ ಸಂಪರ್ಕದಂತಹ ಹಲವಾರು ಜನಪರ ಯೋಜನೆಗಳನ್ನು ಮೋದಿ ಸರಕಾರ ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ. 5 ಲಕ್ಷ ರೂಪಾಯಿ ವರೆಗೆ ಉಚಿತ ಒಳರೋಗಿ ಚಿಕಿತ್ಸೆ ನೀಡುವ ಪ್ರಧಾನಮಂತ್ರಿ ಆಯುಷ್ಮಾನ್ ಭಾರತ್ ಯೋಜನೆ ಜಾಗತಿಕ ದಾಖಲೆ ಹೊಂದಿದೆ ಎಂದು ಅವರು ಹೆಮ್ಮೆಯಿಂದ ಹೇಳಿದರು.

ಜನೌಷಧಿ ಕೇಂದ್ರಗಳ ಕ್ರಾಂತಿ

ಜನಸಾಮಾನ್ಯರಿಗೆ ಶೇಕಡಾ 90ರಷ್ಟು ರಿಯಾಯಿತಿ ದರದಲ್ಲಿ ಔಷಧಿಗಳನ್ನು ಒದಗಿಸಲು ಜನೌಷಧಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. 2026ರ ಫೆಬ್ರವರಿ ವೇಳೆಗೆ ಕೇರಳದಲ್ಲಿ 1,775 ಜನೌಷಧಿ ಕೇಂದ್ರಗಳನ್ನು ಆರಂಭಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ಬಾಬುರಾಜ್, ಕೃಷಿಕ ಮೋರ್ಚಾ ರಾಜ್ಯ ಕಾರ್ಯದರ್ಶಿ ಹಾಗೂ ಉಪಸಮಿತಿ ಸಂಚಾಲಕ ವಿ.ಕುಂಞಿಕಣ್ಣನ್ ಬಳಾಲ್ ಮತ್ತು ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಅಶ್ವಿನಿ ಕೆ.ಎಂ. ಉಪಸ್ಥಿತರಿದ್ದರು.



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಕಲ್ಲಿಕೋಟೆ ವಲಯಾಧ್ಯಕ್ಷ, ವಕೀಲ ಕೆ.ಶ್ರೀಕಾಂತ್ ಮಾತನಾಡಿದರು

ಕಾಸರಗೋಡು ಜಿಲ್ಲೆಗೆ ವಿಶೇಷ ಆದ್ಯತೆ

ಪೆರಿಯ ಕೇಂದ್ರೀಯ ವಿಶ್ವವಿದ್ಯಾಲಯದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳಡಿ 130 ಕೋಟಿ ರೂ.ಗಳ ಜೊತೆಗೆ ಸಾಮಾಜಿಕ ನ್ಯಾಯ ಸಚಿವಾಲಯದಿಂದ 15 ಕೋಟಿ ರೂ. ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವಾಲಯದಿಂದ 90 ಕೋಟಿ ರೂ.ಗಳನ್ನು ಮಂಜೂರು ಮಾಡಲಾಗಿದೆ. ಅಲ್ಲದೆ ಶೈಕ್ಷಣಿಕ ಅಗತ್ಯಗಳಿಗಾಗಿ ಕಳೆದ ವರ್ಷ 70 ಕೋಟಿ ರೂ.ಗಳನ್ನು ಕೇಂದ್ರ ಸರಕಾರವು ನೀಡಿದೆ.

ರೈಲ್ವೆ ನಿಲ್ದಾಣಗಳ ಆಧುನೀಕರಣ

ಅಮೃತ್ ಭಾರತ್ ಯೋಜನೆಯಡಿ ಕಾಸರಗೋಡು ರೈಲ್ವೆ ನಿಲ್ದಾಣವನ್ನು ಅತ್ಯಾಧುನಿಕವಾಗಿ ನವೀಕರಿಸಲಾಗಿದೆ. ಕಾಞಂಗಾಡು ಸೇರಿದಂತೆ ಜಿಲ್ಲೆಯ ಪ್ರಮುಖ ರೈಲ್ವೆ ನಿಲ್ದಾಣಗಳ ಅಭಿವೃದ್ಧಿಗೂ ಗಣನೀಯ ಅನುದಾನ ನೀಡುವ ಮೂಲಕ ಕೇಂದ್ರ ಸರಕಾರವು ಕಾಸರಗೋಡು ಜಿಲ್ಲೆಯನ್ನು ವಿಶೇಷವಾಗಿ ಪರಿಗಣಿಸಿದೆ ಎಂದರು.

ಜೂ.23ರಂದು ಜಾಗೃತಿ ಸಮಾವೇಶ

ಮಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ನಿರ್ದೇಶನದಂತೆ ಎಸ್‌ಐಆರ್ ಕುರಿತಂತೆ ಜೂ.23ರಂದು ಪೂರ್ವಾಹ್ನ 10.30ಕ್ಕೆ ಜಾಗೃತಿ ಸಭೆ ಆಯೋಜಿಸಲಾಗಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹರೀಶ್ ಕುಮಾರ್ ತಿಳಿಸಿದ್ದಾರೆ.



ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಮಾವೇಶದಲ್ಲಿ ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಭಾಗವಹಿಸಲಿದ್ದಾರೆ. ಮಂಗಳೂರು, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಪಕ್ಷದ ಬಿಎಲ್ ಎಗಳು ಭಾಗವಹಿಸಲಿದ್ದಾರೆ. ರಾಜ್ಯದ ಐದು ಕಡೆಗಳಲ್ಲಿ ಜಾಗೃತಿ ಸಮಾವೇಶ ನಡೆಯಲಿದೆ ಎಂದರು.

ಸಭೆಯಲ್ಲಿ ಎಸ್‌ಐಆರ್ ಬಗೆಗಿನ ಸಂಪೂರ್ಣ ಮಾಹಿತಿ, ಅನುಸರಿಸಬೇಕಾದ ಕ್ರಮಗಳ ಬಗ್ಗೆ ತಿಳಿಸಲಾಗುವುದು. ಯಾವುದೇ ಕಾರಣಕ್ಕೂ ಮತದಾರನಿಗೆ ಅನ್ಯಾಯವಾಗಲು ಕಾಂಗ್ರೆಸ್ ಪಕ್ಷ ಯಾವತ್ತೂ ಬಿಡುವುದಿಲ್ಲ ಎಂದು ಅವರು ಹೇಳಿದರು.

ರಾಜ್ಯದ ಗ್ಯಾರಂಟಿ ಯೋಜನೆಯನ್ನು ಬಿಜೆಪಿಯವರೇ ಅನ್ಯರಾಜ್ಯಗಳಲ್ಲಿ ಕಾಪಿ ಮಾಡಿದ್ದಾರೆ. ರಾಜ್ಯದಲ್ಲಿ ಗ್ಯಾರಂಟಿ ದಾಖಲೆಗಳನ್ನು ಪರಿಷ್ಕರಣೆ ಮಾಡಲಾಗುತ್ತಿದೆ ಹೊರತು ಬೇರೇನೂ ಅಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಮಹಿಳಾ ಕಾಂಗ್ರೆಸ್ ನಗರಾಧ್ಯಕ್ಷೆ ಅಪ್ಪಿ, ಮಾಜಿ ಮೇಯರ್ ಶಶಿಧರ ಹೆಗ್ಡೆ, ಪ್ರಮುಖರಾದ ಚಿತ್ತರಂಜನ್, ಸಾಹುಲ್ ಹಮೀದ್, ಶುಭೋದಯ ಆಳ್ವ, ರವೂಫ್, ಪ್ರಕಾಶ್ ಸಾಲ್ಯಾನ್ ಉಪಸ್ಥಿತರಿದ್ದರು.

ಮಂಗಳೂರಿನಲ್ಲಿ ಉದ್ಯಮಿಗಳು, ಪ್ರಮುಖರ ಉಪಸ್ಥಿತಿ

ಶ್ರೀಕ್ಷೇತ್ರ ಗೆಜ್ಜೆಗಿರಿಯ ಅಭಿವೃದ್ಧಿ ಸಭೆ

ಬಡಗನ್ನೂರು: ದೇಯಿ ಬೈದೆತಿ ಕೋಟಿ-ಚೆನ್ನಯ ಮೂಲಸ್ಥಾನವಾದ ಶ್ರೀ ಕ್ಷೇತ್ರ ಗೆಜ್ಜೆಗಿರಿಯಲ್ಲಿ ಧಾರ್ಮಿಕ ಚಟುವಟಿಕೆಗಳ ಜೊತೆಗೆ ಸಾಮಾಜಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಂಗಳೂರು ವಲಯದ ಉದ್ಯಮಿಗಳು ಮತ್ತು ಸಮಾಜದ ಪ್ರಮುಖರ ಸಮಾಲೋಚನಾ ಸಭೆ ಮಂಗಳೂರಿನಲ್ಲಿ ನಡೆಯಿತು.

ಸಭೆಯಲ್ಲಿ ಕ್ಷೇತ್ರಾಡಳಿತ ಸಮಿತಿಯ ಅಧ್ಯಕ್ಷ ರವಿಪೂಜಾರಿ ಚಿಲಿಂಬಿ ಪ್ರಾಸ್ತಾವಿಸಿ, ಸುಮಾರು 550 ವರ್ಷಗಳ ಇತಿಹಾಸ ಹೊಂದಿರುವ ಗೆಜ್ಜೆಗಿರಿ ಕ್ಷೇತ್ರವು ತುಳುನಾಡಿನ ಸುಮಾರು 270 ಗರಡಿಗಳಲ್ಲಿ ಆರಾಧಿಸಲ್ಪಡುವ ಬೈದರುಗಳು ಹಾಗೂ ಅವರ ತಾಯಿ ಮಾತೆ ದೇಯಿ ಬೈದೆತಿಯ ಮೂಲಸ್ಥಾನವಾಗಿದೆ. ಬಿಲ್ಲವ ಸಮುದಾಯದ ಮೂಲ ಕ್ಷೇತ್ರವಾಗಿದೆ. 2016ರಲ್ಲಿ ಕ್ಷೇತ್ರದ ಸಮೀಪ ಸುಮಾರು 5 ಎಕರೆ ಜಾಗ ಖರೀದಿಸಿ, ಅದರ ಅಭಿವೃದ್ಧಿಗಾಗಿ ಗೆಜ್ಜೆಗಿರಿ ಅಭಿವೃದ್ಧಿ ಚಾರಿಟೇಬಲ್ ಟ್ರಸ್ಟ್ ಸ್ಥಾಪಿಸಲಾಗಿದೆ ಎಂದು ಹೇಳಿದರು.

ಗೆಜ್ಜೆಗಿರಿ ಅಭಿವೃದ್ಧಿ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಸಂಜೀವ ಪೂಜಾರಿ ಬಿರ್ವ ಮಾತನಾಡಿ, ಭಕ್ತರ ಅನುಕೂಲಕ್ಕಾಗಿ ಯಾತ್ರಿ ನಿವಾಸ, ದೇಯಿ ಬೈದೆತಿ ಆಯುರ್ವೇದ ಕೇಂದ್ರ, ಔಷಧೀಯ ಉದ್ಯಾನವನ ಹಾಗೂ ಇತರ ಮೂಲ ಸೌಕರ್ಯಗಳನ್ನು ನಿರ್ಮಿಸುವ ಯೋಜನೆ ರೂಪಿಸಲಾಗಿದೆ. ಈಗಾಗಲೇ ಸುಮಾರು ರೂ.7 ಕೋಟಿ ವೆಚ್ಚದಲ್ಲಿ ಕಟ್ಟಡ ಕಾಮಗಾರಿ ಆರಂಭಗೊಂಡಿದೆ ಎಂದು ತಿಳಿಸಿದರು. ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಎಲ್ಲರೂ ಸಹಕಾರ ನೀಡುವಂತೆ ಕ್ಷೇತ್ರಾಡಳಿತ ಸಮಿತಿಯ ಗೌರವಾಧ್ಯಕ್ಷ ಪೀತಾಂಬರ ಹೇರಾಜೆ ಮನವಿ ಮಾಡಿದರು. ವಾಸ್ತು ತಜ್ಞ ಪ್ರಮಾಲ್ ಕುಮಾರ್ ನಡೆಯುತ್ತಿರುವ ಕಾಮಗಾರಿಗಳ ವಿವರ ನೀಡಿದರು.

ಸಭೆಯಲ್ಲಿ ಚಂದ್ರಹಾಸ ಅಮೀನ್, ಡಾ. ಸದಾನಂದ ಪೂಜಾರಿ, ಊರ್ಮಿಳಾ ರಮೇಶ್ ಕುಮಾರ್, ಅನಿಲ್ ಕುಮಾರ್, ಗೆಜ್ಜೆಗಿರಿ ಕ್ಷೇತ್ರಾಡಳಿತ ಸಮಿತಿ ಕೋಶಾಧಿಕಾರಿ ಮೋಹನ್ ದಾಸ್ ವಾಮಂಜೂರು, ಗೆಜ್ಜೆಗಿರಿ ಅಭಿವೃದ್ಧಿ ಟ್ರಸ್ಟ್ ಉಪಾಧ್ಯಕ್ಷ ದೀಪಕ್ ಕೋಟ್ಯಾನ್, ಅಭಿವೃದ್ಧಿ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಉಲ್ಲಾಸ್ ಕೋಟ್ಯಾನ್, ಕ್ಷೇತ್ರಾಡಳಿತ ಸಮಿತಿ ಕಾನೂನು ಸಲಹೆಗಾರರಾದ ನವನೀತ್ ಹಿಂಗಾಣಿ, ಸದಸ್ಯರಾದ ಚಂದ್ರಹಾಸ ಉಚ್ಚಿಲ್, ನಾರಾಯಣ ಮಚ್ಚಿನ, ಹರೀಶ್ ಕೆ. ಪೂಜಾರಿ, ನಿತ್ಯಾನಂದ ನಾವರ, ನಾಗೇಶ್ ಪೂಜಾರಿ ಬೈಕಂಪಾಡಿ, ಕುಮಾರ್ ಇರುವೈಲ್ ಮತ್ತಿತರರು ಉಪಸ್ಥಿತರಿದ್ದರು.

ಗೆಜ್ಜೆಗಿರಿ ಮಾಧ್ಯಮ ವಕ್ತಾರ ರಾಜೇಂದ್ರ ಚಿಲಿಂಬಿ ವಂದಿಸಿದರು.



ಏಳು ದೇವಸ್ಥಾನಗಳಲ್ಲಿ ವಿವಿಧ ಪ್ರಸಂಗಗಳ ತಾಳಮದ್ದಳೆ

'ಯಕ್ಷ ಪುರುಷೋತ್ತಮ' ಸಂಪನ್ನ

ಮಂಗಳೂರು: ಶ್ರೀ ಆಂಜನೇಯ ಯಕ್ಷಗಾನ ಕಲಾ ಸಂಘ ಬೊಳುವಾರು ಪುತ್ತೂರು ಮತ್ತು ಶ್ರವಣರಂಗ ಪ್ರತಿಷ್ಠಾನ ಸವಣೂರು ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಅಧಿಕಮಾಸದ ವಿಶಿಷ್ಟ ಕಾರ್ಯಕ್ರಮ 'ಯಕ್ಷ ಪುರುಷೋತ್ತಮ' ಕಾರ್ಯಕ್ರಮದ ಏಳನೇ ಹಾಗೂ ಕೊನೆಯ ಕೂಟವು ಬಾರ್ಯ ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನದ ವಠಾರದಲ್ಲಿ ಭಾನುವಾರ 'ಶ್ರೀ ಹರಿ ದರ್ಶನ'-ತ್ರಿವಳಿ ತಾಳಮದ್ದಳೆಗಳ ಸಾಕ್ಷಾತ್ಕಾರ ಎಂಬ ವಿಶೇಷ ಪರಿಕಲ್ಪನೆಯಲ್ಲಿ, ಮೇದಿನೀ ನಿರ್ಮಾಣ, ತುಳುನಾಡ ಬಲಿಯೇಂದ್ರ ಮತ್ತು ಭಕ್ತ ಪ್ರಹ್ಲಾದ ಎಂಬ ಆಖ್ಯಾನಗಳ ಪ್ರಸ್ತುತಿಯೊಂದಿಗೆ ಸಂಪನ್ನಗೊಂಡಿತು.

ಹಿಮ್ಮೇಳದಲ್ಲಿ ಭಾಗವತರಾಗಿ ಕುಸುಮಾಕರ ಆಚಾರ್ಯ ಹಳೇನೇರಂಕಿ, ಸತೀಶ್ ಇರ್ದೆ, ಆನಂದ ಸವಣೂರು, ನಿತೀಶ್ ಎಂಕಣ್ಣ ಮೂಲೆ, ಚೆಂಡೆ ಮದ್ದಳೆಗಳಲ್ಲಿ ಶ್ರೀಹರಿ, ಅಚ್ಯುತ ಪಾಂಗಣ್ಣಾಯ, ತಾರಾನಾಥ ಸವಣೂರು, ಸಮರ್ಥ ವಿಷ್ಣು ಕಡಂಬಳಿಕೆ, ಅನೀಶ್ ಕೃಷ್ಣ ಪುಣಚ ಸಹಕರಿಸಿದರು.

ಭಕ್ತ ಪ್ರಹ್ಲಾದ ಪ್ರಸಂಗದ ಮುಮ್ಮೇಳದಲ್ಲಿ ಗುಂಡ್ಯಡ್ಕ ಈಶ್ವರ ಭಟ್ ಹಿರಣ್ಯಕಶ್ಯಪ, ಭಾಸ್ಕರ ಬಾರ್ಯ ಕಯಾದು, ದಿವಾಕರ ಆಚಾರ್ಯ ಗೇರುಕಟ್ಟೆ ಗುರುಗಳು, ದುಗ್ಗಪ್ಪ ನಡುಗಲ್ಲು ನರಸಿಂಹ, ಶುಭಾ ಅಡಿಗ ಪ್ರಹ್ಲಾದ, ಮೇದಿನೀ ನಿರ್ಮಾಣದಲ್ಲಿ ಕಿಶೋರಿ ದುಗ್ಗಪ್ಪ ನಡುಗಲ್ಲು ಮಹಾವಿಷ್ಣು, ಭಾರತಿ ರೈ ಅರಿಯಡ್ಕ ಮಧು, ಶಾರದಾ ಅರಸ್ ಕೈಟಭ, ತುಳುನಾಡ ಬಲಿಯೇಂದ್ರ ಪ್ರಸಂಗದಲ್ಲಿ ಗುಡ್ಡಪ್ಪ ಬಲ್ಯ ವಾಮನ, ತಾರಾನಾಥ ಸವಣೂರು ಬಲಿ, ಹರಿಣಾಕ್ಷಿ ಜೆ. ಶೆಟ್ಟಿ ಶುಕ್ರಾಚಾರ್ಯ, ಅಚ್ಯುತ ಪಾಂಗಣ್ಣಾಯ ವಿಂದ್ಯಾವಳಿಯಾಗಿ ಸಹಕರಿಸಿದರು.

ದೇವಳದ ಆಡಳಿತ ಟ್ರಸ್ಟ್ ಕಾರ್ಯದರ್ಶಿ ಪ್ರಶಾಂತ್ ಪೈ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸ್ವರ್ಣಲತಾ ಬಾರ್ಯ, ನಾರಾಯಣ ಗೌಡ, ಪ್ರಶಾಂತ್ ಪೈ, ವಿಜಯಲಕ್ಷ್ಮಿ ರೈ, ಶಿವರಾಮ್ ನಾಯ್ಕ, ವಿದ್ಯಾಪ್ರಭಾಕರ್, ಮನೋಹರ ಶೆಟ್ಟಿ, ಶೇಷಪ್ಪ ಸಾಲಿಯಾನ್, ಪ್ರವೀಣ್ ಮೂರುಗೋಳಿ, ಅರುಣ್ ಬಂಗೇರ ಕಲಾವಿದರನ್ನು ಗೌರವಿಸಿದರು. ಅರ್ಚಕ ಗುರುಪ್ರಸಾದ್ ನೂರಿತ್ತಾಯ ಸಹಕರಿಸಿದರು. ಶ್ರೀ ದೇವಳದ ಆಡಳಿತ ಸೇವಾ ಸಮಿತಿ ಅಧ್ಯಕ್ಷ ಭಾಸ್ಕರ್ ಬಾರ್ಯ ಸ್ವಾಗತಿಸಿ, ಟ್ರಸ್ಟಿ ಮನೋಹರ ಶೆಟ್ಟಿ ವಂದಿಸಿದರು. ಮುಗೇರು, ಶಾಂತಿಗೋಡು, ವೀರಮಂಗಲ, ಪುತ್ತೂರು, ಸವಣೂರು, ಕುರಿಯ ದೇವಳಗಳಲ್ಲಿ ನಡೆದ ಯಕ್ಷ ಪುರುಷೋತ್ತಮ ಸರಣಿಯ ಮೊದಲ ಆರು ಕಾರ್ಯಕ್ರಮ ಯಶಸ್ವಿಯಾಗಲು ಸಹಕರಿಸಿದ ಕಲಾವಿದರನ್ನು ಶ್ರವಣ ರಂಗ ಸವಣೂರು ಸಂಚಾಲಕ ತಾರಾನಾಥ ಸವಣೂರು ಅಭಿನಂದಿಸಿದರು.



ಸಚಿವ ಪ್ರಿಯಾಂಕ ಖರ್ಗೆ ಪ್ರಚಾರ ಗಿಟ್ಟಿಸುವ ಹೇಳಿಕೆಗೆ ವಿಧಾನಪರಿಷತ್ ಸದಸ್ಯ ಕಿಶೋರ್‌ಕುಮಾರ್ ತಿರುಗೇಟು

ಆರೆಸ್ಸೆಸ್ ಬಗ್ಗೆ ಮಾತನಾಡುವ ನೈತಿಕತೆ ಭ್ರಷ್ಟ ಕಾಂಗ್ರೆಸ್ಸಿಗರಿಗಿಲ್ಲ

ಪುತ್ತೂರು: ಕಳೆದ 100 ವರ್ಷಗಳಿಂದ ನಿಸ್ವಾರ್ಥವಾಗಿ ರಾಷ್ಟ್ರ ನಿರ್ಮಾಣ ಹಾಗೂ ವ್ಯಕ್ತಿ ನಿರ್ಮಾಣದ ಧ್ಯೇಯದೊಂದಿಗೆ ಕಾರ್ಯ ನಿರ್ವಹಿಸುತ್ತಿರುವ 'ರಾಷ್ಟ್ರೀಯ ಸ್ವಯಂಸೇವಕ ಸಂಘ'ದ ಲೆಕ್ಕಪತ್ರ ಕೇಳಲು ಹೊರಟಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರ ಹೇಳಿಕೆಯು ಅಜ್ಞಾನ ಹಾಗೂ ದುರಹಂಕಾರದ ಪರಮಾವಧಿಯಾಗಿದೆ. ಇದನ್ನು ಅತ್ಯುಗ್ರವಾಗಿ ಖಂಡಿಸುವುದಾಗಿ ಉಡುಪಿ-ದಕ್ಷಿಣ ಕನ್ನಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಅವರು ತೀವ್ರ ವಾಗ್ದಾಳಿ ನಡೆಸಿದ್ದಾರೆ.



ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದುಬಿದ್ದಿದ್ದು, ಭ್ರಷ್ಟಾಚಾರ ಮಿತಿಮೀರಿದೆ ಹಾಗೂ ಅಭಿವೃದ್ಧಿ ಶೂನ್ಯವಾಗಿದೆ. ಸರ್ಕಾರದ ಈ ದಯನೀಯ ವೈಫಲ್ಯಗಳನ್ನು ಹಾಗೂ ಹಗರಣಗಳನ್ನು ಮುಚ್ಚಿಹಾಕಿ, ಜನರ ಗಮನವನ್ನು ಬೇರೆಡೆ ಸೆಳೆಯಲು ಆರ್.ಎಸ್.ಎಸ್. ಮೇಲೆ ಗೂಬೆ ಕೂರಿಸುವ ವಿಫಲ ಯತ್ನವನ್ನು ಸಚಿವರು ಮಾಡುತ್ತಿದ್ದಾರೆ. ತಮ್ಮದೇ ಫಾಲೋವರ್ಸ್‌ಗಳನ್ನು ಮೆಚ್ಚಿಸಲು ಮತ್ತು ಕೇವಲ ಪ್ರಚಾರ ಗಿಟ್ಟಿಸಿಕೊಳ್ಳಲು ಪದೇ ಪದೇ ಹೇಳಿದ್ದನ್ನೇ ಹೇಳುವ ಚಾಳಿಯನ್ನು ಅವರು ಮೊದಲು ಬಿಡಬೇಕು ಎಂದು ಅವರು ಹೇಳಿದ್ದಾರೆ.

ಆರ್.ಎಸ್.ಎಸ್. ಯಾವುದೇ ಅನಧಿಕೃತ ಸಂಘಟನೆಯಲ್ಲ, ಬದಲಾಗಿ ಇದು ಪ್ರತಿ ವರ್ಷವೂ ನಿಯಮಿತವಾಗಿ ಆಡಿಟಿಂಗ್‌ಗೆ ಒಳಪಡುವ ಸಂಸ್ಥೆಯಾಗಿದ್ದು, ಇಲ್ಲಿನ ಪ್ರತಿಯೊಂದು ಪೈಸೆಯ ಲೆಕ್ಕಾಚಾರವೂ ಅತ್ಯಂತ ಪಾರದರ್ಶಕವಾಗಿದೆ. ಬಾಯಲ್ಲಿ ಮಾತ್ರ ಮಾತನಾಡುವ ಸಚಿವರಿಗೆ ಧೈರ್ಯವಿದ್ದರೆ ಕಾನೂನುಬಾಹಿರವಾಗಿ ಏನಾದರೂ ನಡೆದಿದೆ ಎಂದು ನೇರವಾಗಿ ಕಾನೂನು ಕ್ರಮ ಜರುಗಿಸಬೇಕಿತ್ತು. ಹಾಗೆ ಮಾಡಲು ಯಾವುದೇ ಆಧಾರವಿಲ್ಲ ಮತ್ತು ಅದು ಅವರ ಕೈಯಲ್ಲಿ ಸಾಧ್ಯವೂ ಇಲ್ಲ ಎಂಬ ಸತ್ಯ ಅವರಿಗೇ ಚೆನ್ನಾಗಿ ಗೊತ್ತಿದೆ ಎಂದು ಶಾಸಕರು ಸವಾಲು ಹಾಕಿದ್ದಾರೆ.

ಇತಿಹಾಸ ಪುಟಗಳನ್ನು ಒಮ್ಮೆ ತಿರುವಿ ನೋಡುವಂತೆ ಪ್ರಿಯಾಂಕ್ ಖರ್ಗೆಯವರಿಗೆ ಕಿವಿಮಾತು ಹೇಳಿರುವ ಶಾಸಕ ಕಿಶೋರ್ ಕುಮಾರ್, 1948ರಲ್ಲಿ ಜವಾಹರಲಾಲ್ ನೆಹರೂ ಅವರು ಕೂಡ ಆರ್.ಎಸ್.ಎಸ್. ಬ್ಯಾನ್ ಮಾಡಲು ಹಾಗೂ ಸಂಘವನ್ನು ಮುಗಿಸಲು ಎಲ್ಲಾ ರೀತಿಯ ಕುತಂತ್ರದ ಪ್ರಯತ್ನಗಳನ್ನು ಮಾಡಿದ್ದರು. ಆದರೆ, ತಮ್ಮ ಕೊನೆಯ ದಿನಗಳಲ್ಲಿ ಸಂಘದ ನಿಸ್ವಾರ್ಥ ದೇಶಸೇವೆಯ ಶಕ್ತಿಯನ್ನು ಅರಿತು, ಪಶ್ಚಾತ್ತಾಪ ಪಟ್ಟು, ಕೊನೆಗೆ 1963ರ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಭಾಗವಹಿಸಲು ಆರ್.ಎಸ್.ಎಸ್. ಸ್ವಯಂಸೇವಕರಿಗೆ ನೆಹರೂ ಅವರೇ ಖುದ್ದಾಗಿ ಅವಕಾಶ ಮಾಡಿ ಕೊಟ್ಟಿದ್ದರು ಎಂಬ ಕನಿಷ್ಠ ಜ್ಞಾನ ಸಚಿವರಿಗೆ ಇಲ್ಲದಿರುವುದು ಅವರ ಬೌದ್ಧಿಕ ದಿವಾಳಿತನವನ್ನು ತೋರಿಸುತ್ತದೆ ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

ಸಚಿವರೇ ಬಿಡುಗಡೆ ಮಾಡಿರುವ ಅಂಕಿ-ಅಂಶಗಳೇ ಸಂಘದ ಶಕ್ತಿಯನ್ನು ಮತ್ತೊಮ್ಮೆ ಅನಾವರಣಗೊಳಿಸಿವೆ. ರಾಜ್ಯದಲ್ಲಿ 4,127 ದೈನಂದಿನ ಶಾಖೆಗಳು, 2,194 ಸಮಾಜೋತ್ಸವಗಳು ಹಾಗೂ ಅದರಲ್ಲಿ 19.61 ಲಕ್ಷ ಮಂದಿ ಭಾಗವಹಿಸಿರುವುದು ಆರ್.ಎಸ್.ಎಸ್. ಬಗ್ಗೆ ನಾಡಿನ ಜನತೆಗೆ ಇರುವ ಅಪಾರ ಒಲವು ಮತ್ತು ನಂಬಿಕೆಯನ್ನು ಸಾಬೀತುಪಡಿಸಿದೆ. ರಾಜ್ಯದಲ್ಲಿ ಹಿಂದುತ್ವದ ಶಕ್ತಿ ಹಾಗೂ ಸಂಘಟನೆಯ ವ್ಯಾಪಕತೆ ದಿನೇ ದಿನೇ ವಿಸ್ತಾರವಾಗುತ್ತಿರುವುದನ್ನು ಕಂಡು ಸಚಿವರಿಗೆ ಹಾಗೂ ಕಾಂಗ್ರೆಸ್ಸಿಗರಿಗೆ ನಡುಕ ಶುರುವಾಗಿದೆ. ಇಂದು ಸಮಾಜ ಇಂತಹ ರಾಜಕೀಯ ಪ್ರೇರಿತ ಪ್ರಶ್ನೆಗಳನ್ನು ಕೇಳುತ್ತಿಲ್ಲ, ಬದಲಾಗಿ ಸರ್ಕಾರದ ವೈಫಲ್ಯಗಳನ್ನು ಪ್ರಶ್ನಿಸುತ್ತಿದೆ ಎಂದು ಅವರು ಹೇಳಿದ್ದಾರೆ.

ತಕ್ಷಣ ಗಮನ ಹರಿಸಲಿ

ಕೇವಲ ಅಲ್ಪಸಂಖ್ಯಾತರ ಓಲೈಕೆ ಮತ್ತು ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಆರ್.ಎಸ್.ಎಸ್. ಟೀಕಿಸುವ ಚಾಳಿಯನ್ನು ಬಿಡಬೇಕು. ಇತಿಹಾಸದಲ್ಲಿ ಆರ್.ಎಸ್.ಎಸ್. ಬ್ಯಾನ್ ಮಾಡಲು ಹೊರಟ ಕಾಂಗ್ರೆಸ್ಸಿಗರೇ ಇಂದು ದೇಶದಲ್ಲಿ ಬ್ಯಾನ್ ಆಗುವ ಪರಿಸ್ಥಿತಿಗೆ ಬಂದಿದ್ದಾರೆ ಎಂಬುದನ್ನು ಮರೆಯಬಾರದು. ಸೂರ್ಯನ ಕಡೆಗೆ ಉಗುಳುವ ವ್ಯರ್ಥ ಪ್ರಯತ್ನ ಬಿಟ್ಟು, ರಾಜ್ಯದಲ್ಲಿ ಸಂಪೂರ್ಣವಾಗಿ ಹದಗೆಟ್ಟಿರುವ ಗೃಹ ಇಲಾಖೆಯ ಕಾನೂನು ಸುವ್ಯವಸ್ಥೆ ಹಾಗೂ ಜನತೆಯ ಮೂಲಭೂತ ಸೌಕರ್ಯದತ್ತ ಸಚಿವರು ತಕ್ಷಣ ಗಮನ ಹರಿಸಲಿ ಎಂದು ಕಿಶೋರ್ ಕುಮಾರ್ ಪುತ್ತೂರು ಆಗ್ರಹಿಸಿದ್ದಾರೆ.

ಬೆಲ್ಜಿಯಂ-ಈಜಿಪ್ಟ್ 1-1ರಿಂದ ಡ್ರಾ



ದಿನದ ಮತ್ತೊಂದು ಪಂದ್ಯದಲ್ಲಿ ಬೆಲ್ಜಿಯಂ ಮತ್ತು ಈಜಿಪ್ಟ್ ನಡುವಿನ ಪಂದ್ಯ 1-1 ಗೋಲುಗಳ ಸಮಬಲದಲ್ಲಿ ಅಂತ್ಯಗೊಂಡಿತು. ಸಿಯಾಟಲ್‌ನಲ್ಲಿ ನಡೆದ ಈ ಪಂದ್ಯದಲ್ಲಿ ರೊಮೆಲು ಲುಕಾಕು ಬದಲಿ ಆಟಗಾರನಾಗಿ ಕಣಕ್ಕಿಳಿದ ಕೆಲವೇ ಕ್ಷಣಗಳಲ್ಲಿ ಬೆಲ್ಜಿಯಂಗೆ ಸಮಬಲ ತಂದುಕೊಟ್ಟು ಸೋಲಿನಿಂದ ಪಾರು ಮಾಡಿದರು. ಪಂದ್ಯದ 19ನೇ ನಿಮಿಷದಲ್ಲಿ ಈಜಿಪ್ಟ್‌ನ ಮಧ್ಯಮೈದಾನ ಆಟಗಾರ ಇಮಾಮ್ ಆಶೂರ್ ಗೋಲು ಬಾರಿಸಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ರಕ್ಷಣಾ ವಿಭಾಗದ ತಪ್ಪನ್ನು ಸದುಪಯೋಗಪಡಿಸಿಕೊಂಡ ಆಶೂರ್, ತಮ್ಮ ಅಂತಾರಾಷ್ಟ್ರೀಯ ವೃತ್ತಿಜೀವನದ ಮೊದಲ ಗೋಲು ದಾಖಲಿಸಿದರು. ಮುನ್ನಡೆ ಪಡೆದ ಈಜಿಪ್ಟ್ ಪಂದ್ಯದಲ್ಲಿ ಹಲವು ಅವಕಾಶಗಳನ್ನು ಸೃಷ್ಟಿಸಿದರೂ ಗೋಲುಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ವಿಫಲವಾಯಿತು.

23 ಸೆಕೆಂಡ್.. ಪಂದ್ಯದ ದಿಕ್ಕೇ ಬದಲು: 66ನೇ ನಿಮಿಷದಲ್ಲಿ ಬೆಲ್ಜಿಯಂ ಪರ ರೊಮೆಲು ಲುಕಾಕು ಬದಲಿ ಆಟಗಾರನಾಗಿ ಕಣಕ್ಕಿಳಿದರು. ಕಣಕ್ಕಿಳಿದ ಕೇವಲ 23 ಸೆಕೆಂಡುಗಳಲ್ಲೇ ಅವರ ಸಾನ್ನಿಧ್ಯವೇ ಪಂದ್ಯದ ದಿಕ್ಕು ಬದಲಿಸಿತು. ಬಲಭಾಗದಿಂದ ಬಂದ ಕ್ರಾಸ್ ಅನ್ನು ತಡೆಯುವ ಯತ್ನದಲ್ಲಿ ಈಜಿಪ್ಟ್ ರಕ್ಷಣಾ ಆಟಗಾರ ಮೊಹಮದ್ ಹಾನಿ ಚೆಂಡನ್ನು ತಮ್ಮದೇ ಗೋಲುಪೆಟ್ಟಿಗೆಯೊಳಗೆ ಸೇರಿಸಿದರು. ಇದರೊಂದಿಗೆ ಬೆಲ್ಜಿಯಂ 1-1 ಸಮಬಲ ಸಾಧಿಸಿತು.

- ಬೆಲ್ಜಿಯಂ 1-1 ಈಜಿಪ್ಟ್
- 19ನೇ ನಿಮಿಷ ಇಮಾಮ್ ಆಶೂರ್ ಗೋಲು
- 66ನೇ ನಿಮಿಷ ಲುಕಾಕು ಬದಲಿ ಆಟಗಾರನಾಗಿ ಪ್ರವೇಶ
- **66ನೇ ನಿಮಿಷ + 23 ಸೆಕೆಂಡು:** ಮೊಹಮದ್ ಗೋಲು

- ಸ್ಪೇನ್‌ಗೆ ವಿರುದ್ಧ 0-0ರಿಂದ ಡ್ರಾ
- ಐದೇ ಲಕ್ಷ ಜನರಿರುವ ದೇಶದಿಂದ ಜಾದೂ
- ವೊಜಿನ್ಹಾ ಸಾಹಸಕ್ಕೆ ಭಾರೀ ಮೆಚ್ಚುಗೆ
- ಎಲ್ಲಾ ಪಂದ್ಯಗಳು ಡ್ರಾ!

ಯಾರಿಗೆಷ್ಟು?

- ವಿಶ್ವಕಪ್‌ನಲ್ಲಿ ಕೇಪ್ ವರ್ಡೆಯ ಚೊಚ್ಚಲ ಪಂದ್ಯ
- 40 ವರ್ಷದ ಗೋಲ್‌ಕೀಪರ್ ವೊಜಿನ್ಹಾ ಮಿಂಚಿನ ಪ್ರದರ್ಶನ

ಕೇಪ್ ವರ್ಡೆ ಚಮತ್ಕಾರ



ಅಟ್ಲಾಂಟಾ: ಗೋಲ್-ಕೀಪರ್ ವೊಜಿನ್ಹಾಗೆ ಎಂಬಾತರಿಗೆ 40 ವರ್ಷ. ಕೇಪ್ ವರ್ಡೆ ಎಂಬ ತಂಡದಲ್ಲಿ ವರ್ಷಗಳಿಂದಲೂ ಆಡುತ್ತಿರುವ ಅವರು, ತಮ್ಮ ತಂಡವನ್ನು ವಿಶ್ವಕಪ್‌ಗೆ ಅರ್ಹತೆ ಕೊಡಿಸಲು ಸರ್ವಸ್ವವನ್ನೇ ಕೊಟ್ಟರು. ಅಂತೂ ಇಂತೂ ಅವಕಾಶ ಸಿಕ್ಕಿತೆನ್ನುವಷ್ಟರಲ್ಲಿ ಮುಖ್ಯ ಡ್ರಾದಲ್ಲಿ ದೊಡ್ಡ ಶಾಕ್, ಅದು ಏನೆಂದರೆ ಮೊದಲ ಎದುರಾಳಿಯೇ ಬಲಿಷ್ಠ ಸ್ಪೇನ್ ತಂಡ! 2026ರ ಫಿಫಾ ವಿಶ್ವಕಪ್‌ನಲ್ಲಿ ಅಚ್ಚರಿಯ ಫಲಿತಾಂಶವೊಂದು ದಾಖಲಾಗಿದೆ. ವಿಶ್ವಕಪ್‌ಗೆ ಮೊದಲ ಬಾರಿಗೆ ಅರ್ಹತೆ ಪಡೆದ ಕೇಪ್ ವರ್ಡೆ, ಬಲಿಷ್ಠ ಸ್ಪೇನ್ ತಂಡವನ್ನು 0-0 ಗೋಲುಗಳಿಂದ ಸಮಬಲದಲ್ಲಿ ಕಟ್ಟಿಹಾಕಿ ಸಂಚಲನ ಮೂಡಿಸಿದೆ. ಅಟ್ಲಾಂಟಾದಲ್ಲಿ ನಡೆದ ಪಂದ್ಯದಲ್ಲಿ ಯುರೋಪಿಯನ್ ಚಾಂಪಿಯನ್ ಸ್ಪೇನ್ ಆರಂಭದಿಂದಲೇ ಮೇಲುಗೈ ಸಾಧಿಸಿದರೂ, ಕೇಪ್ ವರ್ಡೆಯ ಅನುಭವಿ ಗೋಲ್‌ಕೀಪರ್ ವೊಜಿನ್ಹಾ ಅದ್ಭುತ ಪ್ರದರ್ಶನ ನೀಡಿ ಸ್ಪೇನ್ ದಾಳಿಗಳನ್ನು ವಿಫಲಗೊಳಿಸಿದರು.

ಕೇಪ್ ವರ್ಡೆಗಿದು ಮೊದಲ ವಿಶ್ವಕಪ್

ತಡೆಗೋಡೆಯಾದ ವೊಜಿನ್ಹಾ : ಬಾರ್ಸಿಲೋನಾ ತಾರೆ ಫೆರಾನ್ ಟೊರೆಸ್ ಸ್ಪೇನ್ ಪರ ಗೋಲು ಗಳಿಸುವುದಕ್ಕೆ ಅತ್ಯಂತ ಸಮೀಪ ಬಂದಿದ್ದರು. ಅವರ ಒಂದು ಶಾಟ್ ಕ್ರಾಸ್‌ಬಾರ್‌ಗೆ ತಾಗಿ ಹೊರಬಿದ್ದರೆ, ಮತ್ತೊಂದು ಪ್ರಯತ್ನವನ್ನು ವೊಜಿನ್ಹಾ ಅದ್ಭುತವಾಗಿ ತಡೆದರು. ಪೆಡ್ರಿ ಸೇರಿದಂತೆ ಹಲವು ಸ್ಪ್ಯಾನಿಷ್ ಆಟಗಾರರ ಪ್ರಯತ್ನಗಳನ್ನೂ ಅವರು ವಿಫಲಗೊಳಿಸಿದರು. ದ್ವಿತೀಯಾರ್ಧದಲ್ಲೂ ಕೇಪ್ ವರ್ಡೆ ಸಂಘಟಿತ ರಕ್ಷಣಾ ಆಟ ಪ್ರದರ್ಶಿಸಿತು. ಬದಲಿ ಆಟಗಾರನಾಗಿ ಕಣಕ್ಕಿಳಿದ ಯುವ ತಾರೆ ಲಮಿನ್ ಯಮಾಲ್ ಕೂಡ ಪಂದ್ಯದ ಫಲಿತಾಂಶ ಬದಲಾಯಿಸಲು ಸಾಧ್ಯವಾಗಲಿಲ್ಲ. ಪಂದ್ಯದ ಕೊನೆಯ ಕ್ಷಣಗಳಲ್ಲಿ ಕೇಪ್ ವರ್ಡೆಗೆ ಗೆಲುವಿನ ಅವಕಾಶವೂ ದೊರಕಿತ್ತು. ಡಿನೇ ಬೋರ್ಜಸ್ ಅವರ ಹೆಡರ್ ಅನ್ನು ಸ್ಪೇನ್ ಗೋಲ್‌ಕೀಪರ್ ಉನೈ ಸಿಮೋನ್ ತಡೆದು ತಂಡವನ್ನು ಸೋಲಿನಿಂದ ಪಾರು ಮಾಡಿದರು. ಸುಮಾರು ಐದು ಲಕ್ಷ ಜನಸಂಖ್ಯೆಯ ದ್ವೀಪ ರಾಷ್ಟ್ರ ಕೇಪ್ ವರ್ಡೆ ತನ್ನ ಮೊದಲ ವಿಶ್ವಕಪ್ ಪಂದ್ಯದಲ್ಲೇ ಬಲಿಷ್ಠ ಸ್ಪೇನ್ ವಿರುದ್ಧ ಅಂಕ ಕಸಿದು ಇತಿಹಾಸ ನಿರ್ಮಿಸಿದೆ.

ಬುಧವಾರದ ಪಂದ್ಯಗಳು

- ಅರ್ಜೆಂಟಿನಾ-ಅಲ್ಜೀರಿಯಾ (ಬೆಳಗ್ಗೆ 6:30)
- ಆಸ್ಟ್ರೀಯಾ-ಜಾರ್ಡನ್ (ಬೆಳಗ್ಗೆ 9:30)
- ಪೋರ್ಚುಗಲ್- ಕೊಂಗೊ (ರಾತ್ರಿ 10:30)

ಬುಧವಾರ ಮಧ್ಯರಾತ್ರಿ

- ಇಂಗ್ಲೆಂಡ್-ಕ್ರೊಏಷಿಯಾ (ಮ.ರಾತ್ರಿ 1:30)
- ಘನಾ-ಪನಾಮಾ (ಮುಂಜಾನೆ 4:30)

ಸೌದಿ ಅರೇಬಿಯಾ ಉರುಗ್ವೆ ಸಮಬಲ

ಮಿಯಾಮಿ ಗಾರ್ಡನ್ಸ್: ಎಚ್ ಗುಂಪಿನ ಪಂದ್ಯದಲ್ಲಿ ಸೌದಿ ಅರೇಬಿಯಾ ಮತ್ತು ಉರುಗ್ವೆ ತಂಡಗಳು 1-1 ಗೋಲುಗಳ ಸಮಬಲ ಸಾಧಿಸಿದವು. ಅಂತ್ಯದವರೆಗೂ ಹೋರಾಟ ನಡೆಸಿದ ಉರುಗ್ವೆ ಸೋಲಿನಿಂದ ಪಾರಾಗಿ ಒಂದು ಅಂಕ ಗಳಿಸಿತು. 41ನೇ ನಿಮಿಷದಲ್ಲಿ ಅಬ್ದುಲ್ಲೆಲಾ ಅಲ್-ಅಮ್ರಿ ಗೋಲು ಬಾರಿಸಿ ಸೌದಿ ಅರೇಬಿಯಾಗೆ ಮುನ್ನಡೆ ನೀಡಿದರು. ಉರುಗ್ವೆ ಗೋಲ್‌ಕೀಪರ್ ಫೆರ್ನಾಂಡೊ ಮುಸ್ಲೆರಾ ತಡೆದ ಚೆಂಡಿನ ರೀಬೌಂಡ್ ಅನ್ನು ಅಲ್-ಅಮ್ರಿ ಜಾಲಕ್ಕೆ ತಳ್ಳಿದರು. 80ನೇ ನಿಮಿಷದಲ್ಲಿ ಮ್ಯಾಕ್ಸಿ ಅರೌಜೊ ಸಮಬಲದ ಗೋಲು ದಾಖಲಿಸಿ ಉರುಗ್ವೆಗೆ ರಕ್ಷಕರಾದರು. ಉರುಗ್ವೆ ಪಂದ್ಯದುದ್ದಕ್ಕೂ ಮೇಲುಗೈ ಸಾಧಿಸಿ 28 ಗೋಲು ಪ್ರಯತ್ನಗಳನ್ನು ನಡೆಸಿತು. ಅತ್ತ ಸೌದಿ ಅರೇಬಿಯಾ ಕೇವಲ 7 ಪ್ರಯತ್ನಗಳಿಗೆ ಸೀಮಿತವಾಯಿತು. ಸೌದಿ ಗೋಲ್‌ಕೀಪರ್ ಮೊಹಮ್ಮದ್ ಅಲ್-ಒವೈಸ್ ಹಲವು ಅದ್ಭುತ ಸೇವ್‌ಗಳ ಮೂಲಕ ತಂಡವನ್ನು ಮುನ್ನಡೆಸಿದರು. ಫೆಡೆರಿಕೊ ವಿನಾಸ್, ಮ್ಯಾನುಯೆಲ್ ಉಗಾರ್ಟೆ ಹಾಗೂ ಫೆಡೆರಿಕೊ ವಾಲ್ವೆರ್ಡೆ ಅವರ ಪ್ರಯತ್ನಗಳನ್ನು ಅಲ್-ಒವೈಸ್ ವಿಫಲಗೊಳಿಸಿದರು. ಎರಡೂ ತಂಡದ ಸತತ ಪ್ರಯತ್ನಗಳ ನಂತರವೂ ಪಂದ್ಯ 1-1ರಿಂದ ಡ್ರಾಗೊಂಡಿತು.




ಸ್ಕೋರ್‌ಬೋರ್ಡ್

- ಸೌದಿ ಅರೇಬಿಯಾ 1-1 ಉರುಗ್ವೆ
- ಅಬ್ದುಲ್ಲೆಲಾ ಅಲ್-ಅಮ್ರಿ (41ನೇ ನಿಮಿಷ)
- ಮ್ಯಾಕ್ಸಿ ಅರೌಜೊ (80ನೇ ನಿಮಿಷ)

ಹಿನ್ನಡೆಯಿಂದ ಮರಳಿದ ಇರಾನ್, ಕಿವೀಸ್ ವಿರುದ್ಧ 2-2 ಡ್ರಾ

ಇಂಗಲ್‌ವುಡ್: ದಿನದ ಮತ್ತೊಂದು ಪಂದ್ಯದಲ್ಲಿ ಇರಾನ್ ಮತ್ತು ನ್ಯೂಜಿಲೆಂಡ್ 2-2 ಗೋಲಿನಿಂದ ಡ್ರಾ ಮಾಡಿಕೊಂಡವು. ಇಂಗಲ್‌ವುಡ್‌ನ ಸೋಫಿ ಕ್ರೀಡಾಂಗಣದಲ್ಲಿ ನಡೆದ ಈ ರೋಚಕ ಪಂದ್ಯದಲ್ಲಿ ಎರಡು ಬಾರಿ ಹಿನ್ನಡೆ ಅನುಭವಿಸಿದ ಇರಾನ್, ಎರಡೂ ಸಂದರ್ಭಗಳಲ್ಲಿ ತಿರುಗೇಟು ನೀಡಿತು. ಪಂದ್ಯ ಆರಂಭವಾದ ಏಳನೇ ನಿಮಿಷದಲ್ಲೇ ನ್ಯೂಜಿಲೆಂಡ್‌ಗೆ ಮುನ್ನಡೆ ದೊರೆಯಿತು. ನಾಯಕ ಕ್ರಿಸ್ ವುಡ್ ಸೃಷ್ಟಿಸಿದ ಅವಕಾಶವನ್ನು ಎಲಿಜಾ ಜಸ್ಟ್ ಗೋಲಾಗಿ ಪರಿವರ್ತಿಸಿ ತಂಡವನ್ನು ಮುನ್ನಡೆಸಿದರು. ಇರಾನ್ 32ನೇ ನಿಮಿಷದಲ್ಲಿ ಸಮಬಲ ಸಾಧಿಸಿತು. ರಮಿನ್ ರೆಜಾಯಿಯನ್ ತಮ್ಮ ಬೂಟಿನ ಹೊರಭಾಗದಿಂದ ಅದ್ಭುತ ಚಿಪ್ ಶಾಟ್ ಮೂಲಕ ಚೆಂಡನ್ನು ಗೋಲುಪೆಟ್ಟಿಗೆಯೊಳಗೆ ಸೇರಿಸಿದರು. ದ್ವಿತೀಯಾರ್ಧದ 54ನೇ ನಿಮಿಷದಲ್ಲಿ ಮತ್ತೆ ಎಲಿಜಾ ಜಸ್ಟ್ ಮಿಂಚಿ ನ್ಯೂಜಿಲೆಂಡ್‌ಗೆ 2-1 ಮುನ್ನಡೆ ತಂದುಕೊಟ್ಟರು. ಮತ್ತೊಮ್ಮೆ ಕ್ರಿಸ್ ವುಡ್ ಅವರೇ ಗೋಲು ಅವಕಾಶ ಸೃಷ್ಟಿಸಿದ್ದರು. ಆದರೆ 64ನೇ ನಿಮಿಷದಲ್ಲಿ ರಮಿನ್ ರೆಜಾಯಿಯನ್ ನೀಡಿದ ನಿಖರವಾದ ಉದ್ದ ಪಾಸ್ ಅನ್ನು ಮೊಹಮ್ಮದ್ ಮೊಹೆಬ್ಬಿ ಹೆಡರ್ ಮೂಲಕ ಗೋಲಾಗಿ ಪರಿವರ್ತಿಸಿ ಇರಾನ್‌ಗೆ 2-2 ಸಮಬಲ ತಂದುಕೊಟ್ಟರು.



- ಇರಾನ್ 2-2 ನ್ಯೂಜಿಲೆಂಡ್
- **7ನೇ ನಿಮಿಷ:** ಎಲಿಜಾ ಜಸ್ಟ್ (ನ್ಯೂಜಿಲೆಂಡ್)
- **32ನೇ ನಿಮಿಷ:** ರಮಿನ್ ರೆಜಾಯಿಯನ್ (ಇರಾನ್)
- **54ನೇ ನಿಮಿಷ:** ಎಲಿಜಾ ಜಸ್ಟ್ (ನ್ಯೂಜಿಲೆಂಡ್)
- **64ನೇ ನಿಮಿಷ** ಮೊಹಮ್ಮದ್ ಮೊಹೆಬ್ಬಿ (ಇರಾನ್)

5 ಚಿನ್ನ ಸೇರಿ ರಾಜ್ಯಕ್ಕೆ 16 ಪದಕ



ಹೈದಾರಾಬಾದ್: ಇಲ್ಲಿನ ಕೊಂಪಲ್ಲಿಯ 'ದಿ ಹಬ್ ಆಫ್ ಪಿಕಲ್ಬಾಲ್ ಸ್ಟೇಡಿಯಂ'ನಲ್ಲಿ ನಡೆದ ಮೂರು ದಿನಗಳ 12ನೇ ದಕ್ಷಿಣ ವಲಯ ಪಿಕಲ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕದ ಆಟಗಾರರು ವಿವಿಧ ಪದಕಗಳನ್ನು ಗೆದ್ದಿದ್ದಾರೆ. ಅಖಿಲ ಭಾರತ ಪಿಕಲ್ಬಾಲ್ ಅಸೋಸಿಯೇಷನ್(ಎಸ್‌ಪಿಎ) ಹಾಗೂ ತೆಲಂಗಾಣ ಕ್ರೀಡಾ ಪ್ರಾಧಿಕಾರದ ಮಾರ್ಗದರ್ಶನದಲ್ಲಿ ನಡೆದ ಈ ಪ್ರತಿಷ್ಠಿತ ಟೂರ್ನಮೆಂಟ್‌ನಲ್ಲಿ ಕರ್ನಾಟಕದಿಂದ ಒಟ್ಟು 27 ಮಂದಿ ಭಾಗವಹಿಸಿದ್ದರು.

ಈ ಪೈಕಿ ಮೊದಲ ದಿನ ಅಂಡರ್ 12 ವಿಭಾಗದಲ್ಲಿ ಶ್ರೀಹರಿ ಶತಾನ್ಯೂ ಚಿನ್ನವನ್ನು ಗೆದ್ದರೆ, 2ನೇ ದಿನ ಅಂಡರ್ 12 ಬಾಲಕರ ಹಾಗೂ ಅಂಡರ್ 14 ಬಾಲಕಿಯರ ಡಬಲ್ಸ್ ವಿಭಾಗದಲ್ಲಿ ಕರ್ನಾಟಕಕ್ಕೆ ಚಿನ್ನ ಒಲಿದು ಬಂದಿದೆ. ಅಂಡರ್ 12 ಹಾಗೂ ಅಂಡರ್ 14 ಮಿಶ್ರ ವಿಭಾಗಗಳಲ್ಲಿ ಕರ್ನಾಟಕ ತಂಡ ಸ್ವರ್ಣ ಗೆದ್ದು ಬೀಗಿದೆ. ಇಷ್ಟೇ ಅಲ್ಲದೇ, 3 ಬೆಳ್ಳಿ ಜೊತೆಗೆ 8 ಕಂಚಿನ ಪದಕಗಳನ್ನು ಕೂಡ ಕರ್ನಾಟಕ ಪಡೆ ಗೆದ್ದುಕೊಂಡಿದ್ದು, ಮೇಲುಗೈ ಸಾಧಿಸಿದೆ. ಇಡೀ 27 ಮಂದಿಯ ಪೈಕಿ ಶ್ರೀಹರಿ ಶತಾನ್ಯೂ, ಎಲ್ಲರ ಗಮನ ಸೆಳೆದಿದ್ದು, 5 ಪದಕಗಳನ್ನು ಗೆದ್ದಿದ್ದಾರೆ.

ಕೌರ್ ಬಳಗಕ್ಕೆ ಗೆಲುವಿನ ಛಲ

ಲೀಡ್ಸ್: ಪಾಕಿಸ್ತಾನ ತಂಡದ ಬೇಟೆಯಾಡಿರುವ ಭಾರತ ಮಹಿಳಾ ತಂಡವು ತನ್ನ ವಿಶ್ವಕಪ್ ಅಭಿಯಾನದಲ್ಲಿ ಗೆಲುವಿನ ನಾಗಾಲೋಟವನ್ನು ನೆದರ್ಲೆಂಡ್ಸ್‌ಗೆ ವಿಸ್ತರಿಸಬೇಕಿದೆ. ಏಕದಿನ ವಿಶ್ವಕಪ್ ಗೆದ್ದ ನಂತರ ಟಿ20 ವಿಶ್ವಕಪ್ ಮೇಲೆ ಕಣ್ಣಿಟ್ಟಿರುವ ಹರ್ಮನ್‌ಪ್ರೀತ್ ಕೌರ್ ಪಡೆ ಪಾಕ್ ವಿರುದ್ಧದ ಮೊದಲನೇ ಪಂದ್ಯದಲ್ಲಿ ಗೆದ್ದು ಈಗಾಗಲೇ ಶುಭಾರಂಭ ಮಾಡಿದೆ.

ಮಂಧಾನ ಅವರ ಬ್ಯಾಟಿಂಗ್ ಹಾಗೂ ದೀಪ್ತಿ ಶರ್ಮ ಅವರ ಮಾರಕ ಬೌಲಿಂಗ್ ದಾಳಿಯೊಂದಿಗೆ ಮಿಂಚಿರುವ ಭಾರತಕ್ಕೆ ಗೆಲ್ಲುವ ವಿಶ್ವಾಸವಿದ್ದು, ನೆದರ್ಲೆಂಡ್ಸ್ ಮೇಲೆ ಪ್ರಾಬಲ್ಯಕ್ಕೆ ಅಣಿಯಾಗುತ್ತಿದೆ. ಪಾಕ್ ವಿರುದ್ಧದ ಪಂದ್ಯದಲ್ಲಿ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಸಮತೋಲಿತ ಪ್ರದರ್ಶನ ನೀಡಿತ್ತು. ಇದಲ್ಲದೆ ಬೇಗನೇ ವಿಕೆಟ್ ಕಳೆದುಕೊಂಡರೂ ಲಯ ಬಿಡದ ಭಾರತ ಕಂಬ್ಯಾಕ್ ಮಾಡಿತ್ತು. ಬೌಲಿಂಗ್ ವಿಚಾರದಲ್ಲೂ ಮೊದಲಿಗೆ ಅಲ್ಪ ಹಿನ್ನಡೆ ಅನುಭವಿಸಿದ್ದರೂ ನಂತರ ಪಂದ್ಯಕ್ಕೆ ಮರಳಿತು. ವಿಶ್ವಕಪ್ ಅಭಿಯಾನದ ಭಾರತದ ಎರಡನೇ ಪಂದ್ಯ ಲೀಡ್ಸ್‌ನಲ್ಲಿ ನಡೆಯಲಿದೆ.

***ಪಿಚ್*:** ಲೀಡ್ಸ್‌ನಲ್ಲಿ ಪಂದ್ಯ ನಡೆಯಲಿದೆ. ಅಲ್ಲಿನ ಪಿಚ್ ಬ್ಯಾಟರ್‌ಗಳಿಗೆ ಮತ್ತು ಬೌಲರ್‌ಗಳಿಗೆ ಸಮಾನ ಲಾಭ ಕೊಡಲಿದೆ. ತುಂಬಾ ಹೈಸ್ಕೋರಿಂಗ್ ಪಿಚ್ ಹೊಂದಿಲ್ಲ. ಹಿಂದಿನ ಪಂದ್ಯಗಳಲ್ಲಿ ಬ್ಯಾಟರ್‌ಗಳು ಉತ್ತಮ ಬ್ಯಾಟಿಂಗ್ ಮಾಡಿದ್ದರೂ ಬೌಲರ್‌ಗಳೇ ಹಿತವಾಗಿ ಕಾಣಿಸಿಕೊಂಡಿದ್ದಾರೆ. ಮೊದಲು ಬೌಲಿಂಗ್ ಮಾಡುವ ತಂಡಕ್ಕೆ ಲಾಭ ಸಿಗಬಹುದು.



ಪಂದ್ಯದ ವಿವರ

- ಯಾವಾಗ: ಬುಧವಾರ
- ಎಲ್ಲಿ: ಲೀಡ್ಸ್, ಇಂಗ್ಲೆಂಡ್
- ಸಮಯ: ಸಂಜೆ 7:00(ಭಾರತೀಯ ಕಾಲಮಾನ)

ಸರಣಿ ವಶ ಭಾರತದ ಗುರಿ

ಲಖನೌ: ಮೊದಲ ಪಂದ್ಯದಲ್ಲಿ ಸರಳ ಜಯ ಸಾಧಿಸಿರುವ ಭಾರತ ಪುರುಷರ ತಂಡವು ಬುಧವಾರದಂದು ಅಫ್ಘಾನಿಸ್ತಾನ ವಿರುದ್ಧ ಎರಡನೇ ಪಂದ್ಯವಾಡಲು ಸಿದ್ಧವಾಗಿದೆ.

ಶುಭಮನ್ ಗಿಲ್ ನೇತೃತ್ವದ ಬಳಗ ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ಸರಣಿ ವಶಕ್ಕಾಗಿ ಪಂದ್ಯಾಟವಾಡಲಿದೆ. ವಿರಾಟ್ ಕೊಹ್ಲಿ ಆಡದ ನಿಟ್ಟಿನಲ್ಲಿ ನಿರಾಸೆಯಾಗಿರುವ ಅಭಿಮಾನಿಗಳಿಗೆ ಇನ್ನೊಂದು ಆಘಾತ ಎದುರಾಗಲಿದ್ದು, ಬುಧವಾರದ ಪಂದ್ಯದಲ್ಲಿ ರೋಹಿತ್ ಶರ್ಮ ಆಡುವುದು ಅನುಮಾನ ಎನ್ನಲಾಗಿದೆ. ಹಿಂದಿನ ಪಂದ್ಯದಲ್ಲಿ ರನ್ ಔಟ್‌ನಿಂದಾಗಿ ನಿರಾಸೆ ಮೂಡಿಸಿದ್ದ ಅವರು, ಗಾಯಗೊಂಡಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ ಎಂದು ವರದಿಯಾಗಿದೆ.

ಆಫ್ಘನ್ನರ ವಿರುದ್ಧ ಇಂದು 2ನೇ ಏಕದಿನ

ಕಳೆದ ಪಂದ್ಯದಲ್ಲಿ ಸಮತೋಲಿತ ಪ್ರದರ್ಶನ ನೀಡಿದ್ದ ಭಾರತ ತಂಡವು ನಿಗದಿತ 25 ಓವರ್‌ಗಳಲ್ಲಿ ಪ್ರಾಬಲ್ಯ ಸಾಧಿಸಿತ್ತು. ರೆಹಮತ್ತುಲ್ಲಾ ಗುರ್ಬಾಜ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಫ್ಘಾನಿಸ್ತಾನ ಕೂಡ ಉತ್ತಮ ಪ್ರದರ್ಶನವನ್ನೇ ನೀಡಿತ್ತು. ಆದರೆ ಬೌಲಿಂಗ್ ಮಾಡುವ ವೇಳೆ ಎಡವಿತ್ತು.



ಪಿಚ್ ರಿಪೋರ್ಟ್: ಲಖನೌನ ಏಕಾನಾ ಕ್ರೀಡಾಂಗಣ ಅಲ್ಪ ಬೌಲರ್‌ಗಳಿಗೆ ಸಹಾಯಕವಾಗಿರಲಿದೆ. 50 ಓವರ್‌ಗಳ ವರೆಗೆ ಇಬ್ಬನಿ ಕಾಟ ಸ್ಪಷ್ಟವಾಗಿ ಕಾಡಬಹುದು. ಐಪಿಎಲ್‌ನಲ್ಲಿ ಬ್ಯಾಟಿಗರು ಉತ್ತಮ ಬೌನ್ಸ್‌ನಿಂದ ಲಾಭ ಪಡೆಯುತ್ತಿದ್ದರು. ಪರಿಣಾಮ ಈಗಲೂ ಹೆಚ್ಚಿನ ಬೌನ್ಸ್ ಇರುವುದು ಕಾಣಬಹುದು.

ಪಂದ್ಯದ ವಿವರ

- ಯಾವಾಗ: ಬುಧವಾರ
- ಎಲ್ಲಿ: ಏಕಾನಾ, ಲಖನೌ
- ಸಮಯ: ಮಧ್ಯಾಹ್ನ 1:30

ಗುಲ್ಬರ್ಗಾ ತಂಡಕ್ಕೆ ಮನೀಷ್ ನಾಯಕ

ಕಲಬುರಗಿ: ಭಾರತ ತಂಡಕ್ಕಾಡಿರುವ ಅನುಭವಿ ಕ್ರಿಕೆಟರ್, ಸ್ಫೋಟಕ ಬ್ಯಾಟರ್ ಮನೀಷ್ ಪಾಂಡೆ ಈ ಬಾರಿ ಗುಲ್ಬರ್ಗಾ ಮ್ಯಾಸ್ಟಿಕ್ಸ್ ತಂಡದ ನಾಯಕತ್ವ ನಿಭಾಯಿಸಲಿದ್ದಾರೆ. ಪ್ರತಿಷ್ಠಿತ ಮಹಾರಾಜ ಟ್ರೋಫಿ ಪಂದ್ಯಾವಳಿಗೆ ಮೂರೇ ದಿನ ಬಾಕಿ ಇರುವಂತೆ ಮಂಗಳವಾರದಂದು ಗುಲ್ಬರ್ಗಾ ಮ್ಯಾಸ್ಟಿಕ್ಸ್ ತಂಡವು ಮಾಧ್ಯಮಗೋಷ್ಠಿ ನಡೆಸಿ ತನ್ನ ತಂಡವನ್ನು ಪರಿಚಯಿಸಿತು. ಅಲ್ಲದೆ ತಂಡದ ಜೆರ್ಸಿ ಬಿಡುಗಡೆ ಕಾರ್ಯಕ್ರಮವನ್ನೂ ಮಾಡಿದ ಗುಲ್ಬರ್ಗಾ ಪಂದ್ಯಾವಳಿಗೆ ಸಿದ್ಧ ಎಂಬ ಸಂದೇಶ ಸಾರಿತು.



ವೈಭವ್ ಭೇಟಿಗಾಗಿ 80ರ ಅನುರ್ 160 ಕಿ.ಮೀ ಪ್ರಯಾಣ

ಡಂಬುಲ್ಲಾ: 15 ವರ್ಷದ ಸ್ಫೋಟಕ ಬ್ಯಾಟರ್ ವೈಭವ್ ಸೂರ್ಯವಂಶಿ ಭೇಟಿಯಾಗಲು ಶ್ರೀಲಂಕಾ ಮಾಜಿ ದಿಗ್ಗಜ ಕ್ರಿಕೆಟಿಗ 80ರ ಅನುರ್ ತೆನ್ನೆಕುನ್ 161 ಕಿಲೋ ಮೀಟರ್ ಪ್ರಯಾಣಿಸಿ ಹಾರೈಸಿದ್ದಾರೆ. ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ ವಿಶ್ವ ಕ್ರಿಕೆಟ್ ಗಮನ ಸೆಳೆದಿರುವ ವೈಭವ್ ಸೂರ್ಯವಂಶಿ ಭಾರತ ಎ ತಂಡದಲ್ಲಿ ಆಡುತ್ತಿದ್ದಾರೆ. ಶ್ರೀಲಂಕಾದಲ್ಲಿ ಅಫ್ಘಾನಿಸ್ತಾನ, ಶ್ರೀಲಂಕಾ ಮತ್ತು ಭಾರತ ಎ ತಂಡಗಳ ನಡುವೆ ತ್ರಿಕೋನ ಸರಣಿ ನಡೆಯುತ್ತಿದೆ. ಸೋಮವಾರ ಶ್ರೀಲಂಕಾ ವಿರುದ್ಧ ಭಾರತ ಪಂದ್ಯವನ್ನಾಡಿತ್ತು. ಪಂದ್ಯದ ನಂತರ ಭಾರತದ ಡ್ರೆಸ್ಸಿಂಗ್ ರೂಮ್‌ಗೆ ಬಂದಿರುವ ಅನುರ್ ವೈಭವ್ ಅವರನ್ನು ಹೊಗಳಿದ್ದಾರೆ. ಅಲ್ಲದೆ ವೈಭವ್‌ಗಾಗಿ ಒಂದು ಗಂಟೆಗೂ ಹೆಚ್ಚು ಕಾದು ಕೂತಿದ್ದಾರೆ.




ಹಾಕಿ: ಸೆಮಿಗೆ ಮಹಿಳಾ ತಂಡ

ಹೊಸದಿಲ್ಲಿ: ಮಹಿಳೆಯರ ಎಫ್‌ಐಎಚ್ ಹಾಕಿ ನೇಷನ್ಸ್ ಕಪ್ ಪಂದ್ಯಾವಳಿಯಲ್ಲಿ ಭಾರತೀಯ ಮಹಿಳೆಯರು ಪಾರುಪತ್ಯ ಸಾಧಿಸಿದ್ದು ಜಪಾನ್ ತಂಡವನ್ನು 2-1ರಿಂದ ಮಣಿಸಿ ಪ್ರತಿಷ್ಠಿತ ಕೂಟದ ಸೆಮಿಫೈನಲ್‌ಗೇರಿದೆ. ಅವುಕ್‌ಲ್ಯಾಂಡ್‌ನಲ್ಲಿ ನಡೆಯುತ್ತಿರುವ ಪಂದ್ಯಾವಳಿಯಲ್ಲಿ ಎ ಪೂಲ್‌ನಲ್ಲಿರುವ ಭಾರತ ಮಹಿಳೆಯರ ತಂಡ ತನಗಿದ್ದ ಎರಡೂ ಪಂದ್ಯಗಳನ್ನು ಗೆದ್ದಿದೆ. ಮಂಗಳವಾರ ನಡೆದ ಜಪಾನ್ ವಿರುದ್ಧದ ಪಂದ್ಯದಲ್ಲಿ ಭಾರತವು 2-1ರಿಂದ ಗೆಲುವು ಸಾಧಿಸಿತು. ಸಲೀಮಾ 33ನೇ ನಿಮಿಷಕ್ಕೆ ಮೊದಲ ಗೋಲು ಗಳಿಸಿದರೆ, ಲಾಲ್ರೆಮ್ಸಿಯಾಮಿ 49ನೇ ನಿಮಿಷದಲ್ಲಿ ಗೋಲು ಗಳಿಸಿದರು. ಜಪಾನ್ ಪರ ಹಿರಾಮಿಸ್ತು 35ನೇ ನಿಮಿಷಕ್ಕೆ ಒಂದು ಗೋಲು ಗಳಿಸಿದರು. ಸೆಮಿಫೈನಲ್ ಪಂದ್ಯದಲ್ಲಿ ಭಾರತವು ಉರುಗ್ವೆ ವಿರುದ್ಧ ಆಡಲಿದೆ.

ಪ ದ ಬ ೦ ಧ

ರಾಜಾ ಸಂಗಮೇಶ ಹಿರೇಮಠ



6017

ಎಡದಿಂದ ಬಲಕ್ಕೆ
1.ರೈತ ಬೆಳೆ ಕೊಯ್ಲು ಮಾಡುವ ಸಂತಸದ ಸಮಯ (4)
2.ನ್ಯಾಯಾಲಯದಲ್ಲಿ ಎದುರುವಾದಿ (4)
4.ಸಮರ್ಥ-ನಿಷ್ಣಾತನೀತ (3)
6.ಇದು ಉಗುರಿನಿಂದಾದ ಗೀರು (4)
8.ಈತ ಗೆಲುವನ್ನು ಸಾಧಿಸಿದವನು (4)
10.ಥಾರ್ ಮರುಭೂಮಿ ಹೊಂದಿದ ರಾಜ್ಯ (4)
12.ರವಿ ನಡುವೆ ತಿರುಗಿ ನಿರಂತರವಾಯ್ತು (4)
14.ಅವುಗಳಿಗೆ ಅದು ಹಲ್ಲಿಯಂತೆ ಕಾಣಿಸುತ್ತಿದೆ (3)
15.ಮಾತನ್ನು ಮೀರು ಎಂಬರ್ಥದ ಶಬ್ದ (4)
16.ರಾತ್ರಿ ಅರಳುವ ಮಲ್ಲಿಗೆಯ ಬಗೆ (4)

ಮೇಲಿನಿಂದ ಕೆಳಕ್ಕೆ
1.ಸುಂದರವಾದ ಕಣ್ಣು (4)
3.ಒಂದು ದಿವಸದ ದುಡಿಮೆಗೆ ಕೊಡುವ ಭತ್ಯೆ (4)
4.ಗತಿಸಿ ಹೋದದ್ದು-ಹಿಂದೆ ಆದದ್ದು (2)
5.ಜನಗಳ ನಡುವೆ ಸಿಕ್ಕಿಬಿದ್ದ ಆನೆ (2)
7.ಭೂಮಿಯ ಅಡಿಯಲ್ಲಿ ಸಿಗುವ ಅಜೈವಿಕ ವಸ್ತು (3)
9.ಗಾಯಕನ ಧ್ವನಿ-ಕಂಠವಿದು (3)
10.ಅಪಸ್ವರ ನುಡಿ-ತಕರಾರು ಮಾಡು (4)
11.ಆಭರಣ ಧರಿಸಿ ಏರಿದ ಬೆಟ್ಟ (2)
12.ವಸ್ತು-ಜೀವದ ಅಂತ್ಯವಿದು (2)
13.ಅದರ ಪಕ್ಕದಲ್ಲಿ-ಸಮೀಪದಲ್ಲಿ ಎಂಬರ್ಥದ ಶಬ್ದ (4)

6016 ಉತ್ತರ

ಎಡದಿಂದ ಬಲಕ್ಕೆ:
1.ಅಭಿರಾಮ
3.ದಂಗುಬಡಿ 6.ಕಲರವ
7.ರಾಮಾಚಾರಿ 8.ತಿಗರಿ
10.ವಣಿಕ 12.ಸುಕುಮಾರಿ
13.ರತ್ನಾಕರ 16.ಗಡಿಕಲ್ಲು
17.ರುಗ್ಣಾಲಯ

ಮೇಲಿನಿಂದ ಕೆಳಕ್ಕೆ :
1.ಅಣ್ಣ 2.ಮದಕರಿ
4.ಗುಣವತಿ 5.ಡಿಕ್ಕಿ
7.ರಾಜೀವ 9.ರಿವೇರಿ
11.ಕರಣಿಕ 12.ಸುರತರು
14.ಅಂಗ 15.ಮಾಯ

ಕಿರುಸುದ್ದಿ

ಮಿಲ್ಲಿನ ಯಂತ್ರಕ್ಕೆ ಸಿಲುಕಿ ಯುವತಿಯ ಕಾಲು ಸಂಪೂರ್ಣ ಜಖಂ; ಮಾಲೀಕನ ವಿರುದ್ಧ ಕೇಸ್

ಉಡುಪಿ: ಆಯಿಲ್ ಆಂಡ್ ಫ್ಲೋರ್ ಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದ ಯುವತಿಯೊಬ್ಬಳ ಕಾಲು ತೆಂಗಿನಕಾಯಿ ಕ್ರಷಿಂಗ್ ಯಂತ್ರಕ್ಕೆ ಸಿಲುಕಿ, ಮೂಳೆ ಮುರಿತಗೊಂಡು ಸಂಪೂರ್ಣ ಜಜ್ಜಿಹೋಗಿರುವ ಭೀಕರ ಅಪಘಾತ ಬ್ರಹ್ಮಾವರ ತಾಲೂಕಿನ ಶಿರಿಯಾರ ಗ್ರಾಮದ ಕಲ್ಮರ್ಗಿಯಲ್ಲಿ ಸಂಭವಿಸಿದೆ. ಕೊರ್ಗಿ ಗ್ರಾಮದ ಸಿಂಚನಾ (21) ತೀವ್ರವಾಗಿ ಗಾಯಗೊಂಡ ದುರ್ದೈವಿ. ಸಿಂಚನಾ ಅವರು ಕಲ್ಮರ್ಗಿಯ 'ಆಯಿಲ್ ಎಂಡ್ ಫ್ಲೋರ್ ಮಿಲ್'ಗೆ ಇತ್ತೀಚೆಗಷ್ಟೇ ಕೆಲಸಕ್ಕೆ ಸೇರಿಕೊಂಡಿದ್ದರು. ಮೇ 7ರಂದು ಬೆಳಿಗ್ಗೆ 10:45ರ ಸುಮಾರಿಗೆ ಅವರು ಕೆಲಸ ನಿರತರಾಗಿದ್ದಾಗ, ಆಕಸ್ಮಿಕವಾಗಿ ಅವರ ಬಲಗಾಲು ತೆಂಗಿನಕಾಯಿ ಕ್ರಷಿಂಗ್ ಯಂತ್ರಕ್ಕೆ ಸಿಲುಕಿಕೊಂಡಿದೆ. ಇದರಿಂದ ಅವರ ಕಾಲಿನ ಮೂಳೆ ಮುರಿದು, ತೀವ್ರ ರಕ್ತಗಾಯದೊಂದಿಗೆ ಕಾಲು ಸಂಪೂರ್ಣ ಜಜ್ಜಿಹೋಗಿದೆ. ತಕ್ಷಣ ಅಲ್ಲಿದ್ದ ಸಹೋದ್ಯೋಗಿಗಳು ಆಕೆಯನ್ನು ಬ್ರಹ್ಮಾವರ ಮಹೇಶ್ ಆಸ್ಪತ್ರೆಗೆ ಸಾಗಿಸಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಸದ್ಯ ಮಣಿಪಾಲ ಕೆಎಂಸಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಿಲ್‌ನ ಮಾಲಕ ಯೋಗೀಶ್ ನಾಯಕ್ ಎಂಬವರು ಘಟಕವನ್ನು ಸರಿಯಾಗಿ ನಿರ್ವಹಿಸದೆ, ಅಪಾಯಕಾರಿ ಯಂತ್ರಕ್ಕೆ ಯಾವುದೇ ಸುರಕ್ಷಾ ಕವಚವನ್ನು ಅಳವಡಿಸದೆ ಇರುವುದೇ ಈ ಘಟನೆಗೆ ನೇರ ಕಾರಣ ಎಂದು ಗಾಯಾಳುವಿನ ತಂದೆ ನಾಗರಾಜ ಅವರು ಕೋಟ ಠಾಣೆಗೆ ದೂರು ನೀಡಿದ್ದಾರೆ.

ಯುಕೆಜಿ ವಿದ್ಯಾರ್ಥಿನಿ ಜ್ವರಕ್ಕೆ ಬಲಿ

ಬಂಟ್ವಾಳ: ತಾಲೂಕಿನ ಅಲ್ಲಿಪಾದೆ ನಿವಾಸಿ, ಬಂಟ್ವಾಳ ಎಸ್‌ವಿಎಸ್ ದೇವಳ ಆಂಗ್ಲ ಮಾಧ್ಯಮ ಶಾಲೆಯ ಯುಕೆಜಿ ವಿದ್ಯಾರ್ಥಿನಿ ವಿಪರೀತವಾದ ಜ್ವರಕ್ಕೆ ತುತ್ತಾಗಿ ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಮೃತಪಟ್ಟಿರುವ ಘಟನೆ ನಡೆದಿದೆ. ಅಲ್ಲಿಪಾದೆ ಅನೇಜ ಛಾಯ ಎಂಬವರ ಪುತ್ರಿ ಆರ್ನಿಕಾ (5) ಅಸುನೀಗಿದ ದುರ್ದೈವಿ ಬಾಲಕಿಯಾಗಿದ್ದಾಳೆ. ಈಕೆ ಶುಕ್ರವಾರ ಶಾಲೆಗೂ ಹಾಜರಾಗಿದ್ದಳು. ಶನಿವಾರ, ಭಾನುವಾರ ಶಾಲೆಗೆ ರಜೆ ಇದ್ದು, ಜ್ವರದ ಹಿನ್ನಲೆಯಲ್ಲಿ ಬಾಲಕಿಯನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಬಾಲಕಿ ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಕೊನೆಯುಸಿರೆಳೆದಿದ್ದಾಳೆ ಎಂದು ಮೂಲಗಳು ತಿಳಿಸಿವೆ. ಬಾಲಕಿ ಆರ್ನಿಕಳಾ ನಿಧನದ ಹಿನ್ನಲೆಯಲ್ಲಿ ಶಾಲೆಗೆ ರಜೆ ಘೋಷಿಸಲಾಗಿತ್ತು. ಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಕರು ಮೃತ ಬಾಲಕಿಯ ಅಂತಿಮ ದರ್ಶನ ಪಡೆದರಲ್ಲದೆ ಕುಟುಂಬಸ್ಥರಿಗೆ ಸಾಂತ್ವನವನ್ನು ಹೇಳಿದರು.

ನಾಪತ್ತೆಯಾದ ಯುವಕರ ಮೃತದೇಹ ಪತ್ತೆ

ಕಾಸರಗೋಡು: ಬೇಕಲಕೋಟೆ ಬಳಿಯ ಪಳ್ಳಿಕೆರೆ ರೆಡ್‌ಮಾನ್ ಬೀಚ್‌ನಲ್ಲಿ ಭಾನುವಾರ ಸಂಜೆ ನಾಪತ್ತೆಯಾಗಿದ್ದ ಯುವಕರಿಬ್ಬರ ಮೃತದೇಹಗಳು ಚಿತ್ತಾರಿ ಹೊಳೆಯಲ್ಲಿ ಸೋಮವಾರ ಪತ್ತೆಯಾಗಿವೆ. ಕೋಟ್ಟಾಯಂ ಜಿಲ್ಲೆಯ ಚೆಂಗನಾಶ್ಶೇರಿ ಪಾತಮುಟ್ಟಂ ತೆಂಬಳ್ಳಿಯಿಲ್ ನಿವಾಸಿ ಅಪ್ಪು ಟಿ.ಅಬ್ರಹಾಂ (20) ಮತ್ತು ಚೆಂಗನಾಶ್ಶೇರಿ ಚಿರಂಚಿರ ಪತ್ತಾಂತರದ ನಿವಾಸಿ ಅಂಕಿತ್ ಬಾಲು (20) ಎಂಬವರ ಮೃತದೇಹ ಇದಾಗಿದೆ.

ಗೃಹಿಣಿ ಮೇಲೆ ಅತ್ಯಾಚಾರ: ಕೇಸು ದಾಖಲು

ಕಾಸರಗೋಡು: ದುಬೈಗಿರುವ ಪ್ರಯಾಣದ ಮಧ್ಯೆ ವಿಮಾನ ನಿಲ್ದಾಣದಲ್ಲಿ ಪರಿಚಯಗೊಂಡ ಗೃಹಿಣಿಯೊಂದಿಗೆ ಸ್ನೇಹ ನಟಿಸಿ ಬಳಿಕ ಆಕೆಯ ಮೇಲೆ ಅತ್ಯಾಚಾರ ನಡೆಸಿ ಬೆದರಿಕೆಯೊಡ್ಡಿರುವುದಾಗಿ ಆರೋಪಿಸಲಾಗಿದೆ. ಘಟನೆಗೆ ಸಂಬಂಧಿಸಿ ಕಾಸರಗೋಡು ಮಹಿಳಾ ಪೊಲೀಸರು ಕೇಸು ದಾಖಲಿಸಿ ತನಿಖೆ ಕೈಗೊಂಡಿದ್ದಾರೆ. ಕಾಸರಗೋಡು ಪ್ರದೇಶದ 32ರ ಹರೆಯದ ಗೃಹಿಣಿ ನೀಡಿದ ದೂರಿನಂತೆ ಮಲಪ್ಪುರಂ ನಿವಾಸಿಯಾದ ಸೈಫುದ್ದೀನ್ ಎಂಬಾತನ ವಿರುದ್ಧ ಕೇಸು ದಾಖಲಿಸಲಾಗಿದೆ. ಪತಿಯೊಂದಿಗೆ ದುಬೈಗೆ ತೆರಳುತ್ತಿರುವ ಮಧ್ಯೆ ಕಲ್ಲಿಕೋಟೆ ವಿಮಾನ ನಿಲ್ದಾಣದಲ್ಲಿ ಮಹಿಳೆಗೆ ಸೈಫುದ್ದೀನ್ ಪರಿಚಯಗೊಂಡಿದ್ದನು. ನಂತರ ಅವರಿಬ್ಬರೂ ಸೌಹಾರ್ದತೆಯಲ್ಲಿದ್ದರು. ಈ ಮಧ್ಯೆ ಮಹಿಳೆ ಮೇಲೆ ಅತ್ಯಾಚಾರ ನಡೆಸಿರುವುದಾಗಿ ದೂರಲಾಗಿದೆ.

ಅಕ್ರಮ ಮರಳು ಸಾಗಾಟ: ಪ್ರಕರಣ ದಾಖಲು

ಮಂಗಳೂರು: ಅಕ್ರಮ ಮರಳು ಸಾಗಾಟ ಪ್ರಕರಣಕ್ಕೆ ಸಂಬಂಧಿಸಿ ಬಜಪೆ ಪೊಲೀಸ್ ಠಾಣೆಯಲ್ಲಿ ದೂರೊಂದು ದಾಖಲಾಗಿದೆ. ಬಜಪೆ ಠಾಣಾ ವ್ಯಾಪ್ತಿಯ ಮೊಗರು ಗ್ರಾಮದ ಮಳಲಿ ಸಂಕೇಶ ಎಂಬಲ್ಲಿ ಫಲ್ಗುಣಿ ನದಿಯಿಂದ ಅಕ್ರಮವಾಗಿ ಮರಳು ತೆಗೆದು ಮಾರಾಟ ಮಾಡುವ ಉದ್ದೇಶದಿಂದ ದಾಸ್ತಾನು ಇಟ್ಟಿದ್ದ ಅನ್ವಿತ್ ಮತ್ತು ರಾಜೇಂದ್ರ ಮೆಂಡಾ ಎಂಬವರ ಪ್ರಕರಣ ದಾಖಲಾಗಿದೆ. ಖಚಿತ ಮಾಹಿತಿಯಂತೆ ಬಜಪೆ ಠಾಣಾಧಿಕಾರಿ ಬಾಲಕೃಷ್ಣ ಅವರು ಪಂಚರ ಸಮಕ್ಷಮ ಸ್ಥಳಕ್ಕೆ ದಾಳಿ ನಡೆಸಿದ್ದು, ಒಟ್ಟು 127 ಲೋಡ್ ಮರಳನ್ನು ವಶಪಡಿಸಿಕೊಳ್ಳಲಾಗಿದೆ. ಮರಳಿನ ಅಂದಾಜು ಮೌಲ್ಯ ಸುಮಾರು 6,35,000 ರೂ. ಆಗಬಹುದು ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಗಳ ಮೇಲೆ ಬಜಪೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೃಹಲಕ್ಷ್ಮಿ ಮೊತ್ತ ಹಿಂತಿರುಗಿಸಲು ದ.ಕ. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರ ಸೂಚನೆ

ಸತ್ತವರ ಖಾತೆಗೆ ₹3.34 ಕೋ. ಜಮೆ!

ಮಂಗಳೂರು: ಗೃಹಲಕ್ಷ್ಮಿ ಯೋಜನೆಗೆ ನೋಂದಾಯಿಸಿ ನಂತರ ಮರಣ ಹೊಂದಿದ ಫಲಾನುಭವಿಗಳ ಖಾತೆಗೆ ಮರಣ ನಂತರ ಜಮೆಯಾದ ಸಹಾಯಧನ ಹಣವನ್ನು ಮರಳಿ ಸರ್ಕಾರಕ್ಕೆ ಹಿಂದಿರುಗಿಸಬೇಕು. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು, ಆಯಾಯ ತಾಲೂಕು ಗ್ಯಾರಂಟಿ ಅಧ್ಯಕ್ಷರು ಸಮಗ್ರವಾಗಿ ಪರಿಶೀಲನೆ ನಡೆಸಬೇಕು ಎಂದು ದ.ಕ. ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಭರತ್ ಮುಂಡೋಡಿ ಸೂಚಿಸಿದ್ದಾರೆ.

ಅವರು ಮಂಗಳವಾರ ದ.ಕ ಜಿಲ್ಲಾ ಪಂಚಾಯತ್‌ನಲ್ಲಿ ನಡೆದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.





3477 ಮಂದಿ ನಿಧನ

ರಾಜ್ಯ ಸರ್ಕಾರದ ಮಹತ್ವದ ಯೋಜನೆಯಾಗಿರುವಗೃಹಲಕ್ಷ್ಮಿ ಯೋಜನೆಯಡಿಜಿಲ್ಲೆಯಲ್ಲಿ ಮರಣ ಹೊಂದಿದ 3477 ಫಲಾನುಭವಿಗಳಿಗೆ ರೂ.3.34 ಕೋಟಿ ಜಮೆಯಾಗಿರುವ ಬಗ್ಗೆ ಕೇಂದ್ರ ಕಚೇರಿಯಿಂದ ಮಾಹಿತಿ ಬಂದಿದೆ. ಮರಣ ಹೊಂದಿದ ಫಲಾನುಭವಿಗಳಿಗೆ ಹಣ ಜಮೆಯಾಗುವುದನ್ನು ತಡೆದರೆ ಸರ್ಕಾರದ ಹಣ ಪೋಲಾಗದಂತೆ ಮಾಡಬಹುದು ಎಂದು ಅವರು ಹೇಳಿದರು.

ಮೃತಪಟ್ಟ ಫಲಾನುಭವಿಗಳನ್ನು ಗೃಹಲಕ್ಷ್ಮಿ ಯೋಜನೆಯ ಪಟ್ಟಿಯಿಂದ ತೆಗೆಯಲು ಇಲಾಖಾ ವತಿಯಿಂದ ಸೂಕ್ತ ಕ್ರಮವಹಿಸಬೇಕು ಎಂದು ಅವರು ಸೂಚಿಸಿದರು.

ಅನ್ನಭಾಗ್ಯ ಯೋಜನೆಯಡಿ ಅರ್ಕುಳದಲ್ಲಿ ಪಡಿತರ ಅಂಗಡಿ ತೆರೆಯುವ ಬಗ್ಗೆ ಸಮಸ್ಯೆ ಬಗೆಹರಿಯದೆ ಇದ್ದು, ಮಂಗಳೂರು ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರು ವಿಚಾರಿಸಿದರು. ಇಂತಹ ಸಮಸ್ಯೆಗಳ ಬಗ್ಗೆ ಆದ್ಯತೆ ಮೇರೆಗೆ ತುರ್ತಾಗಿ ಕ್ರಮವಹಿಸಬೇಕೆಂದು ಭರತ್ ಮುಂಡೋಡಿ ಸೂಚಿಸಿದರು.

ಪಡಿತರ ವಿತರಣೆ ಮಾಡುವಾಗ ಸರಬರಾಜುದಾರರು ಬೇಕಾಬಿಟ್ಟಿಯಾಗಿ ಅಕ್ಕಿಯನ್ನು ವಿತರಣೆ ಮಾಡದೇ ಬಹಳ ಎಚ್ಚರಿಕೆಯಿಂದ ಅಕ್ಕಿಯನ್ನು ವಿತರಣೆ ಮಾಡುವ ಬಗ್ಗೆ ಸೂಕ್ತ ನಿರ್ದೇಶನ ನೀಡುವಂತೆ ಅಧ್ಯಕ್ಷರು ಸೂಚಿಸಿದರು.

ಸಾರ್ವಜನಿಕರು ಬಸ್ಸಿನಲ್ಲಿ ಪ್ರಯಾಣಿಸುವಾಗ ಅವರಿಗೆ ಗೌರವ ನೀಡುವ ಬಗ್ಗೆ ಚಾಲಕರು, ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಬೇಕು. ಪ್ರಥಮ ಬಾರಿಗೆ ನೇಮಕಾತಿಯಾಗುವ ಚಾಲಕರು, ಸಿಬ್ಬಂದಿಯವರಿಗೆ ಸಾರ್ವಜನಿಕ ಸೇವೆಯ ಬಗ್ಗೆ ತರಬೇತಿ ನೀಡಿ, ಸಾರ್ವಜನಿಕರಿಗೆ ನೀಡಬೇಕಾದ ಗೌರವದ ಬಗ್ಗೆ ತಿಳಿಸಿಕೊಡಬೇಕೆಂದು ಅಧ್ಯಕ್ಷರು ಸೂಚಿಸಿದರು.

2 ವರ್ಷಗಳಿಂದ ಯುವನಿಧಿಯಡಿ ಸಹಾಯಧನ ಪಡೆದ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶಗಳನ್ನು ಒದಗಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಅವರು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಯೋಜನಾ ಅಂದಾಜು ಮತ್ತು ಮೌಲ್ಯಮಾಪನ ಅಧಿಕಾರಿ ಸುಷ್ಮಾ ಕೆ. ಎಸ್, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಜೋಕಿಂ ಡಿಸೋಜಾ, ಶೇಖರ್ ಕುಕ್ಕೇಡಿ, ಸುರೇಖಾ ಚಂದ್ರಹಾಸ್, ನಾರಾಯಣ ನಾಯಕ್, ಸದಸ್ಯರಾದ ಸುರೇಂದ್ರ ಕಂಬಳಿ, ಆಲಿಸ್ಟನ್ ಕ್ಲೈವ್ ಡಿಕುನ್ಹಾ, ಅರುಣ್ ಕುಮಾರ್ ಶೆಟ್ಟಿ, ಆಲ್ವಿನ್ ಕ್ಲೆಮೆಂಟ್ ಕುಟಿನ್ಹ, ಜಯಂತಿ ಬಿಎ, ಶಾಹುಲ್ ಹಮೀದ್, ಉಮಾನಾಥ್ ಶೆಟ್ಟಿ, ಪದ್ಮನಾಭ ಸಾಲ್ಯಾನ್, ಸುಧೀರ್ ಕುಮಾರ್ ಶೆಟ್ಟಿ , ಎಸ್.ರಫೀಕ್, ಶಾಂತಲಾ ಗಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಯುವನಿಧಿಯಡಿ 7,734 ಮಂದಿ ನೋಂದಣಿ

ಯುವನಿಧಿ ಯೋಜನೆಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 7,734 ನೋಂದಣಿಯಾಗಿದ್ದು, 6179 ಡಿ.ಬಿ.ಟಿ ಪಾವತಿಯಾಗಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

- **ಜಿಲ್ಲೆಯಲ್ಲಿ ಮರಣ ಹೊಂದಿದ 3477 ಫಲಾನುಭವಿಗಳಿಗೆ ರೂ.3.34 ಕೋಟಿ ಜಮೆಯಾಗಿರುವ ಬಗ್ಗೆ ಕೇಂದ್ರ ಕಚೇರಿಯಿಂದ ಮಾಹಿತಿ ಬಂದಿದೆ.**
- **ಮರಣ ಹೊಂದಿದ ಫಲಾನುಭವಿಗಳಿಗೆ ಹಣ ಜಮೆಯಾಗುವುದನ್ನು ತಡೆದರೆ ಸರ್ಕಾರದ ಹಣ ಪೋಲಾಗದಂತೆ ಮಾಡಬಹುದು**

ಮಾತುಕತೆಯ ನೆಪದಲ್ಲಿ ಕರೆಸಿಕೊಂಡು ಯುವಕನ ಮೇಲೆ ತಂಡದ ಮಾರಕ ಹಲ್ಲೆ

ಬೈಂದೂರು: ಆತನ ಜೊತೆ ಸೇರಬೇಡ ಎಂದು ಹಿತವಚನ ಹೇಳಿದ್ದನ್ನೇ ದ್ವೇಷವಾಗಿಟ್ಟುಕೊಂಡು, ಮಾತುಕತೆಯ ನೆಪದಲ್ಲಿ ಯುವಕನೋರ್ವನನ್ನು ಸಾರ್ವಜನಿಕ ಸ್ಥಳಕ್ಕೆ ಕರೆಸಿಕೊಂಡು ನಾಲ್ವರ ಗ್ಯಾಂಗ್ ಏಕಾಏಕಿ ಭೀಕರವಾಗಿ ಹಲ್ಲೆ ನಡೆಸಿರುವ ಘಟನೆ ಬೈಂದೂರಿನ ತೊಂಡೆಮಕ್ಕಿ ಎಂಬಲ್ಲಿ ಸಂಭವಿಸಿದೆ. ಬೈಂದೂರಿನ ತೊಂಡೆಮಕ್ಕಿ ಸೂರ್ಕುಂದ ನಿವಾಸಿ ರಾಘವೇಂದ್ರ ದೇವಾಡಿಗ (26) ಹಲ್ಲೆಗೊಳಗಾದ ದುರ್ದೈವಿ. ಹಲ್ಲೆಯಿಂದ ತೀವ್ರವಾಗಿ ಗಾಯಗೊಂಡ ಯುವಕ ಸದ್ಯ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಘಟನೆ ವಿವರ

ಜೂನ್ 11ರಂದು ರಾಘವೇಂದ್ರ ಅವರು ತಮ್ಮ ಪರಿಚಯದ ನಾಗರಾಜ ದೊಂಬೆ ಎಂಬಾತನಿಗೆ ನೀನು ಪ್ರದೀಪ್ ಶೆಟ್ಟಿಯೊಂದಿಗೆ ಸೇರಬೇಡ, ಆತ ಸರಿಯಿಲ್ಲ ಎಂದು ಕಿವಿಮಾತು ಹೇಳಿದ್ದರು. ಆದರೆ, ನಾಗರಾಜ ಈ ವಿಷಯವನ್ನು ನೇರವಾಗಿ ಪ್ರದೀಪ್‌ಗೆ ಮುಟ್ಟಿಸಿದ್ದಾನೆ. ಇದರಿಂದ ಆಕ್ರೋಶಗೊಂಡ ಪ್ರದೀಪ್, ರಾಘವೇಂದ್ರನಿಗೆ ಬುದ್ಧಿ ಕಲಿಸಲು ತನ್ನ ತನ್ನ ಸಹಚರರೊಂದಿಗೆ ಸೇರಿ ಹೊಂಚು ಹಾಕಿದ್ದಾನೆ.

ಜೂನ್ 12ರಂದು ಮಧ್ಯಾಹ್ನ ರಾಘವೇಂದ್ರ ಅವರು ಮನೆಯಲ್ಲಿದ್ದಾಗ, ಆರೋಪಿ ರಾಜೇಶ್ ಎಂಬಾತ ಪ್ರದೀಪ್‌ನ ಮೊಬೈಲ್‌ನಿಂದ ಕರೆ ಮಾಡಿ, ನಿನ್ನ ಹತ್ತಿರ ತುರ್ತಾಗಿ ಮಾತನಾಡಬೇಕು, ತೊಂಡೆಮಕ್ಕಿ ಶಾರದಾ ವೇದಿಕೆಯ ಬಳಿ ಬಾ ಎಂದು ಕರೆಸಿಕೊಂಡಿದ್ದಾನೆ. ಇದನ್ನು ನಂಬಿ ರಾಘವೇಂದ್ರ ಅವರು ಮಧ್ಯಾಹ್ನ 3.45ರ ಸುಮಾರಿಗೆ ಶಾರದಾ ವೇದಿಕೆಯ ಬಳಿ ಬಂದಾಗ, ಅಲ್ಲಿ ಮೊದಲೇ ಹೊಂಚು ಹಾಕಿ ಕುಳಿತಿದ್ದ ಪ್ರದೀಪ್ ಶೆಟ್ಟಿ, ರಾಜೇಶ್ ದೇವಾಡಿಗ, ಪ್ರಶಾಂತ ಮೋಗವೀರ ಮತ್ತು ನಾಗರಾಜ ದೊಂಬೆ ಎಂಬ ನಾಲ್ವರು ಏಕಾಏಕಿ ದಾಳಿ ನಡೆಸಿದ್ದಾರೆ. ಆರೋಪಿಗಳು ರಾಘವೇಂದ್ರ ಅವರನ್ನು ಸುತ್ತುವರಿದು, ಕಾಲರ್ ಹಿಡಿದು ಅಡ್ಡಗಟ್ಟಿದ್ದಾರೆ. ಬಳಿಕ ಮುಖ ಹಾಗೂ ಕೆನ್ನೆಗೆ ಕೈಯಿಂದ ಮನಬಂದಂತೆ ಥಳಿಸಿದ್ದಾರೆ. ಅಷ್ಟಕ್ಕೇ ಸುಮ್ಮನಾಗದೆ ಆರೋಪಿಗಳ ಪೈಕಿ ನಾಗರಾಜ ಎಂಬಾತ ತಾನು ಕೈಗೆ ಧರಿಸಿದ್ದ ಗಟ್ಟಿಯಾದ ಲೋಹದ ಬಳೆಯಿಂದ (ಖಡ್ಗ) ಮುಷ್ಟಿ ಕಟ್ಟಿ ರಾಘವೇಂದ್ರ ಅವರ ಬೆನ್ನಿಗೆ ಬಲವಾಗಿ ಗುದ್ದಿ ಗಾಯಗಳನ್ನು ಉಂಟುಮಾಡಿದ್ದಾನೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಕರಣದ ಬಗ್ಗೆ ದೂರು ದಾಖಲಿಸಿಕೊಂಡಿರುವ ಬೈಂದೂರು ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

- **ಹಲ್ಲೆಯಿಂದ ತೀವ್ರವಾಗಿ ಗಾಯಗೊಂಡ ಯುವಕ ಸದ್ಯ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.**

ಹೆಚ್ಚುತ್ತಿರುವ ಚೆಕ್ ಬೌನ್ಸ್ ಪ್ರಕರಣ: ಎರಡು ವಿಶೇಷ ಲೋಕ ಅದಾಲತ್

ಮಂಗಳೂರು: ನ್ಯಾಯಾಲಯಗಳಲ್ಲಿ ಚೆಕ್ ಬೌನ್ಸ್ ಕೇಸುಗಳು ಬಹಳಷ್ಟು ಹೆಚ್ಚುತ್ತಿರುವುದರಿಂದ 2026ರ ಜುಲೈ 18 ಮತ್ತು ನವೆಂಬರ್ 21 ರಂದು ವಿಶೇಷ ಲೋಕ ಅದಾಲತ್ ನಡೆಯಲಿದೆ ಎಂದು ಖಾಯಂ ಜನತಾ ನ್ಯಾಯಾಲಯದ ನ್ಯಾಯಾಧೀಶ ಜೈಶಂಕರ್ ತಿಳಿಸಿದ್ದಾರೆ.

ಅವರು ಜಿಲ್ಲಾ ನ್ಯಾಯಾಲಯ ಸಭಾಂಗಣದಲ್ಲಿ ರಾಷ್ಟ್ರೀಯ ಲೋಕ ಅದಾಲತ್ ಕುರಿತು ಪೊಲೀಸ್ ಹಾಗೂ ಇತರೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು.

ಚೆಕ್ ಬೌನ್ಸ್ ಪ್ರಕರಣಗಳಲ್ಲಿ ಸಮನ್ಸ್, ವಾರಂಟ್ ಜಾರಿಯಾಗುತ್ತಿರುವುದರಿಂದ ಪೊಲೀಸರ ಮೇಲೂ ಒತ್ತಡ ಬೀಳುತ್ತಿವೆ. ಇಂತಹ ಪ್ರಕರಣಗಳಲ್ಲಿ ದೂರುದಾರ ಮತ್ತು ಆರೋಪಿ ರಾಜಿಯಾಗಿ ಪ್ರಕರಣ ಮುಕ್ತಾಯಗೊಳಿಸಲು ಅವಕಾಶವಿದೆ. ಇದಕ್ಕಾಗಿ ಸಾರ್ವಜನಿಕರು ಆಯಾ ತಾಲೂಕು ನ್ಯಾಯಾಲಯಗಳನ್ನು ಸಂಪರ್ಕಿಸಬಹುದಾಗಿದೆ. ಇದರಿಂದ ಪ್ರಕರಣಗಳು ತ್ವರಿತವಾಗಿ ಮುಕ್ತಾಯಗೊಂಡು ಸಾರ್ವಜನಿಕರಿಗೆ ನೆಮ್ಮದಿ ಸಿಗಲಿದೆ ಎಂದು ಅವರು ತಿಳಿಸಿದರು.

ಟ್ರಾಫಿಕ್ ದಂಡ ರಿಯಾಯಿತಿ

ಸಂಚಾರ ನಿಯಮಗಳ ಉಲ್ಲಂಘನೆ ಪ್ರಕರಣಗಳಿಗೆ ಶೇಕಡಾ 50ರಷ್ಟು ರಿಯಾಯಿತಿ ನೀಡಿರುವುದರಿಂದ ಸಾರ್ವಜನಿಕರುಇದರಗರಿಷ್ಠಪ್ರಯೋಜನ ಪಡೆದುಕೊಳ್ಳುವಂತಾಗಲು ಪೊಲೀಸ್ ಇಲಾಖೆ ಅರಿವು ಮೂಡಿಸಬೇಕು ಎಂದು ನ್ಯಾಯಾಧೀಶರು ತಿಳಿಸಿದರು.

ವಾಹನದ ವಿರುದ್ಧ 1991 ರಿಂದ 2022 ಇಸವಿಯವರೆಗೆ ದಾಖಲಾಗಿರುವ ಪ್ರಕರಣಗಳಿಗೆ ಶೇಕಡಾ 50 ರಿಯಾಯಿತಿ ಅನ್ವಯವಾಗಲಿದೆ. ಇದರಿಂದ ದಂಡ ವಸೂಲಾತಿ ಹಾಗೂ ಪ್ರಕರಣಗಳ ವಿಲೇವಾರಿಯಲ್ಲಿ ಪೊಲೀಸ್ ಹಾಗೂ ನ್ಯಾಯಾಲಯಗಳ ಮೇಲಿನ ಒತ್ತಡ ಕಡಿಮೆಯಾಗಲಿದೆ. ಎಲ್ಲ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಈ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಬೇಕು ಎಂದು ಅವರು ತಿಳಿಸಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜೈಬುನ್ನಿಸಾ ಮಾತನಾಡಿ, ಪ್ರತಿ ವರ್ಷ 4 ರಾಷ್ಟ್ರೀಯ ಲೋಕ ಅದಾಲತ್ ನಡೆಯುತ್ತದೆ. ಇದಲ್ಲದೆ, ಎಲ್ಲ ನ್ಯಾಯಾಲಯಗಳಲ್ಲೂ ಲೋಕ ಅದಾಲತ್ ನಿರಂತರವಾಗಿ ಇರುತ್ತದೆ. ವಿವಾದಕ್ಕೆ ಸಂಬಂಧಿಸಿದ ಪಕ್ಷಗಳ ನಡುವೆ ರಾಜಿ ಅಥವಾ ಇತ್ಯರ್ಥವನ್ನು ನಿರ್ಧರಿಸುವ ಅಧಿಕಾರವನ್ನು ಲೋಕ ಅದಾಲತ್ ಹೊಂದಿರುತ್ತದೆ. ರಾಜಿಯಾಗಬಹುದಾದ ಯಾವುದೇ ಪ್ರಕರಣ ಬಾಕಿ ಇದ್ದರೆ ಅಥವಾ ಲೋಕ ಅದಾಲತ್ ಆಯೋಜಿಸಲಾಗಿರುವ ಯಾವುದೇ ನ್ಯಾಯಾಲಯದ ವ್ಯಾಪ್ತಿಗೆ ಬರುವ ಮತ್ತು ಮುಂದೆ ತರದ ಯಾವುದೇ ವಿಷಯವನ್ನು ಇತ್ಯರ್ಥಪಡಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಕಾರ್ಮಿಕ ನ್ಯಾಯಾಲಯದ ಜಿಲ್ಲಾ ನ್ಯಾಯಾಧೀಶ ವೀರನಗೌಡ ಪಾಟೀಲ್, ನಗರದ ವಿವಿಧ ನ್ಯಾಯಾಲಯಗಳ ನ್ಯಾಯಾಧೀಶರು, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಅನಿಲ್ ಕುಮಾರ್, ಎಸಿಪಿ ಗೀತಾ ಕುಲಕರ್ಣಿ, ವಿವಿಧ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.



ಸುಪ್ರೀಂಕೋರ್ಟ್ ವಿಶೇಷ ಲೋಕ ಅದಾಲತ್

ಆಗಸ್ಟ್ 21, 22 ಮತ್ತು 23ರಂದು ಸುಪ್ರೀಂ ಕೋರ್ಟ್‌ನಲ್ಲಿ 'ಸಮಾಧಾನ ಸಮಾರೋಹ್ -2026' ಹೆಸರಿನಲ್ಲಿ ವಿಶೇಷ ಲೋಕ ಅದಾಲತ್ ಏರ್ಪಡಿಸಲಾಗಿದೆ. ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವ ಪ್ರಕರಣಗಳಿಗೆ ಸಾರ್ವಜನಿಕರು ತಾವಿದ್ದಲ್ಲಿಯೇ ರಾಜಿ ಸಂಧಾನ ಮಾಡಿಕೊಳ್ಳಲು ಇದರಲ್ಲಿ ಅವಕಾಶವಿದೆ ಎಂದು ಅವರು ತಿಳಿಸಿದರು.

ಕೋಕಾ ಕಾಯ್ದೆಯಡಿ ಮೂವರ ಬಂಧನ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಇದೇ ಪ್ರಥಮ ಬಾರಿಗೆ ವಿವಿಧ ಸಂಘಟಿತ ಅಪರಾಧಗಳಲ್ಲಿ ಭಾಗಿಯಾಗಿರುವ ಮೂವರು ಆರೋಪಿಗಳನ್ನು ಕೋಕಾ ಕಾಯ್ದೆಯಡಿ ಬಂಧಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಮಡಿಕೇರಿ ನಗರದ ಗೌಳಿಬೀದಿ ನಿವಾಸಿಗಳಾದ ಪ್ರಮೋದ್ ಅಲಿಯಾಸ್ ಡಿಸ್ಕ್ (34), ದರ್ಶನ್ ಅಲಿಯಾಸ್ ಗಿಲ್ಲಿ (30) ಹಾಗೂ ಕುಶಾಲನಗರ ರಸಲ್‌ಪುರ ನಿವಾಸಿ ಯು.ಎಂ.ಶರೀಫ್ ಅಲಿಯಾಸ್ ಬಿಲಾಲ್ (34) ಎಂಬವರೇ ಕೋಕಾ ಕಾಯ್ದೆಯಡಿ ಬಂಧನಕ್ಕೊಳಗಾದವರಾಗಿದ್ದು, ಡಿವೈಎಸ್‌ಪಿ ನೇತೃತ್ವದಲ್ಲಿ ತನಿಖೆಗೆ ಆದೇಶಿಸಲಾಗಿದೆ ಎಂದು ಮಂಗಳವಾರ ತಮ್ಮ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

ಗೌಳಿಬೀದಿಯ ಪ್ರಮೋದ್ 2011 ರಿಂದ ವಿವಿಧ ಸಂಘಟಿತ ಅಪರಾಧಗಳಲ್ಲಿ ಭಾಗಿಯಾಗಿದ್ದು, ಈತನ ವಿರುದ್ಧ ಒಟ್ಟು 18 ಪ್ರಕರಣಗಳು ದಾಖಲಾಗಿವೆ. ದರ್ಶನ್ ವಿರುದ್ಧ 2015 ರಿಂದ ಒಟ್ಟು 8 ಪ್ರಕರಣಗಳು ದಾಖಲಾಗಿದ್ದು, ಶರೀಫ್ ವಿರುದ್ಧ 2016ರಿಂದ ಒಟ್ಟು 12 ಪ್ರಕರಣಗಳು ದಾಖಲಾಗಿರುವುದಾಗಿ ಅವರು ಮಾಹಿತಿ ನೀಡಿದರು.

ಮಾದಕ ವಸ್ತು ಮಾರಾಟ

ಜಿಲ್ಲೆಯಲ್ಲಿ ಅಕ್ರಮ ಮಾದಕ ವಸ್ತು ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಪೋಕ್ಲು ಸಮೀಪದ ಕುಂಜಿಲ ಗ್ರಾಮದ ಕೆ.ಯು.ಅಶ್ರಫ್ (34) ಎಂಬಾತನ ವಿರುದ್ಧ ಪಿಐಟಿ, ಎನ್‌ಡಿಪಿಎಸ್ ಕಾಯ್ದೆಯಡಿ ಆರು ಪ್ರಕರಣಗಳು ದಾಖಲಾಗಿದ್ದು, ಈತನನ್ನು ಬಂಧಿಸಿ ಬಳ್ಳಾರಿಯ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ.

ಮಡಿಕೇರಿಯ ಗದ್ದಿಗೆ ನಿವಾಸಿ ನೂಫೈಲ್ (27) ಎಂಬಾತನ ವಿರುದ್ಧ ಎಂಟು ಪ್ರಕರಣಗಳು ದಾಖಲಾಗಿದ್ದು, ಆತನನ್ನು ಕಲಬುರ್ಗಿ ಜಿಲ್ಲಾ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದು ಅವರು ಇದೇ ಸಂದರ್ಭ ತಿಳಿಸಿದರು.

ಗಾಂಜಾ ಮಾರಾಟ: ಮೂವರ ಸೆರೆ



ಮಡಿಕೇರಿ: ಸಿದ್ದಾಪುರ ಪೊಲೀಸ್ ಠಾಣೆ ವ್ಯಾಪ್ತಿಯ ನೆಲ್ಯಹುದಿಕೇರಿ ಸೇತುವೆಯಿಂದ ಕುಂಬಾರಗುಂಡಿಗೆ ತೆರಳುವ ರಸ್ತೆ ಬದಿಯಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತರನ್ನು ಗೂಡುಗದ್ದೆ ಗ್ರಾಮದ ಧನುಷ್ (23), ಕರಡಿಗೋಡು ಗ್ರಾಮದ ಗೌತಮ್ (19) ಹಾಗೂ ನೆಲ್ಯಹುದಿಕೇರಿ ಗ್ರಾಮದ ಅನ್ಸಾದ್ (23) ಎಂದು ಗುರುತಿಸಲಾಗಿದೆ.

ಮಂಗಳವಾರ ಬೆಳಗ್ಗೆ ಸುಮಾರು 10.30 ಗಂಟೆಗೆ ಆರೋಪಿಗಳು ಸಾರ್ವಜನಿಕರಿಗೆ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ದೊರೆತ ಖಚಿತ ಮಾಹಿತಿ ಮೇರೆಗೆ ಸಿದ್ದಾಪುರ ಠಾಣೆಯ ಎಎಸ್‌ಐ ಮಂಜುನಾಥ್ ಎಚ್.ಕೆ. ನೇತೃತ್ವದ ತಂಡ ದಾಳಿ ನಡೆಸಿ ಮೂವರು ಆರೋಪಿಗಳನ್ನು ವಶಕ್ಕೆ ಪಡೆದಿದೆ.

ಕಾರ್ಯಾಚರಣೆಯಲ್ಲಿ ಸುಮಾರು 612 ಗ್ರಾಂ ಗಾಂಜಾ, ರೂ.300 ನಗದು, ಐಫೋನ್-14, ಐಫೋನ್-13, ಮೋಟೊರೋಲಾ ಆಂಡ್ರಾಯ್ಡ್ ಮೊಬೈಲ್ ಫೋನ್, ಮೂರು ಖಾಲಿ ಜಿಪ್-ಲಾಕ್ ಕವರ್‌ಗಳು ಹಾಗೂ ಕಪ್ಪು-ಕೆಂಪು ಬಣ್ಣದ ಬ್ಯಾಗ್‌ನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಕಾರ್ಯಾಚರಣೆಯಲ್ಲಿ ಸಿದ್ದಾಪುರ ಠಾಣೆಯ ಹೆಡ್ ಕಾನ್ಸ್‌ಟೇಬಲ್ ರಾಜೇಶ್, ಮಣಿಕಂಠ, ಡಿಸಿಆರ್‌ಬಿ ಸಿಬ್ಬಂದಿಗಳಾದ ನಿರಂಜನ್, ಯೋಗೇಶ್ ಹಾಗೂ ಪ್ರವೀಣ್ ಭಾಗವಹಿಸಿದ್ದರು.


ಕೊಟ್ಟಿಗೆಗೆ ಕಾಡಾನೆ ದಾಳಿ: ಕರುವಿನ ಸೊಂಟ ಮುರಿತ; ಓಡಿ ಹಸು ಪಾರು

ಕುಶಾಲನಗರ: ತೊರೆನೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಸಿದ್ದಲಿಂಗಪುರ ವ್ಯಾಪ್ತಿಯಲ್ಲಿ ಕಳೆದೊಂದು ವಾರದಿಂದ ಒಂಟಿ ಸಲಗವೊಂದು ಹಗಲು ವೇಳೆಯಲ್ಲೇ ಸಂಚರಿಸುತ್ತಿದ್ದು, ಗ್ರಾಮದ ಸೀತಮ್ಮ ಎಂಬವರ ಕೊಟ್ಟಿಗೆಗೆ ದಾಳಿ ಮಾಡಿ ಧ್ವಂಸಗೊಳಿಸಿದ್ದಲ್ಲದೆ, ಅಲ್ಲಿದ್ದ ಕರುವನ್ನು ತುಳಿದ ಪರಿಣಾಮ ಅದರ ಸೊಂಟ ಮುರಿದಿದೆ.

ಮಂಗಳವಾರ ಬೆಳಗಿನ ಜಾವ ಕೊಟ್ಟಿಗೆ ಕಡೆಗೆ ಕಾಡಾನೆ ಬರುವ ರಭಸಕ್ಕೆ ಕೊಟ್ಟಿಗೆಯಲ್ಲಿದ್ದ ಹಸು ಹಗ್ಗ ಸಮೇತ ಓಡಿ ಹೋಗಿದೆ. ಆದರೆ ಅಲ್ಲಿದ್ದ ಕರುವನ್ನು ಕಾಡಾನೆ ತುಳಿದಿದೆ.

ಅಲ್ಲದೆ ಈ ವ್ಯಾಪ್ತಿಯ ಅನೇಕ ರೈತರ ಜಮೀನಿಗೆ ಕಾಡಾನೆ ದಾಳಿ ಮಾಡಿರುವುದರಿಂದ ಅಪಾರ ಪ್ರಮಾಣದ ಬೆಳೆ ನಷ್ಟವಾಗಿದೆ.

ಈ ಒಂಟಿ ಸಲಗವು ಹಗಲು ವೇಳೆಯಲ್ಲೇ ಕಾಣಿಸಿಕೊಳ್ಳುತ್ತಿರುವುದರಿಂದ ಈ ವ್ಯಾಪ್ತಿಯ ಶಾಲಾ ವಿದ್ಯಾರ್ಥಿಗಳು, ಸಾರ್ವಜನಿಕರು ಗ್ರಾಮಸ್ಥರು ಭಯಭೀತರಾಗಿದ್ದಾರೆ.



ಅರಣ್ಯ ಇಲಾಖೆಯವರು ಈ ಒಂಟಿ ಸಲಗವನ್ನು ಅರಣ್ಯಕ್ಕೆ ಅಟ್ಟುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ವಿದ್ಯಾರ್ಥಿಗಳ ಧ್ವನಿಯನ್ನು ಪೊಲೀಸರಿಂದ ಹತ್ತಿಕ್ಕುವ ಪ್ರಯತ್ನ ಖಂಡನೀಯ: ಎಬಿವಿಪಿ

ಮಂಗಳೂರು: ಮಂಗಳೂರು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳು ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿ ವಿವಿ ಆಡಳಿತ ಸೌಧ ಮುಂಭಾಗದಲ್ಲಿ ಜೂ.12ರಂದು ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದ ಕುಲಪತಿ ಅವರು ಪೊಲೀಸ್ ಇಲಾಖೆಯನ್ನು ಬಳಸಿಕೊಂಡುಬಂಧಿಸುವಮೂಲಕಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸಿರುವುದು ಖಂಡನೀಯ ಎಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಹೇಳಿದೆ.

ವಿವಿಯಲ್ಲಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ವಿವಿ ಕುಲಪತಿ ವಿವಿಧ ಕಾರಣಗಳನ್ನು ಹೇಳುತ್ತಿದ್ದಾರೆಯೇ ವಿನಃ ಪರಿಹಾರ ರೂಪಿಸುತ್ತಿಲ್ಲ. ಇದರ ವಿರುದ್ಧ ಪೊಲೀಸ್ ಇಲಾಖೆಯ ಅನುಮತಿ ಪಡೆದು ಶಾಂತಿಯುತ ಪ್ರತಿಭಟನೆ ನಡೆಸಲಾಗಿತ್ತು. ಆದರೆ, ವಿದ್ಯಾರ್ಥಿಗಳ ನ್ಯಾಯಯುತ ಬೇಡಿಕೆಗಳನ್ನು ಆಲಿಸಿ ಪರಿಹರಿಸುವ ಬದಲು, ವಿಶ್ವವಿದ್ಯಾಲಯದ ಕುಲಪತಿ ಅವರು ಪೊಲೀಸ್ ಇಲಾಖೆಯನ್ನು ಬಳಸಿಕೊಂಡು ವಿದ್ಯಾರ್ಥಿಗಳನ್ನು ಬಂಧಿಸಿರುವುದು ಅತ್ಯಂತ ಖಂಡನೀಯ ಎಂದು ಎಬಿವಿಪಿ ರಾಜ್ಯ ಸಹ ಕಾರ್ಯದರ್ಶಿ ಸುವಿತ್ ಶೆಟ್ಟಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.



ಮಂಗಳೂರು ವಿಶ್ವವಿದ್ಯಾಲಯವು ಒಂದು ಕಾಲದಲ್ಲಿ ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿ ಗುರುತಿಸಿಕೊಂಡಿತ್ತು. ಆದರೆ, ಕಳೆದ ಕೆಲವು ವರ್ಷಗಳಿಂದ ಆಡಳಿತ ವೈಫಲ್ಯ, ಭ್ರಷ್ಟಾಚಾರ, ನಿರ್ಲಕ್ಷ್ಯ ಹಾಗೂ ಅವ್ಯವಸ್ಥೆಯಿಂದ ವಿಶ್ವವಿದ್ಯಾಲಯವು ತನ್ನ ಘನತೆಯನ್ನು ಕಳೆದುಕೊಳ್ಳುತ್ತಿದೆ. ವಿದ್ಯಾರ್ಥಿಗಳು ಮೂಲಭೂತ ಸೌಕರ್ಯಗಳ ಕೊರತೆ, ಅನಗತ್ಯ ಶುಲ್ಕದ ಹೊರೆ, ಶಾಶ್ವತ ಬೋಧಕರ ಕೊರತೆ, ಉದ್ಯೋಗಾವಕಾಶಗಳ ಅಭಾವ ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳನ್ನು ಬಗೆಹರಿಸಲು ಒತ್ತಾಯಿಸಿ ಪ್ರತಿಭಟನೆ ನಡೆಸಲಾಗಿತ್ತು ಎಂದರು.

ವಿದ್ಯಾರ್ಥಿಗಳು ಶಾಂತಿಯುತವಾಗಿ ತಮ್ಮ ಸಮಸ್ಯೆಗಳನ್ನು ಮಂಡಿಸುವುದು ಪ್ರಜಾಪ್ರಭುತ್ವದ ಹಕ್ಕಾಗಿದೆ. ಆ ಹಕ್ಕನ್ನು ಪೊಲೀಸ್ ಬಲದ ಮೂಲಕ ದಮನಿಸುವುದು ಮತ್ತು ಸಮಸ್ಯೆಗಳಿಗೆ ಪರಿಹಾರ ನೀಡುವ ಬದಲು ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯ ತೊರೆಯುವಂತೆ ಸೂಚಿಸುವುದು ಯಾವುದೇ ರೀತಿಯಲ್ಲೂ ಸಮರ್ಥನೀಯವಲ್ಲ. ವಿದ್ಯಾರ್ಥಿಗಳ ನ್ಯಾಯಸಮ್ಮತ ಬೇಡಿಕೆಗಳನ್ನು ಕೂಡಲೇ ಈಡೇರಿಸಿ ವಿದ್ಯಾರ್ಥಿಗಳೊಂದಿಗೆ ಗೌರವಯುತ ಸಂವಾದ ನಡೆಸಬೇಕು. ಇಲ್ಲವಾದಲ್ಲಿ ವಿದ್ಯಾರ್ಥಿಗಳ ಹಿತಾಸಕ್ತಿಗಾಗಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಅವರು ಎಚ್ಚರಿಸಿದರು.

ಮಂಗಳೂರು ವಿವಿ ವಿದ್ಯಾರ್ಥಿ ಸಂಘದ ಅಧ್ಯಕ್ಷ ಯಶ್ವಿನ್, ಕಾರ್ಯದರ್ಶಿ ನಿಹಾರ್, ಎಬಿವಿಪಿ ಕೊಣಾಜೆ ನಗರ ಕಾರ್ಯದರ್ಶಿ ಮನು ಉಪಸ್ಥಿತರಿದ್ದರು.

> **ವಿದ್ಯಾರ್ಥಿಗಳು ಮೂಲಭೂತ ಸೌಲಭ್ಯಗಳು ಮತ್ತು ನ್ಯಾಯಯುತ ಬೇಡಿಕೆಗಳನ್ನು ಮುಂದಿಟ್ಟಾಗ, 'ನಮ್ಮಿಂದ ಇಷ್ಟೇ ಸೌಲಭ್ಯಗಳನ್ನು ನೀಡಲು ಸಾಧ್ಯ. ಆದರಿಂದ ತೃಪ್ತಿಯಿಲ್ಲದಿದ್ದರೆ ಬೇರೆ ವಿಶ್ವವಿದ್ಯಾಲಯ ಅಥವಾ ಕಾಲೇಜುಗಳನ್ನು ನೋಡಿಕೊಳ್ಳಿ' ಎಂಬ ಧೋರಣೆಯ ಮಾತುಗಳನ್ನು ಕುಲಪತಿ ಅವರು ಆಡಿರುವುದು ವಿದ್ಯಾರ್ಥಿಗಳ ಭಾವನೆಗಳಿಗೆ ಧಕ್ಕೆ ಉಂಟುಮಾಡಿದೆ. ಇದು ವಿಶ್ವವಿದ್ಯಾಲಯದ ಮುಖ್ಯಸ್ಥರ ಸ್ಥಾನಕ್ಕೆ ಶೋಭೆ ತರದ ಅತ್ಯಂತ ಬೇಜವಾಬ್ದಾರಿಯುತ ಹೇಳಿಕೆಯಾಗಿದೆ. ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸುವ ಜವಾಬ್ದಾರಿ ಹೊಂದಿರುವ ಕುಲಪತಿ ಅವರು ಇಂತಹ ನಿರ್ಲಕ್ಷ್ಯದ ಧೋರಣೆ ಪ್ರದರ್ಶಿಸಿರುವುದು ಖಂಡನೀಯ. ವಿವಿಯಲ್ಲಿನ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗದಿದ್ದರೆ ಕುಲಪತಿ ಅವರು ರಾಜೀನಾಮೆ ನೀಡಲಿ.**
>
> ■ **ಯಶ್ವಿನ್** ಮಂಗಳೂರು ವಿವಿ ವಿದ್ಯಾರ್ಥಿ ಸಂಘದ ಅಧ್ಯಕ್ಷ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ



ದಕ್ಷಿಣ ಕನ್ನಡ 32⁰ 26⁰ | ಉಡುಪಿ 32⁰ 27⁰

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಬುಧವಾರ 17, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 3

ನೆಟ್ಟಣ ಸುಬ್ರಹ್ಮಣ್ಯ ರೋಡ್ ರೈಲು ನಿಲ್ದಾಣದಲ್ಲಿ ರಾಶಿ ಬಿದ್ದ ಕಸ ಕೊನೆಗೂ ತೆರವು



ಪುಟ 5

ಪುಲಿಂಜಾಲ್‌ನಲ್ಲಿ ನೂತನ ಸೇತುವೆಯ ನಿರ್ಮಾಣಕ್ಕೆ ಬೇಡಿಕೆ

ಮೆಸ್ಕಾಂ ಖಾಸಗೀಕರಣ ಪ್ರಸ್ತಾವನೆ ವಿರುದ್ಧ ಮಂಗಳೂರಿನಲ್ಲಿ ಸಿಡಿದೆದ್ದ ಸಿಬ್ಬಂದಿಗಳು!





ಮೆಸ್ಕಾಂನ ವಿದ್ಯುತ್ ಇಲಾಖೆಯನ್ನು ಖಾಸಗಿ ಸಂಸ್ಥೆಗೆ ನೀಡಲು ವಿದ್ಯುತ್ ನಿಯಂತ್ರಣ ಆಯೋಗದಿಂದ ಅನುಮತಿ ಕೋರಿರುವ ವಿರುದ್ಧ ಮಂಗಳೂರಿನಲ್ಲಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಯಿತು. (ವರದಿ ಪುಟ 3)

ಸುತ್ತಮುತ್ತ

ಕೊಡಗು ಜಿಲ್ಲೆಯಲ್ಲಿ ಭಾರೀ ವಾಹನಗಳ ಸಂಚಾರಕ್ಕೆ ಅವಕಾಶ

ಮಡಿಕೇರಿ: ಕೊಡಗು ಜಿಲ್ಲೆಯಾದ್ಯಂತ ಮುಂಗಾರು ಮಳೆಯ ಹಿನ್ನೆಲೆಯಲ್ಲಿ ಮರಳು ಮತ್ತು ಮರದ ದಿಮ್ಮಿಗಳ ಸಾಗಾಣಿಕೆ ಹಾಗೂ ಭಾರೀ ವಾಹನಗಳ ಸಂಚಾರವನ್ನು ನಿಷೇಧಿಸಿ ಜಿಲ್ಲಾಡಳಿತ ಹೊರಡಿಸಿದ್ದ ಆದೇಶಕ್ಕೆ ಭಾಗಶಃ ತಿದ್ದುಪಡಿ ಮಾಡಲಾಗಿದೆ.
ಜಿಲ್ಲೆಯಲ್ಲಿ ಮುಂಗಾರು ಮಳೆ ಆರಂಭಗೊಂಡು ಮಳೆಯ ಪ್ರಮಾಣ ಹೆಚ್ಚಾಗುವ ಸಾಧ್ಯತೆ ಇರುವುದರಿಂದ, ರಸ್ತೆಗಳ ಸುರಕ್ಷತೆ, ಹಾಗೂ ಪ್ರಯಾಣಿಕರ ಹಿತದೃಷ್ಟಿಯಿಂದ ಜಿಲ್ಲಾಧಿಕಾರಿಗಳು ಜೂ. 10ರಿಂದ ಜುಲೈ 9ರವರೆಗೆ ಮರಳು ಮತ್ತು ಮರದ ದಿಮ್ಮಿಗಳ ಸಾಗಾಣಿಕೆ ಹಾಗೂ ಭಾರೀ ವಾಹನಗಳ ಸಂಚಾರವನ್ನು ನಿಷೇಧಿಸಿ ಆದೇಶ ಹೊರಡಿಸಿದ್ದರು.
ಆದರೆ, ಕೊಡಗು ಟಿಂಬರ್ ಟ್ರೇಡಿಂಗ್ ಅಸೋಸಿಯೇಷನ್ ಸಲ್ಲಿಸಿದ ಮನವಿ ಹಾಗೂ ಜಿಲ್ಲೆಯ ಪ್ರಸ್ತುತ ಹವಾಮಾನ ಪರಿಸ್ಥಿತಿಯನ್ನು ಪರಿಶೀಲಿಸಿದ ಬಳಿಕ, ಈ ಆದೇಶವನ್ನು ಭಾಗಶಃ ಮಾರ್ಪಡಿಸಿ ಜೂ.25ರವರೆಗೆ ಎಲ್ಲಾ ವಿಧದ ವಾಹನಗಳ ಸಂಚಾರಕ್ಕೆ ಅವಕಾಶ ನೀಡಲಾಗಿದೆ. ಉಳಿದಂತೆ ಮೂಲ ಆದೇಶ ದಲ್ಲಿನ ಇತರ ನಿಯಮಗಳು ಯಥಾಸ್ಥಿತಿಯಲ್ಲಿ ಮುಂದುವರಿಯಲಿವೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಸೈಬರ್ ವಂಚನೆ: ವ್ಯಕ್ತಿಯ ಖಾತೆಯಿಂದ 2.12 ಲಕ್ಷ ರೂ. ಲೂಟಿ

ಉಡುಪಿ: ಮಣಿಪಾಲದ ಕೆ.ಎಂ.ಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವ್ಯಕ್ತಿಯೊಬ್ಬರು ತಮ್ಮ ಡೆಬಿಟ್ ಕಾರ್ಡ್ ಮೂಲಕ ಬಿಲ್ ಪಾವತಿಸಿದ ಬೆನ್ನಲ್ಲೇ, ಅವರ ಗಮನಕ್ಕೆ ಬಾರದೆ ಖಾತೆಯಿಂದ ಬರೋಬ್ಬರಿ 2,12,497 ರೂಪಾಯಿ ಹಣವನ್ನು ಸೈಬರ್ ವಂಚಕರು ಲೂಟಿ ಮಾಡಿರುವ ಘಟನೆ ಬೆಳಕಿಗೆ ಬಂದಿದೆ. ಸುರೇಶ್ ರಾವ್ ವಂಚನೆಗೊಳಗಾದವರು.
ಸುರೇಶ್ ರಾವ್ ಅವರು ಜೂನ್ 3ರಂದು ಕೆ.ಎಂ.ಸಿ ಆಸ್ಪತ್ರೆಯ ಬಿಲ್ ಅನ್ನು ತಮ್ಮ ಡೆಬಿಟ್ ಕಾರ್ಡ್ ಬಳಸಿ ಪಾವತಿಸಿದ್ದರು. ಇದಾದ ಬಳಿಕ ಅವರು ಯಾವುದೇ ರೀತಿಯ ಬ್ಯಾಂಕ್ ವ್ಯವಹಾರ ನಡೆಸದಿದ್ದರೂ, ಜೂನ್ 8ರಂದು ಅವರ ಮೊಬೈಲ್‌ಗೆ ಖಾತೆಯಿಂದ ಹಣ ಕಡಿತಗೊಂಡಿರುವ ಬಗ್ಗೆ ಸಂದೇಶ ಬಂದಿದೆ. ಇದರಿಂದ ಆತಂಕಗೊಂಡ ಅವರು ತಕ್ಷಣ ಬ್ಯಾಂಕ್‌ಗೆ ತೆರಳಿ ಖಾತೆಯ ವಹಿವಾಟಿನ ವಿವರಗಳನ್ನು ಪರಿಶೀಲಿಸಿದಾಗ, ಜೂನ್ 5ರಿಂದ ಜೂನ್ 8ರ ಮಧ್ಯದ ಅವಧಿಯಲ್ಲಿ ಹಂತ ಹಂತವಾಗಿ ಒಟ್ಟು 2,12,497 ರೂಪಾಯಿ ಹಣ ಅಪರಿಚಿತ ಖಾತೆಗೆ ವರ್ಗಾವಣೆಯಾಗಿರುವುದು ಪತ್ತೆಯಾಗಿದೆ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಸರಗೋಡಿನಲ್ಲಿ ವಿಶೇಷ ಕಾರ್ಯಾಚರಣೆ

ಟಾರ್ಗೆಟ್ ಕಾಡುಹಂದಿ!

ಮಾನವ -ವನ್ಯಜೀವಿ ಸಂಘರ್ಷಕ್ಕೆ ಮುಕ್ತಿ?

ಕಾಸರಗೋಡು: ಜನವಸತಿ ಪ್ರದೇಶಗಳಿಗೆ ನುಗ್ಗಿ ಮನುಷ್ಯರ ಜೀವ ಮತ್ತು ಆಸ್ತಿ ಪಾಸ್ತಿಗಳಿಗೆ ಹಾಗೂ ಕೃಷಿ ಭೂಮಿಗಳಿಗೆ ಭೀತಿ ಸೃಷ್ಟಿಸುತ್ತಿರುವ ಕಾಡುಹಂದಿಗಳ ನಿಯಂತ್ರಣಕ್ಕೆ ಜೂ. 15ರಿಂದ 90 ದಿನಗಳ ಕಾಲ ವಿಶೇಷ ಕಾರ್ಯಾಚರಣೆ ನಡೆಸಲು ಆಡಳಿತದಿಂದ ನಿರ್ಧರಿಸಲಾಗಿದೆ.

ಅರಣ್ಯ ಇಲಾಖೆಗೆ ನಿರ್ದೇಶನ

ಕೇರಳ ಸರಕಾರದ 100 ದಿನಗಳ ಕ್ರಿಯಾ ಯೋಜನೆಗಳ ಅಂಗವಾಗಿ ಸ್ಥಳೀಯಾಡಳಿತ ಇಲಾಖೆಗಳ ಸಹಕಾರದೊಂದಿಗೆ ಅರಣ್ಯ ಇಲಾಖೆಯು ಜಿಲ್ಲೆಯಲ್ಲಿ ಯೋಜನೆಯನ್ನು ಸಮಗ್ರವಾಗಿ ಜಾರಿಗೊಳಿಸಿದೆ. ಮಾನವ–ವನ್ಯಜೀವಿ ಸಂಘರ್ಷ ತೀವ್ರಗೊಂಡ ಹಿನ್ನೆಲೆಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲು ಅರಣ್ಯ ಇಲಾಖೆಗೆ ನಿರ್ದೇಶಿಸಿದೆ.

ಕಾಡುಹಂದಿಗಳ ನಿಯಂತ್ರಣಕ್ಕೆ ಕ್ರಮ

ಪಂಚಾಯತ್ ಮಟ್ಟದಲ್ಲಿ ಪ್ರತಿಯೊಂದು ಪ್ರದೇಶದ ಕಾಡುಹಂದಿ ಉಪಟಳವನ್ನು ಪರಿಗಣಿಸಿ ಅಗತ್ಯದ ಕ್ರಮಗಳನ್ನು ಕೈಗೊಳ್ಳಲಾಗುವುದು. ಕಾಡುಹಂದಿಗಳ ನಿಯಂತ್ರಣಕ್ಕೆ ಈ ಹಿಂದೆ ಪಂಚಾಯತ್ ಮಟ್ಟದಲ್ಲಿ ಬಂದೂಕು ಲೈಸನ್ಸ್ ಇರುವ ಶೂಟರ್‌ಗಳ ಪಟ್ಟಿಯನ್ನು ತಯಾರಿ ಸಲಾಗಿತ್ತು. ಯೋಜನೆಯನ್ನು ಕಾರ್ಯ ದಕ್ಷಗೊಳಿಸಲು ಜಿಲ್ಲೆಯಲ್ಲಿ ಆ ಪಟ್ಟಿಯನ್ನು ಇನ್ನಷ್ಟು ಪ್ರಬಲಗೊಳಿಸಲು ತೀರ್ಮಾನಿಸಲಾಗಿದೆ. »ಪುಟ 6



ಹಂದಿ ಕೊಲ್ಲಲು 31 ಶೂಟರ್‌ಗಳಿಗೆ ಅನುಮತಿ

ಇತ್ತೀಚಿಗಿನ ದಿನಗಳಲ್ಲಿ ಕಾಸರಗೋಡು ನಗರಸಭಾ ವ್ಯಾಪ್ತಿಯಲ್ಲಿಯೂ ಕಾಡು ಹಂದಿಗಳ ಉಪಟಳ ವಿಪರೀತವಾಗಿ ಕಂಡುಬರುತ್ತಿದೆ. ಪ್ರಸ್ತುತ ಕಾಸರಗೋಡು ರೇಂಜ್‌ನಲ್ಲಿ 13, ಕಾಞಂಗಾಡು ರೇಂಜ್‌ನಲ್ಲಿ 18 ಹೀಗೆ ಒಟ್ಟು 31 ಲೈಸನ್ಸ್ ಹೊಂದಿದ ಶೂಟರ್‌ಗಳಿಗೆ ಜಿಲ್ಲೆಯಲ್ಲಿ ಕಾಡುಹಂದಿಗಳನ್ನು ಗುಂಡಿಕ್ಕಿ ಕೊಲ್ಲಲು ಅನುಮತಿ ನೀಡಲಾಗಿದೆ. ಈ ಮೂಲಕ ಕಾಡುಹಂದಿಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.

ಈಗ ಹಾಟ್‌ಸ್ಪಾಟ್ ಪಟ್ಟಿಗಳು ತಯಾರು

ಕಾಸರಗೋಡು ಜಿಲ್ಲೆಯಲ್ಲಿ ಮಾನವ ಮತ್ತು ವನ್ಯಜೀವಿ ಸಂಘರ್ಷವನ್ನು ಕಡಿಮೆಗೊಳಿಸುವುದಕ್ಕಾಗಿ ನಡೆಸಿದ ತ್ವರಿತ ಯಜ್ಞ ಕಾರ್ಯಕ್ರಮದ ಮೊದಲ ಹಂತದಲ್ಲಿ ಕಾಸರಗೋಡು ವಲಯ ಅಧೀನದ ಪ್ರದೇಶವಾದ ದೇಲಂಪಾಡಿ, ಕಾರಡ್ಕ, ಮುಳಿಯಾರು, ಕಾಞಂಗಾಡು ರೇಂಜ್ ಅಧೀನದ ಪನತ್ತಡಿ, ಬಳಾಲ್, ಈಸ್ಟ್ ಎಳೇರಿ ಗ್ರಾಮ ಪಂಚಾಯತ್‌ಗಳನ್ನು ಹಾಟ್ ಸ್ಪಾಟ್‌ಗಳಾಗಿ ಗುರುತಿಸಲಾಗಿದೆ. ಇವುಗಳಲ್ಲದೆ ಅರಣ್ಯ ಗಡಿಭಾಗದ ಪರಿಸರದಲ್ಲಿರುವ ಸರಿಸುಮಾರು 15ರಷ್ಟು ಗ್ರಾ.ಪಂ.ಗಳಲ್ಲೂ ಕಾಡು ಹಂದಿಗಳ ಉಪಟಳ ತೀವ್ರಗೊಂಡಿದ್ದು, ಅಂತಹ ಪ್ರದೇಶಗಳನ್ನು ಕೂಡಾ ವಿಶೇಷ ಕಾರ್ಯಾಚರಣೆ ವ್ಯಾಪ್ತಿಗೆ ಒಳಪಡಿಸಲಾಗುವುದು.

ಬಿ.ಸಿ. ರೋಡ್‌ನಲ್ಲಿ ನಡೆದ ಘಟನೆ

ಕ್ಯಾಂಟೀನ್‌ನಲ್ಲಿ ಅಗ್ನಿ ಅನಾಹುತ

ಆತಂಕ ತಂದ ಅನಿಲ ಸೋರಿಕೆ

ಬಂಟ್ವಾಳ: ಬಿ.ಸಿ.ರೋಡಿನ ಮಿನಿ ವಿಧಾನ ಸೌಧದ ನೇರ ಮುಂಭಾಗ ದಲ್ಲಿರುವ ಪುರಸಭಾ ಕಟ್ಟಡದಲ್ಲಿ ಕಾರ್ಯಾಚರಿಸುತ್ತಿರುವ ಕ್ಯಾಂಟೀನ್‌ನಲ್ಲಿ ಅಡುಗೆ ಅನಿಲ ಸೋರಿಕೆಯಾಗಿ ಸಂಭವಿಸಬಹುದಾಗಿದ್ದ ಭಾರೀ ಅನಾಹುತ ಪವಾಡ ಸದೃಶವಾಗಿ ತಪ್ಪಿದೆ.
ಬಿ.ಸಿ.ರೋಡಿನ ಹೆಸರಾಂತ ನಾಗರಾಜ್ ಯಾನೆ ನಾಗ ಅವರಿಗೆ ಸೇರಿದ ಕ್ಯಾಂಟೀನ್‌ನ ಹಿಂಬದಿಯಲ್ಲಿ ದೋಸೆ ಮಾಡಲೆಂದು ಇರಿಸ ಲಾಗಿದ್ದ ಅಡುಗೆ ಅನಿಲದಲ್ಲಿ ಸೋರಿಕೆ ಕಂಡು ಬಂದು ಧಿಡೀರ್ ಬೆಂಕಿ ಕಾಣಿಸಿಕೊಂಡಿದೆ.

ಸಿಬ್ಬಂದಿಗಳಿಗೆ ಸಣ್ಣಪುಟ್ಟ ಗಾಯ

ಈ ಸಂದರ್ಭ ಕೆಲಸದಲ್ಲಿ ನಿರತರಾಗಿದ್ದ ನೌಕರ ವಿಶ್ವನಾಥ ಅವರಿಗೆ ಅನಿಲ ಸೋರಿಕೆಯಿಂದ ಬೆಂಕಿ ತಂಗಿದ್ದು, ಸಣ್ಣ ಮಟ್ಟಿನ ಗಾಯವಾಗಿದೆ. ಕ್ಯಾಂಟೀನ್‌ನ ಮಾಲಕರ ಸಹೋದರ ಹರೀಶ್ ಅವರಿಗೂ ಸಣ್ಣಪುಟ್ಟ ಗಾಯವಾಗಿದ್ದು, ಪವಾಡಸದೃಶ ಎಂಬಂತೆ ದೊಡ್ಡ ಪ್ರಮಾಣದ ಅನಾಹುತ ತಪ್ಪಿಹೋಗಿದೆ. ಗ್ಯಾಸ್ ಸೋರಿಕೆಯಿಂದ ಕಾಣಿಸಿಕೊಂಡ ಬೆಂಕಿಯನ್ನು ಕೂಡಲೇ ಸ್ಥಳೀಯರು ನಂದಿಸಲು ಪ್ರಯತ್ನಿಸಿದ್ದರಾದರೂ, ಕೊನೆ ಗೆ ಅಗ್ನಿಶಾಮಕ ದಳದ ಸಿಬ್ಬಂದಿಗಳು ಆಗಮಿಸಿ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.



ಗ್ರಾಹಕರು ಇದ್ದರು!!

ಕ್ಯಾಂಟೀನ್‌ನಲ್ಲಿ ಬೆಳಿಗ್ಗಿನ ಹೊತ್ತು ನೂರಾರು ಸಂಖ್ಯೆಯಲ್ಲಿ ಗ್ರಾಹಕರು ಜಮಾಯಿಸಿರುತ್ತಾರೆ. ಜೊತೆಗೆ ಅಲ್ಲೇ ಪಕ್ಕದಲ್ಲೇ ಶ್ರೀ ರಕ್ತೇಶ್ವರಿ ದೇವಸ್ಥಾನ, ಬೂಡಾ ಕಚೇರಿ, ಸೆಲೂನ್, ಪ್ರೆಸ್ ಕ್ಲಬ್, ಅಂಗಡಿಗಳು ಕಾರ್ಯಾಚರಿಸುತ್ತಿದ್ದು, ಯಾವುದೇ ಅಪಾಯ ತಟ್ಟಿಲ್ಲ.

ಕಂಬಳಪದವು ಮೀನು ಸಂಸ್ಕರಣಾ ಘಟಕದಿಂದ ಮಾಲಿನ್ಯ | ಸ್ಥಳೀಯರ ಆರೋಪ

ಗೊಬ್ಬರ ಫ್ಯಾಕ್ಟರಿ ಮುಂದೆ ಸ್ಥಳೀಯರ ಆಕ್ರೋಶ

ಕೊಣಾಜೆ: ಕಂಬಳಪದವು, ಕೊಣಾಜೆ, ಕೈರಂಗಳ ವ್ಯಾಪ್ತಿಯ ಪರಿಸರದಲ್ಲಿ ಮಂಗಳವಾರ ಬೆಳಗ್ಗಿನಿಂದಲೇ ವಿಪರೀತ ದುರ್ನಾತದಿಂದ ನಾಗರಿಕರು ಸಂಕಷ್ಟ ಎದುರಿಸಿದ ಪ್ರಸಂಗ ನಡೆಯಿತು.

ಮೂಗು ಮುಚ್ಚಿಕೊಂಡೇ ಸಂಚಾರ

ಪರಿಸರವಿಡೀ ಹಬ್ಬಿಕೊಂಡಿದ್ದ ದುರ್ನಾತದಿಂದಾಗಿ ಇಲ್ಲಿನ ಜನರು ಈ ಪ್ರದೇಶದಲ್ಲಿ ಮೂಗು ಮುಚ್ಚಿಕೊಂಡೇ ಸಂಚರಿಸಬೇಕಾದ ಅನಿವಾರ್ಯತೆ ಎದುರಾಗಿತ್ತು.



ವಾಯು ಮಾಲಿನ್ಯದಿಂದ ದುರ್ವಾಸನೆ

ಇದರ ಹಿಂದಿನ ಕಾರಣ ಪರಿಶೀಲನೆ ನಡೆಸಿದಾಗ ಕಂಬಳಪದವಿನಲ್ಲಿರುವ ಮೀನಿನ ಸಂಸ್ಕರಣಾ ಘಟಕದಿಂದ ಹೊರ ಸೂಸುವ ವಾಯು ಮಾಲಿನ್ಯದಿಂದಾಗಿಯೇ ದುರ್ವಾಸನೆಯು ಹರಡಿ ಕೊಂಡಿರುವುದು ಎಂದು ನಾಗರಿಕರಿಗೆ ಅರಿವಾಯಿತು. ಬಳಿಕ ಸ್ಥಳೀಯರು ಅಲ್ಲಿನ ಮೀನಿನ ಗೊಬ್ಬರ ಫ್ಯಾಕ್ಟರಿಬಳಿ ದೌಡಾಯಿಸಿ ಆಕ್ರೋಶ ವ್ಯಕ್ತಪಡಿಸಿದರು.
ಆದಷ್ಟು ಶೀಘ್ರವೇ ಇಂತಹ ವಾಯು ಮಾಲಿನ್ಯದ ತಡೆಗೆ ಕ್ರಮ »ಪುಟ 6

ಹಲವಾರು ವರ್ಷದಿಂದ ಇಲ್ಲಿ ಕಾಡುತ್ತಿದೆ ಸಮಸ್ಯೆ

ಇಲ್ಲಿ ಕಳೆದ ಹಲವಾರು ವರ್ಷದಿಂದ ರಾತ್ರಿ ಹಾಗೂ ಮುಂಜಾನೆಯ ವೇಳೆಗೆ ದುರ್ವಾಸನೆ ಬರುತ್ತಿದ್ದು, ಮಂಗಳವಾರದಂದು ವಿಪರೀತ ದುರ್ವಾಸನೆಯಿಂದ ನಾಗರಿಕರು ತೊಂದರೆ ಎದುರಿಸಿದರು.

ಕೊಡಗಿನಲ್ಲಿ ಯೋಗ ಜಾಗೃತಿಯ ಜಾಥಾ



ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಮಂಗಳವಾರ ಕೊಡಗು ಜಿಲ್ಲಾಡಳಿತ, ಜಿ.ಪಂ., ಆಯುಷ್ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಯೋಗ ಒಕ್ಕೂಟ, ಸ್ಕೌಟ್ ಮತ್ತು ಗೈಡ್ಸ್, ಜಿಲ್ಲಾ ಪೊಲೀಸ್ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಮಡಿಕೇರಿ ನಗರದಲ್ಲಿ ಜಾಗೃತಿ ಜಾಥಾ ನಡೆಸಲಾಯಿತು.

ಕಿನ್ನಿಗೋಳಿ- ಮುಲ್ಕಿ ರಾಜ್ಯ ಹೆದ್ದಾರಿಯಲ್ಲಿ ಸಮಸ್ಯೆ ಸೃಷ್ಟಿಸಿದೆ ಅಮೃತ್ ಪೈಪ್‌ಲೈನ್ ಕಾಮಗಾರಿ

ಇಲ್ಲಿ ಹೊಂಡ ಗುಂಡಿ ನಡುವೆ ವಾಹನಗಳ ನಿತ್ಯ ಸರ್ಕಸ್

ಮುಲ್ಕಿ: ಕಿನ್ನಿಗೋಳಿ– ಮುಲ್ಕಿ ರಾಜ್ಯ ಹೆದ್ದಾರಿ ಬದಿಯಲ್ಲಿ ಕಳೆದ ತಿಂಗಳ ಹಿಂದೆ ಹಾಕಿರುವ ಅಮೃತ್ 2.0 ಕುಡಿಯುವ ನೀರಿನ ಪೈಪ್ ಲೈನ್ ಕಾಮಗಾರಿ ಅವೈಜ್ಞಾನಿಕವಾಗಿ ನಡೆದಿದ್ದು, ಪೈಪ್ ಲೈನ್‌ಗಾಗಿ ಹೆದ್ದಾರಿಯನ್ನು ಅಗೆದ ಪರಿಣಾಮ ರಸ್ತೆಗಳಲ್ಲಿ ಹೊಂಡಗಳು ಕಾಣಿಸಿಗೊಂಡಿದ್ದು, ಇದರಿಂದಾಗಿ ನಿತ್ಯವು ಪ್ರಯಾಣಿಸುವ ವಾಹನ ಸವಾರರಿಗೆ ದುಸ್ತರವಾಗಿ ಪರಿಣಮಿಸಿದೆ.

ಎಲ್ಲೆಲ್ಲೂ ಹೊಂಡ ಗುಂಡಿಗಳು...

ಇಲ್ಲಿನ ಕಿನ್ನಿಗೋಳಿ ರಾಜ್ಯ ಹೆದ್ದಾರಿಯ ಕಾರ್ನಾಡ್, ಕುಬೆವೂರು, ಕೆಂಚನಕೆರೆ, ಕೆರೆಕಾಡು, ಪದ್ಮನೂರು ಬಳಿ ಪೈಪ್‌ಲೈನ್ ಅಳವಡಿಸಲು ಹೆದ್ದಾರಿ ಅಗೆತ ಮಾಡಿದ್ದು, ಬಳಿಕ ಅಗೆದ ಹೊಂಡ ಸರಿಯಾಗಿ ಮುಚ್ಚದೆ ಕಳಪೆ ತೇಪೆ ಕಾಮಗಾರಿ ನಡೆಸಿದ ಪರಿಣಾಮ ಒಂದೇ ಮಳೆಗೆ ಡಾಮಾರು ಕೂಡಾ ಕಿತ್ತು ಹೋಗಿ ಇಲ್ಲೆಲ್ಲಾ ಬೃಹದಾಕಾರದ ಹೊಂಡಗಳು ಉಂಟಾಗಿದ್ದು, ಅಮಾಯಕ ವಾಹನ ಸವಾರ ಬಲಿಗಾಗಿ ದಿನನಿತ್ಯ ಕಾಯುತ್ತಿದೆ. ಅಪಾಯಕಾರಿ ಹೊಂಡಗಳಿಂದ ಅನೇಕ ಸಣ್ಣಪುಟ್ಟ ಅಪಘಾತಗಳು ಸಂಭವಿಸಿದ್ದು, ಅನೇಕರು ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಇಲ್ಲಿ ರಸ್ತೆಗಳಲ್ಲಿ ಕಾಡುತ್ತಿದೆ ಬೆಳಕಿನ ಕೊರತೆ

ಈ ಸಮಸ್ಯೆಗಳ ಜೊತೆಗೆ ದಾರಿದೀಪದ ಅವ್ಯವಸ್ಥೆ ಕೂಡ ಕಾಡುತ್ತಿದ್ದು, ಇದನ್ನು ಸರಿಪಡಿಸಲು ಸಂಬಂಧಪಟ್ಟ ಇಲಾಖೆ ಮುಂದಾಗಬೇಕಿದೆ.



ಸಂಗಮ ವಿಶೇಷ

ಹೊಂಡಗಳ ಜೊತೆ ಇಲ್ಲಿವೆ ಅಪಾಯಕಾರಿ ತಿರುವುಗಳು

ಕಿನ್ನಿಗೋಳಿ ರಾಜ್ಯ ಹೆದ್ದಾರಿಯ ಕೆಂಚನಕೆರೆ ತಿರುವು ಅಪಾಯಕಾರಿಯಾಗಿದ್ದು, ರಾಜ್ಯ ಹೆದ್ದಾರಿ ನಡುವಿನಲ್ಲಿ ಪೈಪ್ ಲೈನ್ ಹಾಕಲು ಅಗೆತ ಮಾಡಿ ಭಾರೀ ಗಾತ್ರದ ಹೊಂಡಗಳು ಪ್ರತ್ಯಕ್ಷವಾಗಿದೆ. ಇದು ವಾಹನ ಚಾಲಕರಿಗೆ ಸವಾಲಾಗಿ ಕಾಡುತ್ತಿದೆ. ಕಳೆದ ದಿನದ ಹಿಂದೆ ರಾತ್ರಿ ಹೊತ್ತಿನಲ್ಲಿ ಹೊಂಡ ತಪ್ಪಿಸಲು ಯತ್ನಿಸಿ ಕಾರು ಮತ್ತು ಲಾರಿ ನಡುವೆ ಅಪಘಾತ ಸಂಭವಿಸಿದ್ದು ಪ್ರಯಾಣಿಕರು ಅಲ್ಪ ಸ್ವಲ್ಪ ಗಾಯಗಳೊಂದಿಗೆ ಪವಾಡ ಸದೃಶಪಾರಾಗಿದ್ದರು. ಈ ಬಗ್ಗೆ ನಾಗರಿಕರು ಸತತವಾಗಿ ದೂರುತ್ತಿದ್ದರೂ ಆಡಳಿತ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂಬ ಅಸಮಾಧಾನ ಕೂಡಾ ಸ್ಥಳೀಯರಿಗಿದೆ.

ಜನರ ದೂರಿಗೆ ಇಲ್ಲಿ ಬೆಲೆ ಇಲ್ಲ

ನೀರಿನ ಪೈಪ್ ಲೈನ್ ಕಾಮಗಾರಿ ಅವೈಜ್ಞಾನಿಕವಾಗಿ ನಡೆದಿದೆ ಎಂದು ಅನೇಕ ಬಾರಿ ಗುತ್ತಿಗೆದಾರರಿಗೆ ಹಾಗೂ ಸಂಬಂಧಪಟ್ಟ ಆಡಳಿತಕ್ಕೆ ಮನವಿ ಮಾಡಿದರೂ, ಜನರ ದೂರಿಗೆ ಬೆಲೆ ಇಲ್ಲದಂತಾಗಿದೆ.

● ಶರತ್ ಕಾರ್ನಾಡ್, ಸಾಮಾಜಿಕ ಕಾರ್ಯಕರ್ತ

- ಅಮೃತ್ 2.0 ಕುಡಿಯುವ ನೀರಿನ ಪೈಪ್ ಲೈನ್ ಅವೈಜ್ಞಾನಿಕ ಕಾಮಗಾರಿ
- ಕಾರ್ನಾಡ್, ಕುಬೆವೂರು, ಕೆಂಚನಕೆರೆ, ಕೆರೆಕಾಡು, ಪದ್ಮನೂರು ಬಳಿ ಹೆದ್ದಾರಿ ಅಗೆತ
- ಅಪಾಯಕಾರಿ ಹೊಂಡದಿಂದ ಸಂಭವಿಸಿದೆ ಅಪಘಾತಗಳು
- ರಸ್ತೆಯಲ್ಲಿನ ಕಳಪೆ ತೇಪೆ ಕಾಮಗಾರಿಯಿಂದ ದೊಡ್ಡ ದೊಡ್ಡ ಹೊಂಡಗಳ ಪ್ರತ್ಯಕ್ಷ
- ಪರಿಸರದ ದಾರಿದೀಪ ಸಹಿತ ಇತರೆ ಸಮಸ್ಯೆಗಳ ಪರಿಹಾರಕ್ಕೆ ಕೇಳಿಬರುತ್ತಿದೆ ಆಗ್ರಹ

ಬಂಟ್ವಾಳಕ್ಕೆ ಹೊಸ 16 ಹೊಸ ಮಳೆ ಮಾಪನ ಘಟಕ ಅನುಷ್ಠಾನ 2

ಸುಮಾರು 45 ಕೋಟಿ ರೂ ವೆಚ್ಚದಲ್ಲಿ ವಿವಿಧ ಕಾಮಗಾರಿ: ಎ.ಎಸ್.ಪೊನ್ನಣ್ಣ 4

ಚರಂಡಿ ಹೂಳು ತೆರವುಗೊಳಿಸದ ಬಗ್ಗೆ ಸಾರ್ವಜನಿಕ ವಲಯದಿಂದ ದೂರು 6

ಸುತ್ತಮುತ್ತ

ಪಟ್ಟೆ ಶ್ರೀ ಕೃಷ್ಣ ಹಿರಿಯ ಪ್ರಾಥಮಿಕ ಶಾಲಾ ಮಂತ್ರಿ ಮಂಡಲ ರಚನೆ

ಬಡಗನ್ನೂರು: ಪಟ್ಟೆ ಶ್ರೀ ಕೃಷ್ಣ ಹಿರಿಯ ಪ್ರಾಥಮಿಕ ಶಾಲಾ 2026-27ನೇ ಶೈಕ್ಷಣಿಕ ವರ್ಷದ ಶಾಲಾ ಮಂತ್ರಿ ಮಂಡಲ ಚುನಾವಣೆ ನಡೆದು ಮುಖ್ಯಮಂತ್ರಿಯಾಗಿ ಸಾತ್ವಿಕ ಎಸ್. ಎನ್.(7ನೇ), ಉಪಮುಖ್ಯಮಂತ್ರಿಯಾಗಿ ತೀಕ್ಷಣ್ ಬಿ.ಎಸ್.(6ನೇ) ಅವರನ್ನು ಆಯ್ಕೆ ಮಾಡಲಾಯಿತು. ವಿರೋಧ ಪಕ್ಷದ




ನಾಯಕನಾಗಿ ವಿನೀತ್, ಗೃಹ ಮಂತ್ರಿಯಾಗಿ ಗೌತಮ್, ರಿಶಿನ್ ಟಿ., ಸಾಂಸ್ಕೃತಿಕ ಮಂತ್ರಿ ಹಿತ ಕೆ.ಜೆ., ಜೋಯ್ಲಿನ್ ಡಿ'ಸೋಜ, ಶಾರ್ವರಿ, ಕ್ರೀಡಾ ಮಂತ್ರಿ ಯಕ್ಷಿತ್, ಮನೀಶ್, ವಿನ್ಯಾಸ್, ಅನ್ನಪೂರ್ಣ, ಅನನ್ಯ ಆರೋಗ್ಯ ಮಂತ್ರಿ ಜಾಹ್ನವಿ ಇಶಾಮ್, ತಜ್ಞ ಬಿ. ರೈ, ಗೋಕುಲ್ ಕೆ.ಎಸ್., ಶಿಸ್ತು ಮಂತ್ರಿ ದ್ವಿತಿಜ್ ಶ್ರೀರೂಪ್, ಪೂರ್ಣಶ್ರೀ, ಮೌತಿಕ, ಕೃಷಿ ಮಂತ್ರಿ ಚೇತನಾ, ದಿಶಾನ್, ಸುಪ್ರಜ್, ಅನ್ವಿತ್ ,ತ್ವಾಹಿರ್ ಅಹಮದ್, ಸ್ವಚ್ಛತಾ ಮಂತ್ರಿ ಚಿಂತಶ್ರೀ, ಪ್ರಣೀತ್ ರೈ, ಮಾನ್ವಿ ರೈ, ಯಶ್ವಿನ್, ನೀರಾವರಿ ಮಂತ್ರಿ ಪುನೀತ್, ಲಿಖಿತ್ ಗೌಡ, ಸಹಜ್ ಆಯ್ಕೆ ಮಾಡಲಾಯಿತು. ಬ್ಯಾಲೆಟ್ ಪೇಪರ್ ಮುಖಾಂತರ ಮತ ಚಲಾಯಿಸುವ ಮೂಲಕ ಚುನಾವಣೆ ನಡೆಸಲಾಯಿತು. ಪ್ರಾಥಮಿಕ ಶಾಲಾ ಮುಖ್ಯ ಗುರು ರಾಜಗೋಪಾಲ್ ಭಟ್ ಅವರ ನೇತೃತ್ವದಲ್ಲಿ ಶಿಕ್ಷಕಿ ಲತಾ ಅವರ ಮಾರ್ಗದರ್ಶನ, ಶಿಕ್ಷಕ ವೃಂದದವರ ಸಹಕಾರದೊಂದಿಗೆ ಮತದಾನ ನಡೆಯಿತು.

ಪಡುಮಲೆ ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿಯ ರಚನೆ

ಬಡಗನ್ನೂರು: ಪಡುಮಲೆ ಶ್ರೀ ಕೂವೆ ಶಾಸ್ತಾರ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ನಡೆಯುವ ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿಯನ್ನು




ರಚಿಸಲಾಯಿತು. ಅಧ್ಯಕ್ಷರಾಗಿ ರಾಜೇಶ್ ರೈ ಮೇಗಿನಮನೆ, ಪ್ರಧಾನ ಕಾರ್ಯದರ್ಶಿಯಾಗಿ ರಮೇಶ್ ರೈ ಕ್ಯೊಲ ಅವರನ್ನು ಆಯ್ಕೆ ಮಾಡಲಾಯಿತು. ಗೌರವಾಧ್ಯಕ್ಷರಾಗಿ ಗಂಗಾಧರ ರೈ ಮೇಗಿನಮನೆ, ಉಪಾಧ್ಯಕ್ಷರಾಗಿ ರವೀಶ್ ಪಡುಮಲೆ, ಕೋಶಾಧಿಕಾರಿಯಾಗಿ ಗೋಪಾಲ ನಾಯ್ಕ ದೊಡ್ಡಡ್ಕ, ಸಂಚಾಲಕರಾಗಿ ಸತೀಶ್ ಗೌಡ ಉಳಿಗ, ಪ್ರಕಾಶ್ ಸಾಲಿಯಾನ್ ಕಟ್ಟಾವು, ಪುಷ್ಪರಾಜ್ ಆಳ್ವ ಗಿರಿಮನೆ, ಗೌರವ ಸಲಹೆಗಾರರಾಗಿ ಅಪ್ಪಯ್ಯ ನಾಯ್ಕ ತಲೆಂಜಿ, ಹರಿಪ್ರಸಾದ್ ರೈ ಪಟ್ಟೆ, ಅರವಿಂದ ಕನ್ನಯ, ದರ್ಭೆ, ವಿನಾಯ ಭಟ್ ನೂಚಿಲೋಟ್ ಅವರನ್ನು ಆಯ್ಕೆ ಮಾಡಲಾಯಿತು.

ಶ್ರೀ ಕೃಷ್ಣ ಜನ್ಮಾಷ್ಟಮಿ ಪೂರ್ವಭಾವಿ ಸಭೆ

ವಿಟ್ಲ: ಬಾಲಗೋಕುಲ ಸಮಿತಿ ವಿಟ್ಲ ಕ್ಷೇತ್ರ ಇದರ ಆಶ್ರಯದಲ್ಲಿ ನಡೆಯುವ ಶ್ರೀಕೃಷ್ಣ ಜನ್ಮಾಷ್ಟಮಿ ಆಚರಣೆ ಬಗ್ಗೆ ಪೂರ್ವಭಾವಿ ಸಭೆಯು ವಿಟ್ಲ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಸಭಾಭವನದಲ್ಲಿ ನಡೆಯಿತು. ಕೃಷ್ಣಯ್ಯ ಕೆ. ವಿಟ್ಲ ಅರಮನೆ, ಜಗನ್ನಾಥ ಕಾಸರಗೋಡು, ಗೌರವಾಧ್ಯಕ್ಷ ಹರೀಶ್ ಸಿ.ಎಚ್., ಅಧ್ಯಕ್ಷ ರಾಧಾಕೃಷ್ಣ ಕೂಡೂರು, ಕಾರ್ಯದರ್ಶಿ ಮಂಜುನಾಥ ಕಲ್ಲಕಟ್ಟ, ಕೋಶಾಧಿಕಾರಿ ಶಿಸಿರ್ ಅನಿಲಕಟ್ಟೆ, ದೇವಿಪ್ರಸಾದ್ ಶೆಟ್ಟಿ, ಜಗದೀಶ್ ಪಾಣೆಮಜಲೆ, ವಿಶ್ವನಾಥ ನಾಯ್ತೊಟ್ಟು, ಜಯಂತ ಕಡಂಬು, ವೀರಪ್ಪ ರಾಯರಬೆಟ್ಟು, ರಾಜೇಶ್ ಆರ್.ಕೆ., ರಮೇಶ್ ಉರಿಮಜಲು, ಪದ್ಮನಾಭ ಕಟ್ಟೆ ಮತ್ತಿತರರು ಉಪಸ್ಥಿತರಿದ್ದರು.

ಬೆಟ್ಟಂಪಾಡಿ ಒಕ್ಕೂಟದ ಪದಾಧಿಕಾರಿಗಳ ಆಯ್ಕೆ

ನಿಡ್ಪಳ್ಳಿ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ. ಟ್ರಸ್ಟ್ ಪುತ್ತೂರು ಬೆಟ್ಟಂಪಾಡಿ




ವಲಯದ ರೆಂಜ ಒಕ್ಕೂಟದ ತ್ರೈಮಾಸಿಕ ಸಭೆ ಅಧ್ಯಕ್ಷ ಬಾಲಕೃಷ್ಣ ಡಿ. ಅವರ ಅಧ್ಯಕ್ಷತೆಯಲ್ಲಿ ನಡೆದು ಒಕ್ಕೂಟಕ್ಕೆ ನೂತನ ಪದಾಕಾರಿಗಳನ್ನು ಆಯ್ಕೆ ಮಾಡಲಾಯಿತು. ನೂತನ ಅಧ್ಯಕ್ಷರಾಗಿ ಸೋಮಶೇಖರ ಉಡ್ಡಂಗಳ, ಉಪಾಧ್ಯಕ್ಷರಾಗಿ ಸವಿತಾ ಸಿ.ಎಚ್., ಕಾರ್ಯದರ್ಶಿಯಾಗಿ ಕುಸುಮ ಮಿತ್ತಡ್ಕ, ಜೊತೆ ಕಾರ್ಯದರ್ಶಿಯಾಗಿ ಗೀತಾ ಕರ್ನಪ್ಪಾಡಿ, ಕೋಶಾಕಾರಿಯಾಗಿ ವಿಶ್ವನಾಥ ಕೆ. ಅವರನ್ನು ಆಯ್ಕೆ ಮಾಡಲಾಯಿತು. ಸಭೆಯಲ್ಲಿ ಸೇವಾ ಪ್ರತಿನಿ ಜಗನ್ನಾಥ ಪಾಟಾಳಿ ಉಪಸ್ಥಿತರಿದ್ದರು. ಪ್ರೇಮಲತಾ ಕುವೆಂಜ ಕಾರ್ಯಕ್ರಮ ನಿರ್ವಹಿಸಿದರು.

ಇಂದು ವಿದ್ಯುತ್ ವ್ಯತ್ಯಯ

ಮಂಗಳೂರು: ಕಂಕನಾಡಿ ಉಪಕೇಂದ್ರದಿಂದ ಹೊರಡುವ ಮಿಷನ್ ಕಂಪೌಂಡ್ ಫೀಡರ್‌ನಲ್ಲಿ ಹಾಗೂ ಬಿಜೈ ಉಪಕೇಂದ್ರದಿಂದ ಹೊರಡುವ ಬಿಜೈ ಫೀಡರುಗಳಲ್ಲಿ ತುರ್ತು ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ಹೆಬಿಕ್ ಸ್ಕೂಲ್, ಬಲ್ಮಠ ನ್ಯೂ ರೋಡ್, ಎವರಿ ಜಂಕ್ಷನ್, ಶಾಂತಿ ನಿಲಯ, ಬಿಜೈ ನ್ಯೂರೋಡ್, ಸಂಕೈಗುಡ್ಡ, ಎಂಸಿಎಫ್ ಕಾಲನಿ, ಆನೆಗುಂಡಿ, ಬಿಜೈ ಚರ್ಚ್ ಬಿಜೈ ಮ್ಯೂಸಿಯಂ, ನೋಡುಲೇನ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದಿನಾಂಕ ಜೂ. 17ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ಕೆಡಿಪಿ ಸಭೆಯಲ್ಲಿ ತೋಟಗಾರಿಕೆ ಅಧಿಕಾರಿ ಮಾಹಿತಿ | ಮಾಪಕ ಕೆಟ್ಟುನಿಂತರೆ ಪಕ್ಕದ ಗ್ರಾಮದಲ್ಲಿ ಬ್ಯಾಕಪ್

ಬಂಟ್ವಾಳಕ್ಕೆ ಹೊಸ 16 ಹೊಸ ಮಳೆ ಮಾಪನ ಘಟಕ ಅನುಷ್ಠಾನ

ಬಂಟ್ವಾಳ: ತಾಲೂಕಿನಲ್ಲಿ 61 ಕಡೆಗಳಲ್ಲಿ ಮಳೆಮಾಪನ ಕೇಂದ್ರಗಳಿದ್ದು, 3 ಕಂಪೆನಿಗಳು ಅವುಗಳ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದು, ಪಿಡಿಒಗಳು ಅವುಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು. ಈಗ ಕಂದಾಯ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದು, ವಿಎಗಳು ಉಸ್ತುವಾರಿ ನೋಡುಕೊಳ್ಳುತ್ತಿದ್ದಾರೆ. 23 ಗ್ರಾ.ಪಂಗಳಲ್ಲಿರುವ ಮಳೆಮಾಪಕಗಳು ಸುಸ್ಥಿಯಲ್ಲಿದ್ದರೆ, 16 ಹೊಸ ಘಟಕಗಳನ್ನು ಅನುಷ್ಠಾನ ಮಾಡಲಾಗುತ್ತಿದೆ ಗ್ರಾ.ಪಂ.ಗಳಲ್ಲಿ ಮಳೆಮಾಪಕಗಳು ಕೆಟ್ಟು ಹೋದರೆ ಅದರ ಪಕ್ಕದ ಗ್ರಾಮಗಳಲ್ಲಿ ಬ್ಯಾಕಪ್‌ಗಳು ಇರಲಿದ್ದು, ಅಲ್ಲಿಂದ ಮಳೆಯ ಮಾಹಿತಿಗಳನ್ನು ಪಡೆಯಲು ಸಾಧ್ಯವಿದೆ ಎಂದು ತೋಟಗಾರಿಕಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಜೋ ಪ್ರದೀಪ್ ಡಿಸೋಜಾ ಹೇಳಿದರು.



ಅವರು ತಾ.ಪಂ. ಆಡಳಿತಾಧಿಕಾರಿ ಇಬ್ರಾಹಿಂ ದೊಡ್ಡಮನಿ ಅಧ್ಯಕ್ಷತೆಯಲ್ಲಿ ಬಿ.ಸಿ.ರೋಡಿನ ಎಸ್‌ಜೆಎಸ್‌ಆರ್‌ವೈ ಸಭಾಂಗಂಣದಲ್ಲಿ ಮಂಗಳವಾರ ನಡೆದ ತಾಲೂಕು ಮಟ್ಟದ ಕೆಡಿಪಿ ಸಭೆಯಲ್ಲಿ ಮಾಹಿತಿ ನೀಡಿದರು.

ಶಾಲೆಗಳ ದುರಸ್ತಿ ಬಾಕಿ

ಪ್ರಸ್ತುತ ಬಿ.ಸಿ.ರೊಡಿನಲ್ಲಿ ವಸತಿ ಶಾಲೆಯ ಜಮೀನನ್ನು ತಾ.ಪಂ.ನಿಂದ ಸಮಾಜ ಕಲ್ಯಾಣ ಇಲಾಖೆ ಹೆಸರಿಗೆ ಪರಿವರ್ತಿಸಿದ ಬಳಿಕ ಹೊಸ ಕಟ್ಟಡ ನಿರ್ಮಾಣದ ಕಾರ್ಯ ನಡೆಯಲಿದೆ ಎಂದುಇಲಾಖೆ ಸಹಾಯಕ ನಿರ್ದೇಶಕಿ ವಿನಯ ಕುಮಾರಿ ತಿಳಿಸಿದರು. ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಕಳೆದ ವರ್ಷ ಬಿಡುಗಡೆಯಾದ ಅನುದಾನಗಳಲ್ಲಿ ಕೆಲವೆಡೆ ಶಾಲೆಗಳ ದುರಸ್ತಿ ಕಾಮಗಾರಿ ಬಾಕಿ ಉಳಿದಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಾಲತಿ ಸಭೆಯ ಗಮನಕ್ಕೆ ತಂದರು.

ಈ ಸಂದರ್ಭ ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗದ ಎಇಇ ತಾರಾನಾಥ ಸಾಲ್ಯಾನ್ ಪ್ರತಿಕ್ರಿಯಿಸಿ, ಕಳೆದ ವರ್ಷದ ಎಲ್ಲಾ ಕಾಮಗಾರಿಗಳು ಪೂರ್ಣವಾಗಿದೆ ಎಂದು ಮಾಹಿತಿ ನೀಡಿದರು. ಶಿಕ್ಷಣ ಇಲಾಖೆಯ ಕಚೇರಿಗೆ ಡಾಟ ಎಂಟ್ರಿ, ಡಿ ಗ್ರೂಪ್ ಸಿಬ್ಬಂದಿಯ ನೇಮಕ ಪ್ರಕ್ರಿಯೆ ಬಗ್ಗೆ ಮರುನವೀಕರಣ ಎಂಬುದಾಗಿ ವರದಿ ನೀಡಿದ್ದೀರಿ, ಸಿಬ್ಬಂದಿ ಎಷ್ಟೇ ಉತ್ತಮವಾಗಿ ಕೆಲಸ ನಿರ್ವಹಿಸಿದ್ದರೂ ಇದು ಮರುಟೆಂಡರ್ ಆಗಬೇಕು ಎಂದು ಇಒ ಸಚಿನ್ ಕುಮಾರ್ ಶಿಕ್ಷಣಾಧಿಕಾರಿಗೆ ಸೂಚನೆ ನೀಡಿದರು.

> **ಸೌಜನ್ಯದಿಂದ ವರ್ತಿಸಿ**
>
> ಸಾರ್ವಜನಿಕರ ಜೊತೆ ಸೌಜನ್ಯದಿಂದ ವರ್ತಿಸಬೇಕು. ಸಾರ್ವಜನಿಕರಿಗೆ ಯಾವುದೇ ರೀತಿಯ ಕುಂದುಕೊರತೆಗಳು ಬಾರದ ರೀತಿಯಲ್ಲಿ ಅಕಾರಿಗಳು ಕರ್ತವ್ಯ ನಿರ್ವಹಿಸಬೇಕು ಎಂದು ಆಡಳಿತಾಧಿಕಾರಿ ಇಬ್ರಾಹಿಂ ದೊಡ್ಡಮಣಿ ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ನೇರ ಪಾವತಿಸಲು ಇಲ್ಲ ಅವಕಾಶ

ಕಳ್ಳಿಗೆ ಶಾಲೆಯ ಶಿಥಿಲಾವಸ್ಥೆಯ ಕಟ್ಟಡ ಕೆಡವಲು ಅನುಮತಿ ಕೋರಿ ಬರೆದಿರುವ ಪತ್ರಕ್ಕೆ ಇಒ ಪ್ರತಿಕ್ರಿಯಿಸಿ, ಈ ಬಗ್ಗೆ ಬಿಆರ್‌ಡಿಗೆ ಪ್ರಸ್ತಾವನೆಯನ್ನು ಕಳುಹಿಸಿ ಅಲ್ಲಿಂದ ತಾಂತ್ರಿಕ ಅಭಿಪ್ರಾಯ ಬಂದ ಬಳಿಕ ಸಾಮಾನ್ಯಸಭೆಯಲ್ಲಿ ಮಂಡಿಸಬೇಕು ಎಂದು ತಿಳಿಸಿದರು. ಮಣಿನಾಲ್ಕೂರು ಬಡಕೊಟ್ಟು ಸರಕಾರಿ ಶಾಲೆ, ವಿಟ್ಲ ಪಡ್ನೂರು ಕೊಡಂಗಾಯಿ ಶಾಲೆಯ ಮೇಲ್ಛಾವಣಿ ದುರಸ್ತಿ ಬಗ್ಗೆ ಬಿಇಒ ಸಭೆ ಗಮನ ಸೆಳೆದರು. ಸಾಮಾನ್ಯಸಭೆಯಲ್ಲಿ ಚರ್ಚೆಯಾಗದೆ ಯಾವುದೇ ವೆಚ್ಚಭರಿಸುವಂತಿಲ್ಲ, ಯಾವುದೇ ಖರೀದಿ ಅಥವಾ ಪಾವತಿಗಳಿದ್ದರೆ ಸಾಮಾನ್ಯಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಳ್ಳುವಂತೆ ಇಒ ಅಧಿಕಾರಿಗಳಿಗೆ ಸ್ಪಷ್ಟಪಡಿಸಿದರು.

ನಾದುಸ್ಥಿತಿಯಲ್ಲಿರುವ ಅಂಗನವಾಡಿ ಕೇಂದ್ರದಲ್ಲಿ ಮಕ್ಕಳನ್ನು ಕೂರಿಸದಂತೆ ಸಿಡಿಪಿಒಗಳಿಗೆ ಇಒ ಸಚ್ಚಿನ್ ಸೂಚಿಸಿದರು. ಫರಂಗಿಪೇಟೆ ಸೇವಾಂಜಲಿ ಪ್ರತಿಷ್ಠಾನದಂತೆ ಸ್ವಯಂ ಸೇವಾ ಸಂಘಟನೆಗಳು ಪೌಷ್ಟಿಕಾಹಾರದ ಕಿಟ್ ವಿತರಿಸುತ್ತಿದೆ. ಇಲಾಖೆ ವಿತರಿಸುತ್ತಿಲ್ಲ ಎಂದು ಆರೋಗ್ಯಾಧಿಕಾರಿ ಅಶೋಕ್ ಕುಮಾರ್ ರೈ ಮಾಹಿತಿ ನೀಡಿದರು. ಸುಮಾರು 1 ಸಾವಿರ ರೂ. ಮೊತ್ತದ ವಿವಿಧ ಆಹಾರಧಾನ್ಯಗಳನ್ನೊಳಗೊಂಡ ಕಿಟ್ ವಿತರಿಸಲಾಗುತ್ತಿದೆ. ಸೇವಾಂಜಲಿ ಸಂಸ್ಥೆ ಪ್ರತಿ ತಿಂಗಳು ಕಿಟ್ ವಿತರಣೆಯಲ್ಲಿ ಮುಂಚೂಣಿಯಲ್ಲಿದೆ ಎಂದರು.

ಸಹಾಕಾರ ಇಲಾಖೆ, ಸಾಮಾಜಿಕ ಅರಣ್ಯ ಇಲಾಖೆಯ ಅಧಿಕಾರಿಗಳು ಗೈರು ಹಾಜಾರಾಗಿದ್ದು, ಅವರಿಗೆ ನೋಟೀಸು ನೀಡುವಂತೆ ಇಒ ಸೂಚಿಸಿದರು.

ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿವಿಧ ಕಲಾಪ್ರಕಾರಗಳ ಉದ್ಘಾಟನೆ

ಯಕ್ಷಗಾನ ಸರ್ವಾಂಗ ಕಲೆ: ಮೋಹನ್ ಅಮ್ಮುಂಜೆ

ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯ 2026-27ರ ಶೈಕ್ಷಣಿಕ ವರ್ಷದ ವಿವಿಧ ಸಾಂಸ್ಕೃತಿಕ ಕಲಾಪ್ರಕಾರಗಳ ಉದ್ಘಾಟನಾ ಕಾರ್ಯಕ್ರಮ ಶಾಲೆಯ ವೇದವ್ಯಾಸ ಧ್ಯಾನಮಂದಿರದಲ್ಲಿ ನಡೆಯಿತು.

ಯಕ್ಷ ಗುರುಗಳು, ಕಟೀಲು ಮೇಳದ ಪ್ರಸಿದ್ಧ ಕಲಾವಿದ, 'ಯಕ್ಷ ದ್ಯುಮನಿ' ಪ್ರಶಸ್ತಿ ಪುರಸ್ಕೃತ ಮೋಹನ್ ಅಮ್ಮುಂಜೆ ಅವರು ಪ್ರಭು ಶ್ರೀರಾಮನ ಮೂರ್ತಿಗೆ ಕ್ಷೀರಾಭಿಷೇಕ ಮಾಡುವ ಮೂಲಕ ಸಂಗೀತ, ಭರತನಾಟ್ಯ, ಯಕ್ಷಗಾನ, ಚಿತ್ರಕಲೆ, ಕರಾಟೆ, ರೋಬೋಟಿಕ್-ಮಾಡೆಲಿಂಗ್ ಕಲೆಗಳನ್ನು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಅಕ್ಷರ ಯಾವತ್ತೂ ನಾಶವಿಲ್ಲದ ಸಂಪತ್ತಾಗಿದೆ. ಅಭಿನಯ, ಮಾತುಗಾರಿಕೆ, ನಾಟ್ಯ ಎಲ್ಲವನ್ನೂ ಒಳಗೊಂಡಿರುವ ಯಕ್ಷಗಾನ ಒಂದು ಸರ್ವಾಂಗ ಕಲೆಯಾಗಿದೆ. ಯಕ್ಷಗಾನ, ಭರತನಾಟ್ಯ, ಸಂಗೀತ ಒಂದಕ್ಕೊಂದು ಅವಿನಾಭಾವ ಸಂಬಂಧವನ್ನು ಹೊಂದಿದೆ ಎಂದರು.

ಯಕ್ಷಗಾನದಿಂದ ದೇಹಕ್ಕೆ ವ್ಯಾಯಾಮ, ಶುದ್ಧ ಕನ್ನಡ ಮಾತನಾಡಲು ಅವಕಾಶ ಹಾಗೂ ಪುರಾಣ ಪುಣ್ಯ ಪುರುಷರ ಪುಣ್ಯ ಕಥೆಗಳನ್ನು ತಿಳಿಸಿಕೊಡುತ್ತದೆ ಎಂದ ಅವರು, ಕಲಿಸಿಕೊಡುವುದಕ್ಕಿಂತಲೂ ಕಲಿಯುವ ಆಸಕ್ತಿ ಇರುವ ವಿದ್ಯಾರ್ಥಿಗಳು ಮತ್ತು ಕಲಾಪೋಷಕರ ಅಗತ್ಯವಿದೆ ಎಂದರು.



> - ಸಂಗೀತ, ಭರತನಾಟ್ಯ, ಯಕ್ಷಗಾನ, ಚಿತ್ರಕಲೆ, ಕರಾಟೆ, ರೋಬೋಟಿಕ್-ಮಾಡೆಲಿಂಗ್ ಕಲೆಗಳ ಉದ್ಘಾಟನೆ
> - ಶ್ರೀರಾಮನ ಮೂರ್ತಿಗೆ ಕ್ಷೀರಾಭಿಷೇಕ
> - ಯಕ್ಷಗಾನ, ಭರತನಾಟ್ಯ, ಸಂಗೀತ ಒಂದಕ್ಕೊಂದು ಅವಿನಾಭಾವ ಸಂಬಂಧ ಹೊಂದಿದೆ

ಇದಕ್ಕು ಮೊದಲು ದೀಪ ಪ್ರಜ್ವಲಿಸಿ ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿದರು. ವಿದ್ಯಾರ್ಥಿನಿಯರು ಸಮೂಹ ಗೀತೆ ಹಾಡಿದರು.

ಭರತನಾಟ್ಯ ಗುರುಗಳಾದ ವಿದ್ವಾನ್ ಬಿ. ಗಿರೀಶ್ ಮಾತನಾಡಿ, 'ಶ್ರೀರಾಮನೇ ನಮಗೆಲ್ಲರಿಗೂ ಆದರ್ಶ, ನಮ್ಮಲ್ಲಿ ರಾಮನ ತತ್ವಗಳನ್ನು ಅಳವಡಿಸಿಕೊಳ್ಳಬೇಕು. ಯಾವುದೇ ವಿದ್ಯೆಗೂ ಸತತ ಪರಿಶ್ರಮದ ಅಗತ್ಯವಿದೆ. ಶೈಕ್ಷಣಿಕ ಹಾಗೂ ಸಾಂಸ್ಕೃತಿಕದೊಂದಿಗೆ ಮಕ್ಕಳನ್ನು ಬೆಳೆಸುವ ಕಲೆ, ಪ್ರೋತ್ರಾಹದ ಗುರುಗಳಿಂದ ವಿದ್ಯಾರ್ಥಿಗಳಿಗೆ ಎಲ್ಲವೂ ಸಾಧ್ಯ ಎಂದು ತಿಳಿಸಿದರು.

ಸಂಗೀತ ಗುರುಗಳಾದ ವಿದ್ವಾನ್ ಕೃಷ್ಣ ಆಚಾರ್ಯ, ಮುಖ್ಯೋಪಾಧ್ಯಾಯರಾದ ರವಿರಾಜ್ ಕಣಂತೂರು ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಸಾನ್ವಿ ಸನಿಲ್ ಸ್ವಾಗತಿಸಿ, ಸದ್ವಿ ಕಾರ್ಯಕ್ರಮ ನಿರೂಪಿಸಿದಳು. ಸ್ಕಂದತೇಜ ವಂದಿಸಿದರು.

ದಿ. ಬಾಲಕೃಷ್ಣ ಗಟ್ಟಿ ಶಿಕ್ಷಣ, ಪತ್ರಿಕೋದ್ಯಮದ ಜೊತೆಗೆ ಸಾಹಿತ್ಯ ಕ್ಷೇತ್ರಕ್ಕೂ ತಮ್ಮದೇ ಆದ ಕೊಡುಗೆ ನೀಡಿದವರು

ಮಂಗಳೂರು: ಹಿರಿಯ ಪತ್ರಕರ್ತ ಪ್ರೊ.ಬಾಲಕೃಷ್ಣ ಗಟ್ಟಿ ಅವರ ನಿಧನಕ್ಕೆ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಮಂಗಳೂರು ಪ್ರೆಸ್ ಕ್ಲಬ್ ಹಾಗೂ ಪತ್ರಿಕಾ ಭವನ ಟ್ರಸ್ಟ್ ವತಿಯಿಂದ ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ಸಂತಾಪ ಸೂಚಕ ಸಭೆ ನಡೆಸಿ ನುಡಿನಮನ ಸಲ್ಲಿಸಲಾಯಿತು.



ಹಿರಿಯ ಪತ್ರಕರ್ತ ಚಿದಂಬರ ಬೈಕಂಪಾಡಿ ಮಾತನಾಡಿ, ಬಾಲಕೃಷ್ಣ ಗಟ್ಟಿ ಅವರು ಶಿಕ್ಷಣ, ಪತ್ರಿಕೋದ್ಯಮದ ಜೊತೆಗೆ ಸಾಹಿತ್ಯ ಕ್ಷೇತ್ರಕ್ಕೂ ತಮ್ಮದೇ ಆದ ಕೊಡುಗೆ ನೀಡಿದವರು ಎಂದು ಅವರ ಜೊತೆಗಿನ ಅನುಭವ ಹಂಚಿಕೊಂಡು ನುಡಿನಮನ ಸಲ್ಲಿಸಿದರು.

ಹಿರಿಯ ಪತ್ರಕರ್ತ ಆನಂದ ಶೆಟ್ಟಿ ಮಾತನಾಡಿ, ಬಾಲಕೃಷ್ಣ ಗಟ್ಟಿಯವರು ಪತ್ರಕರ್ತರ ಸಂಘಟನೆ ತಳ ಮಟ್ಟದಲ್ಲೂ ಬೆಳೆಯಬೇಕು ಎಂದು ಆಶಯ ಹೊಂದಿದ್ದರು ಎಂದರು.

ಸಮಾಜ ಗುರುತಿಸುವ ಸಾಧನೆ

ಕರ್ನಾಟಕ ರಾಜ್ಯ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಮಾತನಾಡಿ, ಬಾಲಕೃಷ್ಣ ಗಟ್ಟಿ ಅವರು ಪತ್ರಿಕೋದ್ಯಮದ ಜೊತೆಗೆ ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಕರ್ತವ್ಯ ನಿಷ್ಠೆಯಿಂದ ಸಾಕಷ್ಟು ಶಿಷ್ಯರನ್ನು ಪಡೆದುಕೊಂಡಿದ್ದಾರೆ. ಸಂಖ್ಯೆಯಲ್ಲಿ ಒಂದು ಸಣ್ಣ ಸಮುದಾಯದ ಮೂಲಕ ಸಮಾಜ ಗುರುತಿಸುವಂತಹ ಸಾಧನೆಯನ್ನು ತಮ್ಮ ಸ್ವ ಪ್ರಯತ್ನದ ಮೂಲಕ ಮಾಡಿದವರು ಎಂದರು.

ದ.ಕ. ಜಿಲ್ಲಾ ವಾರ್ತಾಧಿಕಾರಿ ಖಾದರ್ ಶಾ ಮಾತನಾಡಿ, ಬಾಲಕೃಷ್ಣ ಗಟ್ಟಿ ಯವರು ಮಾಡಿದ ಸಾಧನೆಗೆ ಸಾಕಷ್ಟು ಪ್ರಶಸ್ತಿಗಳು ಅವರಿಗೆ ದೊರೆಯಬೇಕಿತ್ತು. ಆದರೆ ಅವರು ಪ್ರಶಸ್ತಿಗಳ ಹಿಂದೆ ಹೋಗದ ಸ್ವಾಭಿಮಾನಿಯಾಗಿದ್ದರು ಎಂದರು.

ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ. ಹರೀಶ್ ರೈ, ಹಿರಿಯ ಪತ್ರಕರ್ತರಾದ ಯಶವಂತ ಬೋಳೂರು, ನಂದಗೋಪಾಲ್, ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀನಿವಾಸ ನಾಯಕ್ ಇಂದಾಜೆ, ಬಾಲಕೃಷ್ಣ ಗಟ್ಟಿಯವರ ಒಡನಾಡಿಗಳಾಗಿದ್ದ ಡೊನಾಲ್ಡ್ ಪಿರೇರಾ, ಬಶೀರ್, ಪತ್ರಕರ್ತ ಭಾಸ್ಕರ ರೈ ಕಟ್ಟ ನುಡಿನಮನ ಸಲ್ಲಿಸಿದರು.

ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್. ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ರಾಜೇಶ್ ಕೆ. ಪೂಜಾರಿ, ಉಪಾಧ್ಯಕ್ಷ ಆರಿಫ್ ಪಡುಬಿದ್ರೆ, ಕೋಶಾಧಿಕಾರಿ ವಿಜಯ ಕೋಟ್ಯಾನ್, ಕಾರ್ಯದರ್ಶಿ ಸುರೇಶ್ ಡಿ. ಪಳ್ಳಿ, ಕಾರ್ಯಕಾರಿ ಸಮಿತಿ ಸದಸ್ಯ ಸಂದೀಪ್ ಕುಮಾರ್, ಮಂಗಳೂರು ಪ್ರೆಸ್ ಕ್ಲಬ್‌ನ ಪ್ರಧಾನ ಕಾರ್ಯದರ್ಶಿ ಇಬ್ರಾಹಿಂ ಅಡ್ಕಸ್ಥಳ, ಬಾಲಕೃಷ್ಣ ಗಟ್ಟಿಯವರ ಪುತ್ರ ಸುಕುಮಾರ ಗಟ್ಟಿ, ಅಳಿಯ ಯಶವಂತ ಗಟ್ಟಿ, ಕುಟುಂಬದ ಸದಸ್ಯರಾದ ಪದ್ಮನಾಭ ಗಟ್ಟಿ ಉಪಸ್ಥಿತರಿದ್ದರು.

ತಿರುವೈಲಿನ ಅಮೃತನಗರದ ಪೌರ ಸಮಿತಿಯ ವಾರ್ಷಿಕ ಮಹಾಸಭೆ



ಕೈಕಂಬ: ವಾಮಂಜೂರು ತಿರುವೈಲಿನ ಅಮೃತನಗರದ ಪೌರ ಸಮಿತಿಯ ವಾರ್ಷಿಕ ಮಹಾಸಭೆ ಖಾಸಗಿ ಸಭಾಂಗಣದಲ್ಲಿ ಸಮಿತಿ ಅಧ್ಯಕ್ಷ ಬಾಲಕೃಷ್ಣ ಎಂ. ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಮಿತಿ ವ್ಯಾಪ್ತಿ ಪ್ರದೇಶದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಅತ್ಯಧಿಕ ಅಂಕ ಗಳಿಸಿ 10 ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಅಭಿನಂದಿಸಲಾಯಿತು. 4 ಅಶಕ್ತ ಕುಟುಂಬಗಳಿಗೆ ಆರ್ಥಿಕ ನೆರವು ನೀಡಲಾಯಿತು. ಕಾರ್ಯಕ್ರಮಕ್ಕೆ ಸಹಕರಿಸಿದ ದಾನಿಗಳನ್ನು ಗೌರವಿಸಲಾಯಿತು.

ಅಮೃತನಗರದ ಕೆಲವೆಡೆ ಸಮರ್ಪಕ ಚರಂಡಿ ಇಲ್ಲದೆ ಮಳೆ ನೀರು ಮನೆಗೆ ನುಗ್ಗಿದೆ, ಅಪಾಯಕಾರಿಯಾಗಿ ವಾಲಿರುವ ವಿದ್ಯುತ್ ಕಂಬ ಬದಲಿಸಬೇಕು, ಮಂಗಳೂರು-ತಿರುವೈಲು ಪ್ರದೇಶ ಸಂಪರ್ಕಕ್ಕೆ ಸರ್ಕಾರಿ ಬಸ್ ಟ್ರಿಪ್ ಹೆಚ್ಚಿಸಬೇಕು ಮತ್ತು ಇನ್ನೆರಡು ಹೊಸ ಬಸ್ ವ್ಯವಸ್ಥೆ ಮಾಡಬೇಕು, ಸಮರ್ಪಕವಾಗಿ ಕಸ ವಿಲೇವಾರಿ ಆಗುತ್ತಿಲ್ಲ, ಕೆಲವು ಬೀದಿ ದೀಪಗಳು ಉರಿಯುತ್ತಿಲ್ಲ ಎಂದು ಕೆಲವು ಸದಸ್ಯರು ಸಮಿತಿ ಗಮನಸೆಳೆದರು.

ಸಮಿತಿ ಅಧ್ಯಕ್ಷ ಬಾಲಕೃಷ್ಣ ಎಂ. ಮಾತನಾಡಿದರು.

ಪೌರ ಸಮಿತಿ ಗೌರವಾಧ್ಯಕ್ಷ ವಿಠಲ್ ಸಾಲ್ಯಾನ್, ಅಧ್ಯಕ್ಷ ಬಾಲಕೃಷ್ಣ ಎಂ, ಪ್ರಧಾನ ಕಾರ್ಯದರ್ಶಿ ಸುಧಾಕರ ಕಾರಂತ ಉಪಸ್ಥಿತರಿದ್ದರು. ಪ್ರಧಾನ ಕಾರ್ಯದರ್ಶಿ ಸುಧಾಕರ ಕಾರಂತ ವರದಿ ವಾಚಿಸಿದರು. ಉಪಾಧ್ಯಕ್ಷ ರಾಜಕುಮಾರ್ ಶೆಟ್ಟಿ ಸ್ವಾಗತಿಸಿ, ಪ್ರಸ್ತಾವಿಸಿದರು. ಕೋಶಾಧಿಕಾರಿ ಲೋಕೇಶ್ ಲೆಕ್ಕಪತ್ರ ಮಂಡಿಸಿದರು. ಡಾ. ರಮಾನಂದ ಕಾರ್ಯಕ್ರಮ ನಿರೂಪಿಸಿದರು. ಲಕ್ಷ್ಮಣ್ ಶೆಟ್ಟಿಗಾರ್ ವಂದಿಸಿದರು.

ರುಡ್‌ಸೆಟ್ ಕೃಷಿ ಉದ್ಯಮಿ ಕೋಳಿ ಸಾಕಾಣಿಕೆ ತರಬೇತಿ ಸಮಾರೋಪ



ಬೆಳ್ತಂಗಡಿ: ಕೃಷಿಯು ಪ್ರತಿಯೊಬ್ಬರ ಜೀವನದಲ್ಲಿ ಅವಿಭಾಜ್ಯ ಅಂಗವಾಗಿದ್ದು ಕೃಷಿಯೊಂದಿಗೆ ಪೂರಕ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಉತ್ತಮ ಆದಾಯ ಗಳಿಸಲು ಸಾಧ್ಯ. ಸತತವಾದ ಪ್ರಯತ್ನದೊಂದಿಗೆ ಮುಂದುವರಿಯಿರಿ, ಜಮೀನಿನಲ್ಲಿ ಸಾಧ್ಯವಾದಷ್ಟು ವಿವಿಧ ಕೃಷಿಗಳನ್ನು ಅಳವಡಿಸಿಕೊಳ್ಳಬೇಕು ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೃಷಿ ಪ್ರಾದೇಶಿಕ ನಿರ್ದೇಶಕ ಮನೋಜ್ ಮಿನೇಜಸ್ ಅವರು ಅಭಿಪ್ರಾಯಪಟ್ಟರು.

ಅವರು ರುಡ್‌ಸೆಟ್ ಸಂಸ್ಥೆ ಸಿದ್ಧವನ, ಉಜಿರೆ ವತಿಯಿಂದ ಆಯೋಜಿಸಲಾದ 'ಕೃಷಿ ಉದ್ಯಮಿ ಕೋಳಿ ಸಾಕಾಣಿಕೆ ತರಬೇತಿ' ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಿ ಮಾತನಾಡಿದರು.

ಯಶಸ್ವಿ ಉದ್ಯಮಿಯಾಗಿ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರುಡ್‌ಸೆಟ್ ಕಾರ್ಯನಿರ್ವಾಹಕ ನಿರ್ದೇಶಕ ವಿಜಯ್ ಕುಮಾರ್ ಅವರು ಮಾತನಾಡಿ, ತರಬೇತಿಯ ಮೂಲಕ ಪಡೆದ ಜ್ಞಾನ ಹಾಗೂ ಕೌಶಲ್ಯಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಯಶಸ್ವಿ ಉದ್ಯಮಿಗಳಾಗಿ ಬೆಳೆಯಬೇಕು ಎಂದು ಹೇಳಿದರು.

ಸಂಸ್ಥೆಯ ಹಿರಿಯ ಉಪನ್ಯಾಸಕರಾದ ಅಬ್ರಾಹಂ ಜೇಮ್ಸ್ ಸ್ವಾಗತಿಸಿದರು. ಕಾರ್ಯಕ್ರಮವನ್ನು ಸಂಸ್ಥೆಯ ಹಿರಿಯ ಉಪನ್ಯಾಸಕ ಕರುಣಾಕರ್ ಕೆ ಜೈನ್ ಅವರು ನಿರೂಪಿಸಿದರು. ಈ ಸಂದರ್ಭದಲ್ಲಿ ಶಿಬಿರಾರ್ಥಿಗಳಾದ ಗುರುರಾಜ್, ಜೇಮ್ಸ್ ಹಾಗೂ ಹೇಮಾವತಿ ಅವರು ತಮ್ಮ ತರಬೇತಿಯ ಅನುಭವಗಳನ್ನು ಹಂಚಿಕೊಂಡರು.



ಉಳ್ಳಾಲ ತಾಲೂಕಿನ ಕೋಟೆಕಾರು ಪಟ್ಟಣ ಪಂಚಾಯತ್ ವ್ಯಾಪ್ತಿಯ ಸಾರ್ವಜನಿಕರ ಅನುಕೂಲಕ್ಕಾಗಿ ಜೂ.15ರಂದು ಕುಡಿಯುವ ನೀರಿನ ಬಿಲ್ ಪಾವತಿಯ ಸ್ಕ್ಯಾನರ್ ವ್ಯವಸ್ಥೆಯನ್ನು ಅಧಿಕೃತವಾಗಿ ಬಿಡುಗಡೆಗೊಳಿಸಲಾಯಿತು. ಅಧ್ಯಕ್ಷೆ ದಿವ್ಯ ಸತೀಶ್ ಶೆಟ್ಟಿ, ಉಪಾಧ್ಯಕ್ಷ ಪ್ರವೀಣ್ ಐ. ಬಗಂಬಿಲ, ಮುಖ್ಯಾಧಿಕಾರಿ, ಕಿರಿಯ ಅಭಿಯಂತರರು, ಮೆ| ಪ್ರಸನ್ನ ಟೆಕ್ನಾಲಜಿ ಅಧಿಕಾರಿ, ಸಿಬ್ಬಂದಿ ಇದ್ದರು.




ಪುರುಷೋತ್ತಮ ಮಾಸದ ಪ್ರಯುಕ್ತ ಮುಲ್ಕಿ ಸಮೀಪದ ಹಳೆಯಂಗಡಿಯ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಶ್ರೀ ವಿಠೋಭ ಭಜನಾ ಮಂದಿರದಲ್ಲಿ ನಿರಂತರ ಭಜನಾ ಕಾರ್ಯಕ್ರಮ ನಡೆಯಿತು. ಮಂಗಳೂರಿನ ವಿದ್ವಾನ್ ತಾರಾನಾಥ ಜೋಷಿ ಇವರಿಂದ ಸಿತಾರ್ ವಾದನದ ಸೇವೆ ಜರಗಿತು. ಗುರುದಾಸ್ ಚೊರ್ಯ ಇವರು ತಬಲದಲ್ಲಿ ಸಾಥ್ ನೀಡಿದರು.

ಗ್ರಾಹಕರ ಅಭೂತಪೂರ್ವ ಪ್ರತಿಕ್ರಿಯೆಯಿಂದಾಗಿ ಯಶಸ್ವಿಯಾಗಿ ಸಂಪನ್ನ | ಸಂಸ್ಥೆ ಬಗ್ಗೆ ವಿಶೇಷ ಅಭಿಮಾನ ಜತೆ ವಿಶ್ವಾಸವಿದೆ: ನಡುಬೈಲು

ಪುತ್ತೂರು ಮುಳಿಯ ಗೋಲ್ಡ್ ಎಂಡ್ ಡೈಮಂಡ್‌ನ ಡೈಮಂಡ್ ಫೆಸ್ಟ್ ಲಕ್ಕಿ ಡ್ರಾ

ಪುತ್ತೂರು: ಮುಳಿಯ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಪುತ್ತೂರು ಹಾಗೂ ಬೆಳ್ತಂಗಡಿ ಶೋರೂಂಗಳ ವತಿಯಿಂದ ಆಯೋಜಿಸಲಾದ ಡೈಮಂಡ್ ಫೆಸ್ಟ್ ಅಂಗವಾಗಿ ಪುತ್ತೂರು ಶೋರೂಂನಲ್ಲಿ ಲಕ್ಕಿ ಡ್ರಾ ಕಾರ್ಯಕ್ರಮ ನಡೆಯಿತು.

ಮಾ. 28ರಿಂದ ಮೇ 10ರವರೆಗೆ ನಡೆದ ಡೈಮಂಡ್ ಫೆಸ್ಟ್ ಅವಧಿಯಲ್ಲಿ ವಜ್ರಾಭರಣಗಳನ್ನು ಖರೀದಿಸಿದ ಗ್ರಾಹಕರಿಗೆ ಲಕ್ಕಿ ಡ್ರಾ ಕೂಪನ್‌ಗಳನ್ನು ವಿತರಿಸಲಾಗಿದ್ದು ಅವುಗಳಲ್ಲಿ ಆಯ್ಕೆಯಾದ ಅದೃಷ್ಟಶಾಲಿ ವಿಜೇತರಿಗೆ ಆಕರ್ಷಕ ಬಹುಮಾನಗಳನ್ನು ಘೋಷಿಸಲಾಗಿತ್ತು. ಗ್ರಾಹಕರಿಂದ ದೊರೆತ ಅಭೂತಪೂರ್ವ ಪ್ರತಿಕ್ರಿಯೆಯಿಂದ ಡೈಮಂಡ್ ಫೆಸ್ಟ್ ಯಶಸ್ವಿಯಾಗಿ ಸಂಪನ್ನಗೊಂಡಿತು.



ಲಕ್ಕಿ ಡ್ರಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಲಕ್ಕಿ ಡ್ರಾ ನಡೆಸಿ ವಿಜೇತರನ್ನು ಆಯ್ಕೆ ಮಾಡಿದ ಪುತ್ತೂರು ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಜಯಂತ್ ನಡುಬೈಲು ಮಾತನಾಡಿ, ನಂಬಿಕೆಗೆ ಇನ್ನೊಂದು ಹೆಸರೇ ಮುಳಿಯವಾಗಿದ್ದು, ಹೀಗಾಗಿ ನಮಗೆ ಸಂಸ್ಥೆಯ ಬಗ್ಗೆ ವಿಶೇಷ ಅಭಿಮಾನದ ಜತೆಗೆ ವಿಶ್ವಾಸವಿದೆ ಎಂದರು.

ಮುಳಿಯ ಗೋಲ್ಡ್ ಎಂಡ್ ಡೈಮಂಡ್ಸ್‌ನ ಆಡಳಿತ ನಿರ್ದೇಶಕ ಕೃಷ್ಣನಾರಾಯಣ ಮುಳಿಯ ಮಾತನಾಡಿ, ನಮ್ಮ ಸಂಸ್ಥೆಯ ಮೇಲೆ ಗ್ರಾಹಕರು ಇಟ್ಟಿರುವ ವಿಶ್ವಾಸ ಮತ್ತು ಪ್ರೀತಿಯೇ ನಮ್ಮ ಬೆಳವಣಿಗೆಯ ಮೂಲಾಧಾರ. ಗ್ರಾಹಕರಿಗೆ ಉತ್ತಮ ಗುಣಮಟ್ಟದ ಆಭರಣಗಳ ಜತೆಗೆ ವಿಶೇಷ ಖರೀದಿ ಅನುಭವವನ್ನು ನೀಡುವ ಉದ್ದೇಶದಿಂದ ಡೈಮಂಡ್ ಫೆಸ್ಟ್ ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಉತ್ತಮ ಸ್ಪಂದನೆ ನೀಡಿದ ಎಲ್ಲಾ ಗ್ರಾಹಕರಿಗೆ ನಾವು ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇವೆ ಎಂದರು.

> **ವಿಜೇತ ಗ್ರಾಹಕರು**
>
> ಲಕ್ಕಿ ಡ್ರಾದ ಬಂಪರ್ ಬಹುಮಾನವಾದ ಇವಿ ಸ್ಕೂಟರನ್ನು ರಕ್ಷಿತಾ ಪೂಜಾರಿ ಗೆದ್ದುಕೊಂಡರು. ಜತೆಗೆ ಜಾನ್ವಿ ಮನೀಶಿ ಕೊಂಬೆಟ್ಟು ಹಾಗೂ ಅನುಷಾ ವೈ. ಕಾಶಿಬೆಟ್ಟು ಅವರು ಇತರೆ ಪ್ರಮುಖ ಬಹುಮಾನಗಳನ್ನು ಪಡೆದುಕೊಂಡರು.

ಪುತ್ತೂರು ಶಾಖಾ ಪ್ರಬಂಧಕ ರಾಘವೇಂದ್ರ ಪಟೇಲ್ ಮತ್ತು ಬೆಳ್ತಂಗಡಿ ಶಾಖಾ ಪ್ರಬಂಧಕ ಲೋಹಿತ್ ಕುಮಾರ್ ಉಪಸ್ಥಿತರಿದ್ದರು.

ಈ ಸಂದರ್ಭ ವಜ್ರಾಭರಣಗಳ ವಿಶೇಷತೆ, ಗುಣಮಟ್ಟ ಹಾಗೂ ಅವುಗಳ ಮೌಲ್ಯದ ಕುರಿತು ವೇಣು ಶರ್ಮಾ ಅವರು ಪ್ರಶೋತ್ತರ ರೂಪದಲ್ಲಿ ಗ್ರಾಹಕರಿಗೆ ಉಪಯುಕ್ತ ಮಾಹಿತಿ ನೀಡಿದರು. ಡೈಮಂಡ್ ಫೆಸ್ಟ್‌ನಲ್ಲಿ ಭಾಗವಹಿಸಿದ ಎಲ್ಲ ಗ್ರಾಹಕರಿಗೂ, ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಸಿಬಂದಿ ವರ್ಗಕ್ಕೂ ಸಂಸ್ಥೆಯ ವತಿಯಿಂದ ಕೃತಜ್ಞತೆ ಅರ್ಪಿಸಲಾಯಿತು. ಪುತ್ತೂರು ಶಾಖಾ ಪ್ರಬಂಧಕ ರಾಘವೇಂದ್ರ ಪಟೇಲ್ ಸ್ವಾಗತಿಸಿ, ಆನಂದ್ ಕುಲಾಲ್ ವಂದಿಸಿದರು. ಮೃದುಲ ನಿರ್ವಹಿಸಿದರು.

ನಿರಂತರ ಸುದ್ದಿ ಅಪ್‌ಡೇಟ್‌ಗಾಗಿ
Google Lens ನಲ್ಲಿ
ಈ QRಕೋಡ್ ಸ್ಕ್ಯಾನ್ ಮಾಡಿ
WhatsApp ಗ್ರೂಪ್ ಇಂದೇ ಸೇರಿ!

ನಿಮ್ಮೂರಿನ ಸುದ್ದಿ

ಹೊಸದಿಗಂತ ಸಂಗಮ 3

ಬುಧವಾರ 17, ಜೂನ್ 2026 | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಪುಟ ಸಂಖ್ಯೆ

ಸುತ್ತಮುತ್ತ

ಸರ್ಕಾರಿ ಕೆಲಸ ಕೊಡಿಸುವ ನೆಪದಲ್ಲಿ ಯುವತಿಗೆ ವಂಚನೆ

ಉಡುಪಿ: ಯುವತಿಯೊಬ್ಬಳಿಗೆ ಸರ್ಕಾರಿ ಕೆಲಸ ಕೊಡಿಸುವುದಾಗಿ ನಂಬಿಸಿ ಬರೋಬ್ಬರಿ 10.83 ಲಕ್ಷ ರೂಪಾಯಿ ಹಣ ಪಡೆದು, ಕೆಲಸವನ್ನೂ ಕೊಡಿಸದೆ, ಹಣವನ್ನೂ ವಾಪಸ್ ನೀಡದೆ ವಂಚಿಸಿದ ಕುರಿತು ಕೋಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬ್ರಹ್ಮಾವರ ತಾಲೂಕಿನ ಐರೋಡಿ ಗ್ರಾಮದ ಎಸ್. ವರ್ಷಾ (23) ಎಂಬವರು ವಂಚನೆಗೊಳಗಾದ ಯುವತಿ. ಆರೋಪಿ ಅಭಿಷೇಕ್ ಎಂಬಾತ ವರ್ಷಾ ಅವರಿಗೆ ಸರ್ಕಾರಿ ಕೆಲಸದ ಆಮಿಷ ಒಡ್ಡಿದ್ದು, ಇದನ್ನು ನಂಬಿದ ವರ್ಷಾ ಅವರು 2025ರ ಅಕ್ಟೋಬರ್ 31ರಿಂದ 2026ರ ಮೇ 28ರ ವರೆಗಿನ ಅವಧಿಯಲ್ಲಿ ತಮ್ಮ ಬ್ಯಾಂಕ್ ಖಾತೆ ಹಾಗೂ ಫೋನ್ ಪೇ, ಗೂಗಲ್ ಪೇ ಮುಖಾಂತರ ಹಂತಹಂತವಾಗಿ ಒಟ್ಟು 10,83,000 ರೂಪಾಯಿ ಹಣವನ್ನು ಆರೋಪಿಯ ಖಾತೆಗೆ ವರ್ಗಾಯಿಸಿದ್ದರು. ಆದರೆ ಹಣ ಪಡೆದ ಆರೋಪಿ ಕೆಲಸ ಕೊಡಿಸದೆ ವಂಚಿಸಿದ್ದಾನೆ. ಇದರಿಂದ ಬೇಸತ್ತ ವರ್ಷಾ ಅವರು 'ಕೆಲಸ ಕೊಡಿಸು ಇಲ್ಲವೇ ನನ್ನ ಹಣ ವಾಪಸ್ ಕೊಡು' ಎಂದು ಕೇಳಿದ್ದಕ್ಕೆ, ಆರೋಪಿ ಅಭಿಷೇಕ್ ಆಕೆಗೆ ಅವಾಚ್ಯ ಶಬ್ದಗಳಿಂದ ಬೈದು, ಕೊಲೆ ಮಾಡುವುದಾಗಿ ಜೀವ ಬೆದರಿಕೆ ಹಾಕಿದ್ದಾನೆ. ಈ ಕುರಿತು ಸಂತ್ರಸ್ತ ಯುವತಿ ನೀಡಿದ ದೂರಿನಂತೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಲಾರಿ ಡಿಕ್ಕಿ: ಸವಾರನಿಗೆ ಗಂಭೀರ ಗಾಯ

ಉಡುಪಿ: ಕಾರ್ಕಳ-ಧರ್ಮಸ್ಥಳ ರಾಜ್ಯ ಹೆದ್ದಾರಿಯ ಈದು ಗ್ರಾಮದ ಪೊಲೀಸ್ ಚೆಕ್‌ಪೋಸ್ಟ್ ಬಳಿಯ ಓಮಿನಿ ಕ್ರಾಸ್ ಎಂಬಲ್ಲಿ ಕಂಟೈನರ್ ಲಾರಿಯೊಂದು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಗಂಭೀರವಾಗಿ ಗಾಯಗೊಂಡ ಘಟನೆ ಸಂಭವಿಸಿದೆ. ಈದು ಗ್ರಾಮದ ನಿವಾಸಿ ರೋಹಿತ್ ಗಾಯಗೊಂಡ ಸವಾರ. ರೋಹಿತ್ ಅವರು ಉಜಿರೆಯಲ್ಲಿ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದು ಜೂನ್ 15ರಂದು ರಾತ್ರಿ 8.15ರ ಸುಮಾರಿಗೆ ಕೆಲಸ ಮುಗಿಸಿ ತಮ್ಮ ಬೈಕ್‌ನಲ್ಲಿ ಉಜಿರೆಯಿಂದ ಈದು ಕಡೆಗೆ ವಾಪಸ್ ಬರುತ್ತಿದ್ದರು. ಓಮಿನಿ ಕ್ರಾಸ್ ತಲುಪಿದಾಗ, ಕಾರ್ಕಳ ಕಡೆಯಿಂದ ನಾರಾವಿ ಕಡೆಗೆ ಅತಿ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗುತ್ತಿದ್ದ ಕಂಟೈನರ್ ಲಾರಿಯ ಚಾಲಕ ವಸಂತ ನಾಯಕ್ ಎಂಬಾತ ರೋಹಿತ್ ಅವರ ಬೈಕ್‌ಗೆ ಜೋರಾಗಿ ಡಿಕ್ಕಿ ಹೊಡೆದಿದ್ದಾನೆ. ಅಪಘಾತದ ರಭಸಕ್ಕೆ ರೋಹಿತ್ ಅವರ ಬಲಗಾಲಿಗೆ ತೀವ್ರ ರಕ್ತಗಾಯವಾಗಿದ್ದು ಸೊಂಟ ಮತ್ತು ತಲೆ ಭಾಗದಲ್ಲಿ ಗಂಭೀರ ಗಾಯಗಳಾಗಿವೆ. ಅವರನ್ನು ಮೂಡುಬಿದ್ರೆಯ ಆಳ್ವಾಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್ ಸ್ಕಿಡ್: ಸಹ ಸವಾರಗೆ ಗಾಯ

ಉಡುಪಿ: ರಾಷ್ಟ್ರೀಯ ಹೆದ್ದಾರಿ 169ರ ಓಂತಿಬೆಟ್ಟು ಆಶ್ರಯ ಹೋಟೆಲ್ ಸಮೀಪ ರಸ್ತೆಗೆ ಒಮ್ಮೆಲೇ ಬೀಡಾಡಿ ದನವೊಂದು ಅಡ್ಡ ಬಂದ ಕಾರಣ, ಅದನ್ನು ತಪ್ಪಿಸಲು ಬ್ರೇಕ್ ಹಾಕಿದಾಗ ಬೈಕ್ ಸ್ಕಿಡ್ ಆಗಿ ಬಿದ್ದ ಪರಿಣಾಮ ಸಹಸವಾರನ ತಲೆಗೆ ಗಂಭೀರ ಗಾಯವಾಗಿ ಆಸ್ಪತ್ರೆಗೆ ದಾಖಲಾದ ಘಟನೆ ನಡೆದಿದೆ. ಉಡುಪಿ ತಾಲೂಕಿನ ಕುಕ್ಕೆಹಳ್ಳಿ ನಿವಾಸಿ ಮಿಶಾಲ್ ಅಹಮ್ಮದ್ (19) ಗಾಯಗೊಂಡ ಯುವಕ. ಅವರನ್ನು ಮಣಿಪಾಲ ಕೆ.ಎಂ.ಸಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ತಲೆಯ ನಾಯಕ್ಕೆ ತುರ್ತು ಶಸ್ತ್ರಚಿಕಿತ್ಸೆ ಮಾಡಲಾಗಿದ್ದು ಹಿರಿಯಡ್ಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಳಿನೆಲೆ: ಅಪಪ್ರಚಾರ; ಮಜ್ಜಾರು ಕ್ಷೇತ್ರದಲ್ಲಿ ಆಣೆ

ಕಡಬ: ಬಿಳಿನೆಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಹೊಸ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯ ನೇಮಕದ ವಿಚಾರದಲ್ಲಿ ಅವ್ಯವಹಾರ ನಡೆದಿದೆ ಎಂದು ಕೆಲವು ಕಿಡಿಗೇಡಿಗಳು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳನ್ನು ಹರಡಿದ್ದು ಅಪಪ್ರಚಾರ ನಡೆಸುತ್ತಿರುವವರು ತಪ್ಪೊಪ್ಪಿಕೊಂಡು ಸತ್ಯ ವಿಚಾರವನ್ನು ಜನರ ಮುಂದಿಡುವಂತಾಗಬೇಕು ಎಂದು ಸಂಘದ ಆಡಳಿತ ಮಂಡಳಿಯ ಕಡಬದ ಕೋಡಿಂಬಾಳ ಗ್ರಾಮದಲ್ಲಿರುವ ಕಾರಣಿಕ ಕ್ಷೇತ್ರ ಮಜ್ಜಾರು ಶ್ರೀ ರಾಜನ್ ದೈವದ ಸನ್ನಿಧಿಯಲ್ಲಿ ಆಣೆ ಮಾಡಿಕೊಂಡಿದೆ ಎಂದು ಸಂಘದ ಅಧ್ಯಕ್ಷ ವಾಡ್ಯಪ್ಪ ಗೌಡ ಎರ್ಮಾಯಿಲ್ ಹೇಳಿದರು.

ಅವರು ಮಂಗಳವಾರ ಕಡಬದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಿಳಿನೆಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರ ನೇಮಕಕ್ಕೆ ಬಗ್ಗೆ ಬಹಳಷ್ಟು ಹಿಂದಿನಿಂದ ನ್ಯಾಯಾಲಯದಲ್ಲಿ ದಾವೆ ನಡೆಯುತ್ತಾ ಬಂದಿದ್ದು ರಂಜಿತ್ ಎನ್ನುವವರನ್ನು ನೇಮಕಗೊಳಿಸುವಂತೆ ಉಚ್ಚ ನ್ಯಾಯಾಲಯದ ಆದೇಶವಾಗಿತ್ತು. ಅದನ್ನು ಆಡಳಿತ ಸಮಿತಿಯವರು ಪಾಲಿಸಿಲ್ಲ ಎನ್ನುವ ಕಾರಣಕ್ಕೆ ಎ.ಆರ್. ಕೋರ್ಟ್‌ನಿಂದ ಸಂಘದ ಆಡಳಿತ ಮಂಡಳಿಯನ್ನು ಸೂಪರ್‌ಸೀಡ್ ಮಾಡುವ ನೋಟೀಸ್ ಕೂಡ ಬಂದಿತ್ತು. ಅದರಿಂದಾಗಿ ನಾವೆಲ್ಲಾ ಆಡಳಿತ ಸಮಿತಿಯವರು ಸೇರಿ ಹೈಕೋರ್ಟ್ ಆದೇಶವನ್ನು ಪಾಲಿಸಿ ರಂಜಿತ್ ಅವರನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ನೇಮಕಾತಿ ಮಾಡಿದ್ದೇವೆ ಎಂದರು. ಆದರೆ, ನೇಮಕಾತಿ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಕೆಲವರು ಅಪಪ್ರಚಾರಗಳನ್ನು ಮಾಡುತ್ತಿದ್ದಾರೆ. ಇದರ ವಿರುದ್ಧ ಮಜ್ಜಾರು ದೈವದ ಸನ್ನಿಧಿಯಲ್ಲಿ ನಾವು ಆಣೆ ಮಾಡಿಕೊಂಡು ಇದರ ಹಿಂದೆ ಇರುವವರು ಶಿಕ್ಷೆಯಲ್ಲಿ ಶಿಕ್ಷೆಯಾಗಬೇಕು ಎಂದು ದೈವದ ಮೊರೆ ಹೋಗಿದ್ದೇವೆ ಎಂದು ವಾಡ್ಯಪ್ಪ ಗೌಡ ತಿಳಿಸಿದರು. ಸಂಘದ ಉಪಾಧ್ಯಕ್ಷ ವೆಂಕಟ್ರಮಣ ಗೌಡ ಕೊಲ್ಲೆ, ನಿರ್ದೇಶಕರಾದ ಗಿರಿಯಪ್ಪ ಗೌಡ ಮುಗೇರು, ಸತೀಶ್ ಎರ್ಕ, ರಮೇಶ್ ವಾಲ್ತಾಜೆ, ಸುರೇಶ್ ಬಿಳಿನೆಲೆ, ತುಂಬಪ್ಪ ಬೊಟ್ಟಡ್ಕ ಉಪಸ್ಥಿತರಿದ್ದರು.

ಮೆಸ್ಕಾಂನ ವಿದ್ಯುತ್ ವಿತರಣೆ ವ್ಯವಸ್ಥೆಯನ್ನು ಖಾಸಗಿ ಸಂಸ್ಥೆಗೆ ನೀಡುವುದರ ವಿರುದ್ಧ ಬೃಹತ್ ಪ್ರತಿಭಟನೆ

ಖಾಸಗೀಕರಣಕ್ಕೆ ಸರ್ಕಾರ ಮಣೆ ಹಾಕದಿರಲಿ: ಕೆ. ಬಲರಾಮ್

ಮಂಗಳೂರು: ಮೆಸ್ಕಾಂನ ವಿದ್ಯುತ್ ವಿತರಣೆ ವ್ಯವಸ್ಥೆಯನ್ನು ಖಾಸಗಿ ಸಂಸ್ಥೆಗೆ ನೀಡಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದಿಂದ ಅನುಮತಿ ಕೋರಿರುವ ವಿರುದ್ಧ ಮಂಗಳೂರಿನಲ್ಲಿ ಮಂಗಳವಾರ ಬೃಹತ್ ಪ್ರತಿಭಟನಾ ಸಭೆ ನಡೆಯಿತು.



ಹಂತ ಹಂತವಾಗಿ ಜಾಗೃತಿ

ಸಭೆಯನ್ನುದ್ದೇಶಿಸಿ ಮಾತನಾಡಿದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ನೌಕರರ ಸಂಘಗಳ ಒಕ್ಕೂಟದ ಅಧ್ಯಕ್ಷ ಕೆ.ಬಲರಾಮ್, ಮೆಸ್ಕಾಂ ಖಾಸಗೀಕರಣದ ವಿರುದ್ಧ ಹಂತ ಹಂತವಾಗಿ ಜಾಗೃತಿ ನಡೆಯುತ್ತಿದ್ದು ಇಂದು ರಾಜ್ಯಾದ್ಯಂತ ಸಭೆಗಳು ನಡೆಯುತ್ತಿವೆ. ಯಾವುದೇ ಕಾರಣಕ್ಕೂ ಸರ್ಕಾರ ಖಾಸಗೀಕರಣಕ್ಕೆ ಅವಕಾಶ ಕಲ್ಪಿಸಬಾರದು ಎಂದರು. ಖಾಸಗೀಕರಣ ವಿರುದ್ಧ ಇದೇ 23ರವರೆಗೆ ಆಕ್ಷೇಪ ಸಲ್ಲಿಕೆಗೆ ಅವಕಾಶವಿದ್ದು, ಶಾಸಕರು, ರೈತರು, ಗುತ್ತಿಗೆದಾರರು, ಗ್ರಾಹಕರು ಆಕ್ಷೇಪ ಸಲ್ಲಿಸಬೇಕು. ನಮಗೆ ಖಾಸಗೀಕರಣ ಬೇಡ, ರಾಜ್ಯ ಸರ್ಕಾರದ ಅಧೀನದಲ್ಲೇ ಇರಲಿ ಎಂದು ಒತ್ತಡ ತರಬೇಕು ಎಂದು ಅವರು ಹೇಳಿದರು.

ಸರ್ಕಾರ ಪರಿಸ್ಥಿತಿಯನ್ನು ಅರ್ಥೈಸಿಕೊಳ್ಳಬೇಕು. ಖಾಸಗೀಕರಣಕ್ಕೆ ಮಣೆ ಹಾಕಬಾರದು. ಒಂದು ವೇಳೆ ಬದಲಾವಣೆಯಾದರೆ ಇಡೀ ವ್ಯವಸ್ಥೆಗೆ ಧಕ್ಕೆಯಾಗಲಿದೆ. ಆದ್ದರಿಂದ ಎಚ್ಚರ ವಹಿಸಬೇಕಾದ್ದು ಅತೀ ಅವಶ್ಯ ಎಂದು ಬಲರಾಮ್ ಹೇಳಿದರು.

ಹೊಸ ಸಿಬ್ಬಂದಿ ನೇಮಕ ಸ್ಥಗಿತಗೊಳ್ಳಲಿದೆ

ಮೆಸ್ಕಾಂ ಇಂಜಿನಿಯರ್‌ಗಳ ಸಂಘದ ಸಂಘಟನಾ ಕಾರ್ಯದರ್ಶಿ ಪ್ರಶಾಂತ್ ಪೈ ಮಾತನಾಡಿ, ಖಾಸಗಿ ಸಂಸ್ಥೆಯೊಂದು ಮೆಸ್ಕಾಂನ ಪ್ರಮುಖ ನಗರಗಳ ವಿತರಣೆ ವ್ಯವಸ್ಥೆಗೆ ಬೇಡಿಕೆ ಸಲ್ಲಿಸಿದೆ. ಒಂದು ವೇಳೆ ಅವರಿಗೆ ನೀಡಿದರೆ, ಹೊಸ ಸಿಬ್ಬಂದಿ ನೇಮಕ ಸ್ಥಗಿತಗೊಳ್ಳಲಿದೆ. ನಗರ ಮತ್ತು ಗ್ರಾಮಾಂತರ ಪ್ರದೇಶಗಳ ಸೇವೆಯಲ್ಲಿ ತಾರತಮ್ಯ ಬರಲಿದೆ. ಇಡೀ ಮೆಸ್ಕಾಂ ವ್ಯವಸ್ಥೆಯೇ ಹದಗೆಡಲಿದೆ. ಈ ಬಗ್ಗೆ ಎಚ್ಚರ ವಹಿಸಬೇಕು. ಜನತೆ ಕೂಡ ಸರ್ಕಾರದ ನಿರ್ಧಾರವನ್ನು ಖಂಡಿಸಬೇಕಿದೆ ಎಂದರು.

ಒಕ್ಕೂಟದ ಕಾರ್ಯದರ್ಶಿ ಶಿವರಾಮ್, ಇಂಜಿನಿಯರ್‌ಗಳ ಸಂಘದ ಉಪಾಧ್ಯಕ್ಷ ಕೆ.ಕೃಷ್ಣರಾವ್, ಸಂಘಟನಾ ಕಾರ್ಯದರ್ಶಿ ಬಿ.ಎಸ್.ಲೋಹಿತ್, ನೌಕರರ ಸಂಘದ ಉಪಾಧ್ಯಕ್ಷ ಶಂಕರಪ್ರಕಾಶ್, ಲೆಕ್ಕಾಧಿಕಾರಿಗಳ ಸಂಘದ ಕಾರ್ಯದರ್ಶಿ ನವೀನ್ ಕುಮಾರ್, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಂಸ್ಥೆಯ ಕಾರ್ಯದರ್ಶಿ ಶ್ರೀನಿವಾಸಪ್ಪ, ಡಿಪ್ಲೊಮಾ ಇಂಜಿನಿಯರ್‌ಗಳ ಸಂಘದ ಅಧ್ಯಕ್ಷ ರಾಮಚಂದ್ರ ಮಾತನಾಡಿದರು. ಸಂಘಟನೆಗಳ ಪದಾಧಿಕಾರಿಗಳಾದ ನಿತೇಶ್, ವರದರಾಜು, ಗಿರೀಶ್, ಪುಷ್ಪರಾಜ್, ಚೈತನ್ಯ, ರಾಘವೇಂದ್ರ, ಷಣ್ಮುಖಪ್ಪ ಶಾಕಿರ್, ಸುಧಾಕರ್, ಉರ್ಬನ್ ಪಿಂಟೊ ಮತ್ತಿತರರು ಉಪಸ್ಥಿತರಿದ್ದರು.

ಮೆಸ್ಕಾಂ ಅಧ್ಯಕ್ಷರಿಗೆ ಮನವಿ

ಪ್ರತಿಭಟನೆಯ ಬಳಿಕ ಮೆಸ್ಕಾಂ ಅಧ್ಯಕ್ಷ ಕೆ.ಹರೀಶ್ ಕುಮಾರ್ ಅವರಿಗೆ ಮನವಿ ಸಲ್ಲಿಸಿದ್ದು, ನೌಕರರ ವಿರೋಧವನ್ನು ಸರ್ಕಾರದ ಗಮನಕ್ಕೆ ತರಲಾಗುವುದು ಎಂದು ಭರವಸೆ ನೀಡಿದರು.

ಮುತ್ತೂರು ಗ್ರಾ.ಪಂ.ನ ಪ್ರಥಮ ಗ್ರಾಮ ಸಭೆಯಲ್ಲಿ ಗ್ರಾಮಸ್ಥರಿಂದ ಒತ್ತಾಯ

ಮನೆಗೆ ಹಾನಿಯಾದಾಗ ತ್ವರಿತ ಪರಿಹಾರ ನೀಡಿ

ಕೈಕಂಬ: ಮುತ್ತೂರು ಗ್ರಾಮ ಪಂಚಾಯತ್ ನ 2026-27 ನೇ ಸಾಲಿನ ಪ್ರಥಮ ಹಂತದ ಗ್ರಾಮ ಸಭೆ ಸಂಜೀವಿನಿ ಕಟ್ಟಡದಲ್ಲಿ ಶುಕ್ರವಾರ ನಡೆಯಿತು.



ಪಂಚಾಯತ್ ಆಡಳಿತಾಧಿಕಾರಿ ಪಶು ವೈದ್ಯಾಧಿಕಾರಿ ಡಾ.ಅಶೋಕ್ ಆರ್ ನೋಡೆಲ್ ಅಧಿಕಾರಿಯಾಗಿದ್ದರು. ವಿವಿಧ ಇಲಾಖೆಯ ಅಧಿಕಾರಿಗಳು ತಮ್ಮ ಇಲಾಖಾ ಮಾಹಿತಿ ನೀಡಿದರು. ಮುತ್ತೂರು ಕೊಳವೂರು ಕೂಡು ರಸ್ತೆಯಾದ ನೋಣಾಲು ಮಾರ್ಗದಂಗಡಿ ಬಳಿ ಸಣ್ಣ ನೀರಾವರಿ ಇಲಾಖೆಯ ಕಾಲುವೆಯ ದಂಡೆಯ ಮಣ್ಣು ಕುಸಿದು ಸಾರ್ವಜನಿಕರು ನಡೆದಾಡುವ ಮಾರ್ಗ ಹಾನಿಯಾಗಿ ಅಪಾಯಕಾರಿ ಸ್ಥಿತಿಯಲ್ಲಿದ್ದು ಇದನ್ನು ಕೂಡಲೇ ಸರಿಪಡಿಬೇಕೆಂದು ಗ್ರಾಮಸ್ಥರು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ನೋಡೆಲ್ ಅಧಿಕಾರಿ ಹಾಗೂ ಪಂಚಾಯತ್ ರಾಜ್ ಇಂಜಿನಿಯರ್ ಲೋಯ್ಡ್ ಈಗಾಗಲೇ ಸ್ಥಳ ಪರಿಶೀಲನೆ ಮಾಡಿದ್ದೇವೆ ಈ ಬಗ್ಗೆ ಮೇಲಧಿಕಾರಿಗಳಿಗೆ ತಿಳಿಸಿ ಸೂಕ್ತ ಕ್ರಮಕೈಗೊಳ್ಳಲಾವುದು ಎಂದು ಹೇಳಿದರು.

5 ವರ್ಷಗಳಿಂದ ಬಸವಸತಿ ಯೋಜನೆಯಲ್ಲಿ ಯಾರಿಗೂ ಮನೆ ಮಂಜೂರು ಆಗದೆ ಬಡವರ್ಗದ ಜನ ಸಂಕಷ್ಟಕ್ಕೆ ಸಿಲುಕಿದ್ದು, ಕೂಡಲೇ ಯೋಜನೆಯಲ್ಲಿ ಮನೆಗಳನ್ನು ಮಂಜೂರು ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡಬೇಕೆಂದು ಗ್ರಾಮಸ್ಥರು ಆಗ್ರಹಿಸಿದರು.

2024ರ ಮಳೆಗಾಲದಲ್ಲಿ ದುರ್ಗಾಕೋಡಿ ಎಂಬಲ್ಲಿ ಸುಂದರಿ ಎಂಬವರ ಮನೆ ಸಂಪೂರ್ಣ ಕುಸಿದಿದ್ದು ಅವರಿಗೆ ನಿವೇಶನ ತೋರಿಸಿಕೊಡಲಾಗಿದೆ. ಆದರೆ ಹಕ್ಕುಪತ್ರ ನೀಡಿಲ್ಲ, ಇದರಿಂದಾಗಿ ಮನೆ ಮಂಜೂರು ಆಗಿಲ್ಲ ಈ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಬೇಕು. ಮಳೆಯ ಸಂದರ್ಭ ಮನೆಗಳಿಗೆ ಹಾನಿಯಾದಾಗ ತ್ವರಿತ ಪರಿಹಾರ ಒದಗಿಸಿಕೊಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದರು.

15ನೇ ಹಣಕಾಸು ಯೋಜನೆಯ 2025-26ನೇ ಸಾಲಿನ ಕ್ರಿಯಾ ಯೋಜನೆಗಳು ಈಗಾಗಲೇ ಆಗಿದ್ದು ಅದರ ಕಾಮಗಾರಿಗಳು ಪೂರ್ಣಗೊಂಡಿದ್ದು ಆದರ ಹಣ ಇನ್ನೂ ಪಂಚಾಯತ್‌ಗೆ ಬಂದಿಲ್ಲ ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂಬ ಆಗ್ರಹ ಕೇಳಿಬಂತು. ಪಡಿತರ ಚೀಟಿ ಇಲ್ಲದೆ ಸಾರ್ವಜನಿಕರು ತೊಂದರೆ ಅನುಭವಿಸಿದ್ದು ಕೂಡಲೇ ಹೊಸ ಪಡಿತರ ಚೀಟಿ ಆದೇಶಕ್ಕೆ ಕ್ರಮಕೈಗೊಳ್ಳಬೇಕೆಂದು ಗ್ರಾಮಸ್ಥರು ಆಗ್ರಹಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೇಲ್ವಿಚಾರಕ ಅರುಣ್ ಕುಮಾರ್, ಸಹಾಯಕ ತೋಟಗಾರಿಕಾ ಅಧಿ ಕಾರಿ ಮಹೇಶ್ ಎಚ್, ಕೃಷಿ ಇಲಾಖೆಯ ಚಿದಂಬರ ಮೂರ್ತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಮಿಷನ್ ಸಂಯೋಜಕ ಅನುಷಾ, ಗಂಜಿಮಠ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಅನುಷಾ ಕೆ., ಮೆಸ್ಕಾಂ ಇಲಾಖೆ ಶಾಖಾಧಿಕಾರಿ ವೀರಭದ್ರಪ್ಪ ಕಂದಾಯ ಇಲಾಖೆಯ ರಾಮಚಂದ್ರ, ಪಂ. ರಾಜ್ ಇಂಜಿನಿಯರ್ ಉಪ ವಿಭಾಗದ ಕಿರಿಯ ಇಂಜಿನಿಯರ್ ಲೋಯ್ಡ್ ರೊಡ್ರಿಗಸ್, ಸರಕಾರಿ ಪಿಯು ಕಾಲೇಜು ಪ್ರಾಂಶುಪಾಲ ರಘುರಾಮ್ ನಾಯಕ್, ಪ್ರಭಾರಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸವಿತಾ ಉಪಸ್ಥಿತರಿದ್ದರು. ಪಂಚಾಯತ್ ಕಾರ್ಯದರ್ಶಿ ವರದಿ ವಾಚಿಸಿದರು. ಸಿಬ್ಬಂದಿ ಲಕ್ಷ್ಮಣ್ ವಂದಿಸಿದರು.

ಏಮಾಜೆ ಶಾಲೆಯಲ್ಲಿ 'ಸೃಜನೋತ್ಸವ' ಕಾರ್ಯಕ್ರಮದ ಉದ್ಘಾಟನೆ

ಉತ್ತಮ ಕಲಿಕಾ ವಾತಾವರಣ ಅತ್ಯಗತ್ಯ: ಸುರೇಖಾ

ಬಂಟ್ವಾಳ: ಮಕ್ಕಳಲ್ಲಿನ ಸುಪ್ತ ಪ್ರತಿಭೆಯನ್ನು ಹೊರತರಲು ಹಾಗೂ ಅವರ ಕನಸುಗಳ ಸಾಕಾರಕ್ಕಾಗಿ ಸಂತಸದಾಯಕ ಕಲಿಕಾ ವಾತಾವರಣ ಅತ್ಯಗತ್ಯ ಎಂದು ಬಂಟ್ವಾಳ ಬಿ.ಐ.ಆರ್.ಟಿ. ಸುರೇಖಾ ಏರವಾಳ ಅಭಿಪ್ರಾಯಪಟ್ಟರು.



ಬಂಟ್ವಾಳ ತಾಲೂಕಿನ ನೆಟ್ಲಮುಡ್ನೂರು ಗ್ರಾಮದ ಏಮಾಜೆ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರದಂದು ನಡೆದ ಸೃಜನೋತ್ಸವ -2026' ವಿನೂತನ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ಸರ್ಕಾರಿ ಶಾಲೆಗಳಲ್ಲಿ ಸಿಗುವ ಸೌಲಭ್ಯಗಳನ್ನು ವಿದ್ಯಾರ್ಥಿಗಳು ಬಳಸಿಕೊಂಡು ಸುಂದರ ಜೀವನ ರೂಪಿಸಬೇಕು ಎಂದು ಹೇಳಿದರು.

ಇದೇ ವೇಳೆ ಅವರು ಶಾಲೆಯ ಮಹತ್ವಾಕಾಂಕ್ಷೆಯ ದ್ವಿ-ಭಾಷಾ ಮಾಧ್ಯಮಕ್ಕೂ ಚಾಲನೆ ನೀಡಿದರು.

ವೃಕ್ಷೋತ್ಸವ

ಶಾಲಾ ಮಕ್ಕಳ ಶೈಕ್ಷಣಿಕ ಪ್ರಗತಿ ಹಾಗೂ ಸರ್ವತೋಮುಖ ಬೆಳವಣಿಗೆಗಾಗಿ ಹಮ್ಮಿಕೊಳ್ಳಲಾದ ಹತ್ತಾರು ಯೋಜನೆಗಳಿಗೆ ಚಾಲನೆ ನೀಡಲಾಯಿತು.

ಅಕ್ಷಯ ಪಾತ್ರೆಯನ್ನು ರಮೇಶ್ ಪೂಜಾರಿ ಸೂರ್ಯ ಅವರು, ಜ್ಞಾನ ವಾಹಿನಿ - 2026 ಯೋಜನೆಗೆ ಜಯಲಕ್ಷ್ಮಿ ಈಶ್ವರ ಭಟ್ ಅವರು ಜ್ಞಾನ ವಾಹಿನಿ ಯೋಜನೆಗೆ ಚಾಲನೆ ನೀಡಿದರು.

ಯುವ ವೃಕ್ಷೋತ್ಸವಕ್ಕೆ ಯುವವಾಹಿನಿ ಮಾಣಿ ಘಟಕದ ಅಧ್ಯಕ್ಷ ಗಣೇಶ್ ಸಾಯಿ ಕೊಡಾಜೆ ಅವರ ನೇತೃತ್ವದಲ್ಲಿ ಆಚರಿಸಲಾಯಿತು.

ಉಚಿತ ಪರಿಕರಗಳ ವಿತರಣೆ

ಹಾಗೆಯೇ ವಿದ್ಯಾರ್ಥಿಗಳಿಗೆ ದಾನಿಗಳ ಸಹಕಾರದೊಂದಿಗೆ ವಿವಿಧ ಸೌಲಭ್ಯಗಳು ಹಾಗೂ ಸಮವಸ್ತ್ರ ನೋಟ್ ಪುಸ್ತಕ ಉಚಿತ ಟೈ, ಐಡಿ ಕಾರ್ಡ್, ಬೆಲ್ಟ್ ವಿತರಿಸಲಾಯಿತು.

ಪದವಿ ಪ್ರದಾನ

ಇದೇ ವೇಳೆ ಶಾಲೆಯ ನೂತನ ವಿದ್ಯಾರ್ಥಿ ಸಂಸತ್ತಿನ (ಮಂತ್ರಿಮಂಡಲ) ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮ ನಡೆಯಿತು. ರಾಜನಾರಾಯಣ ಭಟ್ ಅವರು ನೂತನ ಮಂತ್ರಿಮಂಡಲಕ್ಕೆ ಪದವಿ ಪ್ರದಾನ ಮಾಡಿದರು. ಕಾರ್ಯಕ್ರಮದಲ್ಲಿ ಶಾಲಾ ಎಸ್‌ಡಿಎಂಸಿ ಅಧ್ಯಕ್ಷರಾದ ಮಲ್ಲಿಕಾ ಗಣೇಶ್ ಆಚಾರ್ಯ, ಉಪಾಧ್ಯಕ್ಷರಾದ ಹರೀಶ್ ಮೂಲ್ಯ,ಮಾಜಿ ಜನಪ್ರತಿನಿಧಿಗಳಾದ ಸಮಿತ ಡಿ. ಪೂಜಾರಿ, ಧನಂಜಯ ಗೌಡ ,ಉರ್ದಿಲ ಗುತ್ತು ರಾಮ್ ಪ್ರಸಾದ್ ರೈ , ನಿರಂಜನ್ ರೈ ಕುರ್ಲೆತ್ತಿಮಾರು, ಮಾಣಿಯ ಸದಾಶಿವ ಶೆಟ್ಟಿ, ಶಾಲಾ ಅಕ್ಷರ ರತ್ನ ಪ್ರಶಸ್ತಿ ಪುರಸ್ಕೃತ ಚಿನ್ನಾ ಕಲ್ಲಡ್ಕ, ಶಾಲಾ ಮುಖ್ಯ ಶಿಕ್ಷಕಿ ಡಾ. ತ್ರಿವೇಣಿ, ಸಹ ಶಿಕ್ಷಕರಾದ ಉದಯ ಚಂದ್ರ ಕೆ.ಎಸ್., ಹಾಗೂ ಗೌರವ ಶಿಕ್ಷಕಿ ಅಕ್ಷತಾ ಉಪಸ್ಥಿತರಿದ್ದರು. ಶಾಲಾಭಿವೃದ್ಧಿ ಸಮಿತಿ ಸದಸ್ಯರುಗಳು, ವಿದ್ಯಾರ್ಥಿ ಪೋಷಕರು, ವಿದ್ಯಾಭಿಮಾನಿಗಳು ಹಾಗೂ ವಿದ್ಯಾರ್ಥಿ ವೃಂದದವರು ಭಾಗವಹಿಸಿದ್ದರು.

ಮುಳಿಯ ಜ್ಯುವೆಲ್ಸ್ ಡೈಮಂಡ್ ಫೆಸ್ಟ್ ಲಕ್ಕಿ ಡ್ರಾ ಯಶಸ್ವಿಯಾಗಿ ಸಂಪನ್ನ



ಮಡಿಕೇರಿ: ಆಭರಣ ಕ್ಷೇತ್ರದಲ್ಲಿ ತನ್ನ ವಿಶಿಷ್ಟ ಸೇವೆ, ಗುಣಮಟ್ಟ ಮತ್ತು ಗ್ರಾಹಕ ವಿಶ್ವಾಸದ ಮೂಲಕ ಜನಪ್ರಿಯತೆಗಳಿಸಿರುವ ಮುಳಿಯ ಜ್ಯುವೆಲ್ಸ್ ಸಂಸ್ಥೆಯ ಮಡಿಕೇರಿ ಹಾಗೂ ಗೋಣಿಕೊಪ್ಪ ಶಾಖೆಗಳಲ್ಲಿ ಮಾ. 28ರಿಂದ ಮೇ 10ರವರೆಗೆ ಆಯೋಜಿಸಲಾಗಿದ್ದ ವಿಶೇಷ 'ಡೈಮಂಡ್ ಫೆಸ್ಟ್' ಅಭಿಯಾನದ ಅಂಗವಾಗಿ ಗ್ರಾಹಕರಿಗೆ ವಿತರಿಸಲಾಗಿದ್ದ ಲಕ್ಕಿ ಕೂಪನ್‌ಗಳ ಡ್ರಾ ಕಾರ್ಯಕ್ರಮ ಮಂಗಳವಾರ ಮಡಿಕೇರಿಯ ಮುಳಿಯ ಜ್ಯುವೆಲ್ಸ್ ಶಾಖೆಯಲ್ಲಿ ನಡೆಯಿತು.

ಮುಳಿಯ ಸಂಸ್ಥೆಯ ಚೇರ್ಮನ್ ಹಾಗೂ ಮ್ಯಾನೇಜಿಂಗ್ ಡೈರೆಕ್ಟರ್ ಕೇಶವ ಪ್ರಸಾದ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಸರ್ಕಾರಿ ಪ್ರೌಢ ಶಾಲಾ ಶಿಕ್ಷಕಿ ದಿವ್ಯಾ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಶ್ರೀನಾಥ್ ಹಾಗೂ ಟೌನ್ ಪೊಲೀಸ್ ಠಾಣೆಯ ಎಎಸ್‌ಐ ಶಿವಾನಂದ ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರುಗು ನೀಡಿದರು.

ಕಾರ್ಯಕ್ರಮವನ್ನು ಮಾರ್ಕೆಟಿಂಗ್ ಕನ್ಸಲ್ಟೆಂಟ್ ವೇಣು ಶರ್ಮಾ ನಿರೂಪಿಸಿ, ಡೈಮಂಡ್ ಫೆಸ್ಟ್ ಅಭಿಯಾನದ ಉದ್ದೇಶ ಹಾಗೂ ಅದರ ವಿಶೇಷತೆಗಳ ಬಗ್ಗೆ ಮಾಹಿತಿ ನೀಡಿದರು. ಲಕ್ಕಿ ಡ್ರಾ ಪ್ರಕ್ರಿಯೆಯನ್ನು ಗ್ರಾಹಕರ ಸಮ್ಮುಖದಲ್ಲಿ ಸಂಪೂರ್ಣ ಪಾರದರ್ಶಕವಾಗಿ ನಡೆಸಲಾಗಿದ್ದು ಭಾಗವಹಿಸಿದ್ದ ಗ್ರಾಹಕರು ಕಾರ್ಯಕ್ರಮದ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಡಿಕೇರಿ ಶಾಖಾ ವ್ಯವಸ್ಥಾಪಕ ಸಂತೋಷ್ ರಾಜೇ ಅರಸ್, ಗೋಣಿಕೊಪ್ಪ ಶಾಖಾ ವ್ಯವಸ್ಥಾಪಕ ಕಿಶೋರ್ ಹಾಗೂ ಉಭಯ ಶಾಖೆಗಳ ಸಿಬ್ಬಂದಿಗಳು ಉಪಸ್ಥಿತರಿದ್ದರು. ಲಕ್ಕಿ ಡ್ರಾದಲ್ಲಿ ಸಿದ್ದಾಪುರದ ಬೋಪಣ್ಣ ಡಿ.ಸಿ. ವಿಜೇತರಾಗಿ ಆಯ್ಕೆಯಾಗಿದ್ದು ಅವರಿಗೆ ಸಂಸ್ಥೆಯ ವತಿಯಿಂದ ಅಭಿನಂದನೆ ಸಲ್ಲಿಸಲಾಯಿತು.

ರಾಜ್ಯ ವಿಧಾನ ಪರಿಷತ್ ಚುನಾವಣೆ ಪಿ.ವಿ.ಮೋಹನ್ ಬೆಂಬಲಿಸಲು ಮನವಿ

ಮಂಗಳೂರು: ಸುಮಾರು ನಾಲ್ಕು ದಶಕಗಳಿಗೂ ಅಧಿಕ ಕಾಲ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನಪರ ಚಳುವಳಿಗಳ ಒಡನಾಡಿಯಾಗಿರುವ ಜನಪರ ಹೋರಾಟಗಾರ ಹಾಗೂ ಕಾಂಗ್ರೆಸ್ ಪಕ್ಷದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯೂ ಆಗಿರುವ ಪಿ.ವಿ. ಮೋಹನ್ ಅವರನ್ನು ಜೂನ್ 18ರಂದು ನಡೆಯಲಿರುವ ವಿಧಾನ ಪರಿಷತ್ ಚುನಾವಣೆಯಲ್ಲಿ ರಾಜ್ಯದ ಎಲ್ಲಾ ವಿಧಾನ ಸದಸ್ಯರು, ಪಕ್ಷ ಬೇಧ ಮರೆತು, ಅತ್ಯಧಿಕ ಮತಗಳಿಂದ ಗೆಲ್ಲಿಸಬೇಕು ಎಂದು ದಕ್ಷಿಣ ಕನ್ನಡ ಜಿಲ್ಲೆಯ ಜನಪರ ಸಂಘಟನೆಗಳು ಮನವಿ ಮಾಡಿವೆ.

> ಪಿ. ವಿ. ಮೋಹನ್ ಅವರನ್ನು ಅತ್ಯಧಿಕ ಮತಗಳಿಂದ ರಾಜ್ಯ ವಿಧಾನ ಸಭೆಯಿಂದ ವಿಧಾನ ಪರಿಷತ್‌ಗೆ ಆಯ್ಕೆ ಮಾಡಬೇಕು ಎಂದು ನಾವು ರಾಜ್ಯದ ಎಲ್ಲಾ ಶಾಸಕರನ್ನು ವಿನಂತಿ ಮಾಡುತ್ತಿದ್ದೇವೆ.
> ● ಲೋಲಾಕ್ಷ

ಅತ್ಯುತ್ತಮ ನಿರ್ಧಾರ

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಸ್‌ಸಿಎಸ್‌ಟಿ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಲೋಲಾಕ್ಷ, ಅತ್ಯಂತ ಸರಳ- ಸಜ್ಜನಿಕೆಯ ರಾಜಕೀಯ ನೇತಾರರಾದ ಪಿ.ವಿ. ಮೋಹನ್ ಅವರನ್ನು ವಿಧಾನ ಪರಿಷತ್ ಚುನಾವಣೆಗೆ ಕಾಂಗ್ರೆಸ್ ತನ್ನ ಅಭ್ಯರ್ಥಿಯಾಗಿ ಆಯ್ಕೆಮಾಡಿರುವುದು ಅತ್ಯುತ್ತಮ ನಿರ್ಧಾರವಾಗಿದೆ. ಇದಕ್ಕೆ ಪಕ್ಷದ ಎಲ್ಲಾ ಪ್ರಮುಖರಿಗೂ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು.

ಆಹಿಂದ ಉಪಾಧ್ಯಕ್ಷ ಬಿ.ಎ.ಎಂ. ಹನೀಫ್ ಮಾತನಾಡಿ, ಶೋಷಿತ ಸಮುದಾಯದ ಧ್ವನಿಯಾಗಿರುವ ಪಿ.ವಿ. ಮೋಹನ್ ರವರು ಇತರ ಸಮುದಾಯಗಳ ಜತೆಗೂ ಆತ್ಮೀಯತೆಯನ್ನು ಹೊಂದಿದರು. ಅವರು ಆಯ್ಕೆಯಾದಲ್ಲಿ ಶೋಷಿತರಿಗೆ ಸಮುದಾಯದಕ್ಕೆ ಪೂರಕವಾದ ನೀತಿ ರಚನೆಯಲ್ಲೂ ಮೈಲಿಗಲ್ಲಾಗಬಹುದು ಎಂದರು.

ಬಾಲ ಕಾರ್ಮಿಕ ವಿರೋಧಿ ಅಭಿಯಾನದ ಸಂಚಾಲಕ ರೆನ್ನಿ ಡಿಸೋಜಾ, ಎಸ್‌ಎಸ್‌ಟಿ ಅಧ್ಯಯನ ಮತ್ತು ಅಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷ ಮೋಹನಾಂಗಯ್ಯ ಸ್ವಾಮಿ, ಆದಿದ್ರಾವಿಡ ಕೊರಗ ಅಭಿವೃದ್ಧಿ ಸಂಘದ ಮಾಜಿ ಅಧ್ಯಕ್ಷೆ ಕಮಲಾ, ಕರ್ನಾಟಕ ರಾಜ್ಯ ಆದಿದ್ರಾವಿಡ ಸಂಘದ ರಾಜ್ಯ ಸಮಿತಿ ಸಲಹೆಗಾರ ಅನಿಲ್ ಕುಮಾರ್, ಪಾನರ ಯಾನೆ ನಲಿಕೆಯವರ ಸಂಘದ ಅಧ್ಯಕ್ಷ ಪದ್ಮನಾಭ, ಸಾಮಾಜಿಕ ಕಾರ್ಯಕರ್ತ ಅಶೋಕ್ ಭಟ್ ಸುದ್ದಿಗೋಷ್ಠಿಯಲ್ಲಿದ್ದರು.

ತ್ಯಾಜ್ಯ ವಿಲೇವಾರಿ ಮಾಡದವನಿಗೆ ಆಲಂಕಾರು ಗ್ರಾ.ಪಂ.ನಿಂದ ದಂಡ



ಆಲಂಕಾರು: ಗ್ರಾಮ ಪಂಚಾಯತ್ ವ್ಯಾಪ್ತಿಯ ಘನ ತ್ಯಾಜ್ಯ ಘಟಕದ ಬಾಗಿಲಿನ ಹತ್ತಿರ ಕಸದ ಮೂಟೆಗಳನ್ನು ತಂದಿಡಲಾಗಿದ್ದ ಪ್ರಕರಣದಲ್ಲಿ ಅಲ್ಲಿ ತ್ಯಾಜ್ಯ ತಂದಿಟ್ಟವರ ಮನೆಗೆ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿ ಕಾರಿ ಮತ್ತು ಸಂಜೀವಿನಿ ಒಕ್ಕೂಟದ ಪದಾಧಿಕಾರಿಗಳು ತೆರಳಿ ದಂಡ ಪಾವತಿಸಲು ಸೂಚನೆ ನೀಡಿದ ಘಟನೆ ಜೂ.15ಕ್ಕೆ ಆಲಂಕಾರಿನಲ್ಲಿ ನಡೆದಿದೆ.

ಆಲಂಕಾರು ಗ್ರಾ.ಪಂ. ಸ್ವಚ್ಛತೆಗೆ ಆದ್ಯತೆ ನೀಡುತ್ತಿದ್ದು, ಜೂ.15ರಂದು ಬೆಳಗ್ಗೆ ಸಂಜೀವಿನಿ ಒಕ್ಕೂಟದ ಸದಸ್ಯರು ಘನತ್ಯಾಜ್ಯ ಘಟಕಕ್ಕೆ ಬಂದಿದ್ದ ವೇಳೆ ಘಟಕದ ಬಾಗಿಲಿನ ಹತ್ತಿರ ಕಸದ ಮೂಟೆಗಳು ಕಂಡು ಬಂದಿದ್ದವು. ಇದನ್ನು ಗಮನಿಸಿದ ಸಂಜೀವಿನಿ ಒಕ್ಕೂಟದ ಸದಸ್ಯರು ಆಲಂಕಾರು ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಸುಜಾತ ಕೆ. ಅವರಿಗೆ ಮಾಹಿತಿ ನೀಡಿದರು. ನಂತರ ತ್ಯಾಜ್ಯವನ್ನು ಪರಿಶೀಲನೆ ನಡೆಸಿದಾಗ ಅದರಲ್ಲಿ ದೊರೆತ ನೋಟೀಸ್ ಒಂದರಲ್ಲಿದ್ದ ವಿಳಾಸ ಆಧರಿಸಿ ಸಂಜೀವಿನಿ ಒಕ್ಕೂಟದ ಸದಸ್ಯರು ಗ್ರಾ.ಪಂ.ನ ಸಿಬಂದಿಯೊಂದಿಗೆ ಭಾಸ್ಕರ ಪಟ್ಟೆ ಎಂಬವರ ಮನೆಗೆ ತೆರಳಿ ತ್ಯಾಜ್ಯದ ಬಗ್ಗೆ ವಿಷಯ ಪ್ರಸ್ತಾಪಿಸಿದರು. ಅಲ್ಲದೆ, ಭಾಸ್ಕರ ಪಟ್ಟೆ ರೂ.2 ಸಾವಿರ ದಂಡ ಪಾವತಿಸುವಂತೆ ಅಭಿವೃದ್ಧಿ ಅಧಿಕಾರಿಗಳು ಸೂಚಿಸಿದರು.

ದಂಡ ಪಾವತಿಗೆ ತಪ್ಪಿದಲ್ಲಿ ಪೊಲೀಸ್ ದೂರು ನೀಡಿ ದೂರು ದಾಖಲಿಸಲಾಗುವುದು ಎಂದು ಅಭಿವೃದ್ಧಿ ಅಧಿಕಾರಿಯವರು ಭಾಸ್ಕರ ಪಟ್ಟೆಗೆ ಸೂಚಿಸಿದ್ದಾರೆ ಎಂದು ತಿಳಿದು ಬಂದಿದೆ. ಈ ಸಂದರ್ಭ ಪಂಚಾಯತ್ ಸಿಬ್ಬಂದಿ ಕರಿಯಪ್ಪ ಸಂಜೀವಿನಿ ಒಕ್ಕೂಟದ ಸದಸ್ಯರಾದ ಪುಷ್ಪ ಕೀರ್ತಿಕಾ ಉಪಸ್ಥಿತರಿದ್ದರು.

ಮಾಧ್ಯಮಗಳ ವರದಿಗೆ ಸ್ಪಂದಿಸಿ ಸಾರ್ವಜನಿಕ ಸ್ನೇಹಿಯಾದ ರೈಲ್ವೆ ಇಲಾಖೆ | ತ್ಯಾಜ್ಯ ನಿರ್ವಹಣಾ ಘಟಕ ಸ್ಥಾಪನೆಗೆ ನಿರ್ಧಾರ

ನೆಟ್ಟಣ ಸುಬ್ರಹ್ಮಣ್ಯ ರೋಡ್ ರೈಲು ನಿಲ್ದಾಣದಲ್ಲಿ ರಾಶಿ ಬಿದ್ದ ಕಸ ಕೊನೆಗೂ ತೆರವು

ಸುಬ್ರಹ್ಮಣ್ಯ: ನೆಟ್ಟಣದ ಸುಬ್ರಹ್ಮಣ್ಯ ರೋಡ್ ರೈಲ್ವೆ ನಿಲ್ದಾಣದಲ್ಲಿ ಕಸದ ರಾಶಿ ತುಂಬಿದ್ದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿತ್ತು. ಇದಕ್ಕೆ ತಕ್ಷಣ ಸ್ಪಂದಿಸಿದ ರೈಲ್ವೆ ಇಲಾಖೆ ನಿಲ್ದಾಣದಲ್ಲಿ ಸಂಗ್ರಹವಾಗಿದ್ದ ಕಸವನ್ನು ತೆರವುಗೊಳಿಸಿ ಪರಿಸರವನ್ನು ಸ್ವಚ್ಛಗೊಳಿಸಿದೆ. ಈ ಮೂಲಕ ಸಾರ್ವಜನಿಕ ಸ್ನೇಹಿ ಇಲಾಖೆ ಎಂಬುದನ್ನು ಶ್ರುತಪಡಿಸಿದೆ.





ಅಭಿವೃದ್ಧಿ ಕಾರ್ಯಗಳಿಂದ ವ್ಯತ್ಯಯ

ಸುಬ್ರಹ್ಮಣ್ಯ ರೋಡ್ ನೆಟ್ಟಣ ರೈಲು ನಿಲ್ದಾಣದಲ್ಲಿ ಅಮೃತ್ ಭಾರತ್ ನಿಲ್ದಾಣ ಯೋಜನೆಯಡಿಯಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. ವಿಶ್ರಾಂತಿ ಕೊಠಡಿಗಳ ನಿರ್ಮಾಣ, ಪಾರ್ಕಿಂಗ್ ಪ್ರದೇಶದ ಅಭಿವೃದ್ಧಿ, ಪ್ಲಾಟ್‌ಫಾರ್ಮ್ ಸುಧಾರಣೆ, ಪ್ಲಾಟ್‌ಫಾರ್ಮ್ ಮೇಲ್ಛಾವಣಿಗಳ ನಿರ್ಮಾಣ ಮತ್ತು ಎಸ್ಕಲೇಟರ್ ಅಳವಡಿಕೆ ಕಾರ್ಯಗಳು ವೇಗವಾಗಿ ನಡೆಯುತ್ತಿದೆ. ಈ ಕಾಮಗಾರಿಗಳ ಕಾರಣದಿಂದಾಗಿ ನಿಲ್ದಾಣದ ನಿಯಮಿತ ತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ವ್ಯವಸ್ಥೆಯಲ್ಲಿ ತಾತ್ಕಾಲಿಕವಾಗಿ ವ್ಯತ್ಯಯ ಉಂಟಾಗಿತ್ತು.

ತಾತ್ಕಾಲಿಕ ಶೇಖರಣೆ

ನಿಲ್ದಾಣದ ತ್ಯಾಜ್ಯದ ಜೊತೆಗೆ ನಿರ್ಮಾಣ ಹಂತದ ತ್ಯಾಜ್ಯವೂ ಶೇಖರಣೆಯಾಗಿತ್ತು. ಶೇಖರವಾದ ತ್ಯಾಜ್ಯವನ್ನು ವಿಲೇವಾರಿ ಮಾಡಲು ನಿಲ್ದಾಣದ ಆಡಳಿತ ಮಂಡಳಿಯು ಸ್ಥಳೀಯ ಗ್ರಾಮ ಪಂಚಾಯತ್‌ನೊಂದಿಗೆ ನಿರಂತರವಾಗಿ ಸಮನ್ವಯ ಸಾಸಿತ್ತು. ಅಭಿವೃದ್ಧಿ ಕಾಮಗಾರಿಗಳ ನಡುವೆ ತ್ಯಾಜ್ಯ ವಿಂಗಡಣೆ ಮಾಡಲು ಮೇಲ್ಛಾವಣಿ ಇರುವಂತಹ ಸೂಕ್ತ ಸ್ಥಳದ ಕೊರತೆ ಇದ್ದುದ್ದರಿಂದ, ಕಸವನ್ನು ತಾತ್ಕಾಲಿಕವಾಗಿ ಚೀಲಗಳಲ್ಲಿ ತುಂಬಿ ಪಾರ್ಕಿಂಗ್ ಪ್ರದೇಶದಲ್ಲಿ ಶೇಖರಿಸಿಡಲಾಗಿತ್ತು. ಈ ನಡುವೆ ಸುರಿದ ಭಾರೀ ಮಳೆಯಿಂದ ತ್ಯಾಜ್ಯ ವಿಂಗಡಣೆ ಮತ್ತು ವಿಲೇವಾರಿ ವಿಳಂಬವಾಯಿತು. ಇದೀಗ ಶೇಖರವಾಗಿದ್ದ ಕಸವನ್ನು ಸಂಪೂರ್ಣವಾಗಿ ತೆರವುಗೊಳಿಸಲಾಗಿದೆ ಮತ್ತು ತ್ಯಾಜ್ಯದ ಸೂಕ್ತ ವಿಂಗಡಣೆ ಹಾಗೂ ವಿಲೇವಾರಿಯನ್ನು ಮಾಡಲಾಗಿದೆ ಎಂದು ಮೈಸೂರು ವಿಭಾಗದ ಸಾರ್ವಜನಿಕ ಸಂಪರ್ಕಾಧಿಕಾರಿ ಪೃಥ್ವಿ ಎಸ್. ಹುಲ್ಲತ್ತಿ ಸ್ಪಷ್ಟನೆ ನೀಡಿದ್ದಾರೆ.

ಸಮಸ್ಯೆ ಮರುಕಳಿಸದಂತೆ ಕ್ರಮಕ್ಕೆ ಮುಂದಾದ ಇಲಾಖೆ

ಪುನರಾಭಿವೃದ್ಧಿ ಕಾಮಗಾರಿಗಳ ಭಾಗವಾಗಿ ಮುಂದೆ ನೂತನವಾಗಿ ತ್ಯಾಜ್ಯ ನಿರ್ವಹಣಾ ಘಟಕವನ್ನು ನಿಲ್ದಾಣದಲ್ಲಿ ನಿರ್ಮಿಸಲಾಗುವುದು. ಇಲ್ಲಿ ತ್ಯಾಜ್ಯಗಳನ್ನು ವ್ಯವಸ್ಥಿತ ಸಂಗ್ರಹ ಮತ್ತು ವಿಲೇವಾರಿ ವ್ಯವಸ್ಥೆ ಮಾಡಲಾಗುವುದು. ಈ ಮೂಲಕ ಸ್ವಚ್ಛತೆಯನ್ನು ಕಾಪಾಡಲು ಮತ್ತು ಪ್ರಯಾಣಿಕರಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸಲು ರೈಲ್ವೆ ಆಡಳಿತವು ಸದಾ ಬದ್ಧವಾಗಿದೆ ಎಂದು ಸ್ಪಷ್ಟನೆ ನೀಡಿದ್ದಾರೆ.

ಸುತ್ತ ಮುತ್ತ

ನರಹರಿ ಪರ್ವತದಲ್ಲಿ ಸಂಘ ಸಂಸ್ಥೆಗಳಿಂದ ಕರಸೇವೆ

ಬಂಟ್ವಾಳ: ಜೀರ್ಣೋದ್ಧಾರ ಕಾರ್ಯ ನಡೆಯುತ್ತಿರುವ ಪಾಣೆಮಂಗಳೂರಿನ ನರಹರಿ ಪರ್ವತ ಸದಾಶಿವ ದೇವಸ್ಥಾನದಲ್ಲಿ ಸ್ಥಳೀಯ ವಿವಿಧ ಸಂಘ ಸಂಸ್ಥೆಗಳು ಕರಸೇವೆ ನಡೆಸಿದರು.
ಶಿವಾಜಿ ಫ್ರೆಂಡ್ಸ್ ಬರಿಮಾರ್, ಶ್ರೀ ದುರ್ಗಾಪರಮೇಶ್ವರೀ ಭಜನಾ ಮಂದಿರ ಸಮಿತಿ ಮೆಲ್ಕಾರ್ ,ವಿಶ್ವಹಿಂದೂ ಪರಿಷತ್ ಭಜರಂಗದಳ ಶಾಖೆ ಬೋಳಂಗಡಿ,ಯುವಸಂಗಮ ಮೆಲ್ಕಾರ್ ಇದರ ಪದಾಧಿಕಾರಿಗಳು ಸದಸ್ಯರು ಕರಸೇವೆಯಲ್ಲಿ ಭಾಗವಹಿಸಿದರು. ಈ ಸಂದರ್ಭ ದೇವಳದ ಆಡಳಿತ ಮೊಕ್ತೇಸರರಾದ ಡಾ. ಪ್ರಶಾಂತ್ ಮಾರ್ಲ,ಜೀರ್ಣೋದ್ಧಾರ ಸಮಿತಿ ಅಧ್ಯಕ್ಷರಾದ ಡಾ. ಆತ್ಮರಂಜನ್ ರೈ ಹಾಗೂ ಮೊಕ್ತೇಸರರು ಮತ್ತು ಜೀರ್ಣೋದ್ಧಾರ ಸಮಿತಿಯ ಸರ್ವಸದಸ್ಯರು ಉಪಸ್ಥಿತರಿದ್ದರು.

ಬಂಟ್ವಾಳ ಕೂಟ ಮಹಾ ಜಗತ್ತು; ಸಂಪರ್ಕ ಸಭೆ

ಬಂಟ್ವಾಳ: ಕೂಟ ಮಹಾ ಜಗತ್ತು ಬಂಟ್ವಾಳ ಅಂಗಸಂಸ್ಥೆ ಇದರ 21ನೇ ಸಂಪರ್ಕಸಭೆಯು ನಿವೃತ್ತ ಮುಖ್ಯೋಪಾಧ್ಯಾಯ ಕೆದ್ಲಾ ಪರಮೇಶ್ವರ ರಾವ್ ಅವರ ಮನೆಯಲ್ಲಿ ಸಂಸ್ಥೆಯ ಅಧ್ಯಕ್ಷ ಕೋರ್ಯ ರಮೇಶಹೊಳ್ಳರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭ ಶ್ರೀ ಲಕ್ಷ್ಮಿ ನರಸಿಂಹ ಅಷ್ಟೋತ್ತರ ಶತ ದಿವ್ಯ ನಾಮಾವಳಿ, ಶ್ರೀ ವಿಷ್ಣು ಸಹಸ್ರನಾಮ ಮಂತ್ರ ಪುಷ್ಪ ಪಠಣ, ಹರಿ ನಾಮ ಸಂಕೀರ್ತನೆ ಸಾಮೂಹಿಕವಾಗಿ ನಡೆಸಲಾಯಿತು. ಸಭೆಯಲ್ಲಿ ಕೂಟ ಬ್ರಾಹ್ಮಣರ ವಿವಾಹ ಸಂಪರ್ಕ ವ್ಯವಸ್ಥೆ ಮಾಡುವಂತೆ ಸರ್ವಾನುಮತದ ನಿರ್ಣಯ ಕೈಗೊಳ್ಳಲಾಯಿತು ಸಜೀಪಮಾಗಣೆ ತಂತ್ರಿ ಎಂ. ಸುಬ್ರಹ್ಮಣ್ಯ ಭಟ್, ಗುರು ಗಾಯತ್ರಿ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಆನಂದ ಸೋಮಯಾಜಿ, ಲೋಕೋಪಯೋಗಿ ಇಲಾಖೆಯ ನಿವೃತ್ತ ಇಂಜಿನಿಯರ್ ಶ್ರೀನಿವಾಸ ಹೊಳ್ಳ ಎಂ, ಗೌರವಾಧ್ಯಕ್ಷ ಜಯಶಂಕರ ಬಾಸ್ರಿತ್ತಾಯ, ಕಾರ್ಯದರ್ಶಿ ರಾಮಕೃಷ್ಣರಾವ್ ಎಂ, ಜತೆಕಾರ್ಯದರ್ಶಿ ಎ ರವಿಶಂಕರ ಮಯ್ಯ, ಮಹಿಳಾ ವೇದಿಕೆ ಅಧ್ಯಕ್ಷೆ ಯಮುನಾ ಐಗಳ್, ಪಯಣ ಟೂರ್ಸ್ ಮುಖ್ಯಸ್ಥ ಹರೀಶ್ ರಾವ್ ಮೊದಲಾದವರು ಉಪಸ್ಥಿತರಿದ್ದರು

ಕಡಿಮೆ ಬಡ್ಡಿದರದ ಸಾಲ ನೀಡಲು ನಿರಾಕರಿಸದಿರಿ: ರೈತ ಸಂಘ ಆಗ್ರಹ

ಪುತ್ತೂರು: ದ.ಕ. ಜಿಲ್ಲೆಯ ರೈತರಿಗೆ ಬ್ಯಾಂಕ್‌ಗಳಲ್ಲಿ ಜಾಸ್ತಿ ಬಡ್ಡಿ ಕೃಷಿ ಅಭಿವೃದ್ಧಿ ಸಾಲವಿದ್ದರೂ, ಯಾವುದೇ ಕಾರಣಕ್ಕೂ ಸಹಕಾರಿ ಸಂಘಗಳಲ್ಲಿ ಸಿಗುವ ಶೇ.3 ಹಾಗೂ ಶೇ.0 ಬಡ್ಡಿದರದ ಸಾಲವನ್ನು ನಿರಾಕರಿಸದಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕದ ಆಗ್ರಹಿಸಿದೆ.
ರೈತ ಸಂಘದ ಜಿಲ್ಲಾಧ್ಯಕ್ಷ ರೂಪೇಶ್ ರೈ ಅಲಿಮಾರ್ ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರೈತರಿಗೆ ನೀಡುವ ಶೇ.3 ಹಾಗೂ ಶೇ.0 ಬಡ್ಡಿದರದ ಸಾಲವು ಸರಕಾರ ನೀಡುವ ಸೌಲಭ್ಯವಾಗಿದ್ದು, ಇದನ್ನು ಯಾವುದೇ ಕಾರಣಕ್ಕೂ ನಿರಾಕರಿಸುವಂತಿಲ್ಲ, ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ರೈತರಿಗೆ ಸಾಲ ಇದೆ ಎನ್ನುವ ಕಾರಣಕ್ಕೆ ಕೆಲವು ಕೃಷಿ ಪತ್ತಿನ ಸಹಕಾರಿ ಸಂಘಗಳಲ್ಲಿ ಈ ಸಾಲಗಳನ್ನು ನಿರಾಕರಿಸುತ್ತಿರುವ ದೂರುಗಳು ಬಂದಿದೆ ಎಂದು ತಿಳಿಸಿದರು. ಜತೆಗೆ ಅಕ್ರಮ-ಸಕ್ರಮದಲ್ಲಿ ಮಂಜೂರಾದ ಭೂಮಿಯ ಮೇಲೆ ಸಾಲ ನೀಡಲು ಸಹಕಾರಿ ಸಂಘಗಳು ಪ್ಲಾಟಿಂಗ್ ಸೇರಿದಂತೆ ಇತರ ತಾಂತ್ರಿಕ ಕಾರಣಗಳನ್ನು ನೀಡಿ ನಿರಾಕರಿಸುತ್ತಿದ್ದು, ಮಂಜೂರಾತಿಯ ಸಂದರ್ಭದಲ್ಲೇ ಅಡಮಾನ ಸಾಲ ಪಡೆಯಬಹುದು ಎಂದು ನಮೂದಾಗಿರುತ್ತದೆ. ಪ್ಲಾಟಿಂಗ್ ಆಗದೇ ಇದ್ದರೆ ಅದು ಕಂದಾಯ ಇಲಾಖೆಯ ಸಮಸ್ಯೆಯೇ ಹೊರತು ರೈತರದ್ದಲ್ಲ, ಹೀಗಾಗಿ ಅಕ್ರಮ-ಸಕ್ರಮದಲ್ಲಿ ಮಂಜೂರಾದ ಭೂಮಿಯ ಮೇಲೂ ಸಾಲ ನೀಡಬೇಕು ಎಂದು ಅವರು ಒತ್ತಾಯಿಸಿದರು.
ಸುದ್ದಿಗೋಷ್ಠಿಯಲ್ಲಿ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿನೋದ್ ಭಟ್ ಪಾದೆಕಲ್ಲು, ಜಿಲ್ಲಾ ಕಾರ್ಯದರ್ಶಿ ಇಬ್ರಾಹಿಂ ಖಲೀಲ್ ಪುಚ್ಚಪ್ಪಾಡಿ, ಸುಳ್ಯ ತಾಲೂಕು ಅಧ್ಯಕ್ಷ ಲೋಲಜಾಕ್ಷ ಕೊಡಿಂಬಾಡಿ, ಗ್ರಾಮ ಸಮಿತಿ ಕಾರ್ಯದರ್ಶಿ ಯೋಗೀಶ್ ಎಸ್. ಸಾಮಾನಿ ಸಂಪಿಗೆದಡಿ ಉಪಸ್ಥಿತರಿದ್ದರು.

ತೆಕ್ಕಟ್ಟೆ ಸೇವಾ ಸಂಗಮ ವಿದ್ಯಾಕೇಂದ್ರ: ವಿದ್ಯಾರ್ಥಿ ಸಂಸತ್ತು ರಚನೆ

ಕೋಟ: ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ, ಜವಾಬ್ದಾರಿಯ ಅರಿವು ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸುವ ಉದ್ದೇಶದಿಂದ ಸೇವಾ ಸಂಗಮ ವಿದ್ಯಾಕೇಂದ್ರ, ವಿದ್ಯಾಗಿರಿ ತೆಕ್ಕಟ್ಟೆ ಶಾಲೆಯಲ್ಲಿ ಸೋಮವಾರ ಶಾಲಾ ನಾಯಕತ್ವ ಚುನಾವಣೆ ಯಶಸ್ವಿಯಾಗಿ ನಡೆಯಿತು. ಚುನಾವಣೆಯ ಮೂಲಕ ಶಾಲಾ ಸಂಸತ್ತಿಗೆ ವಿವಿಧ ಹುದ್ದೆಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಯಿತು. ಈ ಸಂದರ್ಭದಲ್ಲಿ 7ನೇ ತರಗತಿಯ ಸಮರ್ಥ್ ಶಾಲಾ ನಾಯಕನಾಗಿ ಆಯ್ಕೆಯಾಗಿದ್ದು, 6ನೇ ತರಗತಿಯ ಸ್ಕಂದ ಉಪನಾಯಕನಾಗಿ ಆಯ್ಕೆಯಾದರು.
ಇದೇ ವೇಳೆ ಪ್ರಣವ್ ಐತಾಳ್ ಗೃಹಮಂತ್ರಿಯಾಗಿ, ಅಮಿತ್ ಪ್ರಭು ಶಿಕ್ಷಣಮಂತ್ರಿಯಾಗಿ, 7ನೇ ತರಗತಿಯ ಸ್ವಸ್ತಿಕ್ ಸಾಂಸ್ಕೃತಿಕ ಮಂತ್ರಿಯಾಗಿ, 7ನೇ ತರಗತಿಯ ಆಮೋದ ಆರೋಗ್ಯ ಮಂತ್ರಿಯಾಗಿ, 7ನೇ ತರಗತಿಯ ಯಶಿ ಕ್ರೀಡಾ ಮಂತ್ರಿಯಾಗಿ ಹಾಗೂ ಪ್ರಣವ್ ಶೆಟ್ಟಿ ವಿರೋಧ ಪಕ್ಷದ ನಾಯಕನಾಗಿ ಆಯ್ಕೆಯಾದರು. ಶಾಲಾ ಮಟ್ಟದಲ್ಲಿ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಪರಿಚಯಿಸುವ ಈ ಚುನಾವಣಾ ಪ್ರಕ್ರಿಯೆ ವಿದ್ಯಾರ್ಥಿಗಳಲ್ಲಿ ನಾಯಕತ್ವ ಕೌಶಲ್ಯ, ಜವಾಬ್ದಾರಿ ಹಾಗೂ ತಂಡದೊಂದಿಗೆ ಕಾರ್ಯನಿರ್ವಹಿಸುವ ಮನೋಭಾವ ಬೆಳೆಸಲು ಸಹಕಾರಿಯಾಗಿದೆ ಎಂದು ಶಾಲಾ ಮುಖ್ಯ ಶಿಕ್ಷಕ ಹರ್ಷ ಕೋಟೇಶ್ವರ ತಿಳಿಸಿದರು.ಈ ಸಂದರ್ಭದಲ್ಲಿ ಶಾಲೆಯ ಬೋಧಕ ವೃಂದ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ದೇಶಮಂಗಲ ಶ್ರೀ ಶಂಕರನಾರಾಯಣ-ಶ್ರೀ ಕುಟ್ಟಿಚಾತ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಸಿದ್ಧತೆ

ಸಚ್ಚಿದಾನಂದ ಭಾರತೀ ಶ್ರೀಗಳಿಂದ ವಿಜ್ಞಾಪನಾ ಪತ್ರ ಬಿಡುಗಡೆ

ಕಾಸರಗೋಡು: ದೇಶಮಂಗಲದ ಪವಿತ್ರ ಶ್ರೀ ಶಂಕರನಾರಾಯಣ - ಶ್ರೀ ಕುಟ್ಟಿಚಾತ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ರಮಗಳ ಅಂಗವಾಗಿ ಸಿದ್ಧಪಡಿಸಲಾದ ವಿಜ್ಞಾಪನಾ ಪತ್ರವನ್ನು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರು ಶ್ರೀ ಕ್ಷೇತ್ರದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಬಿಡುಗಡೆಗೊಳಿಸಿದರು.
ಶ್ರೀ ಕ್ಷೇತ್ರಕ್ಕೆ ಪ್ರಥಮ ಬಾರಿಗೆ ಆಗಮಿಸಿದ ಎಡನೀರು ಮಠಾಧೀಶರನ್ನು ಪೂರ್ಣಕುಂಭ, ಮಂಗಳ ವಾದ್ಯಘೋಷ ಹಾಗೂ ಭಕ್ತರ ಜಯ ಘೋಷಗಳೊಂದಿಗೆ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ಬಳಿಕ ನಡೆದ ಸಮಾರಂಭದಲ್ಲಿ ಶ್ರೀಗಳು ಜೀರ್ಣೋದ್ಧಾರ ಕಾರ್ಯಗಳ ವಿಜ್ಞಾಪನಾ ಪತ್ರ ಬಿಡುಗಡೆಗೊಳಿಸಿ ಅನುಗ್ರಹಿಸಿದರು.
ಈ ಸಂದರ್ಭದಲ್ಲಿ ಆಶೀರ್ವಚನ ನೀಡಿದ ಶ್ರೀಗಳು, ಈ ವಿಜ್ಞಾಪನಾ ಪತ್ರವು ಕೇವಲ ಭಕ್ತ ಬಾಂಧವರಲ್ಲಿ ನೆರವು ಕೋರುವ ಪತ್ರವಲ್ಲ, ಜೀರ್ಣೋದ್ಧಾರ ಕಾರ್ಯಗಳು ಯಾವುದೇ ಅಡಚಣೆಯಿಲ್ಲದೆ ಅತ್ಯಂತ ಸುಗಮವಾಗಿ ಮತ್ತು ಶೀಘ್ರವಾಗಿ ನೆರವೇರಲೆಂದು ಶ್ರೀ ಶಂಕರನಾರಾಯಣ - ಶ್ರೀ ಕುಟ್ಟಿಚಾತ ದೇವರಲ್ಲಿ ಸಲ್ಲಿಸುವ ಭಕ್ತಿಪೂರ್ವಕ ವಿಜ್ಞಾಪನೆಯಾಗಿದೆ ಎಂದು ಹೇಳಿದರು. ಭಕ್ತರ ಪ್ರಾರ್ಥನೆ ಮತ್ತು ಸಂಕಲ್ಪವನ್ನು ಭಗವಂತನು ಮನ್ನಿಸಿ, ಎರಡು ವರ್ಷಗಳೊಳಗಾಗಿ ಜೀರ್ಣೋದ್ಧಾರ ಕಾರ್ಯಗಳು ಪೂರ್ಣಗೊಂಡು ಬ್ರಹ್ಮಕಲಶೋತ್ಸವವು ವಿಜೃಂಭಣೆಯಿಂದ ನಡೆಯುವಂತೆ ಅನುಗ್ರಹಿಸಲಿ ಎಂದರು.



ಸನಾತನ ಧರ್ಮದ ಉಳಿವು, ಬೆಳವಣಿಗೆ ಹಾಗೂ ಧಾರ್ಮಿಕ ಮೌಲ್ಯಗಳ ಸಂರಕ್ಷಣೆಗೆ ದೇವಾಲಯಗಳ ಜೀರ್ಣೋದ್ಧಾರ, ನವೀಕರಣ ಮತ್ತು ಬ್ರಹ್ಮಕಲಶೋತ್ಸವದಂತಹ ಕಾರ್ಯಕ್ರಮಗಳು ಅತ್ಯಂತ ಅಗತ್ಯವೆಂದು ಶ್ರೀಗಳು ಅಭಿಪ್ರಾಯಪಟ್ಟರು.
ಇಂತಹ ಧಾರ್ಮಿಕ ಕಾರ್ಯಗಳ ಮೂಲಕ ಹಿಂದು ಸಮಾಜದಲ್ಲಿ ಐಕ್ಯತೆ, ಸಂಘಟನೆ ಹಾಗೂ ಧಾರ್ಮಿಕ ಜಾಗೃತಿ ವೃದ್ಧಿಯಾಗುತ್ತದೆ. ಆದ್ದರಿಂದ ಸಮಾಜದ ಎಲ್ಲ ವರ್ಗದ ಜನರು ಸಮರ್ಪಣಾ ಮನೋಭಾವದಿಂದ ಸಂಘಟಿತರಾಗಿ ಇಂತಹ ಪುಣ್ಯಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದರು.
ಸಂಪತ್ತನ್ನು ಕೇವಲ ಸಂಗ್ರಹಿಸಿಕೊಂಡು ಇಡುವುದರಿಂದ ಪ್ರಯೋಜನವಿಲ್ಲ, ಅದನ್ನು ಸತ್ಕಾರ್ಯಗಳಿಗೆ ವಿನಿಯೋಗಿಸಿ ಪುಣ್ಯ ಸಂಪಾದಿಸಬೇಕು. ದಾನವನ್ನು ಪ್ರಚಾರಕ್ಕಾಗಿ ಅಥವಾ ಪ್ರತಿಷ್ಠೆಗಾಗಿ ಮಾಡುವುದಕ್ಕಿಂತ, ಭಗವಂತನಿಗೂ ದಾನ ಮಾಡಿದ ವ್ಯಕ್ತಿಗೂ ಮಾತ್ರ ತಿಳಿದಿರುವ ದಾನವೇ ಅತ್ಯುನ್ನತ ಮತ್ತು ಶ್ರೇಷ್ಠ ದಾನವಾಗಿದೆ ಎಂದರು.

ಅನೇಕ ಪವಾಡಗಳ ಕ್ಷೇತ್ರ

ಸಮಾರಂಭದಲ್ಲಿ ಶ್ರೀ ಕ್ಷೇತ್ರದ ತಂತ್ರಿವರ್ಯರು ಹಾಗೂ ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಮಾತನಾಡಿ, ಶ್ರೀ ಕ್ಷೇತ್ರದ ಐತಿಹಾಸಿಕ ಹಿನ್ನೆಲೆ, ನಡೆದು ಬಂದ ದಾರಿ, ಕ್ಷೇತ್ರದ ಬೆಳವಣಿಗೆ, ಸೇವೆ ಸಲ್ಲಿಸಿದ ಮಹನೀಯರ ಕೊಡುಗೆ ಹಾಗೂ ಕ್ಷೇತ್ರದ ಮಹಿಮೆಯನ್ನು ವಿವರಿಸಿದರು. ಇಲ್ಲಿನ ಶ್ರೀ ಶಂಕರನಾರಾಯಣ - ಶ್ರೀ ಕುಟ್ಟಿಚಾತ ದೇವರ ಕಾರಣಿಕ ಶಕ್ತಿ ಹಾಗೂ ಅನೇಕ ಪವಾಡಗಳು ಭಕ್ತರನ್ನು ಅಪಾರ ಸಂಖ್ಯೆಯಲ್ಲಿ ಆಕರ್ಷಿಸುತ್ತಿದ್ದು, ಕ್ಷೇತ್ರವು ರಾಜ್ಯದ ಹೊರಗೂ ದೇಶವ್ಯಾಪಿ ಪ್ರಸಿದ್ಧಿಯನ್ನು ಗಳಿಸುತ್ತಿದೆ ಎಂದು ಹೇಳಿದರು. ದಿನದಿಂದ ದಿನಕ್ಕೆ ಭಕ್ತರ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಜೀರ್ಣೋದ್ಧಾರ ಕಾರ್ಯಗಳು ಅತ್ಯಂತ ಯಶಸ್ವಿಯಾಗಿ ಹಾಗೂ ಸುಗಮವಾಗಿ ನಡೆಯಲಿವೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು. ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರು ಹಾಗೂ ಹಡ್ಕೋ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕ ಕೋಟೆಕುಂಜ ರವೀಂದ್ರ ಆಳ್ವ ಕಂಬಾರು ಅಧ್ಯಕ್ಷತೆ ವಹಿಸಿದ್ದರು. ಹಿಂದಿನ ಬ್ರಹ್ಮಕಲಶೋತ್ಸವ ಸಮಿತಿಯ ಕೋಶಾಧಿಕಾರಿ ಎಲ್ಲಂಗಳ ವಾಸುದೇವ ಹೊಳ್ಳ, ಜೀರ್ಣೋದ್ಧಾರ ಸಮಿತಿಯ ಉಪಾಧ್ಯಕ್ಷ ಜಯರಾಮ ರೈ ಹಾಗೂ ಗಣೇಶ್ ಭಂಡಾರಿ ಮಾಯಿಪ್ಪಾಡಿ, ಬೆದ್ರಡ್ಕ ಪೂಮಾಣಿ - ಕಿನ್ನಿಮಾಣಿ ದೇವಸ್ಥಾನದ ಪ್ರತಿನಿಧಿ ಲಕ್ಷ್ಮಣ ನೊಂಡ ಕೋಟೆಕುಂಜ, ಪುತ್ತೂರು ಕೊಟ್ಯ ಶ್ರೀ ಧೂಮಾವತಿ ದೇವಸ್ಥಾನದ ಧರ್ಮದರ್ಶಿ ನಾರಾಯಣ ಪೂಜಾರಿ ಹಾಗೂ ಪುಳ್ಕೂರು ಶ್ರೀ ಮಹಾದೇವ ದೇವಸ್ಥಾನದ ಅಧ್ಯಕ್ಷ ಶೀನ ಶೆಟ್ಟಿ ಕಜೆ ಅವರು ಶುಭಹಾರೈಸಿದರು.

> **ಮುಷ್ಟಿ ಕಾಣಿಕೆ ಸಮರ್ಪಣೆ**
> **ಎಡನೀರು ಶ್ರೀಗಳ ಸಮ್ಮುಖದಲ್ಲಿ ಭಕ್ತರಿಂದ ಮುಷ್ಟಿಕಾಣಿಕೆ ಸಮರ್ಪಣೆ ನಡೆಯಿತು. ಅನೇಕ ಭಕ್ತಾದಿಗಳು ತಮ್ಮ ವೈಯಕ್ತಿಕ ಹೆಸರಿನಲ್ಲಿ ಹಾಗೂ ಕುಟುಂಬ ಸದಸ್ಯರ ಹೆಸರಿನಲ್ಲಿ ಜೀರ್ಣೋದ್ಧಾರ ನಿಧಿಗೆ ಉದಾರ ದೇಣಿಗೆಗಳ ವಾಗ್ದಾನ ಮಾಡಿ ಕ್ಷೇತ್ರಾಭಿವೃದ್ಧಿಗೆ ಬೆಂಬಲ ಸೂಚಿಸಿದರು.**

ಈ ಸಂದರ್ಭದಲ್ಲಿ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರು ಜೀರ್ಣೋದ್ಧಾರ ನಿಧಿ ಸಂಗ್ರಹ ಅಭಿಯಾನದ ಅಂಗವಾಗಿ ಮುದ್ರಿಸಲಾದ ವಿಜ್ಞಾಪನಾ ಪತ್ರಗಳು ಹಾಗೂ ರಸೀದಿ ಪುಸ್ತಕಗಳನ್ನು ಸೂರ್ಯನಾರಾಯಣ ಕಾರಂತ, ಪ್ರಭಾಕರ ಕಾರಂತ, ಹರೀಶ್ ದೇಶಮಂಗಲ, ರಾಜೇಶ್ ಶೆಟ್ಟಿ ಬಳ್ಳೂರು, ಸುಮನಾ ಕಾರಂತ, ಶ್ಯಾಮಲಾ ಹಾಗೂ ಪುಷ್ಪಲತಾ ಅವರಿಗೆ ಸಾಂಕೇತಿಕವಾಗಿ ವಿತರಿಸುವ ಮೂಲಕ ನಿಧಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಜೀರ್ಣೋದ್ಧಾರ ಸಮಿತಿಯ ಕೋಶಾಧಿಕಾರಿ ಸುಬ್ರಹ್ಮಣ್ಯ ಕಾರಂತ, ಲೆಕ್ಕಪರಿಶೋಧಕ ವಾಸುದೇವ ಕಾರಂತ, ಸತೀಶ್ ಕಾರಂತ, ಅರುಣೇಶ್ ಕಾರಂತ, ಅಖಿಲೇಶ್ ಕಾರಂತ, ರವಿ ಬೆದ್ರಡ್ಕ, ಉಮೇಶ್ ಪೂಜಾರಿ, ರಾಧಾಕೃಷ್ಣ ಬೆದ್ರಡ್ಕ, ದೇವದಾಸ ಆಚಾರ್ಯ ದೇಶಮಂಗಲ, ನಾರಾಯಣ ಶೆಟ್ಟಿ ಕೋಟೆಕುಂಜ, ಸುಂದರ ಸೇರಿಗಾರ ಬೆದ್ರಡ್ಕ, ರಘು ಮಾಯಿಪ್ಪಾಡಿ, ಇಂಜಿನಿಯರ್ ಶಿವಶಂಕರ ಭಟ್ ಕಿದೂರು ಮತ್ತಿತರರು ಉಪಸ್ಥಿತರಿದ್ದರು. ಶರಣ್ಯ, ಸಾವಿತ್ರಿ ಹಾಗೂ ಧನಲಕ್ಷ್ಮಿ ಪ್ರಾರ್ಥನೆ ಹಾಡಿದರು. ಜೀರ್ಣೋದ್ಧಾರ ಸಮಿತಿಯ ಪ್ರಧಾನ ಕಾರ್ಯದರ್ಶಿ ಲೋಕೇಶ್ ಎಂ.ಬಿ. ಆಚಾರ್ ಕಂಬಾರು ಸ್ವಾಗತಿಸಿ, ಕಾರ್ಯದರ್ಶಿ ಪ್ರಸನ್ನ ಕಾರಂತ ವಂದಿಸಿದರು. ಕಾರ್ಯದರ್ಶಿ ಮೋಹನ್‌ಕುಮಾರ್ ಶೆಟ್ಟಿ ಅಡ್ಕ ಹಾಗೂ ಉಪಾಧ್ಯಕ್ಷ ಜಗದೀಶ್ ಆಚಾರ್ಯ ಕಂಬಾರು ಕಾರ್ಯಕ್ರಮ ನಿರೂಪಿಸಿದರು.

ಎಸ್‌ಡಿಎಂ ಮಂಗಳಜ್ಯೋತಿ ಸಮಗ್ರ ಶಾಲೆಯಲ್ಲಿ ವಿದ್ಯಾರ್ಥಿ ಮಂಡಳಿ ಅಸ್ತಿತ್ವಕ್ಕೆ



ಕೈಕಂಬ: ವಾಮಂಜೂರಿನ ಎಸ್‌ಡಿಎಂ ಮಂಗಳಜ್ಯೋತಿ ಸಮಗ್ರ ಶಾಲೆಯ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿ ಸರಕಾರ ಹಾಗೂ ವಿವಿಧ ಸಂಘಗಳ ಉದ್ಘಾಟನಾ ಸಮಾರಂಭ ಶನಿವಾರ ಶಾಲಾ ಸಭಾಂಗಣದಲ್ಲಿ ನಡೆಯಿತು.
ಮಂಗಳೂರು ಎಚ್‌ಪಿಸಿಎಲ್‌ನ ಸಹಾಯಕ ಮಾನವ ಸಂಪನ್ಮೂಲ ಅಧಿ ಕಾರಿ ವಾಸು ನಾಯ್ಕ್, ವಿದ್ಯಾರ್ಥಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು
ಶಾಲಾ ಆಡಳಿತಾಧಿಕಾರಿ ನರೇಶ್ ಮಲ್ಲಿಗೆಮಾಡು ಅಧ್ಯಕ್ಷತೆ ವಹಿಸಿದ್ದರು. ಪ್ರೌಢಶಾಲಾ ಮುಖ್ಯ ಶಿಕ್ಷಕ ರಮೇಶ್ ಆಚಾರ್ಯ ಮತ್ತು ಪ್ರಾಥಮಿಕ ವಿಭಾಗದ ಮುಖ್ಯ ಶಿಕ್ಷಕ ವಿಠಲ್ ವಾಗ್ಮೋರೆ ಅವರು ವಿದ್ಯಾರ್ಥಿ ನಾಯಕರಿಗೆ ಪ್ರಮಾಣವಚನ ಬೋಧಿಸಿದರು. ಪ್ರೌಢಶಾಲಾ ವಿಭಾಗದಿಂದ ಅಮಯ್ ಡಿ. ಹಾಗೂ ಪ್ರಾಥಮಿಕ ಶಾಲಾ ವಿಭಾಗದಿಂದ ಗೌತಮ್ ಅವರು ವಿದ್ಯಾರ್ಥಿ ನಾಯಕರಾಗಿ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿ ಸರಕಾರದ ಎಲ್ಲ ಮಂತ್ರಿಗಳು ಪ್ರಮಾಣವಚನ ಸ್ವೀಕರಿಸಿದರು. ವಿದ್ಯಾರ್ಥಿ ನಾಯಕ ಅಮಯ್ ಡಿ. ಸ್ವಾಗತಿಸಿ, ವಿದ್ಯಾರ್ಥಿನಿ ಅಂಕಿತಾ ನಿರೂಪಿಸಿದರು. ಪ್ರೌಢಶಾಲಾ ವಿದ್ಯಾರ್ಥಿ ನಾಯಕ ಅಮಯ್ ಡಿ, ಪ್ರಾಥಮಿಕ ವಿಭಾಗದ ವಿದ್ಯಾರ್ಥಿ ನಾಯಕ ಗೌತಮ್, ಮಂಗಳೂರು ಎಚ್‌ಪಿಸಿಎಲ್‌ನ ಸಹಾಯಕ ಮಾನವ ಸಂಪನ್ಮೂಲ ಅಧಿಕಾರಿ ವಾಸು ನಾಯ್ಕ್, ಶಾಲಾ ಆಡಳಿತಾಧಿಕಾರಿ ನರೇಶ್ ಮಲ್ಲಿಗೆಮಾಡು, ಪ್ರೌಢಶಾಲಾ ಮುಖ್ಯಶಿಕ್ಷಕ ರಮೇಶ್ ಆಚಾರ್ಯ, ಪ್ರಾಥಮಿಕ ವಿಭಾಗದ ಮುಖ್ಯಶಿಕ್ಷಕ ವಿಠಲ ವಾಗ್ಮೋರೆ ಉಪಸ್ಥಿತರಿದ್ದರು. ವಿದ್ಯಾರ್ಥಿ ಸಚಿನ್ ಅವರು ವಂದಿಸಿದರು. ದೈಹಿಕ ಶಿಕ್ಷಣ ಶಿಕ್ಷಕ ಶೇಖರ ಕಡ್ತಲ ಹಾಗೂ ಶಿಕ್ಷಕ ವರ್ಗ ಸಹಕರಿಸಿದರು.

ಸಂಪೂರ್ಣ ರಾಮಾಯಣ ಪ್ರವಚನ ಸಪ್ತಾಹದ ಉದ್ಘಾಟನಾ ಸಮಾರಂಭ



ಬೆಳ್ತಂಗಡಿ: ಮನುಷ್ಯನ ದೇಹ, ಮನಸ್ಸಿಗೆ, ಆತ್ಮಕ್ಕೆ ಉತ್ತಮವಿಚಾರಗಳನ್ನು ಉಣಬಡಿಸುವ ಸಂಘಟಕರ ಇಂತಹ ಪ್ರಯತ್ನ ಶ್ಲಾಘನೀಯ ಎಂದು ಎಸ್.ಡಿ.ಎಂ.ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಪ್ರೊ. ಸತೀಶ್ಚಂದ್ರ ಹೇಳಿದರು.
ಅವರು ಇಲ್ಲಿನ ಸಮಾಜ ಮಂದಿರದಲ್ಲಿ ಬೆಳ್ತಂಗಡಿ ತಾಲೂಕು ಸಾರ್ವಜನಿಕ ಶ್ರೀ ಗೌರೀ ಗಣೇಶೋತ್ಸವ ಸೇವಾ ಸಮಿತಿ ವತಿಯಿಂದ ನಡೆಯುವ ವಾಗ್ಮಿ ವೀಣಾ ಬನ್ನಂಜೆ ಅವರ ಸಂಪೂರ್ಣ ರಾಮಾಯಣ ಪ್ರವಚನ ಸಪ್ತಾಹದ ಉದ್ಘಾಟನಾ ಸಮಾರಂಭದಲ್ಲಿ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಧಾರ್ಮಿಕತೆ ಭಾರತದ ಜೀವನಾಡಿ. ಉತ್ತಮ ಆಲೋಚನೆಗಳನ್ನು ಮಾತು, ಕೃತಿಗಳ ಮೂಲಕ ತೋರಿಸಿಕೊಡುವುದನ್ನು ರಾಮಾಯಣ ತಿಳಿಸುತ್ತದೆ ಎಂದರು.
ನಿವೃತ್ತ ಮೇಜರ್ ಎಂ.ವಿ.ಭಟ್ ಸಪ್ತಾಹವನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಮಿತಿ ಅಧ್ಯಕ್ಷ ಹರೀಶ್ ಕುಮಾರ್ ವಹಿಸಿದ್ದರು. ವೀಣಾ ಬನ್ನಂಜೆ, ಬೆನಕ ಆಸ್ಪತ್ರೆಯ ಡಾ. ಭಾರತಿ ಭಟ್, ಉಪನ್ಯಾಸಕ ರವೀಶ್ ಪಡುಮಲೆ ಇದ್ದರು. ಪ್ರವಚನ ಜೂನ್ 21 ರವರೆಗೆ ಸಂಜೆ 6 ಗಂಟೆಯಿಂದ ನಡೆಯಲಿದೆ. ಸಮಿತಿ ಕಾರ್ಯದರ್ಶಿ ಆರೆಕಲ್ಲು ರಾಮಚಂದ್ರ ಭಟ್ ಸ್ವಾಗತಿಸಿದರು. ಉಪನ್ಯಾಸಕ ಶ್ರೀಶ ಕುಮಾರ್ ನಿರ್ವಹಿಸಿದರು.

ವಿದ್ಯಾನಿಕೇತನ ವಿದ್ಯಾಸಂಸ್ಥೆ: ನೂತನ ಸಭಾಂಗಣದ ಉದ್ಘಾಟನೆ



ಬಂಟ್ವಾಳ: ಅಮ್ಟಾಡಿ ಬಂಟ್ವಾಳ ವಿದ್ಯಾನಿಕೇತನ ವಿದ್ಯಾಸಂಸ್ಥೆ ಇದರ ನೂತನ ಸಭಾಂಗಣವನ್ನು ವಿದ್ಯಾಸಂಸ್ಥೆಯ ಮೇನೇಜಿಂಗ್ ಟ್ರಸ್ಟಿ ಬಿ.ಸುರೇಶ ಬಾಳಿಗ ಉದ್ಘಾಟಿಸಿ ಶುಭ ಹಾರೈಸಿದರು.
ವಿದ್ಯಾರ್ಥಿಗಳ ಸಾಂಸ್ಕೃತಿಕ ಚಟುವಟಿಕೆಗಳ ಅನುಕೂಲಕ್ಕಾಗಿ ಸಭಾಂಗಣ ನಿರ್ಮಿಸಲಾಗಿದೆ. ವಿದ್ಯಾರ್ಥಿಗಳ ಸಾಂಸ್ಕೃತಿಕ ಪ್ರತಿಭೆಗಳ ಅನಾವರಣಕ್ಕೆ ಇದು ವೇದಿಕೆಯಾಗಲಿದೆ ಎಂದರು.
ಟ್ರಸ್ಟಿ ಬಿ.ಕಿರಣ್ ಎಸ್.ಬಾಳಿಗ, ಕೋಶಾಧಿಕಾರಿ ಸಂಜಯ್ ಬಾಳಿಗ, ಸಲಹಾ ಸಮಿತಿ ಅಧ್ಯಕ್ಷ ವೆಂಕಟೇಶ ನಾಯಕ್ ,ಕಾನೂನು ಸಲಹಾ ತಜ್ಞ ವೆಂಕಟರಮಣ ಶೆಣೈ, ನ್ಯಾಯವಾದಿ ಶ್ರೀಧರ ಪೈ, ಶಾಲಾ ಸಂಚಾಲಕ ವಿವೇಕಾನಂದ ಕಾಮತ್ ವೇದಿಕೆಯಲ್ಲಿದ್ದು ಶುಭ ಹಾರೈಸಿ ಮಾತನಾಡಿದರು. ಹಿರಿಯ ಶಿಕ್ಷಕರಾದ ರಾಧಾಕೃಷ್ಣ ಬಾಳಿಗ, ಜಯಾನಂದ ಪೆರಾಜೆ, ಮುಖ್ಯಶಿಕ್ಷಕಿ ಹೇಮಲತಾ ಶಾಲಾ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ವಿವರ ನೀಡಿದರು. ಮಾಂಟೆಸೋರಿ ಶಿಕ್ಷಣ ದ ಮುಖ್ಯಶಿಕ್ಷಕಿ ಸವಿತಾ ಕಿರಣ್ ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.



ಕೈಕಂಬದ ಎಡಪದವು ವಲಯದ ಗಂಜಿಮಠ ಕಾರ್ಯಕ್ಷೇತ್ರದಲ್ಲಿ 'ಜ್ಯೋತಿ' ನಾಮಾಂಕಿತದೊಂದಿಗೆ ನೂತನ ಜ್ಞಾನವಿಕಾಸ ಕೇಂದ್ರವನ್ನು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಂಗಳೂರು ತಾಲೂಕು ಯೋಜನಾಧಿಕಾರಿ ಗಿರೀಶ್ ಕುಮಾರ್ ಭಾನುವಾರ ಉದ್ಘಾಟಿಸಿದರು. ಶಾಲಾ ಶಿಕ್ಷಕಿ ಕವಿತಾ, ಗ್ರಾ.ಪಂ. ಮಾಜಿ ಅಧ್ಯಕ್ಷೆ ಮೀನಾಕ್ಷಿ, ಒಕ್ಕೂಟದ ಅಧ್ಯಕ್ಷೆ ಅನಿತಾ, ವಲಯದ ಮೇಲ್ವಿಚಾರಕಿ ನೇತ್ರಾವತಿ, ಜ್ಞಾನವಿಕಾಸ ಸಮನ್ವಯ ಅಧಿಕಾರಿ ಪ್ರಮೀಳಾ, ಸೇವಾ ಪ್ರತಿನಿಧಿ ನಿರ್ಮಲ, ಸ್ವಸಹಾಯ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಚಂದಳಿಕೆ:ಯಕ್ಷ ಶಿಕ್ಷಣ ತರಬೇತಿಗೆ ಚಾಲನೆ



ಬಂಟ್ವಾಳ: ಚಂದಳಿಕೆ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಯಕ್ಷ ಧ್ರುವ ಪಟ್ಲ ಫೌಂಡೇಶನ್ ಮಂಗಳೂರು ಆಶ್ರಯದಲ್ಲಿ ಪಟ್ಲ ಫೌಂಡೇಶನ್ ವಿಟ್ಲ ಘಟಕದ ಸಹಯೋಗದೊಂದಿಗೆ 'ಯಕ್ಷ ಧ್ರುವ ಯಕ್ಷ ಶಿಕ್ಷಣ ತರಬೇತಿ'ಗೆ ಚಾಲನೆ ನೀಡಲಾಯಿತು.
ಯಕ್ಷ ಧ್ರುವ ಪಟ್ಲ ಫೌಂಡೇಶನ್ ವಿಟ್ಲ ಘಟಕದ ಅಧ್ಯಕ್ಷ ಪೂವಪ್ಪ ಶೆಟ್ಟಿ ಅಳಿಕೆ ಕಾರ್ಯಕ್ರಮ ಉದ್ಘಾಟಿಸಿ, ಯಕ್ಷಧ್ರುವ ಪಟ್ಲ ಫೌಂಡೇಶನ್ ತನ್ನ ಸಮಾಜಮುಖಿ ಸೇವಾ ಕಾರ್ಯದ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದು, ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ತರಬೇತಿಯ ಜತೆಗೆ ವಿದ್ಯಾರ್ಥಿವೇತನವನ್ನು ನೀಡುತ್ತಿದೆ. ವಿದ್ಯಾರ್ಥಿಗಳು ಈ ಯಕ್ಷ ಶಿಕ್ಷಣವನ್ನು ಪಡೆದುಕೊಂಡು, ಉತ್ತಮ ಕಲಾವಿದರಾಗುವುದರ ಜತೆಗೆ ಆದರ್ಶ ವ್ಯಕ್ತಿಗಳಾಗಿ ಮೂಡಿಬರಬೇಕು ಎಂದರು.
ಚಂದಳಿಕೆ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ಭವಾನಿ ರೈ ಕೊಲ್ಯ ಅಧ್ಯಕ್ಷತೆ ವಹಿಸಿದ್ದರು. ಯಕ್ಷ ಪೋಷಕ ಕೃಷ್ಣಪ್ರಸಾದ್ ವಿಟ್ಲ, ಪಟ್ಲ ಫೌಂಡೇಶನ್ ವಿಟ್ಲ ಘಟಕದ ಗೌರವ ಸಲಹೆಗಾರರಾದ ರಾಧಾಕೃಷ್ಣ ಶೆಟ್ಟಿ ಚೆಲ್ಲಡ್ಕ,ಯಕ್ಷ ಧ್ರುವ ಪಟ್ಲ ಫೌಂಡೇಶನ್ ವಿಟ್ಲ ಘಟಕದ ಪ್ರಧಾನ ಕಾರ್ಯದರ್ಶಿ ಅರವಿಂದ ರೈ ಮೂರ್ಜೆಬೆಟ್ಟು,ವಿಟ್ಲ ಯಕ್ಷ ಭಾರತ ಸೇವಾ ಪ್ರತಿಷ್ಠಾನದ ಅಧ್ಯಕ್ಷರಾದ ಸಂಜೀವ ಪೂಜಾರಿ, ಚಂದಳಿಕೆ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷ ದೇಜಪ್ಪ ಪೂಜಾರಿ, ಯಕ್ಷ ಗುರು ಓಂಪ್ರಕಾಶ್ ಕಲ್ಲಡ್ಕ ಜಗಜೀವನ್ ರಾಮ್ ಶೆಟ್ಟಿ ,ಸುರೇಶ್ ಶೆಟ್ಟಿ ವೇಣುಗೋಪಾಲ್ ಶೆಟ್ಟಿ ಮೊದಲಾದವರು ಇದ್ದರು. ಶಾಲಾ ಮುಖ್ಯಗುರು ವಿಶ್ವನಾಥ ಕುಳಾಲು ಸ್ವಾಗತಿಸಿ, ಶಿಕ್ಷಕಿ ರೇಷ್ಮಾ ವಂದಿಸಿದರು. ಶಿಕ್ಷಕ ವೆಂಕಟೇಶ್ ಅನಂತಾಡಿ ಕಾರ್ಯಕ್ರಮ ನಿರೂಪಿಸಿದರು.

ಕರ್ನೂರು ಒಕ್ಕೂಟದ ತ್ರೈ ಮಾಸಿಕ ಸಭೆ: ನೂತನ ಪದಾಧಿಕಾರಿಗಳ ಆಯ್ಕೆ



ಬಡಗನ್ನೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಪುತ್ತೂರು ಬಿ.ಸಿ. ಟ್ರಸ್ಟ್ ಕರ್ನೂರು ಒಕ್ಕೂಟದ ತ್ರೈ ಮಾಸಿಕ ಸಭೆಯು ನೆಟ್ಟಣಿಗೆ ಮೂಡ್ನೂರು ಶಾಲೆಯಲ್ಲಿ ನಡೆಯಿತು.
ಒಕ್ಕೂಟದ ಅಧ್ಯಕ್ಷೆ ಆಶಾಲತಾ ರೈ ಅವರು ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿ ಶುಭ ಹಾರೈಸಿದರು. ಅರಿಯಡ್ಕ ವಲಯ ವಲಯ ಮೇಲ್ವಿಚಾರಕಿ ಪ್ರಣೀತಾ ಯೋಜನೆಯ ನಿಯಮಗಳ ಬಗ್ಗೆ ಮಾಹಿತಿ ನೀಡಿದರು. ಬಳಿಕ 2026-27ನೇ ಸಾಲಿನ ನೂತನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು.

ಸಮಿತಿ ರಚನೆ

ಒಕ್ಕೂಟದ ನೂತನ ಅಧ್ಯಕ್ಷರಾಗಿ ಕೊರಗಪ್ಪ ನಾಯ್ಕ ಕಲ್ಲಾಜೆ, ಕಾರ್ಯದರ್ಶಿಯಾಗಿ ರೀತಾ ಗುತ್ತು, ಉಪಾಧ್ಯಕ್ಷರಾಗಿ ಪ್ರಶಾಂತ್ ರೈ ಕುಂಟಾಪು, ಜೊತೆ ಕಾರ್ಯದರ್ಶಿಯಾಗಿ ಸುಮತಿ ಗುತ್ತು ಹಾಗೂ ಕೋಶಾಧಿಕಾರಿಯಾಗಿ ದಿವ್ಯ ಎಂ. ಅವರನ್ನು ಆಯ್ಕೆ ಮಾಡಲಾಯಿತು. ವೇದಿಕೆಯಲ್ಲಿ ನಿಕಟಪೂರ್ವ ಕಾರ್ಯದರ್ಶಿ ಪುಷ್ಪಾವತಿ ಬಿ.ಎಲ್., ಸೇವಾ ಪ್ರತಿನಿಧಿ ಕುಸುಮ ಉಪಸ್ಥಿತರಿದ್ದರು. ಒಕ್ಕೂಟಕ್ಕೆ ನೂತನವಾಗಿ ಆಯ್ಕೆಗೊಂಡ ಅಧ್ಯಕ್ಷರು ಪದಾಧಿಕಾರಿಗಳು ನಿಕಟಪೂರ್ವ ಅಧ್ಯಕ್ಷರು ಪದಾಧಿಕಾರಿಗಳು, ಹಾಗೂ ಸ್ವಸಹಾಯ ಮತ್ತು ಪ್ರಗತಿಬಂಧು ತಂಡಗಳ ಸದಸ್ಯರು ಉಪಸ್ಥಿತರಿದ್ದರು.
ಮಹಾಲಕ್ಷ್ಮಿ ತಂಡದ ಸದಸ್ಯೆ ಆಶಾಲತಾ ಸ್ವಾಗತಿಸಿ, ವೀಣಾ ವಂದಿಸಿದರು. ಒಕ್ಕೂಟದ ಕಾರ್ಯದರ್ಶಿ ಪ್ರಮೀಳಾ ರೈ ಕುಂಟಾಪು ಕಾರ್ಯಕ್ರಮ ನಿರ್ವಹಿಸಿದರು.

ಕಾಪು ಪುರಸಭೆಯಿಂದ ವಿಶ್ವ ಪರಿಸರ ದಿನ



ಕಾಪು ಪುರಸಭೆ ವತಿಯಿಂದ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ 'ತಾಯಿಗಾಗಿ ಒಂದು ಗಿಡ' ಕಾರ್ಯಕ್ರಮದಡಿ ಸ್ವ-ಸಹಾಯ ಗುಂಪುಗಳ ಮೂಲಕ ಗಿಡ ನೆಡುವ ಕಾರ್ಯಕ್ರಮಕ್ಕೆ ಪುರಸಭಾ ಅಧ್ಯಕ್ಷರಾದ ಮೋಹಿನಿ ಶೆಟ್ಟಿ ಚಾಲನೆ ನೀಡಿದರು. ಪುರಸಭೆಯ ಅಧಿಕಾರಿಗಳು ಕಮ್ಯುನಿಟಿ-ಮೊಬಿಲೈಸರ್ ಗಳು ಮತ್ತು ಸ್ವ-ಸಹಾಯ ಸಂಘದ ಸದಸ್ಯರು ಭಾಗವಹಿಸಿದರು.

ವಿ. ಬಾಡಗ ಗ್ರಾಮದಲ್ಲಿ ಕ್ರೀಡಾ ತರಬೇತಿ ಕೇಂದ್ರ- ವಸತಿ ನಿಲಯ ನಿರ್ಮಾಣ | ಕಾಮಗಾರಿ ಪ್ರಗತಿ ಪರಿಶೀಲನೆ

ಸುಮಾರು 45 ಕೋಟಿ ರೂ ವೆಚ್ಚದಲ್ಲಿ ವಿವಿಧ ಕಾಮಗಾರಿ: ಎ.ಎಸ್.ಪೊನ್ನಣ್ಣ

ಮಡಿಕೇರಿ: ವೀರಾಜಪೇಟೆ ತಾಲೂಕಿನ ವಿ.ಬಾಡಗ ಬಳಿ ನಿರ್ಮಾಣವಾಗುತ್ತಿರುವ 'ಕ್ರೀಡಾ ತರಬೇತಿ ಕೇಂದ್ರ'ದ ಆಡಳಿತ ಕಟ್ಟಡ ಕಾಮಗಾರಿಯನ್ನು ಶಾಸಕ ಎ.ಎಸ್.ಪೊನ್ನಣ್ಣ ಸೋಮವಾರ ಭೇಟಿ ನೀಡಿ ಪರಿಶೀಲಿಸಿದರು.
ಸುಮಾರು 11 ಎಕರೆ ಜಾಗದಲ್ಲಿ ಅಥ್ಲೆಟಿಕ್ ಮಾದರಿಯಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಕ್ರೀಡಾ ತರಬೇತಿ ಕೇಂದ್ರದ ಆಡಳಿತ ಭವನ ಜತೆಗೆ ಇತರೆ ಕಾಮಗಾರಿಯ ಜಾಗವನ್ನು ಶಾಸಕರು ವೀಕ್ಷಿಸಿದರು.
ಸುಮಾರು 45 ಕೋಟಿ ರೂ. ಯೋಜನಾ ವೆಚ್ಚದಲ್ಲಿ ಕ್ರೀಡಾ ತರಬೇತಿ ಕೇಂದ್ರ ಹಾಗೂ ವಸತಿ ನಿಲಯ ಸೇರಿದಂತೆ ವಿವಿಧ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಲಾಗಿದೆ. ಕ್ರೀಡಾ ತರಬೇತಿ ಕೇಂದ್ರ ವ್ಯಾಪ್ತಿಯಲ್ಲಿ ಪ್ರಥಮ ಹಂತದಲ್ಲಿ 2 ಕೋಟಿ ರೂ. ವೆಚ್ಚದಲ್ಲಿ



ಆಡಳಿತ ಭವನ ನಿರ್ಮಾಣವಾಗುತ್ತಿದ್ದು ಈ ಕಾಮಗಾರಿಯನ್ನು ಶಾಸಕರು ಪರಿಶೀಲಿಸಿದರು.
ಆಡಳಿತ ಭವನದಲ್ಲಿ ನೆಲಮಹಡಿ ಹಾಗೂ ಮೊದಲ ಮಹಡಿ ಇರಲಿದ್ದು ಒಳಾಂಗಣ ಮತ್ತು ಹೊರಾಂಗಣ ಕ್ರೀಡಾ ತರಬೇತಿ ಕೇಂದ್ರಗಳು ನಿರ್ಮಾಣವಾಗಲಿವೆ.

> **ಅನುದಾನ ಬಿಡುಗಡೆ**
> **ಈಗಾಗಲೇ ಮುಖ್ಯಮಂತ್ರಿ ಅವರು ಕ್ರೀಡಾ ತರಬೇತಿ ಕೇಂದ್ರ ನಿರ್ಮಾಣಕ್ಕೆ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆ ನಿಟ್ಟಿನಲ್ಲಿ ಹಣ ಬಿಡುಗಡೆಯಾಗಲಿದೆ. ಸದ್ಯ ರಾಜ್ಯಸಭಾ ಸದಸ್ಯ ಅಜಯ್ ಮಾಕನ್ ಅವರಿಂದ ಅನುದಾನ ಬಿಡುಗಡೆಯಾಗಿದ್ದು ಆಡಳಿತ ಭವನ ನಿರ್ಮಾಣವಾಗುತ್ತಿದೆ. ಮುಂದಿನ ಎರಡು ವರ್ಷದಲ್ಲಿ ಸುಸಜ್ಜಿತ ಕ್ರೀಡಾ ತರಬೇತಿ ಕೇಂದ್ರ ಆರಂಭವಾಗಲಿದೆ.**
> ● ಎ.ಎಸ್.ಪೊನ್ನಣ್ಣ

ಒಳಾಂಗಣದಲ್ಲಿ ಶಟಲ್ ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ಸ್ಕ್ವಾಷ್, ಜಿಮ್, ಹೊರಾಂಗಣದಲ್ಲಿ ಹಾಕಿ ಟರ್ಫ್, ಈಜುಕೊಳ, ಕ್ರಿಕೆಟ್, ವಾಲಿಬಾಲ್, ಫುಟ್ಬಾಲ್ ಹೀಗೆ ವಿವಿಧ ರೀತಿಯ ಕ್ರೀಡಾ ಕೇಂದ್ರಗಳು ನಿರ್ಮಾಣವಾಗಲಿವೆ. ಆಡಳಿತ ಭವನದ ನೆಲ ಮಹಡಿ ಮತ್ತು ಮೊದಲ ಮಹಡಿಯಲ್ಲಿ ಕಚೇರಿ ಜೊತೆಗೆ ಒಳಾಂಗಣ ಕ್ರೀಡಾ ಚಟುವಟಿಕೆಯ ತರಬೇತಿ ಕೇಂದ್ರಗಳು ನಿರ್ಮಾಣವಾಗಲಿವೆ.
ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಶಾಸಕ ಎ.ಎಸ್.ಪೊನ್ನಣ್ಣ ಅವರು, ಕ್ರೀಡಾ ತರಬೇತಿ ಕೇಂದ್ರದ ಕಾಮಗಾರಿ ಪ್ರಗತಿಯಲ್ಲಿದೆ. ಟೆನ್ನಿಸ್, ಜಿಮ್, ಹಾಕಿ ಟರ್ಫ್, ಅಥ್ಲೆಟಿಕ್ ಟ್ರ್ಯಾಕ್, ಈಜುಕೊಳ, ಟೇಬಲ್ ಟೆನ್ನಿಸ್, ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ವಿದ್ಯಾರ್ಥಿ ನಿಲಯ, ವೈದ್ಯಕೀಯ ವಿಭಾಗ ಸೇರಿದಂತೆ ಒಂದು ಸುಸಜ್ಜಿತ ಅಂತಾರಾಷ್ಟ್ರೀಯ ಮಾದರಿಯಲ್ಲಿ ಕ್ರೀಡಾ ತರಬೇತಿ ಕೇಂದ್ರ ಹಾಗೂ ವಸತಿ ನಿಲಯ ಕಾಮಗಾರಿಗಳು ಹಂತ ಹಂತವಾಗಿ ನಿರ್ಮಾಣಗೊಳ್ಳಲಿವೆ ಎಂದು ಮಾಹಿತಿ ನೀಡಿದರು.
ಕ್ರೀಡಾ ತರಬೇತಿ ಕೇಂದ್ರದಲ್ಲಿ 50 ಬಾಲಕರು ಮತ್ತು 50 ಬಾಲಕಿಯರಿಗೆ ಪ್ರತ್ಯೇಕ ವಸತಿ ನಿಲಯ ನಿರ್ಮಾಣವಾಗಲಿದೆ. ಹೆಚ್ಚು ಬೇಡಿಕೆ ಇದ್ದಲ್ಲಿ ಸಂಖ್ಯೆ ಹೆಚ್ಚಿಸಲಾಗುವುದು ಎಂದರು.
ಗ್ಯಾರಂಟಿ ತಾಲೂಕು ಘಟಕದ ಅಧ್ಯಕ್ಷ ಕಾಳಿಮಾಡ ಪ್ರಶಾಂತ್, ಸ್ಥಳೀಯರಾದ ಕಂಜಿತಂಡ ಗಣಿ ಮೊಣ್ಣಪ್ಪ ಕಂಜಿತಂಡ ಪೂವಣ್ಣ, ಕೊಂಗಂಡ ಕಾಶಿ ಕಾವೇರಪ್ಪ ಕೊಲ್ಲೀರ ಬೋಪಣ್ಣ, ಉಮೇಶ್ ಕೇಚಮಯ್ಯ, ಗಿರೀಶ್ ಸುಂದರ, ಕೋಲತಂಡ ರಘು ಮಾಚಯ್ಯ, ಸೂರಜ್ ಹೊಸೂರು, ಕೇಚಮಾಡ ಸಿದ್ದು ನಾಚಪ್ಪ ಬಿ. ರಾಜ ಮತ್ತಿತರರು ಇದ್ದರು.

ಸುತ್ತಮುತ್ತ

ಕಿದೂರು ಶಿವಸೇವಾ ವೃಂದದ ಮಹಾಸಭೆ: ಪದಾಧಿಕಾರಿಗಳ ಆಯ್ಕೆ

ಕುಂಬಳೆ: ಕಿದೂರು ಶಿವಸೇವಾ ವೃಂದದ ಮಹಾಸಭೆಯು ಸಂಘದ ಅಧ್ಯಕ್ಷ ಸದಾಶಿವ ರೈ ಮೇಗಿನಮನೆ ಅವರ ಅಧ್ಯಕ್ಷತೆಯಲ್ಲಿ ಕಿದೂರು ಪರಿಸರದಲ್ಲಿ ಜರಗಿತು. ಸಭೆಯಲ್ಲಿ ವಿವಿಧ ಯೋಜನೆಗಳ ಬಗ್ಗೆ ಸಮಾಲೋಚಿಸಲಾಯಿತು. ಅಲ್ಲದೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.




ಅಧ್ಯಕ್ಷರಾಗಿ ಶ್ಯಾಮಪ್ರಕಾಶ್ ಪುಣಿಯೂರು, ಉಪಾಧ್ಯಕ್ಷರಾಗಿ ಬಾಲಕೃಷ್ಣ ಪುಣಿಯೂರು, ಕಾರ್ಯದರ್ಶಿಯಾಗಿ ಪ್ರೀತಮ್ ಪಿ., ಜೊತೆ ಕಾರ್ಯಾದರ್ಶಿಯಾಗಿ ನವೀನ್ ಬೈತ್ರಲ್, ಕೋಶಾಧಿಕಾರಿಯಾಗಿ ಸದಾಶಿವ ರೈ ಮೇಗಿನಮನೆ, ಲೆಕ್ಕ ಪರಿಶೋಧಕರಾಗಿ ಧೀರಜ್ ಪುಣಿಯೂರು, ಕ್ರೀಡಾ ಕಾರ್ಯದರ್ಶಿಯಾಗಿ ಮನೀಶ್‌ರಾಜ್ ಪುಣಿಯೂರಡ್ಕ, ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಧನಂಜಯ ಪುಣಿಯೂರು ಅವರನ್ನು ಆರಿಸಲಾಯಿತು. ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಹರಿಪ್ರಸಾದ್ ಪಿ., ಉಮೇಶ ಪಿ., ಚಂದ್ರಶೇಖರ ಮುಂಡ್ರೆಲ್, ನಿತಿನ್ ಪಿ., ರೂಪೇಶ್ ಪಿ. ಅವರನ್ನು ಆಯ್ಕೆ ಮಾಡಲಾಯಿತು. ಹರಿಪ್ರಸಾದ್ ಪುಣಿಯೂರಡ್ಕ ಸ್ವಾಗತಿಸಿ, ನೂತನ ಕಾರ್ಯದರ್ಶಿ ಪ್ರೀತಮ್ ಪಿ. ವಂದಿಸಿದರು.

ಶಿಕ್ಷಕರ ಹುದ್ದೆ ಖಾಲಿ

ಕಾಸರಗೋಡು: ಪೆರಿಯ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ವಿಭಾಗದಲ್ಲಿ ಉಪನ್ಯಾಸಕರ ನೇಮಕಾತಿಗಾಗಿ ಸಂದರ್ಶನವು ಜೂ.19 ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ. ಸಂಬಂಧಿತ ವಿಷಯದಲ್ಲಿ ಶೇಕಡಾ 60ಕ್ಕಿಂತ ಕಡಿಮೆಯಿಲ್ಲದ ಅಂಕಗಳೊಂದಿಗೆ ಇಂಜಿನಿಯರಿಂಗ್ ಪದವಿ ವಿದ್ಯಾರ್ಹತೆಯಾಗಿದೆ. ಹೆಚ್ಚಿನ ವಿವರಗಳಿಗೆ 0467 2234020 ಸಂಪರ್ಕಿಸಬಹುದು.

ಆರ್ಥಿಕ ಸಹಾಯಕ್ಕಾಗಿ ಅರ್ಜಿ ಆಹ್ವಾನ

ಕಾಸರಗೋಡು: ಎಸ್‌ಎಸ್‌ಎಲ್‌ಸಿ, ಪ್ಲಸ್ ಟು, ಪದವಿ ಮತ್ತು ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಹೆಚ್ಚಿನ ಫಲಿತಾಂಶ ಗಳಿಸಿದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪರಿಶಿಷ್ಟ ಪಂಗಡ ಅಭಿವೃದ್ಧಿ ಇಲಾಖೆಯು ಆರ್ಥಿಕ ನೆರವು ನೀಡಲಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನಿಷ್ಠ ಆರು ಬಿಎಸ್ ಮತ್ತು ನಾಲ್ಕು ಸಿ, ಪ್ಲಸ್ ಟುನಲ್ಲಿ ನಾಲ್ಕು ಬಿಎಸ್ ಮತ್ತು ಎರಡು ಸಿ ಮತ್ತು ಪದವಿ ಮತ್ತು ಸ್ನಾತಕೋತ್ತರ ಮಟ್ಟದಲ್ಲಿ ಶೇಕಡಾ 60ರಷ್ಟು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಾಗುವುದು. ವೆಳ್ಳರಿಕುಂಡು ತಾಲೂಕು ವ್ಯಾಪ್ತಿಯ 2025–26ನೇ ಸಾಲಿನಲ್ಲಿ ಮೊದಲ ಬಾರಿಗೆ ಪರೀಕ್ಷೆ ಬರೆದು ಉತ್ತೀರ್ಣರಾದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ನಿರ್ದಿಷ್ಟಪಡಿಸಿದ ಅರ್ಜಿಗಳನ್ನು ಪೂರಕ ದಾಖಲೆಗಳೊಂದಿಗೆ ಜುಲೈ 5ರೊಳಗೆ ಬುಡಕಟ್ಟು ಅಭಿವೃದ್ಧಿ ಕಚೇರಿ ಪರಪ್ಪ, ಬುಡಕಟ್ಟು ವಿಸ್ತರಣಾ ಕಚೇರಿ ಪನತ್ತಡಿ ಮತ್ತು ಭೀಮನಡಿ ಕಚೇರಿಗಳಿಗೆ ಸಲ್ಲಿಸಬೇಕು. ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಫಲಿತಾಂಶ ಘೋಷಣೆಯಾದ ಒಂದು ತಿಂಗಳೊಳಗೆ ತಮ್ಮ ಅರ್ಜಿಗಳನ್ನು ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ 0467 2960111 ಕರೆ ಮಾಡಬಹುದು.

ಚಾಲಕರ ನೇಮಕಾತಿ

ಕಾಸರಗೋಡು: ಮುಳಿಯಾರು ಗ್ರಾಮ ಪಂಚಾಯತ್‌ನಲ್ಲಿ ಚಾಲಕರ ನೇಮಕಾತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕೊನೆಯ ದಿನಾಂಕ ಜೂ.24ರಂದು ಸಂಜೆ 4 ಗಂಟೆ ಆಗಿದೆ. ಘನ ವಾಹನಗಳ ಚಾಲನಾ ಪರವಾನಗಿ ಅರ್ಹತೆಯಾಗಿದೆ. ಹೆಚ್ಚಿನ ವಿವರಗಳಿಗೆ 04994 250226 ಕರೆ ಮಾಡಬಹುದು.

ಉಪನ್ಯಾಸಕರ ನೇಮಕಾತಿ

ಕಾಸರಗೋಡು: ಪೆರಿಯ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನ ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ವಿಭಾಗದಲ್ಲಿ ಉಪನ್ಯಾಸಕರ ನೇಮಕಾತಿಗಾಗಿ ಸಂದರ್ಶನವು ಜೂ.19ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ. ಸಂಬಂಧಿತ ವಿಷಯದಲ್ಲಿ ಕನಿಷ್ಠ ಶೇಕಡಾ 60ರಷ್ಟು ಅಂಕಗಳೊಂದಿಗೆ ಇಂಜಿನಿಯರಿಂಗ್ ಪದವಿ ವಿದ್ಯಾರ್ಹತೆಯಾಗಿದೆ. ಹೆಚ್ಚಿನ ಮಾಹಿತಿಗಾಗಿ 0467 2234020 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಅಪಾಯಕಾರಿಯಾಗಿದೆ ಮಾಣಿಮೂಲೆ, ಬಂದಡ್ಕ ಮಾರ್ಗದಲ್ಲಿರುವ 50 ವರುಷ ಹಳೆಯ ಶಿಥಿಲ ಸೇತುವೆ

ಪುಳಿಂಜಾಲ್‌ನಲ್ಲಿ ನೂತನ ಸೇತುವೆಯ ನಿರ್ಮಾಣಕ್ಕೆ ಬೇಡಿಕೆ

ಕಾಸರಗೋಡು: ಕೇರಳ – ಕರ್ನಾಟಕ ರಾಜ್ಯಗಳ ಗಡಿ ಭಾಗವಾದ ಮಾಣಿಮೂಲೆ ಮತ್ತು ಬಂದಡ್ಕ ರೂಟ್‌ನ ಮಧ್ಯೆಯಿರುವ ಪುಳಿಂಜಾಲ್ ಪ್ರದೇಶದಲ್ಲಿ ತೋಡಿಗೆ ನೂತನ ಸೇತುವೆ ನಿರ್ಮಿಸಬೇಕೆಂಬ ಬೇಡಿಕೆಯು ವ್ಯಾಪಕವಾಗಿ ಕೇಳಿಬರುತ್ತಿದೆ.

ಪ್ರಸ್ತುತವಿರುವ ಸೇತುವೆಯು ಅತ್ಯಂತ ಹಳೆಯದಾದ ಹಿನ್ನೆಲೆಯಲ್ಲಿ ಅಪಾಯಕಾರಿ ಸ್ಥಿತಿಯಲ್ಲಿದೆ. ಕರ್ನಾಟಕದ ಗಡಿಭಾಗವಾದ ಕಣ್ಣಾಡಿತೋಡಿನಿಂದ ಆರಂಭಗೊಂಡು 34.55 ಕಿಲೋ ಮೀಟರ್ ದೂರಕ್ಕೆ ಪೊಯಿನಾಚಿ ರಾಷ್ಟ್ರೀಯ ಹೆದ್ದಾರಿಗೆ ತಲುಪುವ ತೆಕ್ಕಿಲ್ – ಆಲೆಟ್ಟಿ ರಸ್ತೆಯ ಎರಡು ಸೇತುವೆಗಳಲ್ಲಿ ಪುಳಿಂಜಾಲ್ ಒಂದಾಗಿದೆ. ಕರಿಚ್ಚೇರಿ ಹೊಳೆಯ ಸೇತುವೆ ಇನ್ನೊಂದಾಗಿದೆ. ಪುಳಿಂಜಾಲ್ ಸೇತುವೆಗೆ 50 ವರ್ಷಗಳಿಗೂ ಹೆಚ್ಚಿನ ಇತಿಹಾಸವಿದೆ. ಕರ್ನಾಟಕಕ್ಕೆ ತೆರಳಲು ಹಾಗೂ ಅಲ್ಲಿಂದ ಕೇರಳಕ್ಕೆ ಬರಲು ಸರಕು ವಾಹನಗಳು, ಪ್ರವಾಸೋದ್ಯಮ ವಾಹನಗಳು, ನಿತ್ಯ ಸಂಚರಿಸುವ ವಾಹನಗಳು ಮೊದಲಾದ ಹಲವಾರು ವಾಹನಗಳು ಹಾದು ಹೋಗುವ ಸೇತುವೆ ಪ್ರದೇಶದ ಹೊಂಡಗುಂಡಿಗಳನ್ನು ದುರಸ್ತಿಗೊಳಿಸಿ ಡಾಮರೀಕರಣ ನಡೆಸಬೇಕೆಂಬುದು ಜನರ ಬಹುಕಾಲದ ಬೇಡಿಕೆಯಾಗಿದೆ.

ಸೇತುವೆಯಲ್ಲಿ ಡಾಮರು ಹಾನಿಗೀಡಾಗಿದೆ ಶೋಚನೀಯ ಸ್ಥಿತಿಯಲ್ಲಿದೆ. ಅವುಗಳಲ್ಲಿ ನೀರು ಸಂಗ್ರಹಗೊಂಡು ಮಳೆಗಾಲದಲ್ಲಿ ಸಂಚಾರ ದುಸ್ತರವಾಗಿದೆ. ಜಲ್ಲಿಕಲ್ಲುಗಳು ಎದ್ದು ಹೋಗಿವೆ. ಮೂರು ವರ್ಷಗಳ ಹಿಂದೆ ಹೊಂಡಗುಂಡಿಗಳನ್ನು ದುರಸ್ತಿಗೊಳಿಸಿ ಡಾಮರೀಕರಣ ನಡೆಸಲಾಗಿದ್ದರೂ ಕೆಲವೇ ತಿಂಗಳುಗಳಲ್ಲಿ ಹದಗೆಟ್ಟಿತ್ತು. ಸೇತುವೆಯನ್ನು ಹಾದು ಹೋಗುವುದು ಕಳೆದ ಮಳೆಗಾಲದಲ್ಲಿ ವಾಹನಗಳಿಗೆ ಭಾರೀ ಸಾಹಸವೇ ಆಗಿತ್ತು.

ನೀರು ಕಟ್ಟಿ ನಿಲ್ಲುವುದರಿಂದ ಹೊಂಡಗಳ ಆಳ ತಿಳಿಯದೆ ಹಲವಾರು ವಾಹನಗಳು ಹೊಂಡಗಳಿಗೆ ಬೀಳುವುದು ಸಾಮಾನ್ಯವಾಗಿ, ಮಣ್ಣು ಕೊಚ್ಚಿಹೋಗಿ ಇಲ್ಲಿ ಸೇರುತ್ತಿರುವುದರಿಂದ ಅಪಾಯ ಹೆಚ್ಚಿದೆ.



ಅಪಘಾತದ ಸಂದರ್ಭ ಸೇತುವೆಯ ಕಬ್ಬಿಣದ ತಡೆಬೇಲಿಗೆ ಹಾನಿ

ವರ್ಷಗಳ ಹಿಂದೆ ವಿವಿಧ ಅಪಘಾತಗಳಲ್ಲಿ ಲಾರಿ ಮತ್ತು ಜೀಪು ಡಿಕ್ಕಿ ಹೊಡೆದು ಸೇತುವೆಯ ಕಬ್ಬಿಣದ ತಡೆಬೇಲಿಗೆ ಹಾನಿಯಾಗಿದ್ದರೂ ಇನ್ನು ದುರಸ್ತಿಗೊಳಿಸಲಿಲ್ಲ. ಅಡಿಭಾಗದ ಕಾಂಕ್ರೀಟ್ ಸ್ಲ್ಯಾಬ್ ಹಾನಿಗೀಡಾಗಿದೆ. ಶಿಥಿಲಗೊಂಡ ಕಬ್ಬಿಣದ ಸರಳು ಹೊರಗೆ ಗೋಚರಿಸುತ್ತಿದೆ. ಕಂಬದ ಅಡಿಭಾಗದಲ್ಲಿ ಹೊಂಡ ರೂಪುಗೊಂಡಿವೆ. ಸೇತುವೆ ಬಳಿ ರಸ್ತೆ ಬದಿ ಸೂಚನಾ ಫಲಕ ಕೂಡಾ ಇಲ್ಲ. ಅಲ್ಲದೆ ಸೇತುವೆ ಸಮೀಪ ರಸ್ತೆಗೆ ಅಗಲ ಕಡಿಮೆಯಾಗಿದೆ.

ಉದುಮ ಶಾಸಕರಿಂದ ಸ್ಥಳ ಪರಿಶೀಲನೆ

ಪುಳಿಂಚಾಲ್ ಸೇತುವೆ ಪ್ರದೇಶಕ್ಕೆ ಶನಿವಾರ ಉದುಮ ಶಾಸಕ ಕೆ.ನೀಲಕಂಠನ್ ಭೇಟಿ ನೀಡಿ ಪರಿಶೀಲಿಸಿದರು. ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕುಂಞಂಬು ನಂಬ್ಯಾರ್, ಕೆ.ಬಲರಾಮನ್ ನಂಬ್ಯಾರ್, ಕುತ್ತಿಕೋಲ್ ಮಂಡಲಾಧ್ಯಕ್ಷ ಪವಿತ್ರನ್ ಸಿ.ನಾಯರ್, ಜೋಸೆಫ್ ಪಾರತಟ್ಟೆಲ್, ಸಾಬು ಅಬ್ರಹಾಂ, ಎಂ.ನೀಲಕಂಠನ್ ನಾಯರ್, ರಾಧಾಕೃಷ್ಣನ್ ಕನಕರಂಗೋಡಿ, ಕೆ.ಎಂ.ಅಯ್ಯೂಬ್, ಕೆ.ಗೋಪಾಲನ್ ಕುಂಬಚ್ಚಿಮೂಲೆ ಮುಂತಾದವರು ಜೊತೆಗಿದ್ದರು. ಇದೇ ವೇಳೆ ಶಾಸಕರು ಮಾತನಾಡಿ, ಪುಳಿಂಜಾಲ್ ಸೇತುವೆಯ ವಿಚಾರದಲ್ಲಿ ಶೀಘ್ರದಲ್ಲೇ ಅಗತ್ಯದ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ.

ಬಿಲ್ಲವ ಸೇವಾ ಸಂಘದಿಂದ ಶಾಲಾ ಮಕ್ಕಳಿಗೆ ಉಚಿತ ಪುಸ್ತಕ ವಿತರಣೆ



ಕಾಸರಗೋಡು: ಬಿಲ್ಲವ ಸೇವಾ ಸಂಘ ಕರಂದಕ್ಕಾಡು ಕಾಸರಗೋಡು ಇದರ ಆಶ್ರಯದಲ್ಲಿ ಶಾಲಾ ಮಕ್ಕಳಿಗೆ ಉಚಿತ ಪುಸ್ತಕ ವಿತರಣೆ ಕಾರ್ಯಕ್ರಮ ನಡೆಯಿತು. ಕರಂದಕ್ಕಾಡು ಶ್ರೀ ನಾರಾಯಣ ಗುರು ಸಭಾಂಗಣದಲ್ಲಿ ಎಲ್‌ಕೆಜಿಯಿಂದ ಪ್ಲಸ್ ಟು ವರೆಗಿನ ಮಕ್ಕಳಿಗೆ ಪುಸ್ತಕ ವಿತರಣೆ ಕಾರ್ಯಕ್ರಮ ಜರಗಿತು.

ಮಾಜಿ ಡೆಪ್ಯೂಟಿ ತಹಶೀಲ್ದಾರ್ ಚಂದ್ರಕಲಾ ಸಸಿಹಿತ್ಲು ದೀಪ ಬೆಳಗಿಸಿ ಸಮಾರಂಭವನ್ನು ಉದ್ಘಾಟಿಸಿದರು. ಬಿಲ್ಲವ ಸೇವಾ ಸಂಘದ ಅಧ್ಯಕ್ಷ ರಘು ಕೆ. ಮೀಪುಗುರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಬಿಲ್ಲವ ಸಮಾಜದ ಮಕ್ಕಳು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಈ ನಿಟ್ಟಿನಲ್ಲಿ ಶ್ರೀ ನಾರಾಯಣ ಗುರುಗಳು ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನ ನೀಡಲು ಕರೆಯಿತ್ತಿರುವುದನ್ನು ತಿಳಿಸಿದರು.

ಮುಖ್ಯ ಅತಿಥಿಯಾಗಿ ಕಾಸರಗೋಡು ನಗರಸಭಾ ಸದಸ್ಯ ಹರೀಶ್ ಕೆ.ಆರ್. ಮಾತನಾಡಿ, ಬಿಲ್ಲವ ಸಮಾಜದ ಮಕ್ಕಳು ಪಿಎಸ್‌ಸಿ ಪರೀಕ್ಷೆಯ ಕಡೆಗೆ ಗಮನಹರಿಸಿ ಸರಕಾರದ ಉನ್ನತ ಹುದ್ದೆಯನ್ನು ಪಡೆಯಲು ಶ್ರಮಿಸಬೇಕೆಂದು ಹೇಳಿದರು. ಸಂಘದ ಗೌರವಾಧ್ಯಕ್ಷ ಎ.ಕೇಶವ ಮಾತನಾಡಿ, ನಮ್ಮ ಮಕ್ಕಳು ದಾರಿ ತಪ್ಪದಂತೆ ಗಮನ ಹರಿಸಬೇಕು ಎಂದರು.

ಮಾಜಿ ಅಧ್ಯಕ್ಷ ಚಂದ್ರಶೇಖರ ಸುವರ್ಣ, ಬಿಲ್ಲವ ಮಹಾ ಮಂಡಳಿ ಸದಸ್ಯ ಸುಕೀರ್ತಿ ವರ್ಮಾ ಉಪಸ್ಥಿತರಿದ್ದರು. ಶಮ್ಮಿ ಕುಮಾರ್, ಕಮಲಾಕ್ಷ ಸೂರ್ಲು, ರೋಹಿಣಿ, ಅಶೋಕ್ ಬೀರಂತಬೈಲು, ಸಂತೋಷ್, ಸತೀಶ್, ಮೈಂದಪ್ಪ ಮುಂತಾದವರು ಭಾಗವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಹರಿಕಾಂತ್ ಕಾಸರಗೋಡು ಸ್ವಾಗತಿಸಿ, ಕಮಲಾಕ್ಷ ಸೂರ್ಲು ವಂದಿಸಿದರು, ಪ್ರೇಮ್‌ಜಿತ್ ಕಾರ್ಯಕ್ರಮ ನಿರೂಪಿಸಿದರು.

ಬಿಎಂಎಸ್ ಮೀಂಜ ಪಂಚಾಯತ್ ಸಮ್ಮೇಳನ, ಪದಾಧಿಕಾರಿಗಳ ಆಯ್ಕೆ



ಮಂಜೇಶ್ವರ: ಭಾರತೀಯ ಮಜ್ದೂರ್ ಸಂಘ (ಬಿಎಂಎಸ್)ದ ಮೀಂಜ ಪಂಚಾಯತ್ ಸಮ್ಮೇಳನವು ಮೊರತ್ತಣೆ ಬಿ.ಆರ್. ಕಾಂಪ್ಲೆಕ್ಸ್‌ನ ಅನುಗ್ರಹ ಹಾಲ್‌ನಲ್ಲಿ ನಡೆಯಿತು. ಸಮಿತಿ ಅಧ್ಯಕ್ಷ ರವಿಚಂದ್ರ ಶೆಟ್ಟಿ ಪದೆಂಜಿಬೈಲು ಅಧ್ಯಕ್ಷತೆ ವಹಿಸಿದ್ದರು.




ಸಮ್ಮೇಳನವನ್ನು ಬಿಎಂಎಸ್ ಜಿಲ್ಲಾ ಜೊತೆ ಕಾರ್ಯದರ್ಶಿ ಯಶವಂತಿ ಬೆಜ್ಜ ಉದ್ಘಾಟಿಸಿ, ಸಂಘಟನೆಯ ಧ್ಯೇಯೋದ್ದೇಶಗಳ ಕುರಿತು ಮಾತನಾಡಿದರು. ಜಿಲ್ಲಾ ಜೊತೆ ಕಾರ್ಯದರ್ಶಿ ಪಿ.ದಿನೇಶ್ ಬಂಬ್ರಾಣ ಮುಖ್ಯ ಭಾಷಣ ಮಾಡಿದರು. ಇದೇ ವೇಳೆ ನೂತನ ಪದಾಧಿಕಾರಿಗಳನ್ನು ವಲಯ ಅಧ್ಯಕ್ಷ ರವಿ ಎಂ.ಕೆ. ಕೋಳ್ಯೂರು ಆಯ್ಕೆ ಮಾಡಿದರು. ಗ್ರಾ.ಪಂ. ಸದಸ್ಯೆ ಶಾಂತಾ ಕೋಳ್ಯೂರು. ಗೋಪಿನಾಥ್ ಮೊರತ್ತಣೆ ಇದ್ದರು. ಸತೀಶ್ ಬಟ್ಟಿಪದವು ವರದಿ ಮಂಡಿಸಿದರು.

ಸಮ್ಮೇಳನದಲ್ಲಿ ಹೊಸ ಸಮಿತಿ ರೂಪಿಸಲಾಯಿತು. ಅಧ್ಯಕ್ಷರಾಗಿ ಪ್ರಫುಲ್ಲ ಉಜಿರೆ, ಉಪಾಧ್ಯಕ್ಷರಾಗಿ ರವಿಚಂದ್ರ ಶೆಟ್ಟಿ ಪದೆಂಜಿಬೈಲು, ರಾಮಚಂದ್ರ ಬಟ್ಟಿಪದವು, ಜಯಲಕ್ಷ್ಮೀ ಚಿಗುರುಪಾದೆ, ಕಾರ್ಯದರ್ಶಿಯಾಗಿ ಮನೋಜ್ ಬಟ್ಟಿಪದವು, ಜೊತೆ ಕಾರ್ಯದರ್ಶಿಗಳಾಗಿ ರಾಮಚಂದ್ರ ಕೌಡೂರು, ರೋಹಿತ್ ಬೆಜ್ಜ, ಅರುಣ ಉಜಿರೆ, ಕೋಶಾಧಿಕಾರಿಯಾಗಿ ಬಾಲಕೃಷ್ಣ ಉಜಿರೆ ಅವರನ್ನು ಆರಿಸಲಾಯಿತು. ಸಮಿತಿ ಸದಸ್ಯರಾಗಿ ಮಿಥುನ್ ಕೋಳ್ಯೂರು, ಮಿಥುನ್ ಕಳಿಯೂರು, ಸವಿತಾ ಕೋಳ್ಯೂರು, ಪ್ರತಾಪ್ ಮೊರತ್ತಣೆ, ಸಂದೀಪ್ ಬರುವ ಕಡಂಬಾರು, ದಾಮೋದರ ಉಜಿರೆ, ಶಿವಕುಮಾರ್ ಬಟ್ಟಿಪದವು, ಜಯೇಶ್ ಬೆಜ್ಜ ಅವರನ್ನು ಆಯ್ಕೆ ಮಾಡಲಾಯಿತು. ರಾಮಚಂದ್ರ ಬಟ್ಟಿಪದವು ಸ್ವಾಗತಿಸಿ, ಮನೋಜ್ ಬಟ್ಟಿಪದವು ವಂದಿಸಿದರು.

ನೇತ್ರ, ಜೀವನಶೈಲಿ ರೋಗ ನಿರ್ಣಯ, ಹಿಮೋಗ್ಲೋಬಿನ್ ತಪಾಸಣಾ ಶಿಬಿರ



ಕಾಸರಗೋಡು: ನವದುರ್ಗಾ ಆರ್ಟ್ಸ್ ಆ್ಯಂಡ್ ಸ್ಪೋರ್ಟ್ಸ್ ಕ್ಲಬ್ ಮೀಪುಗುರಿ, ಎಫ್‌ಎಚ್‌ಸಿ ಮಧೂರು ಮತ್ತು ಕಾಞಂಗಾಡಿನ ಜಿಲ್ಲಾ ಸಂಚಾರಿ ನೇತ್ರ ತಪಾಸಣಾ ಆಸ್ಪತ್ರೆ ಇವುಗಳ ಜಂಟಿ ಆಶ್ರಯದಲ್ಲಿ ಮೀಪುಗುರಿ ಅಂಗನವಾಡಿಯಲ್ಲಿ ಉಚಿತ ನೇತ್ರ ತಪಾಸಣೆ, ಜೀವನಶೈಲಿ ರೋಗ ನಿರ್ಣಯ ಹಾಗೂ ಹಿಮೋಗ್ಲೋಬಿನ್ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಮಧೂರು ಗ್ರಾ.ಪಂ. ಸದಸ್ಯ ಗಣೇಶ್ ಮೀಪುಗುರಿ ಶಿಬಿರವನ್ನು ಉದ್ಘಾಟಿಸಿದರು. ಎಫ್‌ಎಚ್‌ಸಿ ಹೆಲ್ತ್ ಇನ್‌ಸ್ಪೆಕ್ಟರ್ ಎಂ.ಪಿ.ಶ್ರೀನಿವಾಸನ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಪಂಚಾಯತ್ ಆಧ್ಯಕ್ಷ ಕೆ.ಗೋಪಾಲಕೃಷ್ಣ ಹಾಗೂ ಕ್ಲಬ್ ಸದಸ್ಯ ಹರೀಶ್ ಗಟ್ಟಿ ಶುಭಹಾರೈಸಿ ಮಾತನಾಡಿದರು.

ಇದೇ ಸಂದರ್ಭ ಡಾ.ಅಪರ್ಣಾ ಅವರು ನೇತ್ರದಾನದ ಕುರಿತು ಜಾಗೃತಿ ತರಗತಿಯನ್ನು ನಡೆಸಿಕೊಟ್ಟರು. ಎಂಎಲ್‌ಎಸ್‌ಪಿ ಮಿಲ್ಲಿನ್ ಜೋಸ್, ಆಶಾ ಕಾರ್ಯಕರ್ತೆ ಶ್ರೀವಿದ್ಯಾ ಮತ್ತು ಅಂಗನವಾಡಿ ಶಿಕ್ಷಕಿ ಸ್ಮಿತಾ ಶಿಬಿರದ ನೇತೃತ್ವ ವಹಿಸಿದ್ದರು. ಜೂನಿಯರ್ ಹೆಲ್ತ್ ಇನ್‌ಸ್ಪೆಕ್ಟರ್ ಜಯಕೃಷ್ಣನ್ ಸ್ವಾಗತಿಸಿ, ಆರ್‌ಡಿ ನಗರ ಸಬ್ ಸೆಂಟರ್ ಜೆಪಿಎಚ್ ಶಾನಾ ವಂದಿಸಿದರು. ಶಿಬಿರದಲ್ಲಿ ನೂರಕ್ಕೂ ಹೆಚ್ಚು ಮಂದಿ ಭಾಗವಹಿಸಿ ತಪಾಸಣೆ ಮಾಡಿಸಿಕೊಂಡರು. ಅವರಲ್ಲಿ ಕಣ್ಣಿನ ಪೊರೆ (ಕ್ಯಾಟರಾಕ್ಟ್) ಶಸ್ತ್ರಚಿಕಿತ್ಸೆಯ ಅಗತ್ಯವಿರುವವರನ್ನು ಗುರುತಿಸಿ ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ರೆಫರ್ ಮಾಡಲಾಯಿತು.

ಮಂಜೇಶ್ವರ ನಲಿಕೆಯವರ ಸಮಾಜ ಸೇವಾ ಸಂಘದಿಂದ ಪ್ರತಿಭಾ ಪುರಸ್ಕಾರ



ಉಪ್ಪಳ: ನಲಿಕೆಯವರ ಸಮಾಜ ಸೇವಾ ಸಂಘ ಮಂಜೇಶ್ವರ ವಲಯದ ವತಿಯಿಂದ ಪುಸ್ತಕ ವಿತರಣೆ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಪ್ರತಾಪನಗರ ಶ್ರೀ ಗಣೇಶ ಮಂದಿರದಲ್ಲಿ ನಡೆಯಿತು. ಸಂಘದ ಮಂಜೇಶ್ವರ ವಲಯ ಅಧ್ಯಕ್ಷ ಕೃಷ್ಣ ಎನ್. ಸೋಮೇಶ್ವರ ಅಧ್ಯಕ್ಷತೆ ವಹಿಸಿದ್ದರು.

ಮಂಗಲ್ಪಾಡಿ ಗ್ರಾಮ ಪಂಚಾಯತ್ ಸದಸ್ಯ ವಸಂತಕುಮಾರ್ ಮಯ್ಯ ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು. ಪೂಂಜಾಲಕಟ್ಟೆ ನಿವೃತ್ತ ಜೀವ ವಿಮಾ ಅಧಿಕಾರಿ ಎಂ.ಡಿ.ವೆಂಕಪ್ಪ, ಹಿರಿಯ ಸಾಹಿತಿ ಲಕ್ಷ್ಮಣ ಪೊನ್ನಾರಂ ಅಡೂರು, ಸಂಘದ ಮಂಜೇಶ್ವರ ವಲಯ ಗೌರವಾಧ್ಯಕ್ಷ ರಾಮ ಸಾಲಿಯಾನ್ ಮಂಗಲ್ಪಾಡಿ, ಸಮಾಜ ಸಭಾ ಭವನ ನಿರ್ಮಾಣ ಸಮಿತಿ ಅಧ್ಯಕ್ಷ ಗೋಪಾಲಕೃಷ್ಣ ಕಿನ್ವಾಲು, ಮಹಿಳಾ ವೇದಿಕೆ ಅಧ್ಯಕ್ಷೆ ರೋಹಿಣಿ ಪೈವಳಿಕೆ, ದೈವಾರಾಧನಾ ಸಮಿತಿ ಅಧ್ಯಕ್ಷ ನಾರಾಯಣ ಜೋತಿಷ್ಯರು ಕುಡಾಲು, ಸಂಘದ ಉಪಾಧ್ಯಕ್ಷ ವಸಂತ ಆರಿಕ್ಕಾಡಿ, ಯುವ ವೇದಿಕೆ ಅಧ್ಯಕ್ಷ ಪ್ರಶಾಂತ್ ವರ್ಕಾಡಿ ಮೊದಲಾದವರು ಶುಭಾಂಶನೆಗೈದರು.

ಈ ವೇಳೆ ಅಂಗನವಾಡಿಯಿಂದ ಮೊದಲ್ಗೊಂಡು ಪದವಿ ತನಕ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಹಾಗೂ ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ, ಪ್ಲಸ್‌ಟು, ಡಿಗ್ರಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಲಾಯಿತು.

ಯದುಕೃಷ್ಣ ಪ್ರಸಾದ್ ಮತ್ತು ವಿಷ್ಣು ಪ್ರಿಯಾ ಆರಿಕ್ಕಾಡಿ ಪ್ರಾರ್ಥನೆ ಹಾಡಿದರು. ಪ್ರಧಾನ ಕಾರ್ಯದರ್ಶಿ ಲೋಕೇಶ್ ಖಂಡಿಗೆ ಸ್ವಾಗತಿಸಿ, ಹರೀಶ್ ಕುಮಾರ್ ಮಂಗಲ್ಪಾಡಿ ವಂದಿಸಿದರು. ಸುಜಿತ್‌ಕುಮಾರ್ ಬೇಕೂರು ನಿರೂಪಿಸಿದರು.

ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರದಲ್ಲಿ ದೃಢಕಲಶ ಕಾರ್ಯಕ್ರಮ



- ವಿಜೃಂಭಣೆಯಿಂದ ನಡೆಯಿತು ದೃಢಕಲಶೋತ್ಸವ
- ಶ್ರೀಕ್ಷೇತ್ರದಲ್ಲಿ ನೆರವೇರಿತು ಶ್ರೀ ಸತ್ಯನಾರಾಯಣ ಪೂಜೆ ಸಹಿತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು

ಕಾಸರಗೋಡು: ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಾಲಯದಲ್ಲಿ ಇತ್ತೀಚೆಗೆ ಜರಗಿದ ಬ್ರಹ್ಮಕಲಶೋತ್ಸವದ ಅಂಗವಾಗಿ ದೃಢಕಲಶೋತ್ಸವ ಸಮಾರಂಭವು ಸೋಮವಾರ ವಿಜೃಂಭಣೆಯಿಂದ ನಡೆಯಿತು. ಶ್ರೀ ಕ್ಷೇತ್ರದ ತಂತ್ರಿವರ್ಯ ಶ್ರೀಕೃಷ್ಣ ಗುರೂಜಿ ನೇತೃತ್ವ ವಹಿಸಿದ್ದರು.

ಶ್ರೀ ಸತ್ಯನಾರಾಯಣ ಪೂಜೆ ಸಹಿತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಈ ಸಂಬಂಧ ನಡೆದ ಧಾರ್ಮಿಕ ಸಭೆಯಲ್ಲಿ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ, ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ಡಾ.ಕೆ.ಎನ್. ವೆಂಕಟ್ರಮಣ ಹೊಳ್ಳ ಅಧ್ಯಕ್ಷತೆ ವಹಿಸಿದ್ದರು. ಮೊಕ್ತೇಸರ ಅಚ್ಯುತ ಕಾಳ್ಯಂಗಾಡು, ಧರ್ಮದರ್ಶಿ ನಾರಾಯಣ ಕಾಳ್ಯಂಗಾಡು, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಮೋಹನ್ ರಾಜ್ ಕೊರಕ್ಕೋಡು, ಬ್ರಹ್ಮಕಲಶ ಸಮಿತಿ ಕಾರ್ಯದರ್ಶಿ ದಯಾನಂದ ಕೊಳ್ಕೆಬೈಲು, ಪ್ರಧಾನ ಕಾರ್ಯದರ್ಶಿ ಹರೀಶ್ ಕೆ.ಆರ್., ಮಹಿಳಾ ಸಮಿತಿ ಕಾರ್ಯದರ್ಶಿ ಹರ್ಷಿತಾ, ಮಾತೃ ಸಮಿತಿ ಅಧ್ಯಕ್ಷೆ ರಾಧಿಕಾ ರಂಜಿತ್, ಕಾರ್ಯದರ್ಶಿ ದೀಪಾ ರಾಜೇಶ್, ಪುಷ್ಪಲತಾ, ಜಗದೀಶ್ ಕೂಡ್ಲು ಮೊದಲಾದವರು ಭಾಗವಹಿಸಿದ್ದರು.

ರಂಜಿತ್ ಮನ್ನಿಪ್ಪಾಡಿ ಸ್ವಾಗತಿಸಿ, ಗೋವಿಂದ ನಾಯ್ಕ್ ಕಾಳ್ಯಂಗಾಡು ವಂದಿಸಿದರು. ಪತ್ರಕರ್ತ ವೀಜಿ ಕಾಸರಗೋಡು ಕಾರ್ಯಕ್ರಮ ನಿರೂಪಿಸಿದರು.



ಬಿಜೆಪಿ ಕುಂಬಳೆ ಉತ್ತರ ವಲಯದ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ವನಮಹೋತ್ಸವ ಕಳತ್ತೂರು ಇಚ್ಲಂಪಾಡಿ ಹಿರಿಯ ಬುನಾದಿ ಶಾಲಾ ಪರಿಸರದಲ್ಲಿ ಜರಗಿತು. ಭಾರತೀಯ ಕಿಸಾನ್ ಸಂಘದ ಪ್ರಾಂತ್ಯ ಉಪಾಧ್ಯಕ್ಷ ರಾಮ ಮಾಸ್ಟರ್ ಕಳತ್ತೂರು, ಬಿಜೆಪಿ ರಾಜ್ಯ ಸಮಿತಿ ಸದಸ್ಯ ಸುರೇಶ್‌ಕುಮಾರ್ ಶೆಟ್ಟಿ ಪೂಕಟ್ಟೆ, ಕುಂಬಳೆ ಉತ್ತರ ವಲಯ ಅಧ್ಯಕ್ಷ ಶಿವಪ್ರಸಾದ್ ರೈ ಮಡ್ವ, ಕಾರ್ಯದರ್ಶಿ ದಿನೇಶ್ ಕುಮಾರ್ ಮೈರಳ, ಒಬಿಸಿ ಮೋರ್ಚಾ ಮಂಡಲಾಧ್ಯಕ್ಷ ಮಹೇಶ್ ಪುಣಿಯೂರು, ನಾಟಿವೈದ್ಯ ಶ್ರೀ ನಿವಾಸ ಆಳ್ವ ಕಳತ್ತೂರು ಇದ್ದರು.



ಹಿರಿಯ ನಾಗರಿಕರ ವಿರುದ್ಧ ನಡೆಯುವ ಅತಿಕ್ರಮಣಕ್ಕೆದುರಾಗಿರುವ ತಿಳುವಳಿಕಾ ದಿನಾಚರಣೆಯ ರಾಜ್ಯಮಟ್ಟದ ಉದ್ಘಾಟನೆಯನ್ನು ಮುಖ್ಯಮಂತ್ರಿ ವಿ.ಡಿ.ಸತೀಶನ್ ತಿರುವನಂತಪುರದಲ್ಲಿ ಸೋಮವಾರ ನೆರವೇರಿಸಿದರು.

ಕಾಸರಗೋಡು ನಗರಸಭಾ ಅಧಿವೇಶನ | ಆಡಳಿತ ಮಂಡಳಿ ನಿಲುವು ವಿರುದ್ಧ ಆಕ್ರೋಶ

ಪ್ರತಿಭಟಿಸಿ ಸಭಾತ್ಯಾಗ ಮಾಡಿದ ಬಿಜೆಪಿ ಕೌನ್ಸಿಲರ್‌ಗಳು

ಕಾಸರಗೋಡು: ಕಾಸರಗೋಡು ನಗರಸಭೆಯಲ್ಲಿ ಮಂಗಳವಾರ ನಡೆದ ನಗರಸಭಾ ಅಧಿವೇಶನವು ವಾಗ್ಯುದ್ಧಕ್ಕೆ ವೇದಿಕೆಯಾಯಿತು. ಬಿಜೆಪಿ ಕೌನ್ಸಿಲರ್‌ಗಳು ಮತ್ತು ಮುಸ್ಲಿಂಲೀಗ್ ಕೌನ್ಸಿಲರ್‌ಗಳ ಮಧ್ಯೆ ತೀವ್ರ ಮಾತಿನ ಚಕಮಕಿ ನಡೆಯಿತು.

ಬಳಿಕ ಮುಸ್ಲಿಂಲೀಗ್‌ನ ಆಡಳಿತ ಮಂಡಳಿಯ ಕೆಲವೊಂದು ನಕಾರಾತ್ಮಕ ನಿಲುವುಗಳನ್ನು ಪ್ರತಿಭಟಿಸಿ ಬಿಜೆಪಿ ಕೌನ್ಸಿಲರ್‌ಗಳು ಅಧಿವೇಶನವನ್ನು ಬಹಿಷ್ಕರಿಸಿ ಸಭಾತ್ಯಾಗ ಮಾಡಿದರು.



ಕಾಸರಗೋಡು ನಗರದ ನಾಯಕ್ಸ್ ರಸ್ತೆಯಲ್ಲಿ ವಿದ್ಯುತ್ ಕಂಬ ಬದಲಿಸುವ ವಿಷಯದಲ್ಲಿ ಸ್ಥಳೀಯ ಕೌನ್ಸಿಲರ್ ರವೀಂದ್ರ ಪೂಜಾರಿಯವರು ವಿದ್ಯುತ್ ಮಂಡಳಿಯ ಅಧಿಕಾರಿಗಳ ಜೊತೆ ಮಾತನಾಡಿ, ರಸ್ತೆ ಮಧ್ಯೆಯಿರುವ ವಿದ್ಯುತ್ ಕಂಬಗಳನ್ನು ರಸ್ತೆ ಬದಿಯಲ್ಲಿ ಸ್ಥಾಪಿಸುವಂತೆ ವ್ಯವಸ್ಥೆ ಮಾಡಿದ್ದರು. ನಂತರ ನಗರಸಭೆಯ 8ನೇ ವಾರ್ಡ್ ಪ್ರತಿನಿಧಿಸುವ ದಿವ್ಯಾ ಸಂದೀಪ್ ಅವರು ಜೂ.10ರಂದು ನಗರಸಭೆಯ ಕೌನ್ಸಿಲ್ ವಾಟ್ಸ್ಆ್ಯಪ್ ಗ್ರೂಪ್‌ನಲ್ಲಿ ರವೀಂದ್ರ ಪೂಜಾರಿಯವರಿಗೆ ಅಭಿನಂದನೆಯನ್ನು ಸೂಚಿಸಿ ಫೋಟೋ ಮತ್ತು ಪ್ರಸ್ತುತ ವಿಷಯವನ್ನು ಪ್ರಸ್ತಾಪಿಸಿದ್ದರು.

ಅದರಲ್ಲಿ ಯಾವುದೇ ರಾಜಕೀಯವಿರಲಿಲ್ಲ. ಅಲ್ಲದೆ ಆ ಗ್ರೂಪ್‌ನಲ್ಲಿ ಕಾಸರಗೋಡು ಮಾಜಿ ಶಾಸಕ ಎನ್.ಎ. ನೆಲ್ಲಿಕುನ್ನು ಕೂಡಾ ಇದ್ದಾರೆ. ಆದರೆ ನಗರಸಭೆಯ ಉಪಾಧ್ಯಕ್ಷ ಕೆ.ಎಂ.ಹನೀಫ ಅವರು ಕೌನ್ಸಿಲರ್ ದಿವ್ಯಾ ಸಂದೀಪ್ ಅವರಿಗೆ ಕರೆಮಾಡಿ ಪ್ರಸ್ತುತ ವಾಟ್ಸ್ಆ್ಯಪ್ ಗ್ರೂಪ್‌ನಿಂದ ಪೋಸ್ಟ್ ಹಾಕಿದುದನ್ನು ಹಿಂಪಡೆಯಬೇಕು. ಇಲ್ಲದಿದ್ದರೆ ಬಿಜೆಪಿ ಪ್ರತಿನಿಧಿಸುವ ವಾರ್ಡ್‌ಗಳನ್ನು ಪ್ರತ್ಯೇಕವಾಗಿ ಇಡಲಾಗುವುದು ಎಂದು ಬೆದರಿಸಿದರಲ್ಲದೆ ಅಭಿವೃದ್ಧಿಗೋಸ್ಕರ ಬಿಜೆಪಿ ಕೌನ್ಸಿಲರ್‌ಗಳಿಗೆ ಯಾವುದೇ ಸಹಕಾರ ನೀಡುವುದಿಲ್ಲ ಎಂದಿದ್ದರು. ಅಲ್ಲದೆ ಈಗ ಮೀಸಲಿಟ್ಟಿರುವ ಬಿಜೆಪಿ ಕೌನ್ಸಿಲರ್‌ಗಳ ವಾರ್ಡ್‌ಗಳ ಅನುದಾನಗಳನ್ನು ಇತರೆಡೆಗೆ ವರ್ಗಾಯಿಸಲಾಗುವುದು ಎಂದು ಹೇಳಿ ಸತ್ಯಪ್ರತಿಜ್ಞೆಯನ್ನು ಉಲ್ಲಂಘಿಸಿದ್ದಾರೆ.

ಇದರಿಂದಾಗಿ ಮಂಗಳವಾರ ಅಧಿವೇಶನ ಪ್ರಾರಂಭಗೊಳ್ಳುತ್ತಿದ್ದಂತೆ ಬಿಜೆಪಿ ಕೌನ್ಸಿಲರ್‌ಗಳು ಉಪಾಧ್ಯಕ್ಷರ ಹೇಳಿಕೆಯನ್ನು ಖಂಡಿಸಿದರು. ಈ ವೇಳೆ ಮುಸ್ಲಿಂಲೀಗ್ ಕೌನ್ಸಿಲರ್‌ಗಳು ಉಪಾಧ್ಯಕ್ಷರ ಹೇಳಿಕೆಯನ್ನು ಬೆಂಬಲಿಸಿದರು. ಇದು ಕೆಲಕಾಲ ಬಿಜೆಪಿ ಕೌನ್ಸಿಲರ್‌ಗಳು ಮತ್ತು ಮುಸ್ಲಿಂಲೀಗ್ ಕೌನ್ಸಿಲರ್‌ಗಳ ಮಧ್ಯೆ ತೀವ್ರ ಮಾತಿನ ಚಕಮಕಿಗೆ ಕಾರಣವಾಯಿತು. ಈ ಸಂದರ್ಭ ಬಿಜೆಪಿ ಕೌನ್ಸಿಲರ್‌ಗಳಾದ ರವೀಂದ್ರ ಪೂಜಾರಿ, ಕೆ.ಗುರುಪ್ರಸಾದ್ ಪ್ರಭು, ಕೆ.ಆರ್.ಹರೀಶ್, ದಿವ್ಯಾ ಸಂದೀಪ್ ಮಾತನಾಡಿದರು. ಕೊನೆಗೆ ಬಿಜೆಪಿ ಕೌನ್ಸಿಲರ್‌ಗಳು ಅಧಿವೇಶನ ಬಹಿಷ್ಕರಿಸಿ ಸಭಾತ್ಯಾಗ ಮಾಡಿದರು.

ಪ್ರತಾಪನಗರ ಶ್ರೀ ಗೌರಿ ಗಣೇಶೋತ್ಸವ ಪೂರ್ವಭಾವಿ ಸಭೆ

ಸೆ. 11ರಿಂದ 15ರ ತನಕ ಅದ್ದೂರಿ ಉತ್ಸವ



ಉಪ್ಪಳ: ಮಂಗಲ್ಪಾಡಿ ಪ್ರತಾಪನಗರ ಸಾರ್ವಜನಿಕ ಶ್ರೀ ಗೌರಿ ಗಣೇಶೋತ್ಸವದ ಪೂರ್ವಭಾವಿ ಸಭೆಯು ಪ್ರತಾಪನಗರ ಶ್ರೀ ಗಣೇಶ ಮಂದಿರದಲ್ಲಿ ನಡೆಯಿತು. ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ನಾರಾಯಣ ಮಣಿಯಾಣಿ ಅಧ್ಯಕ್ಷತೆ ವಹಿಸಿದ್ದರು.

ಕೋಶಾಧಿಕಾರಿ ಮಧು ಮಾಸ್ತರ್ ಲೆಕ್ಕಪತ್ರ ಮಂಡಿಸಿದರು. ಸಮಿತಿ ಗೌರವಾಧ್ಯಕ್ಷ ಮುರಳೀಧರ ಬಳ್ಳಕ್ಕುರಾಯ ಮಾರ್ಗದರ್ಶನ ನೀಡಿದರು. ಮಂಗಲ್ಪಾಡಿ ಗ್ರಾ.ಪಂ. ಸದಸ್ಯ ವಸಂತಕುಮಾರ್ ಮಯ್ಯ, ಶೇಖರ ಪೂಜಾರಿ ಮಂಗಲ್ಪಾಡಿ ಇದ್ದರು.

ಅನಿಲ್‌ಕುಮಾರ್ ಪುಳಿಕುತ್ತಿ ಕಾರ್ಯಕ್ರಮದ ವಿವರವನ್ನು ನೀಡಿದರು. ಪ್ರಧಾನ ಕಾರ್ಯದರ್ಶಿ ಪ್ರವೀಣ ಪಿ. ಸ್ವಾಗತಿಸಿದರು. ಸೆ. 11ರಿಂದ 15ರ ತನಕ ಶ್ರೀ ಶನೀಶ್ವರ ಪೂಜೆ, ಭಜನೋತ್ಸವ, ಶ್ರೀ ಗೌರಿ ಗಣೇಶೋತ್ಸವನ್ನು ಬಹಳ ವಿಜೃಂಭಣೆಯಿಂದ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಉಡುಪಿ ಜಿಲ್ಲಾ ಮಟ್ಟದ ಕೈಗಾರಿಕಾ ಸ್ಪಂದನ, ರಫ್ತು ಉತ್ತೇಜನ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಸೂಚನೆ

ಡಾ. ಸರೋಜಿನಿ ಮಹಿಷಿ ವರದಿಯಂತೆ ಉದ್ಯೋಗ ಕಲ್ಪಿಸಿ



ಉಡುಪಿ: ಜಿಲ್ಲೆಯಲ್ಲಿ ಪ್ರಸ್ತುತವಿರುವ ಕೈಗಾರಿಕಾ ಘಟಕಗಳಲ್ಲಿ ವೃತ್ತಿಯನ್ನು ಕೈಗೊಳ್ಳಲು ಅವಶ್ಯವಿರುವ ವೃತ್ತಿಪರ ಕೌಶಲ್ಯ ತರಬೇತಿಗಳನ್ನು, ಕೈಗಾರಿಕಾ ತರಬೇತಿ ಸಂಸ್ಥೆಗಳು ಯುವಜನರಿಗೆ ನೀಡಿ, ಸ್ಥಳೀಯವಾಗಿ ಉದ್ಯೋಗ ಲಭ್ಯವಾಗುವಂತೆ ಕಾರ್ಯಪ್ರವೃತ್ತರಾಗಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ, ಕೈಗಾರಿಕಾ ಸ್ಪಂದನ ಹಾಗೂ ಜಿಲ್ಲಾ ಮಟ್ಟದ ರಫ್ತು ಉತ್ತೇಜನ ಸಮಿತಿಯ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕೈಗಾರಿಕೆಗಳ ಸ್ಥಾಪನೆಯಿಂದ ರಾಜ್ಯದ ಆರ್ಥಿಕ ಪ್ರಗತಿ ಆಗುವುದರ ಜೊತೆಗೆ ಸ್ಥಳೀಯರಿಗೆ ಉದ್ಯೋಗ ಅವಕಾಶ ಲಭ್ಯವಾಗುತ್ತದೆ. ಜಿಲ್ಲೆಯಲ್ಲಿ ಸಣ್ಣ, ಮಧ್ಯಮ ಹಾಗೂ ಬೃಹತ್ ಕೈಗಾರಿಕಾ ಘಟಕಗಳು ಸ್ಥಾಪನೆಯಾದಲ್ಲಿ ಇಲ್ಲಿನವರಿಗೆ ಉದ್ಯೋಗಗಳು ದೊರೆಯುತ್ತವೆ. ಇದರಿಂದ ಉದ್ಯೋಗವನ್ನು ಅರಸಿ ಹೊರ ಜಿಲ್ಲೆಗೆ ತೆರಳುವುದು ಕಡಿಮೆಯಾಗುತ್ತದೆ. ಜಿಲ್ಲೆಯಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಮೂಲ ಸೌಕರ್ಯ ನೀಡಲು ಹೆಚ್ಚು ಒತ್ತು ನೀಡಬೇಕು ಎಂದರು.

ಡಾ. ಸರೋಜಿನಿ ಮಹಿಷಿ ವರದಿಯಂತೆ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸಬೇಕು. ಜಿಲ್ಲೆಯಲ್ಲಿ 37 ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ಶೇ. 91.8ರಷ್ಟು 47 ಮಧ್ಯಮ ಪ್ರಮಾಣದ ಕೈಗಾರಿಕೆಗಳಲ್ಲಿ ಶೇ. 95.1 ರಷ್ಟು ಹಾಗೂ 7 ಬೃಹತ್ ಕೈಗಾರಿಕೆಗಳಲ್ಲಿ ಶೇ. 92.4 ರಷ್ಟು ಸೇರಿದಂತೆ ಒಟ್ಟು 91 ಘಟಕಗಳಲ್ಲಿ ಶೇ. 93.7 ರಷ್ಟು ಉದ್ಯೋಗ ಕಲ್ಪಿಸಲಾಗಿದೆ ಎಂದರು.

ಹೆಬ್ರಿ ತಾಲೂಕಿನ ಶಿವಪುರದಲ್ಲಿ 74.84 ಎಕ್ರೆ, ಕೆರೆಬೆಟ್ಟುವಿನಲ್ಲಿ 38.75 ಎಕ್ರೆ, ಕಾರ್ಕಳದ ನಿಟ್ಟೆಯಲ್ಲಿ 50.42 ಎಕ್ರೆ ಹಾಗೂ ಬ್ರಹ್ಮಾವರ ತಾಲೂಕಿನ ಉಪ್ಪೂರು 101.19 ಎಕ್ರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ಪ್ರದೇಶ ನಿರ್ಮಾಣ ಮಾಡಲು ಭೂ ಸ್ವಾಧೀನ ಸೇರಿದಂತೆ ಮತ್ತಿತರ ಪ್ರಕ್ರಿಯೆಗಳನ್ನು ಆದ್ಯತೆಯ ಮೇಲೆ ತ್ವರಿತವಾಗಿ ಪೂರ್ಣಗೊಳಿಸುವುದರೊಂದಿಗೆ ಕೈಗಾರಿಕೆಗಳ ಸ್ಥಾಪನೆಗೆ ಮುಂದಾಗಬೇಕು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಿವೇಶನದಲ್ಲಿ ಕೈಗಾರಿಕೆ ಆರಂಭಿಸಿ

ಜಿಲ್ಲೆಯಲ್ಲಿ ಕೈಗಾರಿಕಾ ಘಟಕ ಸ್ಥಾಪನೆಗೆ ನಿವೇಶನ ಹಂಚಿಕೆಯಾಗಿ ಮೂರು–ನಾಲ್ಕು ವರ್ಷಗಳು ಕಳೆದರೂ ಸಹ ಪೂರ್ಣಪ್ರಮಾಣದಲ್ಲಿ ಉದ್ದಿಮೆದಾರರು ಉದ್ದಿಮೆ ಪ್ರಾರಂಭಿಸದೇ ಪ್ರತೀ ಸಭೆಯಲ್ಲಿಯೂ ಕಾಲಾವಕಾಶ ಕೋರಿ ಸಭೆಯ ಸಮಯವನ್ನು ವ್ಯರ್ಥ ಮಾಡುತ್ತಿದ್ದೀರಿ. ಇದು ಸರಿಯಲ್ಲ, ಮುಂದಿನ ಎರಡು ತಿಂಗಳ ಒಳಗಾಗಿ ಕೈಗಾರಿಕಾ ಘಟಕ ಸ್ಥಾಪನೆಗೆ ನಿವೇಶನ ಪಡೆದಿರುವವರು ಘಟಕಗಳನ್ನು ಸ್ಥಾಪಿಸಬೇಕು. ತಪ್ಪಿದ್ದಲ್ಲಿ ನಿವೇಶನವನ್ನು ಇತರರಿಗೆ ಹಂಚಿಕೆ ಮಾಡಲಾಗುವುದು ಎಂದರು.

ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ನಾಗರಾಜ್ ವಿ. ನಾಯಕ್, ಸಣ್ಣ ಕೈಗಾರಿಕಾ ಸಂಘದ ಜಿಲ್ಲಾ ಅಧ್ಯಕ್ಷ ವಸಂತ ಕಿಣಿ, ಜಿಲ್ಲಾ ಕೈಗಾರಿಕಾ ಕೇಂದ್ರದ ಉಪನಿರ್ದೇಶಕ ಸೀತಾರಾಮ ಶೆಟ್ಟಿ, ನಗರಸಭೆ ಆಯುಕ್ತ ಮಂಹಾತೇಶ ಹಂಗರಗಿ, ಛೇಂಬರ್ಸ್ ಆಫ್ ಕಾಮರ್ಸ್ ಅಧ್ಯಕ್ಷ ಅಮ್ಮುಂಜೆ ಪ್ರಭಾಕರ ನಾಯಕ್, ಕಾಸಿಯಾ ಪ್ರತಿನಿಧಿ ಹರೀಶ್ ಕುಂದರ್, ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳು, ಜಿಲ್ಲೆಯ ಸಣ್ಣ ಕೈಗಾರಿಕಾ ಉದ್ದಿಮೆದಾರರು ಹಾಗೂ ಮತ್ತಿತರ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

2,593 ಕೋ.ರೂ. ವಹಿವಾಟು ಸಾಧನೆ

ಶಿವಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಘಟಕದ ಕೆಲವು ಚಟುವಟಿಕೆ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದಾರೆ. ಹೆಚ್ಚಾಗಿ ರೆಡಿ ಮಿಕ್ಸ್ ಕಾಂಕ್ರೀಟ್ ಸ್ಥಾಪನೆಗೆ ಅರ್ಜಿಗಳಿದ್ದು, ಇವುಗಳಿಗೆ ಮಾನ್ಯ ಮಾಡುವ ಮೊದಲು ಸುತ್ತಮುತ್ತಲಿನ ಘಟಕಗಳಿಗೆ ಯಾವುದೇ ರೀತಿಯ ತೊಂದರೆ ಉಂಟಾಗುತ್ತದೆ ಎಂಬ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ನಡೆಸಿ, ನಂತರ ಅನುಮತಿ ನೀಡಬೇಕು. ಕಳೆದ ಸಾಲಿನಲ್ಲಿ ಮರೈನ್ ಪ್ರೋಡಕ್ಟ್, ಕ್ಯಾಶ್ಯೂ ನಟ್, ಕಾಫಿ ಬೀನ್ ಸೇರಿದಂತೆ ಮತ್ತಿತರ 9 ಉತ್ಪನ್ನಗಳು ಹೆಚ್ಚಾಗಿ ರಫ್ತಾಗಿದ್ದು, 2,593 ಕೋಟಿ ರೂ.ಗೂ ಹೆಚ್ಚು ವಹಿವಾಟು ನಡೆಸಿ, ಪ್ರಗತಿ ಸಾಧಿಸಲಾಗಿದೆ.

● ಸ್ವರೂಪ ಟಿ.ಕೆ, ಜಿಲ್ಲಾಧಿಕಾರಿ

ಸುತ್ತಮುತ್ತ

ಜೂ.18ರಂದು ‘ಮತ್ಸ್ಯಾಮೃತ’ ಕಟ್ಟಡ ಉದ್ಘಾಟನೆ

ಕೋಟ: ಕೋಟದ ಗಿಳಿಯಾರು ಅಮೃತೇಶ್ವರಿ ಮಹಿಳಾ ಮೀನುಗಾರರ ಸಹಕಾರಿ ಸಂಘದ ನೂತನ ಕಟ್ಟಡ ‘ಮತ್ಸ್ಯಾಮೃತ’ದ ಉದ್ಘಾಟನಾ ಸಮಾರಂಭವು ಜೂ.18ಕ್ಕೆ ಬೆಳಿಗ್ಗೆ 10ಕ್ಕೆ ಕೋಟದ ರಾಷ್ಟ್ರೀಯ ಹೆದ್ದಾರಿ 66ರಲ್ಲಿರುವ ಕೋಟತಟ್ಟು ಪಂಚಾಯತ್ ಹತ್ತಿರದ ಸಂಘದ ಆವರಣದಲ್ಲಿ ಜರುಗಲಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಸದ ಕೋಟ ಶ್ರೀನಿವಾಸ ಪೂಜಾರಿ ನೆರವೇರಿಸಲಿದ್ದಾರೆ. ಅಮೃತೇಶ್ವರಿ ಮಹಿಳಾ ಮೀನುಗಾರರ ಸಹಕಾರಿ ಸಂಘದ ಅಧ್ಯಕ್ಷೆ ಸುಶೀಲಾ ಸೋಮಶೇಖರ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಡಾ.ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್ ಅಂಬಲಪಾಡಿಯ ಪ್ರವರ್ತಕರಾದ ನಾಡೋಜ ಡಾ. ಜಿ. ಶಂಕರ್ ಅವರು ದೀಪ ಪ್ರಜ್ವಲನೆ ಮಾಡಲಿದ್ದಾರೆ. ಸಮಾರಂಭದಲ್ಲಿ ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ, ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ, ಮಾಜಿ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ್ ಸಿ. ಕಂದರ್, ಉದ್ಯಮಿ ಮೊಳಹಳ್ಳಿ ದಿನೇಶ್ ಹೆಗ್ಡೆ ಹಾಗೂ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಸುಧೀರ್ ಕುಮಾರ್, ಸೇರಿದಂತೆ ಹಲವು ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ವಿಶೇಷವಾಗಿ ಅತಿಥಿಗಳಿಗೆ ಗೌರವಾರ್ಪಣೆ, ಸಾಧನಾ ಅಭಿನಂದನಾ ಗೌರವ, ಹಾಗೂ ಮೀನು ಮಾರಾಟ ವೃತ್ತಿಯಲ್ಲಿ ಗಣನೀಯ ಸಾಧನೆ ಮಾಡಿದ ಇರ್ವರು ಮಹಿಳೆಯರಿಗೆ ವಿಶೇಷ ಸನ್ಮಾನ ಸಂಘದ ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಣೆಯೂ ನಡೆಯಲಿದೆ ಎಂದು ಸಂಘದ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಮಲ್ಯರಮಠದ ದೇವಸ್ಥಾನದಲ್ಲಿ ಭಜನಾ ಮಹೋತ್ಸವ ಸಮಾಪನ

ಕುಂದಾಪುರ: ಗಂಗೊಳ್ಳಿಯ ಮಲ್ಯರಮಠ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಪುರುಷೋತ್ತಮ ಮಾಸದ ಅಂಗವಾಗಿ ಹಮ್ಮಿಕೊಂಡಿರುವ ಮಾಸಾವಧಿ ಅಖಂಡ ಭಜನಾ ಮಹೋತ್ಸವ ಮಂಗಳವಾರ ದೀಪ ವಿಸರ್ಜನೆಯೊಂದಿಗೆ ಸಮಾಪನಗೊಂಡಿತು. ಮಧ್ಯಾಹ್ನ ಪೂಜೆ, ಸಮಾರಾಧಾನೆ, ಸಂಜೆ ಮಾಗಣೆ ಭಜನೆ ಮೊದಲಾದ ಕಾರ್ಯಕ್ರಮಗಳು ನಡೆಯಿತು. ಸೋಮವಾರ ಸಂಜೆ ನಗರ ಭಜನೆ, ರಾತ್ರಿ ಪೂಜೆ, ಪ್ರಸಾದ ವಿತರಣೆ ಮೊದಲಾದ ಕಾರ್ಯಕ್ರಮಗಳು ನಡೆಯಿತು. ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀಮದ್ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿ ಮೇ 17ರಂದು ಚಾಲನೆ ನೀಡಿದ್ದರು. ರಾಜ್ಯ ಮತ್ತು ಹೊರರಾಜ್ಯಗಳಿಂದ ವಿವಿಧ ಭಜನಾ ಮಂಡಳಿಗಳು ಆಗಮಿಸಿ ಭಜನಾ ಸೇವೆ ಸಮರ್ಪಿಸಿದ್ದಾರೆ. ಅಖಂಡ ಭಜನಾ ಮಹೋತ್ಸವದ ಸಂದರ್ಭ ಅಷ್ಟೋತ್ತರದಿಂದ ಶ್ರೀ ದೇವರಿಗೆ 108 ಪ್ರದಕ್ಷಿಣಾ ಸೇವೆ, ಗಂಧಲೇಪನ ಸೇವೆ, ಸಾಮೂಹಿಕ ತುಳಸಿ ಅರ್ಚನೆ ಮತ್ತು ಸಾಮೂಹಿಕ ಕುಂಕುಮಾರ್ಚನೆ ಸೇವೆ, ಸಹಿತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ದೇವಸ್ಥಾನದ ಪ್ರಧಾನ ಅರ್ಚಕ ಎಸ್.ವೆಂಕಟರಮಣ ಆಚಾರ್ಯ, ತಾಂತ್ರಿಕ ಜಿ.ವಸಂತ ಭಟ್ ನೇತೃತ್ವದಲ್ಲಿ ಯಶಸ್ವಿಯಾಗಿ ಸಂಪನ್ನಗೊಂಡಿತು. ದೇವಸ್ಥಾನದ ಆಡಳಿತ ಮೊಕ್ತೇಸರ ಎನ್.ಸದಾಶಿವ ನಾಯಕ್, ಜಿ.ವೆಂಕಟೇಶ ನಾಯಕ್, ಆಡಳಿತ ಮಂಡಳಿ ಸದಸ್ಯರು, ಮಹಿಳಾ ಮಂಡಳಿ ಸದಸ್ಯರು ಇದ್ದರು.

ಮೊದಲನೇ ಪುಟದಿಂದ

ಕಾಡುಹಂದಿ

ಕಾಡುಹಂದಿಗಳ ಆಕ್ರಮಣದಿಂದ 2012ರಿಂದ 2025ರ ಕಾಲಾವಧಿಯಲ್ಲಿ ಕಾಸರಗೋಡು ಜಿಲ್ಲೆಯಲ್ಲಿ 7 ಮಂದಿಯ ಜೀವ ಹಾನಿಯಾಗಿದೆ. 2020–21ರಲ್ಲಿ ಮೂವರು ಕಾಡುಹಂದಿ ದಾಳಿಗೆ ಸಾವಿಗೀಡಾಗಿದ್ದಾರೆ. 13 ವರ್ಷಗಳ ಅವಧಿಯಲ್ಲಿ 60 ಮಂದಿ ಗಾಯಗೊಂಡಿದ್ದಾರೆ. ಈ ಪೈಕಿ 2024–25ನೇ ಸಾಲಿನಲ್ಲಿ ಅತ್ಯಧಿಕ ಮಂದಿ ಗಾಯಗೊಂಡಿದ್ದಾರೆ. ಕಳೆದ ವರ್ಷ 12 ಮಂದಿ ಕಾಡುಹಂದಿಗಳ ಉಪಟಳದಿಂದ ಗಾಯಗೊಂಡಿದ್ದಾರೆ. 2019ರಿಂದ 2025ರ ವರೆಗೆ ಕಾಡುಪ್ರಾಣಿಗಳ ಹಾವಳಿಯಿಂದ ಜೀವಹಾನಿ, ಗಾಯಗೊಂಡವರು, ಕೃಷಿನಾಶ ಮತ್ತಿತರ ಕಾರಣಗಳಿಗೆ ಅರ್ಜಿಗಳನ್ನು ಸಲ್ಲಿಸಿದವರಿಗೆ ನಷ್ಟ ಪರಿಹಾರವನ್ನು ನೀಡಲಾಗಿದೆ. 2023–24ನೇ ಸಾಲಿನಲ್ಲಿ ಅತ್ಯಧಿಕ ನಷ್ಟ ಪರಿಹಾರ ವಿತರಿಸಲಾಗಿದೆ. 105.97 ಲಕ್ಷ ರೂ. ಮೊತ್ತವನ್ನು ಹಾಲಿ ವರ್ಷದಲ್ಲಿ ನಷ್ಟ ಪರಿಹಾರವಾಗಿ ನೀಡಲಾಗಿದೆ. ಸ್ಥಳೀಯಾಡಳಿತ ಸಂಸ್ಥೆಗಳ ಸಹಕಾರದೊಂದಿಗೆ ಕಾಡುಹಂದಿಗಳ ನಿಯಂತ್ರಣಕ್ಕೆ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ. ಆ ಪ್ರಯುಕ್ತ ಬ್ಲಾಕ್, ಗ್ರಾಮ ಪಂಚಾಯತ್‌ಗಳ, ನಗರ ಸಭೆಗಳ ಸಹಕಾರದೊಂದಿಗೆ ಅರಣ್ಯ ಇಲಾಖೆಯು ರೂಪುರೇಷೆ ಸಿದ್ಧಪಡಿಸಿದೆ. ಯೋಜನೆಯ ಅಂಗವಾಗಿ ತಿಳುವಳಿಕೆ, ಕಾಡುಹಂದಿ ಆಕ್ರಮಣ, ನಿರ್ಮೂಲನ, ನಿಯಂತ್ರಣ, ಕೃಷಿನಾಶ ಕುರಿತು ಸಮರ್ಪಕ ಮಾಹಿತಿ ಸಂಗ್ರಹಿಸಲಾಗುವುದು. ಕಾಡು ಹಂದಿಗಳಿಗೆ ತಂಗಲು ನೆರವಾಗುವ ಕಾಡು ಪೊದೆಗಳು, ಉಪಯೋಗ ಶೂನ್ಯ ಸ್ಥಳಗಳು, ಸಾರ್ವಜನಿಕ ಸ್ಥಳಗಳು ಮುಂತಾದ ಕಡೆಗಳಲ್ಲಿ ಕಾಡು ಪೊದೆಗಳನ್ನು ತೆರವುಗೊಳಿಸಲು ಮತ್ತು ತ್ಯಾಜ್ಯಗಳನ್ನು ನಿರ್ಮೂಲನೆಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಜನ ಜಾಗೃತಿ ಸಮಿತಿಗಳು, ಸಂಘಟನೆಗಳು, ರೆಸಿಡೆಂಟ್ಸ್ ಅಸೋಸಿಯೇಶನ್‌ಗಳು, ಕುಟುಂಬಶ್ರೀ ಕಾರ್ಯಕರ್ತೆಯರ ಸಹಭಾಗಿತ್ವದೊಂದಿಗೆ ಅರಣ್ಯ ಇಲಾಖೆಯು ಕಾರ್ಯಾಚರಣೆಯನ್ನು ಅನುಷ್ಠಾನಕ್ಕೆ ತಂದಿದೆ.

ಗೊಬ್ಬರ ಫ್ಯಾಕ್ಟರಿ

ತೆಗೆದು ಕೊಳ್ಳುವಂತೆ ಒತ್ತಾಯಿಸಿದ ನಾಗರಿಕರು, ಮುಂದಿನ ದಿನಗಳಲ್ಲಿ ಸಮಸ್ಯೆ ಮುಂದುವರಿಗೆ ಕೈರಂಗಳ, ಕೊಣಾಜೆ, ಪಜೀರು ಭಾಗದ ನಾಗರಿಕರು ಒಟ್ಟು ಪ್ರತಿಭಟನೆ ನಡೆಸಲಿದ್ದೇವೆ ಎಂದು ಎಚ್ಚರಿಸಿದರು.

ಕುಂದಾಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಬಿಎಲ್‌ಒ ಘಟನಾಯಕರ ಸಭೆ



ಕುಂದಾಪುರ: ಕುಂದಾಪುರ ವಿಧಾನಸಭಾ ಕ್ಷೇತ್ರದ ಭಾರತೀಯ ಜನತಾ ಪಾರ್ಟಿಯ ಬಿ.ಎಲ್.ಓ ಘಟನಾಯಕರ ಸಭೆಯು ಕುಂದಾಪುರ ಮಂಡಲ ಅಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ ಅಧ್ಯಕ್ಷತೆಯಲ್ಲಿ ಕುಂದಾಪುರ ಬಿಜೆಪಿ ಕಚೇರಿಯಲ್ಲಿ ಸೋಮವಾರ ನಡೆಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ, ಶೀಘ್ರದಲ್ಲೇ ಎಸ್‌ಐಆರ್ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಪ್ರಾರಂಭವಾಗಲಿದೆ. ಪಕ್ಷದ ಎಲ್ಲಾ ಕಾರ್ಯಕರ್ತರು ತಮ್ಮ ತಮ್ಮ ಬೂತ್ ಮಟ್ಟದಲ್ಲಿ ಮತದಾರರ ಪರಿಷ್ಕರಣಾ ಕಾರ್ಯದಲ್ಲಿ ಬಿ.ಎಲ್.ಓ ಜೊತೆಗೂಡಿ ಮನೆಮನೆಗೆ ಭೇಟಿ ನೀಡಬೇಕು. ನೈಜ ಮತದಾರರಿಗೆ ಯಾವುದೇ ತೊಂದರೆಯಾಗದಂತೆ ಎಚ್ಚರ ವಹಿಸಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದ ಅವರು, ಕ್ಷೇತ್ರ ವ್ಯಾಪ್ತಿಯಲ್ಲಿ 15ಕ್ಕೂ ಹೆಚ್ಚು ಬಿಜೆಪಿ ಘಟನಾಯಕರನ್ನು ನೇಮಿಸಲಾಗಿದೆ. ಅವರ ಕಾರ್ಯಚಟುವಟಿಕೆಗಳನ್ನು ಮತ್ತಷ್ಟು ವೇಗಗೊಳಿಸಬೇಕು ಎಂದು ಅವರು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಮಂಡಲ ನಿಕಟಪೂರ್ವ ಅಧ್ಯಕ್ಷ ಶಂಕರ್ ಅಂಕದಕಟ್ಟೆ, ಪ್ರಧಾನ ಕಾರ್ಯದರ್ಶಿಗಳಾದ ಸತೀಶ್ ಪೂಜಾರಿ ವಕ್ವಾಡಿ, ಸುಧೀರ್ ಕೆ.ಎಸ್., ಬಿ.ಎಲ್.ಓ 2 ಕುಂದಾಪುರ ಸಂಚಾಲಕ ರಾಜೇಶ್ ಶೆಟ್ಟಿ ಸೇರಿದಂತೆ ಪಕ್ಷದ ಪ್ರಮುಖರು ಉಪಸ್ಥಿತರಿದ್ದರು.

ಬನ್ನಂಜೆ ಬೌದ್ಧಿಕ ಪ್ರಪಂಚದ ಅನರ್ಘ್ಯ ರತ್ನ: ಲಕ್ಷ್ಮೀಶ ತೋಳ್ಪಾಡಿ



ಕಾರ್ಕಳ: ಕಾರ್ಕಳ ಸಾಹಿತ್ಯ ಸಂಘ ಹಾಗೂ ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ ಬೆಂಗಳೂರು ಇದರ ಸಂಯುಕ್ತ ಆಶ್ರಯದಲ್ಲಿ ಬನ್ನಂಜೆ 90 ವಿಶ್ವ ನಮನ ಕಾರ್ಯಕ್ರಮವು ಕಾರ್ಕಳದ ಹೊಟೇಲ್ ಪ್ರಕಾಶದ ಉತ್ಸವ ಸಭಾಂಗಣದಲ್ಲಿ ನಡೆಯಿತು.

ಮುಖ್ಯ ಅಭ್ಯಾಗತರಾಗಿ ಆಗಮಿಸಿದ ಹಿರಿಯ ವಿದ್ವಾಂಸ ಲಕ್ಷ್ಮೀಶ ತೋಳ್ಪಾಡಿ ಮಾತನಾಡಿ, ಸ್ವ ಅಧ್ಯಯನದಿಂದಲೇ ಅಪಾರ ಜ್ಞಾನ ಗಳಿಸಿಕೊಂಡ ಬನ್ನಂಜೆ ಗೋವಿಂದಾಚಾರ್ಯರು ವೇದ, ಪುರಾಣ, ಉಪನಿಷತ್ತು, ರಾಮಾಯಣ, ಮಹಾಭಾರತ ಹೀಗೆ ಎಲ್ಲಾ ವಿಷಯದ ಬಗ್ಗೆ ಪ್ರಬುದ್ಧವಾದ ಅರಿವನ್ನು ಹೊಂದಿದ್ದರು. ಅವರ ವಿದ್ವತ್ಪೂರ್ಣ ಪ್ರವಚನಗಳಿಂದ ದೇಶ ವಿದೇಶಗಳ ಅಸಂಖ್ಯಾತ ಅಭಿಮಾನಿಗಳ ಪ್ರೀತಿಯನ್ನು ಗಳಿಸಿಕೊಂಡಿದ್ದರು. ಲೌಕಿಕ ಮತ್ತು ಆಧ್ಯಾತ್ಮಿಕ ಎರಡರಲ್ಲಿ ಆಳವಾದ ಜ್ಞಾನ ಹೊಂದಿರುವ ಬನ್ನಂಜೆಯವರು ಬೌದ್ಧಿಕ ಪ್ರಪಂಚದ ಅನರ್ಘ್ಯ ರತ್ನ. ಅವರ ಮೌಲ್ಯಯುತ ಪ್ರವಚನ, ಸಾಹಿತ್ಯ ಕೃತಿಗಳು ಬದುಕಿನ ಸಾರ್ಥಕತೆಗೆ ಹೊಂಬೆಳಕನ್ನು ಬೀರುತ್ತವೆ ಎಂದರು.

ಕಾರ್ಕಳ ಸಾಹಿತ್ಯ ಸಂಘದ ಅಧ್ಯಕ್ಷ ಕೆ ಪಿ.ಪಿ. ಶೆಣೈ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ವಿದ್ವಾಂಸ ಪಾದೆಕಲ್ಲು ವಿಷ್ಣು ಭಟ್ ಅವರು ಬನ್ನಂಜೆ ಅವರೊಂದಿಗೆ ಒಡನಾಟ ಸ್ಮರಿಸಿದರು. ಹಿರಿಯ ಸಾಹಿತಿ ಮಲ್ಲೇಪುರಂ ಜಿ. ವೆಂಕಟೇಶ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಕಳದ ಖ್ಯಾತ ಹರಿದಾಸರಾದ ವೈ. ಅನಂತ ಪದ್ಮನಾಭ ಭಟ್ ಅವರು ತಮ್ಮ ಗೀತೆಗಳ ಮೂಲಕ ಬನ್ನಂಜೆ ಅವರನ್ನು ಸ್ಮರಿಸಿದರು. ಕವಿತಾ ಉಡುಪ ಹಾಗೂ ಸುಮಾ ಶಾಸ್ತ್ರೀ ಬನ್ನಂಜೆ ವಿರಚಿತ ಹಾಡುಗಳನ್ನು ಹಾಡಿದರು. ಕಾರ್ಕಳ ಸಾಹಿತ್ಯ ಸಂಘದ ಕೋಶಾಧ್ಯಕ್ಷ ಎಸ್ ನಿತ್ಯಾನಂದ ಪೈ ಸ್ವಾಗತಿಸಿ, ಜ್ಯೋತಿ ಸುನಿಲ್ ಕುಮಾರ್ ಶೆಟ್ಟಿ ಪರಿಚಯಿಸಿ, ಆತ್ಮೀಯ ಕಡಂಬ ನಿರೂಪಿಸಿದರು. ಬನ್ನಂಜೆ ಅವರ ಪುತ್ರಿ ವೀಣಾ ಬನ್ನಂಜೆ ವಂದಿಸಿದರು.

ಕಲ್ಮಾಡಿಪಾದೆ ದೈವಸ್ಥಾನದ ನೂತನ ಕಾಂಕ್ರೀಟ್ ರಸ್ತೆಯ ಲೋಕಾರ್ಪಣೆ



ಉಡುಪಿ: ನಗರಸಭೆಯ ಕಲ್ಮಾಡಿ ವಾರ್ಡಿನಲ್ಲಿ ಸುಮಾರು 13 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಂಡ ಕಲ್ಮಾಡಿ ಪಾದೆ ಬಬ್ಬುಸ್ವಾಮಿ ಸಂಪರ್ಕ ರಸ್ತೆ ಕಾಮಗಾರಿಯನ್ನು ಉಡುಪಿ ವಿಧಾನಸಭಾ ಕ್ಷೇತ್ರದ ಶಾಸಕ ಯಶ್ ಪಾಲ್ ಸುವರ್ಣ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು ಕಳೆದ ಬಾರಿ ಬಬ್ಬು ಸ್ವಾಮಿ ದೈವಸ್ಥಾನದ ಸಮಗ್ರ ಜೀರ್ಣೋದ್ಧಾರದ ಸಂದರ್ಭ ದೇವಸ್ಥಾನದ ಪ್ರಮುಖರ ಮನವಿಯಂತೆ 13 ಲಕ್ಷ ವೆಚ್ಚದಲ್ಲಿ ಸಂಪರ್ಕ ರಸ್ತೆಯನ್ನು ನಿರ್ಮಿಸಲಾಗಿದ್ದು, ಮುಂದಿನ ದಿನಗಳಲ್ಲಿಯೂ ಕಲ್ಮಾಡಿ ವಾರ್ಡಿನ ಅಭಿವೃದ್ಧಿಗೆ ವಿಶೇಷ ಮುತುವರ್ಜಿ ವಹಿಸುವುದಾಗಿ ಹೇಳಿದರು.

ಉಡುಪಿ ನಗರಸಭೆ ಮಾಜಿ ಅಧ್ಯಕ್ಷ ಪ್ರಭಾಕರ ಪೂಜಾರಿ, ಬಬ್ಬುಸ್ವಾಮಿ ಆಡಳಿತ ಸಮಿತಿಯ ಅಧ್ಯಕ್ಷ ಸುಂದರ ಜೆ. ಕಲ್ಮಾಡಿ, ಗುರಿಕಾರ ಮಾಧವ ಗುರಿಕಾರ, ಪ್ರಮುಖರಾದ ಜಯರಾಮ್ ಕಲ್ಮಾಡಿ, ರಮೇಶ್ ಮಾಸ್ಟರ್ ಕಲ್ಮಾಡಿ, ಜಯಶ್ರೀ ಅಶೋಕ್, ಸುರೇಶ್ ಕಲ್ಮಾಡಿ, ರೋಹಿತ್ ಕಲ್ಮಾಡಿ, ಅಶೋಕ್ ಸುವರ್ಣ, ವಿನೋದರ, ಮನೋಜ್ ಕುಮಾರ್ ಕಲ್ಮಾಡಿ, ಅಶೋಕ್ ಕುಮಾರ್, ಕಿಶೋರ್ ಮಲ್ಪೆ, ಸ್ಥಳೀಯ ಮುಖಂಡರಾದ ಲಕ್ಷೀಶ, ವಿವೇಕ್ ಮೊದಲಾದವರು ಉಪಸ್ಥಿತರಿದ್ದರು.

ಪುರುಷೋತ್ತಮ ಮಾಸ: ತೆಂಕಪೇಟೆ ದೇವಸ್ಥಾನದಲ್ಲಿ ಮೂಲಮಂತ್ರ ಹವನ



ಉಡುಪಿ: ಉಡುಪಿ ಸ್ಥಳೀಯ ತೆಂಕಪೇಟೆಯ ಶ್ರೀ ಲಕ್ಷ್ಮೀವೆಂಕಟೇಶ ದೇವಳದಲ್ಲಿ ಸೋಮವಾರ ಪುರುಷೋತ್ತಮ ಮಾಸದ ಪ್ರಯುಕ್ತ ಮೂಲಮಂತ್ರ ಹವನ (ಓಂ ನಮೋ ನಾರಾಯಣಾಯ) ಜರಗಿತು.

ಅಧಿಕ ಮಾಸದ ಪ್ರಯುಕ್ತ ಮೇ 17ರಂದು ಪ್ರಾರಂಭಗೊಂಡಿದ್ದ ಲಕ್ಷ ಪ್ರದಕ್ಷಿಣೆ ನಮಸ್ಕಾರ ಕಾರ್ಯಕ್ರಮ ಜೂ. 15ರಂದು ಕೊನೆಗೊಂಡಿದ್ದು, ಅಂದು ಭಕ್ತರು ಶ್ರೀ ದೇವರಿಗೆ ಇದನ್ನು ಭಕ್ತಿಯಿಂದ ಸಮರ್ಪಿಸಿದರು.

ದೇವಳದ ಆಡಳಿತ ಮೊಕ್ತೇಸರ ಗುಜ್ಜಾಡಿ ಪ್ರಭಾಕರ ನಾಯಕ್ ನೇತೃತ್ವದಲ್ಲಿ ಹಾಗೂ ಮೊಕ್ತೇಸರ ಎಚ್. ಮಹೇಶ್ ಶೆಣೈ, ವಿನುತಾ ಎಂ. ಶೆಣೈ ದಂಪತಿ ಇವರ ಸಹಭಾಗಿತ್ವದಲ್ಲಿ ಕಾರ್ಯಕ್ರಮ ಜರಗಿದವು. ವೈದಿಕ ವೇ. ಮೂ. ಉಪ್ಪುಂದ ವಿನಾಯಕ ಅವದಾನಿ, ಉಪ್ಪುಂದ ರವೀಂದ್ರ ಭಟ್, ಕಾರ್ಕಳ ದೀಪಕ್ ಭಟ್, ಬಿಳಗಿ ದಯಾಘನ್ ಭಟ್, ಚೇಂಪಿ ಲಕ್ಷ್ಮೀನಾರಾಯಣ ಭಟ್, ಮಾರೂರು ಹರಿಪ್ರಸಾದ್ ಶರ್ಮ, ಉಪ್ಪುಂದ ಪ್ರಸನ್ನ ಭಟ್, ಚೇಂಪಿ ರಮೇಶ್ ಭಟ್ ಇವರು ಧಾರ್ಮಿಕ ವಿಧಿಗಳನ್ನು ನೆರವೇರಿಸಿದರು.

ಅಧಿಕ ಮಾಸದ ಪ್ರಯುಕ್ತ ತುಪ್ಪದ ದೀಪವನ್ನು ಪ್ರಜ್ವಲಿಸುವ ಕಾರ್ಯಕ್ರಮವನ್ನು ಮೊಕ್ತೇಸರರ ಪತ್ನಿ ವಿಜಯಲಕ್ಷ್ಮಿ ಕೈಲಾಸ್‌ನಾಥ್ ಶೆಣೈ, ಚಿತ್ರಕಲಾ ಅಶೋಕ್ ಬಾಳಿಗಾ, ನೀತಾ ನಾರಾಯಣ ಪ್ರಭು, ಅಮಿತ ಉಮೇಶ್ ಪೈ, ಗೀತಾ ದಿನೇಶ್ ಪೈ ನಡೆಸಿದರು. ಮೊಕ್ತೇಸರರಾದ ಡಾ. ಯು. ಕೈಲಾಸ್‌ನಾಥ್ ಶೆಣೈ, ಉಡುಪಿ ಅಶೋಕ್ ಬಾಳಿಗಾ, ಯು. ನಾರಾಯಣ ಪ್ರಭು, ಹಾರಾಡಿ ಉಮೇಶ್ ಪೈ, ಯು. ದಿನೇಶ್ ಪೈ, ಮಟ್ಟಾರ್ ವಸಂತ ಕಿಣಿ, ಪ್ರಭಾಕರ ಭಟ್, ಡಾ. ವಿನಾಯಕ ಶೆಣೈ ಇವರಲ್ಲದೆ ಹಿಂದಿನ ಮೊಕ್ತೇಸರರು, ಜಿ.ಎಸ್.ಬಿ. ಯುವಕ ಮಂಡಳಿ ಮತ್ತು ಮಹಿಳಾ ಮಂಡಳಿ ಸದಸ್ಯರು, ಸ್ವಯಂ ಸೇವಕರು, ದೇವಸ್ಥಾನದ ಸಿಬ್ಬಂದಿ ವರ್ಗ, ಸಮಾಜ ಬಾಂಧವರು ಈ ಕಾರ್ಯಕ್ರಮ ಯಶಸ್ವಿಗೊಳಿಸಲು ಸಹಕರಿಸಿದರು.

ಯಕ್ಷ ಶಿಕ್ಷಣ ವಿಸ್ತರಣೆ: ಕುಂದಾಪುರದ 26 ಶಾಲೆಯಲ್ಲಿ ಯಕ್ಷಗಾನದ ತರಬೇತಿ



ಕುಂದಾಪುರ: ಕಳೆದ ವರ್ಷ 21 ಶಾಲೆಗಳಲ್ಲಿ ಯಶಸ್ವಿಯಾಗಿ ನಡೆದ ಯಕ್ಷ ಶಿಕ್ಷಣ ಕಾರ್ಯಕ್ರಮಕ್ಕೆ ಈ ಬಾರಿ ಮತ್ತೆ 5 ಶಾಲೆಗಳ ಮುಖ್ಯ ಶಿಕ್ಷಕರು ಬೇಡಿಕೆ ಸಲ್ಲಿಸಿದ್ದು, ಇದರಿಂದ 2026– 27ನೇ ಸಾಲಿನಲ್ಲಿ ಒಟ್ಟು 26 ಪ್ರೌಢಶಾಲೆಗಳಲ್ಲಿ ಯಕ್ಷಗಾನ ತರಬೇತಿ ಆರಂಭವಾಗಲಿದೆ. ಯಕ್ಷಗಾನ ಕಲಾರಂಗವು ಸಂಪೂರ್ಣ ನಿಸ್ವಾರ್ಥ ಸೇವಾ ಮನೋಭಾವದಿಂದ ಈ ಕಾರ್ಯವನ್ನು ಮಾಡುತ್ತಿದೆ. ಎಲ್ಲ ಮುಖ್ಯ ಶಿಕ್ಷಕರು ಇದಕ್ಕೆ ಚೆನ್ನಾಗಿ ಸ್ಪಂದಿಸಿ ಯಶಸ್ವಿಗೊಳಿಸಬೇಕು ಎಂದು ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಹೇಳಿದರು.

ಕುಂದಾಪುರ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಸೋಮವಾರ ಯಕ್ಷ ಶಿಕ್ಷಣ ಟ್ರಸ್ಟ್‌ನ ಕುಂದಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯಕ್ಷ ಶಿಕ್ಷಣ ಟ್ರಸ್ಟ್‌ನ ಕಾರ್ಯದರ್ಶಿ ಮುರಲಿ ಕಡೆಕಾರ್ ಅವರು ಯಕ್ಷಗಾನ ತರಬೇತಿಯ ಸ್ವರೂಪ, ಪಠ್ಯಕ್ರಮ ಮತ್ತು ಶಾಲೆಗಳಲ್ಲಿ ಅನುಷ್ಠಾನಕ್ಕೆ ಬೇಕಾದ ಸಿದ್ಧತೆಗಳ ಕುರಿತು ವಿವರಿಸಿದರು. ಆಸಕ್ತ ಮುಖ್ಯೋಪಾಧ್ಯಾಯರು ಇದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅನುಸರಿಸಬೇಕಾದ ಸೂಚನೆ ನೀಡಿದರು.

ಕುಂದಾಪುರ ಕ್ಷೇತ್ರ ಶಿಕ್ಷಣಾಧಿಕಾರಿ ಶೋಭಾ ಶೆಟ್ಟಿ ಹಾಗೂ ಬ್ರಹ್ಮಾವರ ಕ್ಷೇತ್ರ ಶಿಕ್ಷಣಾಧಿಕಾರಿ ಉಮಾ ಅವರು, ಪಠ್ಯದ ಜೊತೆಗೆ ಯಕ್ಷಗಾನದಂತಹ ಕಲೆಯ ಕಲಿಕೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೂರಕ ಎಂದರು.

ಮುಖ್ಯ ಶಿಕ್ಷಕ ಕಿರಣ್ ಹೆಗ್ಡೆ, ಚಂದ್ರಶೇಖರ್ ಶೆಟ್ಟಿ, ಅಬ್ದುಲ್ ರವೂಫ್ ಮತ್ತು ವೆಂಕಟೇಶ್ ಉಡುಪ ಅವರು, ಯಕ್ಷಗಾನ ಕಲಿಕೆಯಿಂದ ವಿದ್ಯಾರ್ಥಿಗಳ ಏಕಾಗ್ರತೆ, ಆತ್ಮವಿಶ್ವಾಸ ಹೆಚ್ಚಿ ಪರೀಕ್ಷಾ ಫಲಿತಾಂಶದ ಮೇಲೂ ಧನಾತ್ಮಕ ಪರಿಣಾಮ ಬೀರಿದೆ ಎಂದು ಅಂಕಿ–ಅಂಶಗಳ ಸಮೇತ ಹಂಚಿಕೊಂಡರು. ಟ್ರಸ್ಟಿ ನಾರಾಯಣ ಎಂ. ಹೆಗಡೆ, ತಾಲೂಕಿನ ವಿವಿಧ ಶಾಲಾ ಮುಖ್ಯ ಶಿಕ್ಷಕರು ಇದ್ದರು. ಕುಸುಮಾಕರ ಶೆಟ್ಟಿ ಸ್ವಾಗತಿಸಿದರು.



ಕುಂದಾಪುರ ಕ್ಷೇತ್ರದ ಶಾಸಕರ ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿಯಡಿ ವಿಕಲಚೇತನ ಫಲಾನುಭವಿಗಳಿಗೆ ಕೃತಕ ಕಾಲುಗಳನ್ನು ಸೋಮವಾರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಅವರು ವಿತರಿಸಿದರು. ಈ ಸಂದರ್ಭ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧಿಕಾರಿ ಶಿವಾಜಿ, ಜೇನಿಸ್, ಪ್ರದೀಪ್ ಉಪಸ್ಥಿತರಿದ್ದರು.



ಮಜೂರು ಗ್ರಾ.ಪಂ.ನಿಂದ ಹಸಿರೇ ಉಸಿರು ಕಾರ್ಯಕ್ರಮದಡಿ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಸಸಿ ವಿತರಿಸಿದರು. ಗ್ರಾ.ಪಂ. ಮಾಜಿ ಅಧ್ಯಕ್ಷ ಪ್ರಸಾದ್ ಶೆಟ್ಟಿ ವಳದೂರು, ಮಾಜಿ ಉಪಾಧ್ಯಕ್ಷ ಮಂಜುಳಾ ಆಚಾರ್ಯ, ಐಎಸ್‌ಪಿಆರ್‌ಎಲ್‌ನ ಯುವರಾಜ್, ಪ್ರಸನ್ನ, ಆಡಳಿತಾಧಿಕಾರಿ ವರುಣ್ ಜೆ, ಪಿಡಿಒ ವಿಲಾಸಿನಿ, ಗ್ರಾ.ಪಂ. ಮಾಜಿ ಸದಸ್ಯರು ಉಪಸ್ಥಿತರಿದ್ದರು.



ಕಾಪು ಪುರಸಭೆ ವತಿಯಿಂದ ಘನತ್ಯಾಜ್ಯ ವಸ್ತು ನಿರ್ವಹಣೆ 2026ರ ಮಾಹಿತಿ ಕಾರ್ಯಾಗಾರವನ್ನು ಆಯೋಜಿಸಿ ಸ್ವ-ಸಹಾಯ ಗುಂಪುಗಳ ಸದಸ್ಯೆಯರಿಗೆ 4-ಬಗೆಯ ಕಸ ವಿಂಗಡನೆಯ ವಿಧಾನಗಳ ಬಗ್ಗೆ ವಿವರಿಸಿ ಕರಪತ್ರಗಳನ್ನು ವಿತರಿಸಲಾಯಿತು. ಪುರಸಭೆಯ ಸಿಬ್ಬಂದಿಗಳು ಇದ್ದರು.

ಉಡುಪಿ ತಾಲೂಕು ಮಟ್ಟದ ತ್ರೈ ಮಾಸಿಕ ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳ ನಡೆಗೆ ಶಾಸಕರು ಗರಂ

ಚರಂಡಿ ಹೂಳು ತೆರವುಗೊಳಿಸದ ಬಗ್ಗೆ ಸಾರ್ವಜನಿಕ ವಲಯದಿಂದ ದೂರು



ಉಡುಪಿ: ಮಳೆಗಾಲ ಆರಂಭವಾಗಿದ್ದರೂ ಉಡುಪಿ ತಾಲೂಕಿನಾದ್ಯಂತ ಮಳೆ ನೀರು ಸರಾಗವಾಗಿ ಹರಿಯುವ ಚರಂಡಿ ಹಾಗೂ ತೋಡುಗಳ ಹೂಳೆತ್ತುವ ಕಾಮಗಾರಿಗಳು ಇನ್ನೂ ಪೂರ್ಣಗೊಳ್ಳದ ಬಗ್ಗೆ ಸಾರ್ವಜನಿಕ ವಲಯದಿಂದ ತೀವ್ರ ದೂರುಗಳು ಕೇಳಿಬರುತ್ತಿದ್ದು, ಸಂಬಂಧಪಟ್ಟ ಇಲಾಖಾಧಿಕಾರಿಗಳು ತಕ್ಷಣವೇ ಎಚ್ಚೆತ್ತುಕೊಂಡು ಕ್ರಮ ಕೈಗೊಳ್ಳಬೇಕು ಎಂದು ಕಾಪು ಶಾಸಕ ಸುರೇಶ್ ಶೆಟ್ಟಿ ಗುರ್ಮೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಉಡುಪಿ ತಾ.ಪಂ. ಸಭಾಂಗಣದಲ್ಲಿ ಸೋಮವಾರ ನಡೆದ ತಾಲೂಕು ಮಟ್ಟದ ತ್ರೈ ಮಾಸಿಕ ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿ, ‘ಚರಂಡಿಗಳಲ್ಲಿನ ಕಸ, ಹೂಳನ್ನು ವಿಲೇವಾರಿ ಮಾಡದ ಕಾರಣ ಮಳೆ ನೀರು ರಸ್ತೆಗಳ ಮೇಲೆಯೇ ಹರಿಯುತ್ತಿದ್ದು, ಹೆದ್ದಾರಿ ಹಾಗೂ ಒಳರಸ್ತೆಗಳು ಸಂಪೂರ್ಣ ಹದಗೆಡುತ್ತಿವೆ. ಈ ಬಗ್ಗೆ ಮಾರ್ಚ್ ನಲ್ಲಿಯೇ ಸ್ಪಷ್ಟ ನಿರ್ದೇಶನ ನೀಡಿದ್ದರೂ ಅಧಿ ಕಾರಿಗಳು ಏಕೆ ಮೌನವಾಗಿದ್ದಾರೆ.? ಎಂದು ಶಾಸಕರು ಸಭೆಯಲ್ಲಿ ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಅಧಿಕಾರಿಗಳು, ಗ್ರಾಮೀಣ ಪ್ರದೇಶದ ಸಣ್ಣ ಸಣ್ಣ ತೋಡುಗಳನ್ನು ನರೇಗಾ ಯೋಜನೆ ಅಡಿಯಲ್ಲಿ ಸ್ವಚ್ಛಗೊಳಿಸಲಾಗಿದೆ. ಆದರೆ ದೊಡ್ಡ ತೋಡುಗಳ ಹೂಳೆತ್ತಲು ಸಮರ್ಪಕವಾದ ಅನುದಾನದ ಕೊರತೆ ಇದೆ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಈ ವೇಳೆ ಮಧ್ಯಪ್ರವೇಶಿಸಿದ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ರಮೇಶ್ ಕಾಂಚನ್ ಅವರು, ಯಾವುದೇ ಹೂಳೆತ್ತುವ ಪ್ರಕ್ರಿಯೆ ಮುಂಗಾರು ಆರಂಭಕ್ಕೆ ಮುನ್ನವೇ ಮುಗಿಯಬೇಕಿತ್ತು. ಈಗಲಾದರೂ ವಿಳಂಬ ಮಾಡದೆ ಯುದ್ಧೋಪಾದಿಯಲ್ಲಿ ಬಾಕಿ ಕೆಲಸ ಮುಗಿಸಿ ಎಂದರು.

ಅಕ್ರಮ ಕಟ್ಟಡಗಳಿಗೆ ಬ್ರೇಕ್ ಹಾಕಿ

ಸಭೆಯಲ್ಲಿದ್ದ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಅವರು ಮಾತನಾಡಿ, ಕೆಮ್ಮಣ್ಣು ಪಂಚಾಯತ್ ವ್ಯಾಪ್ತಿಯಲ್ಲಿ ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಯಾವುದೇ ಕಾನೂನಾತ್ಮಕ ಅನುಮತಿ ಪಡೆಯದೆಯೇ ಅಕ್ರಮವಾಗಿ ಬೃಹತ್ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ಅಧಿಕಾರಿಗಳು ಇಂತಹ ಅಕ್ರಮಗಳ ವಿರುದ್ಧ ತಕ್ಷಣ ಕಾನೂನು ಕ್ರಮ ಜರುಗಿಸಬೇಕು ಎಂದರು. ಇದರೊಂದಿಗೆ, ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಜಿಲ್ಲೆಯು ರಾಜ್ಯಕ್ಕೇ ಮಾದರಿ ಸಾಧನೆ ಮಾಡುತ್ತಿದ್ದರೂ, ಹಲವು ಸರ್ಕಾರಿ ಶಾಲೆಗಳ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ದುರಸ್ತಿ ಕಾರ್ಯ ನನೆಗುದಿಗೆ ಬಿದ್ದಿರುವುದನ್ನು ಅವರು ಸಭೆಯ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಯಲ್ಲಮ್ಮ, ಕಾಪು ಮತ್ತು ಉಡುಪಿ ವಲಯ ವ್ಯಾಪ್ತಿಯಲ್ಲಿ ಒಟ್ಟು 42 ಶಾಲಾ ಕೊಠಡಿಗಳ ಪುನರ್ ನಿರ್ಮಾಣ ಹಾಗೂ 60 ಕೊಠಡಿಗಳ ಸಣ್ಣಪುಟ್ಟ ದುರಸ್ತಿ ಕಾಮಗಾರಿಗಳಿಗಾಗಿ ಈಗಾಗಲೇ ಸರ್ಕಾರದ ಮಟ್ಟದಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಮುನ್ನೆಚ್ಚರಿಕೆಯಾಗಿ ಶಾಲಾ ಆವರಣದಲ್ಲಿರುವ ಅಪಾಯಕಾರಿ ಮರಗಳ ಕೊಂಬೆಗಳನ್ನು ಕತ್ತರಿಸಲಾಗಿದೆ ಎಂದರು.

ತಾ.ಪಂ. ಆಡಳಿತಾಧಿಕಾರಿ ಉದಯ್ ಕುಮಾರ್ ಶೆಟ್ಟಿ, ತಾ.ಪಂ. ಇಒ ಅಧಿಕಾರಿ ವಿಜಯ, ತಹಶೀಲ್ದಾರ್ ಗುರುರಾಜ್ ಮತ್ತು ಉಡುಪಿ ನಗರಸಭೆ ಪೌರಾಯುಕ್ತ ಮಹಾಂತೇಶ್ ಹಂಗರಗಿ ಉಪಸ್ಥಿತರಿದ್ದು, ಇಲಾಖಾವಾರು ಪ್ರಗತಿ ವಿವರ ನೀಡಿದರು.